
ಪುಸ್ತಕ ಪ್ರಪಂಚ

ಆಗಸ್ಟ್ ೧೯೮೮



ಯಶಪಾಲ್

೪. ೮. ೮೮

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ : ೪೩ ಸಂಚಿಕೆ–೧

PUSTAKA PRAPANCHA : Monthly

Published and printed by Karnataka State Adult Eductaion Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–570 004

ಅರಣ್ಯ ಸಂರಕ್ಷಣೆಯ ಹೊಣೆ

ಡಾ॥ ಕೋಡಿರ ಅ. ಕುಶಾಲಪ್ಪ

ಮಾನವ-ಅರಣ್ಯ ಸಂಬಂಧ ಮಗು-ತಾಯಿ ಸಂಬಂಧಕ್ಕಿಂತಲೂ ಅವಿಭಾಜ್ಯ, ನಿಸರ್ಗಸಿದ್ಧ ಹಾಗೂ ಸನ್ನಿಕಟ. ಬೆಳೆದ ಮಗು ತಾಯಿಯಿಂದ ದೂರವಾಗಿ ಬದುಕಬಲ್ಲದು. ಆದರೆ ಮಾನವ ಯಾವ ಯುಗದಲ್ಲೂ ಯಾವ ವಿಕಾಸ ಹಂತದಲ್ಲೂ ಅರಣ್ಯದ ಪ್ರತ್ಯಕ್ಷ ಅಥವಾ ಪರೋಕ್ಷ ಸಂಬಂಧದಿಂದ ದೂರವಾಗಿ ಉಳಿಯಲಾರ. ಈ ನೈಸರ್ಗಿಕ ತಥ್ಯ ಇಂದಿನ ದಿನಗಳಲ್ಲಿ ಅತ್ಯಂತ ಕಠೋರ ನಿದರ್ಶನಗಳ ಮೂಲಕ ಮಾನವನ ಅರಿವಿಗೆ ತಟ್ಟುತ್ತಿದೆ. ವನಮಹೋತ್ಸವದ ಪ್ರಸಕ್ತ ಶ್ರಾಯದಲ್ಲಿ ವಿಶೇಷ ಲೇಖನ.

ಉಷ್ಣ ವಲಯದಲ್ಲಿದ್ದು ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಲ್ಲಿ ಅರಣ್ಯದ ಪಾತ್ರ ಅತಿ ಮುಖ್ಯ. ಭೂಮಿಯ ಸವಕಳಿಯನ್ನು ತಡೆಯುವುದು, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು, ವ್ಯವಸಾಯಕ್ಕೆ ಪೋಷಕ ಮತ್ತು ಪೂರಕವಾಗಿರುವುದು, ವಾತಾವರಣವನ್ನು ನಿರ್ಮಲೀಕರಿಸುವುದು, ಮಳೆಗೆ ಕಾರಣವಾಗುವುದು—ಒಂದೇ ಎರಡೇ! ಜೀವನದ ತಿರುಳೇ ಅರಣ್ಯ. ಇವೆಲ್ಲವುಗಳ ಜೊತೆಗೆ ಅರಣ್ಯ ನಮ್ಮ ಮನೆ ಮರಮುಟ್ಟುಗಳಿಗೆ ಬೇಕಾಗುವ ನಾಟಾಗಳನ್ನು, ಕಾಗದ ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳನ್ನೂ, ದನಗಳಿಗೆ ಬೇಕಾದ ಮೇವನ್ನೂ, ಆಹಾರ ಬೇಯಿಸಲು ಕಟ್ಟಿಗೆಯನ್ನೂ, ಹಣ್ಣು-ಹಂಪಲಗಳನ್ನೂ, ಔಷಧಿ ಗಿಡ ಮೂಲಿಕೆಗಳನ್ನು ಒದಗಿಸುತ್ತದೆ. ಅರಣ್ಯ ನಮ್ಮ ಮನಸ್ಸಿನ ಉಲ್ಲಾಸಕ್ಕೂ ಸಂತೋಷಕ್ಕೂ ಆಧಾರವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. "ವನ್ಯಪ್ರಾಣಿಗಳಿಂದ ತುಂಬಿದ ಕಾಡು ಮೇಡುಗಳಿರುವವರೆಗೆ ಮಾತ್ರ ಮಾನವನ ಪೀಳಿಗೆಗೆ ಭೂಮಿ ಆಶ್ರಯವನ್ನು ನೀಡುತ್ತದೆ" ಎಂದು ಹಳೆಯ ಸಂಸ್ಕೃತ ಶ್ಲೋಕವೊಂದರಲ್ಲಿ ಹೇಳಿರುವುದು ನಾವು ಇಲ್ಲಿ ಅಗತ್ಯವಾಗಿ ಸ್ಮರಿಸಬೇಕಾಗಿದೆ.

ಭಾರತದಲ್ಲಿ ವ್ಯವಸಾಯವೇ ದೇಶದ ಬೆನ್ನೆಲುಬು. ಶೇಕಡಾ ಸುಮಾರು ೮೦ರಷ್ಟು ಜನರ ವಾಸ ಹಳ್ಳಿಯಲ್ಲಿ. ಇನ್ನು ಶೇಕಡಾ ಸುಮಾರು ೬೮ ಮಂದಿಗೆ ಉರುವಲೆಂದರೆ ಕಟ್ಟಿಗೆಯೊಂದೇ. ಈ ಕಟ್ಟಿಗೆ ಎಲ್ಲಿಂದ ಬರಬೇಕು ? ಅರಣ್ಯದ ಸಾಮೂಹಿಕ ಹನನದಿಂದ ಮಾತ್ರ. ಹಳ್ಳಿ ಜನ ಸಮೀಪದ ಅರಣ್ಯವನ್ನು ತಿಳಿದೋ, ತಿಳಿಯದೆಯೋ ಬೋಳಿಸುವುದು ರೂಢಿಯೇ ಆಗಿಹೋಗಿದೆ. ಹೀಗಾಗಿ ನಮ್ಮ ದೇಶದ ಅರಣ್ಯ ಕ್ರಮೇಣ ನಶಿಸುತ್ತಿದೆ. ಒಟ್ಟು ಪ್ರದೇಶದ ಶೇಕಡಾ ೨೦ರಷ್ಟು ಭಾಗ ಮಾತ್ರ ಅರಣ್ಯ ಇಲಾಖೆಯ ಆಡಳಿತಕ್ಕೆ ಒಳಪಟ್ಟಿದೆ. ಆದರೆ ಅದರಲ್ಲಿ ಶೇಕಡಾ ಸುಮಾರು ೫೦ರಷ್ಟು ಪ್ರದೇಶ ಮರ ಗಿಡಗಳಿಲ್ಲದೆ ಬರಡು ಪ್ರದೇಶವಾಗಿದೆ. ಅರಣ್ಯ ರಾಜ್ಯ ನೀತಿಯ ಪ್ರಕಾರ ಸುಮಾರು ಮೂರನೆಯ ಒಂದು ಭಾಗ ಅರಣ್ಯ ಪ್ರದೇಶಗಳಿಂದ ಕೂಡಿರಬೇಕೆಂದಿದ್ದರೂ, ಇಂದಿನ ಹಲವಾರು ಒತ್ತಡಗಳಿಂದ, ಅರಣ್ಯ ಪ್ರದೇಶವನ್ನು ನಮ್ಮ ದೇಶದಲ್ಲಿ ವಿಸ್ತರಿಸುವ ಅವಕಾಶವಿಲ್ಲ. ನಮಗೆ ಸ್ವಾತಂತ್ರ್ಯ ಬಂದ ಕೂಡಲೇ ವ್ಯವಸಾಯಕ್ಕೆ ಅತಿ ಪ್ರಾಮುಖ್ಯ ಕೊಟ್ಟಿದ್ದರಿಂದ ಉನ್ನತವಾದ ಕಾಡು ಪ್ರದೇಶ ಮತ್ತು ಇತರ ಹಲವಾರು ಪ್ರದೇಶಗಳನ್ನು ವ್ಯವಸಾಯಕ್ಕೆ ಅಳವಡಿಸಿಕೊಳ್ಳಲಾಯಿತು. ಇದರಿಂದ ನಾವು ಈಗ ಆಹಾರದ ಉತ್ಪಾದನೆ ಮತ್ತು ಬಳಕೆಯಲ್ಲಿ ಸ್ವಾವಲಂಬಿಗಳಾಗಿದ್ದೇವೆ ಎಂಬುದೇನೋ ನಿಜ. ಆದರೆ ಅನಿವಾರ್ಯ ವಾಗಿ ಅರಣ್ಯ ಪ್ರದೇಶ ಕುಸಿದಿದೆ. ಸ್ವಾತಂತ್ರ್ಯ ಬಂದಂದಿನಿಂದ ಇಂದಿನವರೆಗೆ ಶೇಕಡಾ ಸುಮಾರು ೩೦೦ರಷ್ಟು ಜನಸಂಖ್ಯೆ ಏರಿದ್ದರಿಂದ, ಜನರ ಕಟ್ಟಿಗೆ ಮತ್ತು ಇತರ ಅರಣ್ಯ ಉತ್ಪನ್ನಗಳ ಬೇಡಿಕೆಗಳನ್ನು ಇಂದು ಪೂರೈಸಲು ಅಸಾಧ್ಯವಾಗಿದೆ. ದನಕರುಗಳ ಸಂಖ್ಯೆ ಕೂಡ ಶೇಕಡಾ ಸುಮಾರು ೨೭೫ ರಷ್ಟು ಜಾಸ್ತಿಯಾಗಿ, ಅರಣ್ಯ ಪ್ರದೇಶದಲ್ಲಿ ಅವುಗಳ ಮೇವಿನ ಬೇಡಿಕೆಯೂ ಅತಿಯಾಗಿದೆ. ಸುಮಾರು ಒಂದು ಶತಮಾನದ ಹಿಂದೆ ಬ್ರಿಟೀಷ್ ಸರ್ಕಾರ ಅರಣ್ಯ ಪ್ರದೇಶಗಳ ಕೆಲವೊಂದು ಭಾಗಗಳನ್ನು "ಕಾಯ್ದಿರಿಸಿದ ಅರಣ್ಯ" ಗಳೆಂದು ಘೋಷಿಸಿದಾಗ, ಸುಮಾರು ಅರ್ಧದಿಂದ ಮುಕ್ಕಾಲು ಪಾಲಿನಷ್ಟು ಅರಣ್ಯ ಪ್ರದೇಶಗಳನ್ನು ಗ್ರಾಮಾಂತರ ಜನರ ನಿತ್ಯ ಬಳಕೆಗಳಿಗಾಗಿ ಪ್ರತ್ಯೇಕಿಸಿ ಇಡಲಾಗಿತ್ತು. ಕಾಯ್ದಿರಿಸಿದ ಅರಣ್ಯಗಳನ್ನು ಬರೇ ರಾಷ್ಟ್ರೀಯ ಬೇಡಿಕೆಗಳನ್ನು ಪೂರೈಸಲು ಮೀಸಲಾಗಿತ್ತು.

ಕಾಯ್ದಿರಿಸಿದ ಈ ಅರಣ್ಯಗಳನ್ನು ಮಾತ್ರ ಅರಣ್ಯ ಇಲಾಖೆಯ ಆಡಳಿತಕ್ಕೆ ಒಳಪಡಿಸಲಾಗಿತ್ತು. ಇದರಿಂದ ಸಾಧಾರಣ ನೂರು ವರ್ಷಕ್ಕಿಂತಲೂ ಹೆಚ್ಚು ವರ್ಷ ಅರಣ್ಯ ಇಲಾಖೆಯ ಆಡಳಿತದಲ್ಲಿದುದರಿಂದ ಇಂದು ಅಂತಹ ಕಾಯ್ದಿರಿಸಿದ ಪ್ರದೇಶಗಳಲ್ಲಿ ಗಿಡಮರಗಳು ಉತ್ತಮವಾಗಿಯೇ ನಿಂತಿವೆ. ಆದರೆ ಜನರ ನಿತ್ಯಬಳಕೆಗಳಿಗಾಗಿ ಮೀಸಲಾಗಿಟ್ಟಿದ್ದ ಜಿಲ್ಲಾ ಕಾಡುಗಳು, ಗ್ರಾಮಾಂತರ ಕಾಡುಗಳು, ಗೋಮಾಳ ಮೊದಲಾದವು ಯಾವುದೇ ಬಗೆಯ ವೈಜ್ಞಾನಿಕ ಆಡಳಿತಕ್ಕೂ ಒಳಪಡದಿದ್ದು, ಗಿಡಮರಗಳು ನಾಶವಾಗಿ ಇಂದು ಅವು ಬರಿ ಬರಡು ಪ್ರದೇಶಗಳಾಗಿವೆ. ದನಗಳಿಗೆ ಹುಲ್ಲು ಸಿಗುವುದೂ ಕಷ್ಟವಾಗಿದೆ. ಇಂಥ ಬರಡು ಪ್ರದೇಶ ಈಗ ನಮ್ಮ ರಾಷ್ಟ್ರದಲ್ಲಿ ಸುಮಾರು ೮೦ ಮಿಲಿಯನ್ ಹೆಕ್ಟೇರ್ ಗಳಷ್ಟಿರಬಹುದೆಂದು ಅಂದಾಜು.

ಅರಣ್ಯಗಳು ನಮ್ಮ ಬಾಳಿಗೆ ಅತಿ ಅವಶ್ಯವೆಂದು ತಿಳಿದಿದ್ದರೂ ಅವು ನಮ್ಮ ಕಣ್ಣ ಮುಂದೆಯೇ ನಶಿಸುತ್ತಿದ್ದರೂ ಇಂದಿನ ಪೀಳಿಗೆ ಅದರ ಬಗ್ಗೆ ಇನ್ನೂ ಹೆಚ್ಚಿನ ಕಾಳಜಿ,

ಅನುಕಂಪವನ್ನು ತೋರಿಸುತ್ತಿಲ್ಲವೇನೋ ಎನಿಸುತ್ತದೆ. ಇತ್ತೀಚೆಗೆ ಕೆಲವೊಂದು ಸ್ವಯಂ ಸೇವಾ ಸಂಸ್ಥೆಯವರು ಅರಣ್ಯ ನಶಿಸುತ್ತಿರುವುದರಿಂದ ಉಂಟಾಗುವ ನೆರೆಯ ಹಾವಳಿ, ಬರಗಾಲ ಮೊದಲಾದವನ್ನು ಗಣನೆಗೆ ತೆಗೆದುಕೊಂಡು ಜನರ ಮನವೊಲಿಸಿ ಅವರಲ್ಲಿ ಜ್ಞಾನೋದಯವಾಗುವಂತೆ ಮಾಡುತ್ತಿರುವುದು ಒಂದು ಶುಭ ಸೂಚನೆ. ಅವರ ಪ್ರಯತ್ನಗಳಿಗೆ ಸರ್ವತೂ ಬೆಂಬಲ ನೀಡುವುದು ಜರೂರಿನ ಅಗತ್ಯ.

ಈಗಿರುವ ಅರಣ್ಯಗಳನ್ನು ಉಳಿಸಲು ಅವನ್ನೇ ಇತರ ಪ್ರದೇಶಗಳಲ್ಲಿ ಬೆಳೆಸಲು ಮತ್ತು ಅವುಗಳಿಂದ ಬರುವ ಲಾಭಗಳನ್ನು ತಿಳಿಸಲು ಜನರಿಗೆ ಅರಣ್ಯದ ಬಗ್ಗೆ ತಿಳುವಳಿಕೆ ನೀಡುವುದು ಅತಿ ಅವಶ್ಯ. ಈ ವಿಚಾರಗಳನ್ನು ಪಠ್ಯ ಪುಸ್ತಕಗಳಲ್ಲಿ ಕಡ್ಡಾಯವಾಗಿ ತರಲೇಬೇಕು. ಬರೇ ಅರಣ್ಯ ಇಲಾಖೆ ಅಥವಾ ಸರ್ಕಾರದ ವತಿಯಿಂದ ಈ ಕೆಲಸ ಅಸಾಧ್ಯ. ಇದಕ್ಕಾಗಿ ಎಲ್ಲರ ಸಹಕಾರ ಅಗತ್ಯ.

ಅರಣ್ಯವನ್ನು ಕಾಪಾಡುವುದರ ಬಗ್ಗೆ ಅರಣ್ಯ ಇಲಾಖೆಯವರು ಹಲವಾರು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದಾರೆ. ಅರಣ್ಯದಲ್ಲೇ ವಾಸಿಸುತ್ತಿರುವ ಗುಡ್ಡಗಾಡು ಜನರಿಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಗಿರಿಜನ ಅಭಿವೃದ್ಧಿ ಯೋಜನೆ, ಮುಂತಾದವನ್ನು ಹಮ್ಮಿಕೊಂಡು, ಅರಣ್ಯದಲ್ಲೇ ವಾಸಿಸುವಂಥ ಅವಕಾಶ ವನ್ನು ಅವರಿಗೆ ಮಾಡಿಕೊಡಲಾಗುತ್ತಿದೆ. ಇದರಿಂದ ಪೋಡುಗಳಲ್ಲಿ ತಾತ್ಕಾಲಿಕ ವ್ಯವಸಾಯ ಮಾಡಿ, ಅರಣ್ಯಗಳನ್ನು ನಾಶಮಾಡುವ ಪದ್ಧತಿಯನ್ನು ಬಲು ಮಟ್ಟಿಗೆ ನಿಲ್ಲಿಸಿರುತ್ತೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಾಮೂಹಿಕ ಭದ್ರತಾ ಯೋಜನೆ, ಪರಿಶಿಷ್ಟ ಜಾತಿ ಉಪಯೋಜನೆ, ವಿಶೇಷ ಘಟಕ ಯೋಜನೆಯಡಿಯಲ್ಲಿ ಅಭಿವೃದ್ಧಿಗೆ ಬೇಕಾದ ಎಲ್ಲ ಕಾರ್ಯಕ್ರಮಗಳನ್ನು ನಿಯೋಜಿಸಿಕೊಂಡು, ಅವರು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡದಂತೆ ಅವಕಾಶ ಮಾಡಿಕೊಡಲಾಗಿದೆ.

ನಮ್ಮ ರಾಷ್ಟ್ರದಲ್ಲಿ ೧೯೮೦ ರಿಂದ ಈಚೆಗೆ ಸಾಮಾಜಿಕ ಅರಣ್ಯ ಯೋಜನೆಗೆ ಒಂದು ಹೊಸ ಹುರುಪು ಬಂದಿದೆ. ಇದಕ್ಕೆ ಮುಖ್ಯ ಕಾರಣ ವಿದೇಶಗಳಿಂದ ಬಂದಂಥ ನೆರವು. ಈ ಯೋಜನೆಯ ಪ್ರಕಾರ ಬರಡು ಪ್ರದೇಶಗಳಲ್ಲಿ ಮೇವು, ಕಟ್ಟಿಗೆ, ಇತರ ಸಣ್ಣಪುಟ್ಟ ಕೆಲಸಗಳಿಗಾಗಿ ಬೇಕಾಗುವ ಗಿಡಮರಗಳನ್ನು ನೆಡುವುದು ಮುಖ್ಯ ಕಾರ್ಯಕ್ರಮವಾಗಿದೆ. ಇದರಿಂದಾಗಿ ನಮ್ಮ ಕಾಯ್ದಿರಿಸಿದ ಅರಣ್ಯಗಳ ಮೇಲೆ ಉಂಟಾಗು ತ್ತಿರುವ ಅತೀವ ಒತ್ತಡವನ್ನು ಕಡಿಮೆ ಮಾಡಲು ಬಹಳಷ್ಟು ಸಹಾಯಕಾರಿ ಆಗುತ್ತಿದೆ. ವ್ಯವಸಾಯದ ಬೆಳವಣಿಗೆಗೆ ಅರಣ್ಯದ ಬೆಂಬಲ ಸಾಕಷ್ಟುಬೇಕು. ಕೃಷಿ ಜಮೀನಿನ ಬದುಗಳ ಮೇಲೆ ರೈತರು ತಮಗೆ ಬೇಕಾದ ಗಿಡಮರಗಳನ್ನು ನೆಟ್ಟು ಬೆಳೆಸಿದ್ದೆಯಾದರೆ, ಅವು ಗಾಳಿಯ ತಡೆಯನ್ನು ನಿಯಂತ್ರಿಸುವುದಲ್ಲದೇ ಕೃಷಿ ಬೆಳೆಗಳ ಉತ್ಪತ್ತಿಯನ್ನೂ ಅಧಿಕಗೊಳಿಸುವುದಾಗಿ ಕಂಡುಬಂದಿದೆ. ಅರಣ್ಯ ಇಲಾಖೆಯವರು ಈ ದಿಸೆಯಲ್ಲಿ ಎಲ್ಲ ತಾಲ್ಲೂಕುಗಳಲ್ಲಿ ಹೆಚ್ಚು ಹೆಚ್ಚಾಗಿ ಸಸಿ ತೋಟಗಳನ್ನು ಬೆಳೆಸಿ, ಗ್ರಾಮಸ್ಥರಿಗೆ ಬೇಕಾಗುವ ಎಲ್ಲಾ ಜಾತಿಯ ಸಸಿಗಳನ್ನು ಉಚಿತವಾಗಿ ಹಂಚುತ್ತಿದ್ದಾರೆ. ಇದರಿಂದ ಗ್ರಾಮಸ್ಥರು ತಮ್ಮ ಕೃಷಿಗೆ ಯೋಗ್ಯವಲ್ಲದ ಜಮೀನುಗಳಲ್ಲಿ ಗಿಡಮರಗಳನ್ನು ನೆಟ್ಟು ಬೆಳೆಸಿ, ಸ್ವಾವಲಂಬಿಗಳಾಗಲು ಅನುಕೂಲ ಮಾಡಿದಂತಾಗಿದೆ. ರೈತರು ತಮ್ಮ ಜಮೀನು

ಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಸುವಂತೆಯೇ ಕೆಲವು ಭಾಗಗಳಲ್ಲಿ ಗಿಡ ಮರಗಳನ್ನು ಬೆಳೆಸಿ ತಮ್ಮ ಬೇಡಿಕೆಗಳನ್ನು ತಾವೇ ಪೂರೈಸಿಕೊಳ್ಳುವುದು ಅನಿವಾರ್ಯ. ಈ ರೀತಿ ಗಿಡಮರಗಳನ್ನು ಬೆಳೆಸಿ ಭೂಮಿಯನ್ನು ಅಭಿವೃದ್ಧಿ ಪಡಿಸದೇ ಹೋದರೆ, ನಮ್ಮ ಯೋಜನಾ ತಜ್ಞರಾದ ಡಾ|| ಜಿ. ವಿ. ಕೆ. ರಾವ್‌ರವರು ಹೇಳಿದಂತೆ ಈ "ಶತಮಾನದ ಅಂತ್ಯದ ವೇಳೆಗೆ ನಾವು ಅನ್ನವಿಲ್ಲದೆ ಸಾಯದಿದ್ದರೂ, ಅನ್ನ ಬೇಯಿಸಲು ಸೌದೆ ಇಲ್ಲದೇ ಸಾಯುವ ಸಾಧ್ಯತೆ ಇದೆ."

ಅರಣ್ಯವನ್ನು ರಕ್ಷಿಸಿ, ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯು ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಾಡಿನಲ್ಲಿ ಬೀಳುವ ಬೆಂಕಿಯನ್ನು ತಡೆಗಟ್ಟಲು ಬೆಂಕಿ ಕಾವಲುಗಾರರನ್ನು ಎಲ್ಲ ಅರಣ್ಯ ಪ್ರದೇಶಗಳಲ್ಲಿಯೂ ಪ್ರತಿ ವರ್ಷ ಜನವರಿಯಿಂದ ಮೇ ತಿಂಗಳವರೆಗೆ ನೇಮಿಸಲಾಗುತ್ತಿದೆ. ಕಾಡ್ಗಿಚ್ಚನ್ನು ಕೂಡಲೇ ಆರಿಸುವುದರಿಂದ ಅರಣ್ಯ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಗಿಡಮರಗಳು ಹುಟ್ಟಿ ಬೆಳೆಯುವುದಕ್ಕೆ ಸಹಾಯ ಮಾಡಿದಂತಾಗುತ್ತದೆ. ಅರಣ್ಯ ಪ್ರದೇಶದಲ್ಲಿ ಮೇಯಲಿಕ್ಕೆ ಬರುವ ದನಕರುಗಳಿಗೆ ಶುಲ್ಕವನ್ನು ವಿಧಿಸಲು ಶಿಫಾರಸ್ಸು ಮಾಡಲಾಗಿದೆ. ಇದರಿಂದ ಬಡವಾದ ಮತ್ತು ಅನಗತ್ಯವಾದ ದನಕರುಗಳ ಸಂಖ್ಯೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಅಭಿವೃದ್ಧಿ ಹೊಂದಿರುವ ಹಲವಾರು ರಾಷ್ಟ್ರಗಳಲ್ಲಿರುವಂತೆ ನಮ್ಮ ರಾಷ್ಟ್ರದಲ್ಲೂ ದನಕರುಗಳನ್ನು ಕಟ್ಟಿ, ಮೇವು ಹಾಕಿ ಸಾಕುವ ಪದ್ಧತಿಯನ್ನು ಇನ್ನು ಮುಂದೆಯಾದರೂ ತರಲೇಬೇಕು. ಇದರಿಂದಲೇ ನಮ್ಮ ಅರಣ್ಯಗಳ ಪುನರ್‌ಜೀವನ ಸಾಧ್ಯ. ಹೆಚ್ಚುತ್ತಿರುವ ದನಕರುಗಳು ಅರಣ್ಯ ಭೂಮಿಯಲ್ಲಿ ಮೇಯಿಸಲು ನುಗ್ಗುವುದನ್ನು ತಡೆಗಟ್ಟಲು, ಹಲವಾರು ಅರಣ್ಯ ಪ್ರದೇಶಗಳಲ್ಲಿ ಆಳವಾದ ಕಂದಕಗಳನ್ನು ತೋಡಿ, ದನಪ್ರವೇಶವನ್ನು ತಡೆಗಟ್ಟಲಾಗುತ್ತಿದೆ. ಬರಡು ಹಾಗೂ ಅರಣ್ಯ ಪ್ರದೇಶಗಳ ನಡುವೆ ಇರುವ ಖಾಲಿ ಜಾಗಗಳಲ್ಲಿ ಗಿಡಮರಗಳನ್ನು ಬೆಳೆಸುವುದಲ್ಲದೇ, ನಶಿಸುತ್ತಿರುವ ಅರಣ್ಯಗಳನ್ನು ಸ್ವಚ್ಛಪಡಿಸಿ, ನಿಬಿಡವಾಗಿ ನೆಡುತೋಪುಗಳನ್ನು ಬೆಳೆಸುವ ಕಾರ್ಯಕ್ರಮ ಅರಣ್ಯ ಇಲಾಖೆಯ ಈಗಿನ ಮುಖ್ಯ ಧ್ಯೇಯ. ಅರಣ್ಯ ಕಚ್ಚಾ ವಸ್ತುಗಳನ್ನು ಅವಲಂಬಿಸಿರುವ ಉದ್ದಿಮೆಗಳಿಗೆ ಯುಕ್ತ ಬರಡು ಜಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಕೊಟ್ಟು ಅವರಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ಅವರೇ ಬೆಳೆಸಿ ಉಪಯೋಗಿಸುವ ಯೋಜನೆಗೆ ಸರ್ಕಾರ ಎಡೆ ಮಾಡಿಕೊಟ್ಟಿದೆ.

ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ರಾಜ್ಯದ ಗಡಿಪ್ರದೇಶಗಳಲ್ಲಿ ಅರಣ್ಯರಕ್ಷಕರಿಗೆ ನಿಸ್ತಂತು ಯಂತ್ರಗಳನ್ನು ಅಳವಡಿಸಿರುವುದಲ್ಲದೆ, ವಾಹನಗಳನ್ನೂ, ಬಂದೂಕುಗಳನ್ನು ಒದಗಿಸಿ ಕಳ್ಳಸಾಗಾಣಿಕೆದಾರರನ್ನು ತಡೆಹಿಡಿಯುವ ವ್ಯವಸ್ಥೆಯನ್ನು ಮಾಡಲಾಗಿದೆ. ಅರಣ್ಯವನ್ನು ಕಾಪಾಡುವ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಜನರ ಸಹಕಾರ ತೀರ ಅಗತ್ಯ. ಅರಣ್ಯ ಇಲಾಖೆಯ ಸಿಬ್ಬಂದಿಯೊಂದೇ ಎಲ್ಲಾ ಕಾಲಗಳಲ್ಲಿ ಕಾಯುವುದು ಕಷ್ಟ. ಜನ ಸಹಕರಿಸಿ, ಕಳ್ಳಸಾಗಾಣಿಕೆ ಮತ್ತು ಇತರ ನಿರ್ಬಂಧಿತ ಚಟುವಟಿಕೆಗಳನ್ನು ಕಂಡುಹಿಡಿಯಲು ಇಲಾಖೆಯ ಜೊತೆ ಸಹಕರಿಸಿದರೆ ಅರಣ್ಯದ ಆಡಳಿತ ವ್ಯವಸ್ಥೆಗೆ ಬಹಳಷ್ಟು ಸಹಾಯಕವಾಗುತ್ತದೆ. ಮಾಹಿತಿ ಕೊಡುವ ಜನರಿಗೂ,

ಕಳ್ಳಸಾಗಾಣಿಕೆ ತಡೆಹಿಡಿಯಲು ನೆರವಾಗುವ ಇತರರಿಗೂ ಯುಕ್ತ ಬಹುಮಾನ ಕೊಡುವ ಆದೇಶವನ್ನು ಈಗಾಗಲೇ ಸರ್ಕಾರ ನೀಡಿದೆ. ಕಳ್ಳಸಾಗಾಣಿಕೆದಾರರಿಗೂ, ಕಳ್ಳ ಬೇಟೆಗಾರರಿಗೂ ತೀವ್ರ ಶಿಕ್ಷೆ ವಿಧಿಸಲು ಸರ್ಕಾರ ಕಾನೂನುಗಳಲ್ಲಿ ಯೋಗ್ಯ ಮಾರ್ಪಾಡು ಮಾಡಿದೆ. ಅದೂ ಅಲ್ಲದೆ ಅರಣ್ಯ ಸಿಬ್ಬಂದಿಗಳಿಗೆ ಅತಿಕ್ರಮಣದಾರರನ್ನು ಹೊರದೂಡುವ ಹಾಗೂ ತಪ್ಪಿತಸ್ಥರನ್ನು ಬಂಧಿಸುವ ಮತ್ತು ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನೂ ಸರ್ಕಾರ ನೀಡಿದೆ. ಮರಗಳ ರಕ್ಷಣೆ ಕಾಯಿದೆ ಪ್ರಕಾರ, ಮರ ಅಧಿಕಾರಗಳ ಅನುಮತಿ ಇಲ್ಲದೇ ಕೆಲವೊಂದು ಭಾಗಗಳಲ್ಲಿ, ಜಮೀನುಗಳಲ್ಲಿ ಮರ ಕಡಿಯುವುದನ್ನು ನಿಷೇಧಿಸಲಾಗಿದೆ. ಕೇಂದ್ರ ಸರ್ಕಾರದ ಅರಣ್ಯ ಸಂರಕ್ಷಣೆ ಕಾಯಿದೆ ಪ್ರಕಾರ, ಅರಣ್ಯ ಪ್ರದೇಶವನ್ನು ಇತರ ಕೆಲಸಗಳಿಗೆ ಉಪಯೋಗಿಸುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅನುವತಿ ಇಲ್ಲದೆ ಉಪಯೋಗಿಸುವುದನ್ನು ನಿರ್ಬಂಧಿಸಲಾಗಿದೆ.

ಜಮೀನುಗಳಲ್ಲಿ ಗಿಡಮರಗಳನ್ನು ನೆಡಲು ಯೋಗ್ಯವಾದ ಕಾಲ ಈಗಾಗಲೇ ಮೂಡಿ ಬಂದಿದೆ. ಮಳೆಗಾಲ ಪ್ರಾರಂಭವಾಗಿರುವುದರಿಂದ ನೆಟ್ಟ ಎಲ್ಲ ಸಸಿಗಳು ಬದುಕಿ ಬೆಳೆದು ಉಳಿಯುವ ಅವಕಾಶ ಉಂಟು. ಈ ಒಂದು ಕಾರ್ಯಕ್ರಮವನ್ನು ನೆನಪಿಸುವುದಕ್ಕೋಸ್ಕರವಾಗಿಯೋ ಎಂಬಂತೆ ನಾವು ಈ ವಾರವನ್ನು "ಗಿಡ ನೆಡುವ ವಾರ" ಅಥವಾ "ವನ ಮಹೋತ್ಸವ ವಾರ" ಎಂದು ಹೇಳಿಕೊಂಡಿದ್ದೇವೆ. ಗಿಡ ನೆಡುವ ಈ ವಾರದಲ್ಲಿ ನಾವೆಲ್ಲರೂ ಸೇರಿ ಇದುವರೆಗೆ ಅರಣ್ಯವನ್ನು ಕಾಪಾಡುವುದರಲ್ಲಿ ಯಾವ ಕಾರ್ಯಕ್ರಮಗಳು ಯಶಸ್ವಿಯಾಗಿವೆ, ಯಾವ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಯಾವ ರೀತಿ ಇಂಥ ಕಾರ್ಯಕ್ರಮಗಳು ಯಶಸ್ವಿಗೊಳಿಸಲು ಸಾಧ್ಯ, ಯಾವ ರೀತಿಯಲ್ಲಿ ಜನರ ಸಹಕಾರ ಅಗತ್ಯ ಮೊದಲಾದವನ್ನು ವಿಮರ್ಶಿಸಬೇಕು ಮತ್ತು ಅದರಂತೆ ಎಲ್ಲರೂ ಎಲ್ಲ ರೀತಿಯಲ್ಲಿಯೂ ಇಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಮುಂದೆ ಬರಬೇಕು. ಮಾನವನಿಲ್ಲದೆ ಅರಣ್ಯ ಉಳಿದಿರಬಲ್ಲದು—ಪ್ರಾಯಶಃ ಇನ್ನೂ ಚೆನ್ನಾಗಿ ಸೊಂಪಾಗಿ ಮತ್ತು ದಟ್ಟವಾಗಿ. ಆದರೆ ಅರಣ್ಯವಿಲ್ಲದೇ ಮಾನವ ಒಂದು ಕ್ಷಣ ಕೂಡ ಉಳಿದಿರಲಾರ; ಏಕೆಂದರೆ ಮಾನವನ ಉಸಿರು ಅಶನ, ವಸನ ಮತ್ತು ನಿವೇಶನ ಒಂದೊಂದು ಅರಣ್ಯವನ್ನೇ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಅವಲಂಬಿಸಿಯೇ ಇದೆ. ಆದ್ದರಿಂದ ಈ ಜೀವದಾಯಕ, ಜೀವರಕ್ಷಕ ಹಾಗೂ ಜೀವ ಪೋಷಕ ಕಾಮಧೇನುವನ್ನ ಅತ್ಯಂತ ಜೋಪಾನದಿಂದ ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ಸಂದರ್ಭದಲ್ಲಿ ಒಂದು ಆಂಗ್ಲ ಭಾಷೆಯ ಒಂದು ಹೇಳಿಕೆಯನ್ನು ನೆನಪಿಸುವುದು ಸಾಂದರ್ಭಿಕವಾಗಿದೆ. ಅದರಂತೆ "ನಾಗರಿಕತೆಯ ನಡೆಯ ಮುಂದೆ ಅರಣ್ಯ ಹಿಮ್ಮೆಟ್ಟುತ್ತದೆ, ಮರುಭೂಮಿ ನಾಗರಿಕತೆಯನ್ನು ಹಿಂಬಾಲಿಸುತ್ತದೆ".

ಪಂಚಾಯಿತ್ತಿ ಲೈಟು

ಫಣೀಶ್ವರನಾಥ ರೇಣು

ಒಂದು ಸಲ ಮಹತೊ ಜಾತಿಯ ಹಿರಿಯರು ರಾಮನವಮಿ ಹಬ್ಬದ ಸಂತೆಯಲ್ಲಿ ಒಂದು ಪೆಟ್ರೊಮ್ಯಾಕ್ಸ್ ಲೈಟನ್ನು ಖರೀದಿ ಮಾಡಿದರು. ಕಳೆದ ಹದಿನೈದು ತಿಂಗಳಲ್ಲಿ ಅವರು ತಮ್ಮ ಜಾತಿಯವರಿಂದ ವಸೂಲಿ ಮಾಡಿದ್ದ 'ದಂಡ'ದ ಹಣವನ್ನು ಅದಕ್ಕಾಗಿ ಬಳಸಿಕೊಂಡಿದ್ದರು. ಆ ಗ್ರಾಮದಲ್ಲಿ ಎಲ್ಲಾ ಒಟ್ಟು ಎಂಟು ಬೇರೆ ಬೇರೆ ಜಾತಿಯವರ ಪಂಚಾಯತಿಗಳಿದ್ದವು. ಆಯಾ ಜಾತಿಯವರು ಸಭೆ ಸೇರಲು ಅವರಿಗೆ ತಮ್ಮದೇ ಆದ ಪ್ರತ್ಯೇಕ ಸ್ಥಳಗಳಿದ್ದವು. ಎಲ್ಲ ಪಂಚಾಯಿತಿಯಲ್ಲೂ, ಸಭೆ ಸೇರುವಾಗ ನೆಲದ ಮೇಲೆ ಹಾಸಲು ಬೇಕಾದ ಹತ್ತಿಯ ಜಮಖಾನ, ಹಳ್ಳಿಯವರು 'ಪಂಚಾಯಿತ್ತಿ ಲೈಟು' ಎಂದು ಕರೆಯುತ್ತಿದ್ದ, ಸ್ವಂತ ದೀಪ ಇತ್ಯಾದಿಗಳಿದ್ದವು.

ಪಂಚಾಯಿತ್ತಿ ಲೈಟನ್ನು ಖರೀದಿಸಿದನಂತರ ಉಳಿದಿದ್ದ ಹತ್ತು ರೂಪಾಯಿನಲ್ಲಿ ಜಾತಿಯ ಹಿರೀಕರು ಲೈಟಿನ ಆರಂಭೋತ್ಸವಕ್ಕೆ ಬೇಕಾದ ಪದಾರ್ಥಗಳನ್ನು ತಂದರು. ಯಾವುದೇ ದುಬಾರಿ ಬೆಲೆಯ ಸಂಕೀರ್ಣ 'ಯಂತ್ರ'ವನ್ನು ಹೊಸದಾಗಿ 'ಚಾಲು' ಮಾಡುವಾಗ ಪೂಜೆ–ಪುನಸ್ಕಾರಗಳಿಲ್ಲದೆ ಸಾಧ್ಯವಿಲ್ಲ. ಅಷ್ಟೇಕೆ ಬ್ರಿಟಿಷರ ಕಾಲದಲ್ಲಿ ಸಹ ಒಂದು ಸೇತುವೆ ನಿರ್ಮಾಣವಾಗುವುದಕ್ಕೆ ಮೊದಲು ಒಂದು 'ಪ್ರಾಣಿಬಲಿ' ಕೊಡುವ ವಾಡಿಕೆ ಇದ್ದೇ ಇತ್ತು.

ಹೊತ್ತು ಇಳಿಯುವುದಕ್ಕೆ ಮುಂಚೆಯೇ ಎಲ್ಲರೂ ಸಂತೆಯಿಂದ ಸಾಲಾಗಿ ಹಿಂತಿರುಗಿದರು. ಗುಂಪಿನ ಮುಂದೆ, ಪಂಚಾಯಿತಿಯ ತಳವಾರ ಲೈಟಿನ ಪೆಟ್ಟಿಗೆಯನ್ನು ತಲೆ ಮೇಲೆ ಹೊತ್ತು ಬರುತ್ತಿದ್ದ.

೧೯೮೮ರ ಜನವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಫಣೀಶ್ವರನಾಥ ರೇಣು ಅವರ "ಪಾಂಚ್ ಲೈಟ್" ಕಥೆಯ ಭಾವಾನುವಾದ.

ಅವನ ಹಿಂದೆ ಜಾತಿಯ ಮುಖ್ಯಸ್ಥ, ಅವನ ತಾಬೇದಾರ, ಆಮೇಲೆ ಇನ್ನಿತರ ಹಿರೀಕರು. ಅವರಿನ್ನೂ ಹಳ್ಳಿಯನ್ನು ತಲುಪಿಯೇ ಇರಲಿಲ್ಲ—ಅಷ್ಟರಲ್ಲಿ ಬ್ರಾಹ್ಮಣರ ಜಾತಿಯ ಪೂತಂಗಿ ಝೂ ಒಡ್ಡೊಡ್ಡಾಗಿ ಕೇಳಿದ; 'ಏಯ್, ಮಹತೊ! ಈ ಲಾಟೀನಿಗೆ ಎಷ್ಟು ಕೊಟ್ಟೆಯಯ್ಯಾ?' ಅದು 'ಪಂಚಾಯ್ತಿ ಲೈಟು' ಎಂದು ಅವನಿಗೆ ಕಾಣಿಸಲಿಲ್ಲವಾ? ಯಾವಾಗಲೂ ಈ ಬ್ರಾಹ್ಮಣರೇ ಹೀಗೆ. ತಾವೇ ಶ್ರೇಷ್ಠರು ಎನ್ನುವ ಅಹಂಕಾರ. ಅವರಿಗೆ ತಮ್ಮ ಮನೆಯ ಕೈಎಣ್ಣೆ ದೀಪ 'ಎಲೆಕ್ಟ್ರಿಕ್ ಬಲ್ಬು' ಆಗಿ ಬಿಡುತ್ತೆ. ಆದರೆ ಇತರೇ ಜಾತಿಯವರ ಪಂಚಾಯ್ತಿ ಲೈಟು ಮಾತ್ರ ಅವರ ಕಣ್ಣಿಗೆ ಕೇವಲ 'ಲಾಟೀನು'!

ಮಹತೋಗಳೆಲ್ಲರೂ ಸುತ್ತ ನೆರೆದರು. ಹೆಂಗಸರು, ಮಕ್ಕಳು, ಮುದುಕರು—ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಅಷ್ಟಕ್ಕೆ ಕೈಬಿಟ್ಟು ಓಡಿ ಬಂದರು. 'ಬನ್ನಿ, ಬನ್ನಿ. ಪಂಚಾಯ್ತಿ ಲೈಟು ಬಂದಿದೆ!' ತಳವಾರ ಅಗ್ನು ಮಹತೋ ಎಲ್ಲರಿಗೂ ಮೇಲಿಂದ ಮೇಲೆ ಎಚ್ಚರಿಕೆ ಕೊಟ್ಟ. 'ಎಲ್ರೂ ಹಿಂದಕ್ಕೆ ಸರಿಯಿರಿ! ಹೋಗಿ, ಹಿಂದಕ್ಕೆ. ಇದನ್ನು ಮುಟ್ಟಿ, ಕೆಡಸಿ ಬಿಟ್ಟೀರಿ, ಹುಷಾರು!'

ಜಾತಿಯ ಮುಖ್ಯಸ್ಥ ತನ್ನ ಹೆಂಡತಿಗೆ ಹೇಳಿದ: 'ಇವತ್ತು ಸಂಜೆ, ಇದ್ನ ಹಚ್ಚೋಕೆ ಮುಂಚೆ ಪೂಜೆ, ಮಂಗಳಾರತಿ ನಡೀಬೇಕು. ಹೋಗಿ ಸರ್ರಂತ ಮೈತೊಳ್ಕಂಡು ಬಾ. ಪೂಜೆಗೆಲ್ಲಾ ಅಣಿ ಮಾಡು. ದೇವರ ಮಂಟಪ ಸರಿಮಾಡಿ, ಮಡಗು.'

ಭಜನೆ ಗುಂಪಿನ ನಾಯಕ ತನ್ನವರಿಗೆ ವಿವರಿಸಿದ: 'ನೋಡ್ರೋ, ಇವತ್ತು ರಾತ್ರಿ ಪಂಚಾಯ್ತಿ ಲೈಟು ಹಚ್ಚೋವಾಗ ಭಜನೆ ನಡೀಬೇಕು. ನಾನು ಈಗಲೇ ಒಳ್ಳೇ ಮಾತಿನಲ್ಲಿ ಹೇಳ್ತಿದೀನಿ! ಹಾಡುವಾಗ ನೀವು ಯಾರಾದರೂ ಎಡವಟ್ಟು ಮಾಡಿದಿರೋ ಅಥವಾ ಟೈಮಿಗೆ ಸರಿಯಾಗಿ ಬರದೆಹೋದಿರೋ ಅಂಥವರನ್ನು ಒದ್ದು ಆಚೆಗೆ ಓಡಿಸ್ತೀನಿ, ತಿಳೀತಾ?'

ಹೆಂಗಸರ ಗುಂಪಿನಲ್ಲಿದ್ದ ಗುಳೀರಿ ಚಿಕ್ಕಮ್ಮ ಆಗಲೇ ತುಳಸಿದಾಸರ ಹಾಡನ್ನು ಗುಣುಗುಣಿಸಲು ಪ್ರಾರಂಭಿಸಿದ್ದಳು. ಚಿಕ್ಕ ಪುಟ್ಟ ಹೈಕಳು ಸಂಭ್ರಮದಿಂದ ಹಿಗ್ಗಿ ಹುಯಿಲೆಬ್ಬಿಸುತ್ತಿದ್ದವು.

ಹೊತ್ತು ತಂಪುವುದಕ್ಕೆ ಒಂದು ಗಂಟೆ ಮುಂಚಿತವಾಗಿಯೇ ಜಾತಿ ಬಾಂಧವರೆಲ್ಲರೂ ತಮ್ಮ ಮುಖ್ಯಸ್ಥನ ಮನೆ ಬಾಗಿಲಿನಲ್ಲಿ ಸೇರಿದ್ದರು. 'ಪಂಚಾಯ್ತಿ ಲೈಟು! ಪಂಚಾಯ್ತಿ ಲೈಟು!' ಎಲ್ಲರ ಬಾಯಿನಲ್ಲೂ ಅದೇ ಮಾತು.

ಜಾತಿ ಮುಖ್ಯಸ್ಥ ನೀರಿನ ಚುಂಗಾಣಿ ದಮ್ಮು ಎಳೆಯುತ್ತಾ ನಡೆದ ಸಂಗತಿ ಎಲ್ಲವನ್ನೂ ಮತ್ತೆ ಮೊದಲಿನಿಂದ ಹೇಳಿದ: "ಏನಾಯ್ತು ಅಂತ. ಮೊದ್ಲು ಆ ಅಂಗಡಿ ಯೋನು ನಮ್ಮ ತಾವ ಯೋಳ್ದ—'ಇದರ ಬೆಲೆ ನೂರಾ ಐದು ರೂಪಾಯಿ' ಅಂತ. ನಾನು ಯೋಳ್ದೆ—'ಇಲ್ಲಿ ನೋಡಿ, ಸಾವಕಾರ್ರೆ. ನೀವು ನಮ್ಮನ್ನು ಏನಂತ ಮಾಡೀರಿ? —ನಾವೇನೂ ಹಳ್ಳಿಗಮಾರಗಳಲ್ಲ. ಇಂಥ ಪಂಚಾಯ್ತಿ ಲೈಟುಗಳ್ನ—ಸಾವಿರ ನೋಡಿದೀವಿ, ಬಿಡ್ರಿ' ಅಂದೆ. ಅಂಗೆ ಅಂದಮೇಲೆ, ಅವನು ನನ್ನ ಮಕ ನೋಡೇ ನೋಡ್ದ, ಆಮೇಲೆ ಯೋಳ್ದ: 'ನೀವು ನಿಮ್ಮ ಪಂಗಡದ ಮುಖಂಡರು ಅಂತ ಕಾಣುತ್ತೆ. ಹೋಗಲಿ ಬಿಡಿ, ನೀವೇ ಬಂದು ಪಂಚಾಯ್ತಿ ಲೈಟು ಬೇಕು ಅನ್ನೋವಾಗ

ನಾವು 'ಇಲ್ಲ' ಅನ್ನೋಕಾಯ್ತದಾ? ತಗೊಳಿ—ನಿಮಗೋಸ್ಕರ ನಾನು ಐದು ರೂಪಾಯಿ ಬಿಟ್ಟುಕೊಡ್ತಿನಿ' " ಅಂದ.

ಮುಖಂಡನ ಹಿಂದೆ ಬಂದಿದ್ದ ಅವನ ತಾಬೇದಾರ ತನ್ನ ಕೈವಾರಿ ಧ್ವನಿ ಕೂಡಿಸಿದ: 'ಈ ಅಂಗಡಿಯವರು ಇದಾರಲ್ಲಾ—ಇವ್ರು— ಜನಗಳ ಮುಕ ನೋಡಿದರೇ, ತಿಳ್ಕಂಡು ಬಿಡ್ತಾರೆ—ಲೈಟು ತಕಂಡಾಗ, ಅಂಗಡಿ ಜವಾನ ಅದರ ಪೆಟ್ಟಿಗೆ ಕೊಡಾಕಿಲ್ಲ ಅಂದ. ಆಗ ನಾನು ಅಂಗಡಿಯವನಿಗೆ ಯೋಳ್ದೆ: 'ರೀ, ಸಾವಕಾರ್ರೇ! ಪೆಟ್ಟಿಗೆ ಇಲ್ಲದೆ, ಬರಿ ಲೈಟು ತಕಾಳಕೆ ಬರುತ್ತೇನ್ರಿ, ನೀವೇ ಯೋಳಿ' ಅಂದೆ. ಆಗ ಅಂಗಡಿ ಸಾವುಕಾರ ಜವಾನನಿಗೆ ಮುಕಕಟ್ಟೆ ಉಗುದ! 'ಕಳ್ಳಗೊರಮ! ಹಳ್ಳಿಯಿಂದ ಜಾತಿ ಮುಖಂಡರೇ ಬಂದಿರುವಾಗ, ಅವರೆದುರಿಗೇ ಈ ಗಾಂಚಾಳಿ ಎಲ್ಲಾ ತೆಗೀತಿಯಲ್ಲಾ—ಪೆಟ್ಟಿಗೆ ಕೊಡ್ಲಾ ಅವರಿಗೆ' ಅಂದ ಎಂಬುದನ್ನು ತಾಬೇದಾರ ವರ್ಣರಂಜಿತವಾಗಿ ವಿವರಿಸಿದ.

ಸುತ್ತ ಸೇರಿದವರೆಲ್ಲರೂ ತಮ್ಮ ನಾಯಕನ ಕಡೆ ತಿರುಗಿ ಅತ್ಯಂತ ಗೌರವ ಸೂಚಕವಾದ ದೃಷ್ಟಿ ಬೀರಿದರು. ಆದರೆ ಕೊನೆಯ ಗಳಿಗೆಯಲ್ಲಿ ಒಂದು ತೊಡಕು ಬಂತು. ರೂಡಲ್‌ಸಾನ ಅಂಗಡಿಯಿಂದ ಯಾರೋ ಮೂರು ಬಾಟ್ಲು ಸೀಮೆಎಣ್ಣೆ ತಂದರು. ಆಗ ಒಂದು ಪ್ರಶ್ನೆ ಎದ್ದಿತು. 'ಪಂಚಾಯ್ತಿ ಲೈಟನ್ನು ಹಚ್ಚುವವರು ಯಾರು?'

ಇದು ಮುಂಚೆ ಯಾರಿಗೂ ಹೊಳೆದಿರಲಿಲ್ಲ. ಪೂಜೆಯ ಸಾಮುಗ್ರಿ ಎಲ್ಲವೂ ಮಂಟಪದ ಬಳಿ ಸಿದ್ಧವಾಗಿದ್ದವು. ಭಜನೆ ಗುಂಪಿನವರು ತಾಳ, ತಬಲ, ಹಾರ್ಮನಿ—ಎಲ್ಲವನ್ನೂ ಇಟ್ಟು ಕುಳಿತಿದ್ದರು. ಪಂಚಾಯ್ತಿ ಲೈಟು ಎಲ್ಲಿತ್ತೋ ಅಲ್ಲೇ ಕೂತಿತ್ತು.

ತಿರುಪು ತಿರುಗಿಸಲು ಕಷ್ಟವಾದ ಇಂಥ ವಸ್ತುವನ್ನು ಹಳ್ಳಿಯ ಆ ಗುಂಪಿನವರು ಎಂದೂ ತಂದಿರಲಿಲ್ಲ. ಅವರಲ್ಲಿ ಒಂದು ಗಾದೆ ಇದೆ: 'ಹಸು ತಂದರೆ, ಅದರ ಹಾಲು ಕರೆಯುವವರು ಯಾರು?'. ಈ ನಯ ನಾಜೂಕಿನ 'ಯಂತ್ರ'ವನ್ನು ಹೊತ್ತಿಸಿ ಬೆಳಗುವವರು ಯಾರು?

ಹಾಗೆಂದ ಮಾತ್ರಕ್ಕೆ ಇಡೀ ಹಳ್ಳಿಯಲ್ಲಿ ಪಂಚಾಯ್ತಿ ಲೈಟು ಹಚ್ಚುವವರೇ ಗತಿ ಇರಲಿಲ್ಲ ಎಂದು ಅರ್ಥವಲ್ಲ. ಪ್ರತಿ ಜಾತಿಯವರ ಪಂಚಾಯಿತಿಯಲ್ಲೂ ಅಂಥ ದೀಪಗಳಿದ್ದವು....ಅವುಗಳನ್ನು ಹಚ್ಚಲು ಬಲ್ಲ ತಜ್ಞರೂ ಇದ್ದರು. ಆದರೆ ಒಂದು ಜಾತಿಯವರು ಪೂಜೆ-ಪುನಸ್ಕಾರವೆಲ್ಲವನ್ನೂ ನಡೆಸಿ, ಹೊಸದಾದ ತಮ್ಮ ದೀಪ ಬೆಳಗಲು ಬೇರೆ ಜಾತಿಯ ಯಾರನ್ನೋ ಕರೆತರುವುದಾದರೂ ಹೇಗೆ? ಅದರ ಬದಲು, ಲೈಟು ಅಲ್ಲೇ ಬಿದ್ದಿರಲಿ, ನಷ್ಟವಿಲ್ಲ, ನಾಳೆ ದಿನ, ಬೇರೆ ಜಾತಿಯವರು ಆಡುವ ಚುಚ್ಚು ಮಾತನ್ನು ಯಾರು ಸಹಿಸಿಯಾರು? 'ಹೊರಗಿನವನು ಬಂದು ನಿಮ್ಮ ಪಂಚಾಯ್ತಿ ಲೈಟು ಹೊತ್ತಿಸಬೇಕಾಯಿತು!' ಛೆ! ಛೆ! ಎಲ್ಲಾದರೂ ಉಂಟೇ? ಇದು ಪಂಚಾಯಿತಿಯ ಮಾನ ಕಳೆಯುವ ಸಮಾಚಾರ!

ಬೇರೆ ಜಾತಿಯವರ ಹತ್ತಿರ ಯಾರೂ ಇದರ ಬಗ್ಗೆ ಮಾತನಾಡುವಂತಿರಲಿಲ್ಲ.

ಎಲ್ಲರಿಗೂ ಅತೀವ ನಿರಾಸೆ. ಕತ್ತಲಾಗುತ್ತ ಬಂತು. ಅವತ್ತು ಯಾರೂ ತಮ್ಮ ಮನೆಗಳಲ್ಲಿ ಎಣ್ಣೆ ದೀಪಗಳನ್ನು ಹೊತ್ತಿಸಿರಲಿಲ್ಲ—ಪಂಚಾಯ್ತಿ ಲೈಟು ಹಚ್ಚುವುದಕ್ಕೆ ಮುಂಚೆ ಮನೆಯ ದೀಪ ಹಚ್ಚಿಸುವುದುಂಟೇ?

ಯಾರೋ ಪಿಸುಗುಟ್ಟಿದರು: 'ಪ್ಯಾಂಟ್ರ್ಯ ದೀಪಕ್ಕೆ ಬಲೇ ಹಮ್ಮು!'

ಒಬ್ಬ ಯುವಕ ಮೇಲೆದ್ದು ಬಂದು ಹೇಳಿದ: 'ಆ ರಜಪೂತರು ಬಿದ್ದು ಬಿದ್ದು ನಗ್ತಾ ಅವ್ರೆ. ಅವ್ರು ಯೋಳ್ತಾರೆ: ಆ ಲೈಟಿನ ಮುಂದೆ ನೀವು ಎಲ್ಲ ಕೈಲೂ ಕಿವಿ ಇಡ್ಕಂಡು ನಾಕು ದಫ ಕುಂತು ಎದ್ದು ಮಾಡ್ರಲೇ! ಫಕ್ಕಂತ ದೀಪ ಆಗ ಕಚ್ಕಂತದೆ.'

ಗುಳೀರಿ ಚಿಕ್ಕಮ್ಮನ ಮಗಳು ಮುನೀರಿ ಏನೋ ಹೇಳಬೇಕೆಂದಿದ್ದವಳು ಹಾಗೆ ಅನುಮಾನಿಸಿ, ತಡೆದಳು. ಅವಳಿಗೆ ಗೊತ್ತು—ಗೋದಣ್ಣನಿಗೆ ಪಂಚಾಯ್ತಿ ಲೈಟು ಹಚ್ಚಲು ಬರುತ್ತದೆ ಎಂದು. ಆದರೆ ಹೇಗೆ ಹೇಳುವುದು? ಆ ಗೋದಣ್ಣನನ್ನು ಜಾತಿಯಿಂದ ಹೊರಕ್ಕೆ ಹಾಕಿ ಅವನ ಮೇಲೆ 'ಕಟ್ಟು' ಮಾಡಿದ್ದರು. ಉಳಿದ ಜಾತಿಬಾಂಧವರ ಮನೆಯಲ್ಲಿ ಅವನು ಹುಕ್ಕಾ ಸೇದುವಂತಿರಲಿಲ್ಲ, ನೀರು ಸಹ ಮುಟ್ಟುವಂತಿರಲಿಲ್ಲ. ಮುನೀರಿಯ ತಾಯಿ ಗೋದಣ್ಣನ ಮೇಲೆ ಕುಲಸ್ಥರಿಗೆ ದೂರು ಕೊಟ್ಟಿದ್ದಳು, ಬೇರೆ. ಅವನು ಮುನೀರಿಯನ್ನು ಕಂಡಾಗಲೆಲ್ಲಾ 'ಹೆಣ್ಣೇ—ನನ್ನ ಪ್ರೀತಿಯ ಕಣ್ಣೇ' ಎನ್ನುವ ಸಿನಿಮಾ ಹಾಡನ್ನು ಗುಯ್‌ಗುಟ್ಟಿ ರೇಗಿಸುತ್ತಾನೆಂಬುದು ಅವಳ ದೂರು. ಅದೇನೆ ಇರಲಿ—ಹಳ್ಳಿಯ ಹಿರೀಕರೆಲ್ಲರಿಗೂ ಗೋದಣ್ಣನ ಮೇಲೆ ಒಂದು ಕಣ್ಣು ಇದ್ದೇ ಇತ್ತು. ಹೇಳಿಕೇಳಿ, ಅವನು ಪರ ಊರಿನಿಂದ ಬಂದು ಇಲ್ಲಿ ಕಾಲೂರಿದವನು—ಅವನು ಇವತ್ತಿನವರೆಗೆ ಜಾತಿಯ ಹಿರೀಕರಿಗೆ 'ವೀಳ್ಯ' ಕೊಟ್ಟು, ಜಾತಿ ಮರ್ಯಾದೆ ಸಲ್ಲಿಸಿರಲಿಲ್ಲ. ಅಂಥವನನ್ನು ಈಗ ಕರೆಯುವುದಾದರೂ ಹೇಗೆ? ಮುನೀರಿ ಅವನ ಹೆಸರನ್ನು ಎತ್ತುವ ಹಾಗಿರಲಿಲ್ಲ. ಈ ಮಧ್ಯೆ ಇಡೀ ಕುಲದ ಗೌರವಕ್ಕೇ ಅಪೋಹ ಬಂದಿತ್ತು!

ಮುನೀರಿ ಈ ವಿಷಯವೆಲ್ಲವನ್ನೂ ತನ್ನ ಗೆಳತಿ ಕಣೇಲಿಯ ಮುಂದೆ ಇಟ್ಟಳು. 'ಕಣೇಲಿ....' ಅವಳ ಕಿವಿಯಲ್ಲಿ ಎಲ್ಲವನ್ನೂ ಮೆಲ್ಲನೆ ಉಸುರಿದಳು.

ಕಣೇಲಿ ನಕ್ಕು 'ಅದ್ಸರಿ—ಗೋದಣ್ಣ ಜಾತಿಗೆಟ್ಟವ್ನಲ್ಲಾ?' ಎಂದಳು.

'ಎಂಗಾದ್ರು ಆಗ್ಲಿ—ಮುಖಂಡನತಾವ ಏಳ್ಬುಡು' ಎಂದಳು ಮುನೀರಿ.

ಕಣೇಲಿ, ಗೋದಣ್ಣನಿಗೆ ಲೈಟು ಹಚ್ಚಲು ಬರುತ್ತದೆಂಬ ವಿಷಯವನ್ನು ತಿಳಿಸಿದಳು.

'ಯಾರು, ಆ ಗೋದಾನಾ? ಅವನಿಗೆ ಬತ್ತದಾ ಲೈಟು ಕಚ್ಸೋಕೆ? ಆದರೆ....'.

ಜಾತಿಯ ಮುಖಂಡ ತನ್ನ ತಾಬೇದಾರನ ಕಡೆ ನೋಡಿದ. ಅವನು ಉಳಿದ ಕುಲಸ್ಥರ ಕಡೆ ನೋಡಿದ. ಎಲ್ಲರೂ ಸೇರಿಯೇ 'ಸರ್ವಾನುಮತ'ದಿಂದ ಗೋದಣ್ಣನನ್ನು ಜಾತಿ ಬಿಟ್ಟು ಹೊರಗೆ ಹಾಕಿದ್ದರು. ಇಡೀ ಗ್ರಾಮವೇ ಅವನ ಬಗ್ಗೆ ಮುನಿದಿತ್ತು. ಆದರೆ ಮುಖಂಡ ಹೇಳಿದ: 'ನಮ್ಮ ಮಾನ ಮರ್ಯಾದೆ ಎಲ್ಲಾ ಮಣ್ಣು ಪಾಲಾಗ್ತಾ ಇದೆ. ಈಗ ಜಾತಿ, 'ಕಟ್ಟು'—ಇದ್ನೆಲ್ಲಾ ತಗಂಡು ಏನು ಮಾಡೋಣ?'

ತಾಬೇದಾರ ಮಾರುಲಿದ: 'ನೀವು ಯೇಳೋದು ಸರಿ, ಕಣಣ್ಣ.'

ಉಳಿದ ಹಿರೀಕರು 'ಹೂಂ' ಗುಟ್ಟಿದರು. 'ಈ ಒಂದು ದಫ ಗೋದಣ್ಣನ್ನ 'ಮಾಫ್' ಮಾಡೋಣ.

ಮುಖಂಡ, ತಳವಾರನ ಕೈಲಿ ಗೋದಣ್ಣನಿಗೆ ಹೇಳಿ ಕಳುಹಿಸಿದ. ತಳವಾರ ಕ್ಷಣಾರ್ಧದಲ್ಲಿ ಹಿಂತಿರುಗಿ ಬಂದ! 'ಅವ್ನು ಬರಾಕಿಲ್ವಂತೆ. ಈ ಹಿರೀಕರ್‍ನ ನಂಬೋದು

ಎಂಗೆ? ಅಂತಾನೆ. ಒಂದ್ವೇಳೆ ಆ ಲೈಟು ಕಚ್ಚಿಕಳ್ದಿ ಓದ್ರೆ, ನೀವೆಲ್ಲಾ ಸೇರ್ಕಂಡು ಮತ್ತೆ ಅವನಿಗೆ ದಂಡ ಆಕ್ತೀರಿ ಅಂತಾ ಅನ್ನೆ' ಎಂದು ತಳವಾರ ವರದಿ ಕೊಟ್ಟ.

ಜೋಲು ಮೋರೆಯ ತಳವಾರ ತನ್ನದೇ ಸಲಹೆ ಕೊಡುತ್ತಾ 'ನಿಮ್ಮ ದಮ್ಮಯ್ಯ! ದೊಡ್ಡೋರು ಯಾರಾದ್ರು ಓಗಿ ಅವನಿಗೆ ಒಂದೀಟು ತಲೆ ಸವರಿ ಕರ್ಕಂಡು ಬಲ್ರಿ! ಇಲ್ಲಾಂದ್ರೆ—ನಾಳ್ನಿಂದ ನಾವು ಈ ಊರಾಗೆ ತಲೆ ಎತ್ಕಂಡು ತಿರುಗೋ ಅಂಗಿಲ್ಲ' ಎಂದ.

ಗುಳೀರಿ ಚಿಕ್ಕಮ್ಮ ಹೇಳಿದಳು: 'ನಾನು ಓಗಿ ಅವನ್ನ ಕರ್ಕಂಡು ಬತ್ತೀನಿ.' ಅವಳು ಎದ್ದು ಗೋದಣ್ಣನ ಗುಡಿಸಿಲಿಗೆ ಹೋದಳು. ಅವನು ಒಪ್ಪಿಕೊಂಡು ಬಂದ. ಎಲ್ಲರ ಮುಖದಲ್ಲೂ ಹೊಸ ಆಸೆ ಮಿನುಗಿತು.

ಒಂದು ಮಾತಿಲ್ಲದೆ ಗೋದಣ್ಣ ಪಂಚಾಯ್ತಿ ಲೈಟಗೆ ಎಣ್ಣೆ ತುಂಬಿಸಿದ. ಜಾತಿಯ ಮುಖ್ಯಸ್ಥನ ಹೆಂಡತಿ ತಾನು ಪೂಜೆಗೆಂದು ಸಿದ್ಧವಾಗಿರಿಸಿದ ವಸ್ತುಗಳ ಮುಂದೆ ಅತ್ತಿತ್ತ ಅಡ್ಡಾಡಿದಳು—ಬೆಕ್ಕನ್ನು ಆಚೆಗೆ ಓಡಿಸಿ ಬಂದಳು. ಭಜನೆ ಗುಂಪಿನ ನಾಯಕ, ಕೆದರಿ ಹೋಗಿದ್ದ ನವಿಲುಗರಿ ಬೀಸಣಿಗೆಯನ್ನು ಸರಿಮಾಡತೊಡಗಿದ.

ಗೋದಣ್ಣ ಕೇಳಿದ: 'ಲೈಟು ಹಚ್ಚೋಕೆ ಸ್ಪಿರಿಟ್ಟು ಎಲ್ರಯ್ಯಾ?' ಸರಿ, ಇನ್ನೊಂದು ವಿಘ್ನ. ಎಲ್ಲರೂ ತಮ್ಮ ಒಳಗೊಳಗೆ ಜಾತಿ ಮುಖ್ಯಸ್ಥನ ಮತ್ತು ಇತರ ಹಿರೀಕರ ಅವಿವೇಕದ ಬಗ್ಗೆ ಟೀಕೆ ಸುರುಮಾಡಿದ್ದರು. ಯಾವುದನ್ನು ಹೇಗೆ ಮಾಡ ಬೇಕೆಂಬ ಅರಿವಿಲ್ಲದೆ ಜೇಡದ ಕೆಲಸಕ್ಕೆ ಕೈಹಾಕುತ್ತಾರೆಂಬುದು ಅವರೆಲ್ಲರ ಟೀಕೆ.

ಪುನಃ ಎಲ್ಲರ ಮುಖದಲ್ಲೂ ನಿರಾಸೆ.

ಆದರೆ ಗೋದಣ್ಣ ಬಲೆ ಕಿಲಾಡಿ. ಸ್ಪಿರಿಟ್ಟು ಇಲ್ಲದೆ ಪಂಚಾಯ್ತಿ ಲೈಟು ಹೊತ್ತಿಸ ಬಲ್ಲ. 'ಒಂದೀಟು ಕೊಬ್ರಿ ಎಣ್ಣೆ ತನ್ರೋ' ಅಂದ. ಮುನೀರಿ ಓಡುತ್ತಾ ಹೋಗಿ ಒಂದು ಡಬ್ಬಿ ಮುಚ್ಚಳದಲ್ಲಿ ಎಣ್ಣೆ ತಂದಳು. ಗೋದಣ್ಣ ಪಂಚಾಯ್ತಿ ಲೈಟಗೆ ಪಂಪು ಹೊಡೆಯಲು ಪ್ರಾರಂಭಿಸಿದ.

ಲೈಟನೊಳಗಿನ ರೇಷ್ಮೆ 'ಮ್ಯಾಂಟ್ಲು' ಬೆಳಕು ತುಂಬಿಕೊಂಡಿತು. ಗೋದಣ್ಣ ಅದನ್ನು ಪುನಃ ಪುನಃ 'ಪುಸ್, ಪುಸ್' ಅನ್ನಿಸಿ, ತಿರುಪನ್ನು ತಿರುವಿದ. ಸ್ವಲ್ಪ ಹೊತ್ತಿನ ಮೇಲೆ ಬುಸುಗುಟ್ಟುವ ಶಬ್ದ ಹೊರಟು, ಬೆಳಕು ಹೆಚ್ಚಿತು. ಮಂದಿಯ ಹೃದಯಗಳು ತುಂಬಿ ಬಂದವು. ಈ ಗೋದಣ್ಣ ನಿಜವಾಗಿಯೂ ಬಲೆ, ನನ್ಮಗ! ಕೊನೆಗೆ, ಲೈಟನ ಬೆಳಕು ಇಡೀ ಸಮುದಾಯವನ್ನೇ ಬೆಳಗಿತು—ಭಜನೆ ಹುಡುಗರು ಒಕ್ಕೊರಲಿಂದ ಹುಯಿಲಿಟ್ಟರು: 'ಮಹಾವೀರಸ್ವಾಮಿಗೆ ಜಯವಾಗಲಿ!' ಭಜನೆ ಪ್ರಾರಂಭವಾಯಿತು. ದೀಪದ ಬೆಳ್ಳಂಬೆಳಕಿನಲ್ಲಿ ಎಲ್ಲರ ನಗೆಮುಖಗಳು ನಿಚ್ಚಳವಾಗಿ ಹೊಳೆದವು. ಗೋದಣ್ಣ ಎಲ್ಲರ ಹೃದಯವನ್ನು ಗೆದ್ದಿದ್ದ.

ಮುನೀರಿ ಆಸೆ ತುಂಬಿದ ಕಣ್ಣುಗಳಿಂದ ಗೋದಣ್ಣನ ಕಡೆ ನೋಡಿದಳು. ಇಬ್ಬರ ಕಣ್ಣುಗಳೂ ಒಂದಾಗಿ, ಪರಸ್ಪರ ಮಾತು ಪ್ರಾರಂಭವಾಯಿತು. 'ಎಲ್ಲಾದ್ನು ಮಾಫ್ ಮಾಡವ್ರಂತೆ.' 'ನಂದೇನು ತೆಪ್ಪಿರನಿಲ್ಲ, ಬುಡು.'

ಜಾತಿಯ ಮುಖಂಡ ಗೋದಣ್ಣನನ್ನು ತನ್ನ ಪಕ್ಕಕ್ಕೆ ಕರೆದು, ವಿಶ್ವಾಸದಿಂದ ಮಾತನಾಡಿಸಿದ: 'ಸದ್ಯ, ಬಾಡಪ್ಪ! ಜಾತಿಯ ಮಾನ ಉಳಿಸ್ದೆ. ನಿನ್ನ ತೆಪ್ಪುಗಳ್ನೆಲ್ಲಾ ಮಾಫ್ ಮಾಡಿದೀವಿ—ಇನ್ಮೇಲೆ—ನೀನು ಆ ಸಿನಿಮಾ ಆಡುಗಳ್ನ ಎಷ್ಟು ಬೇಕಾದಶೂ ಆಡ್ಕಬೌದು.'

ಗುಳೀರಿ ಚಿಕ್ಕಮ್ಮ ಅವನನ್ನು ಕರೆದು 'ಗೋದಣ್ಣ, ಇವತ್ತು ಊಟಕ್ಕೆ ನಮ್ಮನೇಗೆ ಬಾ' ಎಂದಳು.

ಗೋದಣ್ಣ ಮತ್ತೊಮ್ಮೆ ಮುನೀರಿ ಕಡೆ ನೋಡಿದ. ಅವಳು ತಲೆ ತಗ್ಗಿಸಿದಳು.

ಭಜನೆಯವರು ಕೀರ್ತನೆಗಳನ್ನು ಮುಗಿಸಿ 'ಜಯಕಾರ' ಮಾಡುತ್ತ 'ಹೋ' ಎಂದರು. ಪಂಚಾಯ್ತಿ ಲೈಟಿನ ಜ್ವಾಜಲ್ಯಮಾನ ಬೆಳಕಿನಲ್ಲಿ ಗಿಡಮರಗಳ ಪ್ರತಿಯೊಂದು ಎಲೆಯೂ ಉಲ್ಲಾಸದಿಂದ ರೋಮಾಂಚನಗೊಂಡಿತು.

ಕನ್ನಡಕ್ಕೆ: ಎಚ್. ಕೆ. ರಾಮಚಂದ್ರಮೂರ್ತಿ

ಕ್ಷಾತ್ರತೆಯು ಶರೀರ ಪುಷ್ಟ-ಶಕ್ತಿಗಳಲ್ಲಿಲ್ಲ. ಮನೋನಿರ್ಧಾರ ಧೈರ್ಯಗಳಲ್ಲಿದೆ. ನಿರ್ಭಯವಾದ ಮನಸ್ಸಿನಲ್ಲಿದೆ. ಸಹನತೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು. ತೋಪು ಗುಂಡುಗಳ ಶಕ್ತಿಯಿಲ್ಲದಿದ್ದರೂ ಮೇಲಿನ ಶಕ್ತಿಗಳಿಂದ ವೈರಿಗಳನ್ನು ಗೆಲ್ಲಬಹುದು.

ಗಾಂಧೀಜಿ

ಹೆದ್ದಾರಿಯಲ್ಲಿ ನರಕ

ಶೆಲ್ಡನ್ ಕೆಲ್ಲಿ

ಅಂದು ಏಪ್ರಿಲ್ ೨೧, ೧೯೮೬. ನ್ಯೂಯಾರ್ಕಿನ ಅಗ್ನಿಶಾಮಕ ದಳಕ್ಕೆ ಸೇರಿದ ೫೩ ವರ್ಷ ವಯಸ್ಸಿನ ಜಾನ್ ಪ್ಯಾಟ್ರಿಕ್ ಸಲಿವನ್ ಪೂರಾ ಸುಸ್ತಾಗಿದ್ದ. ಉಪನಗರವಾದ ವೆಸ್ಟ್‌ಚೆಸ್ಟರ್ ಪಟ್ಟಣದಲ್ಲಿದ್ದ ಸ್ನೇಹಿತರನ್ನು ಕಾಣಲು ಅವನು ಹೋಗಿದ್ದ. ಅವನು ಮನೆಯ ಕಡೆಗೆ ವಾಪಸ್ಸು ಹೊರಟಾಗ ಸುಮಾರು ನಡುರಾತ್ರಿಯಾಗಿತ್ತು. ವಿಶ್ವದ ವಿಪರೀತ ಬಿಡುವೇ ಇಲ್ಲದಷ್ಟು ಕೆಲಸವಿದ್ದ ಅಗ್ನಿ ವಿಭಾಗದಲ್ಲಿ ೨೯ ವರ್ಷಗಳು ಕೆಲಸ ಮಾಡಿದ ಮೇಲೂ ಸಲಿವನ್‌ಗೆ ತನ್ನ ವಿಶ್ರಾಂತಿ ಹಾಗೂ ಕ್ಷಮತೆ ಬಗ್ಗೆ ಯೋಚನೆ ತಪ್ಪಿರಲಿಲ್ಲ.

೨೦ ನಿಮಿಷಗಳ ನಂತರ ಸಲಿವನ್ ನ್ಯೂಯಾರ್ಕಿನ ನ್ಯೂ ರೋಶೆಲ್ (New Rochelle)ನ ಅತಿವೇಗ ಹೆದ್ದಾರಿಯ ಬೃಹತ್ ಚಾವಡಿ ಪ್ಲಾಜಾದ ಸಮೀಪ ಬರುತ್ತಿದ್ದ. ಇಲ್ಲಿ, ವೇಗವಾಗಿ ಸಾಗುವ ವಾಹನಗಳ ಆರು ಸಾಲುಗಳು ದೀಪಗಳಿಂದ ಬೆಳಗುತ್ತಿದ್ದ ೧೮ ಚಾವಡಿ ಮಳಿಗೆಗಳತ್ತ ಹರಿದು ಬಂದುವು.

ಆ ಕತ್ತಲಿನಲ್ಲಿ ಹಠಾತ್ತನೆ ಕಿತ್ತಳೆ ವರ್ಣದ ಜ್ವಾಲೆ ಸಲಿವನ್‌ನ ಬಲ ಪಕ್ಕಕ್ಕೆ ೧೪೦ ಮೀಟರ್ ದೂರದಲ್ಲಿ ಹಾಗೂ ಪ್ಲಾಜಾದ ಪ್ರವೇಶದ್ವಾರದ ಮುಂದೆ ಹಲವು ನೂರು ಮೀಟರ್ ಎತ್ತರಕ್ಕೆ ಚಿಮ್ಮಿತು.

ಆಯಾಸವನ್ನು ಕೊಡವಿ, ಸಲಿವನ್ ದಟ್ಟಣೆಯ ಸಾಲುಗಳನ್ನು ದಾಟಿ ಜ್ವಾಲೆ ಬರುತ್ತಿದ್ದ ಕಡೆಗೆ ಓರೆಯಾಗಿ ಸರಿದು ಹೋಗಲು ಯತ್ನಿಸತೊಡಗಿದ. ಮತ್ತಿ ಯಾರೂ ಕೆಲವು ನಿಮಿಷಗಳಲ್ಲೇ ೫ ಮೀಟರ್ ಎತ್ತರಕ್ಕೇರಿದ್ದ ಜ್ವಾಲೆಯನ್ನು ಗಮನಿಸಿದಂತೆ ಕಂಡು ಬರದಿದ್ದುದು ಆಶ್ಚರ್ಯಕರವಾದ ಸಂಗತಿ.

೧೯೮೭ರ ಜೂನ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಶೆಲ್ಡನ್ ಕೆಲ್ಲಿ ಅವ 'ಇನ್‌ಫೆರ್ನೊ ಆನ್ ದಿ ಹೈವೇ' ಲೇಖನದ ಅನುವಾದ.

ಹೆದ್ದಾರಿಯ ಹೊರ ಅಂಚನ್ನು ತಲುಪಿ, ಸುರಕ್ಷಿತವಾದಷ್ಟು ದೂರದಲ್ಲಿ ಕಾರನ್ನು ನಿಲ್ಲಿಸಿ, ಸಲಿವನ್ ಬೆಂಕಿ ಬರುತ್ತಿದ್ದ ಕಡೆಗೆ ಓಡಿದ. ಬಹುಶಃ ಪರಿಸ್ಥಿತಿ ಅಷ್ಟು ಗಂಭೀರವಾಗಿರಲಾರದು ಎಂದು ತನಗೆ ತಾನೇ ಹೇಳಿಕೊಂಡ. ನ್ಯೂಯಾರ್ಕ್ ಪ್ರದೇಶದ ಹೆದ್ದಾರಿಯಲ್ಲಿ ವರ್ಜಿಸಿದ್ದ ವಾಹನಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವುದು ಅಪರೂಪವಾಗಿರಲಿಲ್ಲ.

ಆಗ ತಲೆಕೆಳಗಾದ ಟ್ರಕ್‌ವೊಂದರ ಮಸುಕು ರೂಪವನ್ನು ಸಲಿವನ್ ನೋಡಿದ. ಅದರ ಚಕ್ರಗಳು ಹೊರತುದಿಯತ್ತ ತಿರುಗಿದ್ದುವು. ಇಂಜಿನ್ ಕಡೆಯಿಂದ ಬೆಂಕಿ ಗಾಡಿಯತ್ತ ಹರಡುತ್ತಿತ್ತು. ಹತ್ತಿರ ಬಂದಂತೆ ತೀವ್ರ ಧಗೆಗೆ ತನ್ನ ಮೈ ಚರ್ಮ ಬಿಗುಪಾಗುತ್ತಿರುವುದು ಸಲಿವನ್‌ಗೆ ಅರಿವಾಯಿತು.

"ಯಾರಾದರೂ ಒಳಗಿದ್ದೀರಾ" ಅವನು ಕೂಗಿಕೊಂಡ.

ಸುಮಾರು ೮ ಮೀಟರ್ ದೂರದಲ್ಲಿ ಅಡಕವಾದ ಕಾರೊಂದು ಗುರುತಿಸಲಾಗದಂತೆ ಜಜ್ಜಿ ಹೋಗಿರುವುದನ್ನು ಭಯ ಕಂಪಿತನಾಗಿ ನೋಡಿದ. ಎಲ್ಲೋ ಕೆಲವು ನಿಮಿಷಗಳ ಮುಂಚೆಯಷ್ಟೆ ಅಪಘಾತ ಸಂಭವಿಸಿದೆ. ಅನ್ಯಮನಸ್ಕರಾಗಿ ಚಾವಡಿ ಕಡೆ ಸಾಗಿದ್ದ ವಾಹನ ಚಾಲಕರು ಇದನ್ನು ಗಮನಿಸಿಲ್ಲ.

"ಓ!" ಸಲಿವನ್ ಮತ್ತೆ ಕೂಗಿಕೊಂಡ "ನಿಮಗೆ ನನ್ನ ಮಾತು ಕೇಳಿಸುತ್ತದೆಯೆ?" ಅದಕ್ಕೆ ಬಂದ ಏಕ ಮಾತ್ರ ಪ್ರತಿಕ್ರಿಯೆ ಎಂದರೆ ಸಂಚಾರದ ನಿರಂತರ ಗದ್ದಲ ಮತ್ತು ಅತಿಯಾಗಿ ಕಾದಿದ್ದ ಪೆಟ್ರೋಲ್ ಟ್ಯಾಂಕಿನ ವಿಶಿಷ್ಟವಾದ ಬುಸುಗುಟ್ಟುವಿಕೆ. ನಾನು ಒಳಗೆ ಹೋಗಲೇಬೇಕು ಎಂದು ಅವನು ಯೋಚಿಸುತ್ತಿರುವಂತೆಯೇ ಟ್ರಕ್ಕಿನ ಟೈರೊಂದು ಜ್ವಾಲೆ ಉಗುಳುತ್ತಾ ಆಸ್ಫೋಟಗೊಂಡಿತು.

ಸಲಿವನ್ ಹಿಂದೆಯೂ ತನ್ನ ಜೀವದ ಮೇಲೆ ಆಟವಾಡಿದ್ದ. ನ್ಯೂಯಾರ್ಕ್ ನಗರದ ಅಗ್ನಿ ವಿಭಾಗದಿಂದ ಎರಡು ಬಾರಿ ಧೈರ್ಯಸ್ಥೈರ್ಯಗಳಿಗಾಗಿ ಪ್ರಶಂಸೆ ಪಡೆದಿದ್ದ. ಅಲ್ಲದೆ ಕೊರಿಯದಲ್ಲಿ ತೋರಿಸಿದ ಸಾಹಸಕ್ಕಾಗಿ ಎರಡು ರಣನಕ್ಷತ್ರಗಳನ್ನು ಗಿಟ್ಟಿಸಿದ್ದ. ಆದರೆ ಇದು ವಿಭಿನ್ನವಾಗಿತ್ತು. ಏಕೆಂದರೆ ಎರಡೂ ವಾಹನಗಳ ಒಳಗೆ ಯಾರಾದರೂ ಇದ್ದಾರೆಯೆ ಎಂಬುದು ಇನ್ನೂ ಖಚಿತವಾಗಿರಲಿಲ್ಲ.

ತಲೆಕೆಳಗಾಗಿದ್ದ ಟ್ರಕ್ಕಿನ ಪಕ್ಕಕ್ಕೆ ಹಾರಿ, ಸಲಿವನ್ ಪ್ರಯಾಣಿಕರ ಬಾಗಿಲಿನ ಮೇಲೆ ನಿಂತುಕೊಂಡ. ಹಠಾತ್ ಗಾಳಿಯಿಂದ ಮೇಲೆದ್ದ ಬೆಂಕಿಜ್ವಾಲೆ ಅವನಿಂದ ಒಂದು ಮೀಟರ್‌ಗಿಂತ ಕಡಿಮೆ ದೂರದಲ್ಲಿ ಚಿಮ್ಮಿತು. ಆ ಕ್ಷಣದಲ್ಲಿ ಅವನು ಗಾಡಿಯ ಕಿಟಕಿಯಿಂದ ಒಳಕ್ಕೆ ಹಣಿಕಿದ. ದೂರದ ಮೂಲೆಯಲ್ಲಿ ಕೈಗಳು, ಕಾಲುಗಳು ಹೆಣೆದುಕೊಂಡಿರುವುದು ಕಾಣಿಸಿತು. ಒಳಗಿನಿಂದ ದನಿಗುಂದಿದ ಅಳು ಕೇಳಿ ಬಂತು. ಒಬ್ಬ ಮಹಿಳೆ ಸ್ಪ್ಯಾನಿಷ್‌ನಲ್ಲಿ ಗೋಗರೆದಳು "ದೇವರು ನನಗೆ ಸಹಾಯ ಮಾಡಲಿ...."

ದೊಡ್ಡ ಶಬ್ದದೊಡನೆ ಇನ್ನೊಂದು ಟೈರು ಒಡೆದು ಬೆಂಕಿ ಉಗುಳತೊಡಗಿತು. ಬುಸುಗುಟ್ಟುವಿಕೆ ಜೋರಾಗಲಾರಂಭಿಸಿತು. ಅಪಾಯಕಾರಿ ಶಬ್ದಗಳತ್ತ ಸಲಿವನ್ ಹೆಚ್ಚು ಗಮನಕೊಡಲಿಲ್ಲ. ಅವನಾಗಲೇ ಗಾಡಿಯ ಒಳಗೆ ಕೈಹಾಕಿ ತಡವರಿಸುತ್ತಿದ್ದ ಹಾಗೂ ಪುಟ್ಟ ಕೈಯೊಂದನ್ನು ಕಿಟಕಿಯ ಕಡೆ ಎಳೆಯುತ್ತಿದ್ದ.

ಒಬ್ಬ ಚಿಕ್ಕ ಹುಡುಗ ಹುಚ್ಚನಂತೆ ಅಳುತ್ತಿದ್ದ. ಸಲಿವನ್ ಹುಡುಗನನ್ನು ಜ್ವಾಲೆಯಿಂದ ರಕ್ಷಿಸಲು ಎದೆಗೊತ್ತಿಕೊಂಡು, ಗಾಡಿಯು ಮೇಲಿನಿಂದ ಬಗ್ಗಿ, ಕೆಳಕ್ಕೆ ಇಳಿಸಿದ. ಓಡು, ಓಡು ಎಂದು ಕಿರುಚಿದ.

ಕ್ಷಣಗಳ ನಂತರ ಸಲಿವನ್ ಪುನಃ ಒಳಕ್ಕೆ ಕೈ ಹಾಕಿದ. ಸ್ವಲ್ಪ ದೊಡ್ಡವನಾದ ಹುಡುಗನ ಕೈ ಸಿಕ್ಕಿತು. ತೀವ್ರಗತಿಯೊಂದರಿಂದ ಹುಡುಗನನ್ನು ಬಿಡುಗಡೆ ಮಾಡಿದ. ಕೆಳಕ್ಕೆ ಇಳಿಸಿದ ಮೇಲೆ ಹುಡುಗ ಆಗಲೇ ಇಳಿಸಿದ್ದ ಕಿರಿಯನ ಬಳಿಗೆ ಓಡಿದ. ಇಬ್ಬರೂ ಚೀರಾಡುತ್ತಿದ್ದರು. ಆದರೆ ಪೆಟ್ಟಾಗಿದ್ದ ಹಾಗೆ ಕಾಣಿಸುತ್ತಿರಲಿಲ್ಲ.

"ಅಮ್ಮಾ, ಅಮ್ಮಾ" ಸಣ್ಣ ಹುಡುಗ ಕೂಗಿದ.

ಎಲ್ಲಕ್ಕಿಂತಲೂ ಮಿಗಿಲಾಗಿ ಸಲಿವನ್ ಮಕ್ಕಳನ್ನು ಪ್ರೀತಿಸುತ್ತಿದ್ದ. ಅವನು ಮತ್ತು ಅವನ ಪತ್ನಿ ಐರೀನ್‌ಗೆ ನಾಲ್ವರು ಬೆಳೆದ ಮಕ್ಕಳಿದ್ದರು—ಒಬ್ಬ ಮಗಳು, ಮೂರು ಜನ ಗಂಡು ಮಕ್ಕಳು. ಮಕ್ಕಳನ್ನು ಗಮನಿಸುವ ಮತ್ತು ದೊಡ್ಡವರಾಗಿ ಅರಳಿ ಬೆಳೆಯಲು ಸಹಾಯ ಮಾಡುವ ಸೌಕರ್ಯ ಇತ್ತಿದ್ದಕ್ಕಾಗಿ ಸಲಿವನ್ ಪ್ರತಿದಿನ ದೇವರಿಗೆ ವಂದನೆ ಅರ್ಪಿಸುತ್ತಿದ್ದ. ಈಗ ಬಿಸಿ ಒಲೆಯಂತಿದ್ದ ಗಾಡಿಯ ಅಲುಗಾಡುತ್ತಿದ್ದ ನೆರಳಿನಲ್ಲೆಲ್ಲೋ ಪುಟ್ಟ ಬಾಲಕನ ತಾಯಿ ನೋವಿನಿಂದ ಒದ್ದಾಡುತ್ತಾ ಮಲಗಿದ್ದಳು.

ಸಲಿವನ್ ಅವಳ ಕೈ ಹಿಡಿದು ಎಳೆದ. ಅವಳು ಆಘಾತದಲ್ಲಿದ್ದಳು ಹಾಗೂ ದೂರ ಸರಿಯಲು ಯತ್ನಿಸಿದಳು. ಸಲಿವನ್‌ನ ಹಿಡಿತ ಮೃದುವಾಗಿತ್ತು. ಶಾಂತ ಧ್ವನಿಯಲ್ಲಿ ಮಾತಾಡುತ್ತಿದ್ದ—"ಮೆಲ್ಲಗೆ....ಎಲ್ಲವೂ ಸರಿಹೋಗುತ್ತದೆ...."

ಮಹಿಳೆಯ ಚೀರುವಿಕೆಯನ್ನೂ ಮೀರಿ ಒಬ್ಬ ಗಂಡಸಿನ ಧ್ವನಿ ಬಂತು. ಓ ದೇವರೇ! ಅಲ್ಲಿ ಒಳಗೆ ಇನ್ನೂ ಒಬ್ಬ ಇದ್ದಾನೆ—ಸಲಿವನ್ ಯೋಚಿಸಿದ. ಈಗ ಬುಸುಗುಟ್ಟುವ ಸದ್ದುಗಳು ಇನ್ನೇನು ಸ್ಫೋಟವಾಗಲಿರುವ ಬೃಹತ್ ಪ್ರೆಷರ್ ಕುಕ್ಕರಿನಂತೆ ಹಿಗ್ಗುತ್ತಿರುವ ಲೋಹದ ದೀರ್ಘ ಭಯ ಹುಟ್ಟಿಸುವ ಶಬ್ದದ ಮಧ್ಯೆ ಯಾವಾಗಾದರೊಮ್ಮೆ ಬರುತ್ತಿತ್ತು.

ಜಾನ್ ಸಲಿವನ್‌ನ ಮನದಲ್ಲೆಲ್ಲೋ ಘೋರ ಸದ್ದುಗಳೊಂದಿಗೆ ಮತ್ತು ೩ ದಶಕಗಳ ಅನುಭವದೊಡನೆ ಅಳವಡಿಕೆಯಾಗಿ ನಿಲ್ಲು ಗಡಿಯಾರ ಟಿಕ್, ಟಿಕ್ ಸದ್ದು ಮಾಡತೊಡಗಿತ್ತು. ಟಿಕ್ ಟಿಕ್ ಶಬ್ದ ನಿಂತುಹೋದಾಗ ಅಲ್ಲಿ ಬಂದಿಗಳಾಗಿರುವ ದುರ್ದೈವಿಗಳ ಜೀವನವೂ ಮುಗಿಯುವುದೆಂದು ಅವನಿಗೆ ತಿಳಿದಿತ್ತು.

ಜ್ವಾಲೆಯ ಬುಗ್ಗೆಗಳು

ಮೃದುತ್ವಕ್ಕಾಗಲೀ ಭರವಸೆಯ ಮಾತುಗಳನ್ನು ಆಡುವುದಕ್ಕಾಗಲೀ ಈಗ ಸಮಯವಿರಲಿಲ್ಲ. ದೃಢಕಾಯನಾಗಿ, ಎತ್ತರವಾಗಿದ್ದ ಸಲಿವನ್ ಹಿಡಿತವನ್ನು ಬಿಗಿ ಮಾಡಿದ. ದೀರ್ಘವಾಗಿ ಉಸಿರೆಳೆದುಕೊಂಡು, ಕಿಟಕಿಯಿಂದ ಮಹಿಳೆಯನ್ನು ಹೊರಕ್ಕೆಳೆದ. ನೆಲದಮೇಲೆ ಕಾಲಿರಿಸಿದ್ದೇ ತಡ, ಆಕೆ ಇಳಿಜಾರಾಗಿದ್ದ ರಸ್ತೆಯ ತುದಿಯ ಸುರಕ್ಷತೆಗೆ ಧಾವಿಸಿದಳು. ಅಳುತ್ತಿದ್ದ ಮಕ್ಕಳ ತೋಳಿನಲ್ಲಿ ಕುಸಿದು ಬಿದ್ದಳು. ಆಕೆಯ ದುಃಖಪೂರಿತ ಗೋಳಾಟ ಬೆಂಕಿಯ ಅಸಾಧ್ಯ ಆರ್ಭಟದಲ್ಲಿ ಬೆರೆತು ಹೋಯಿತು.

ಸಲಿವನ್ ತಿರುಗಿ ನಿಂತು ಪುನಃ ಆ ನರಕ ಸದೃಶ ಕಿಟಕಿಯಲ್ಲಿ ಬಗ್ಗಿದ. ಜ್ವಾಲೆಗಳು ಗಾಡಿಯ ಮೇಲೆ ಸುರುಳಿ ಸುರುಳಿಯಾಗಿ ಮೇಲೇರುತ್ತಿದ್ದುವು, ಯಾವಾಗ್ಗಿಂತ ಎತ್ತರ ಎತ್ತರಕ್ಕೆ ನರ್ತಿಸುತ್ತಿತ್ತು. ಏಕಪ್ರಕಾರವಾಗಿದ್ದ ಬುಸುಗುಟ್ಟುವ ಸದ್ದು ಬದಲಾಗಿ, ಒಮ್ಮೆ ಹಿಗ್ಗುವುದು ಒಮ್ಮೆ ಕುಗ್ಗುವುದು ಹೀಗೆ ವ್ಯತ್ಯಾಸಗೊಳ್ಳುತ್ತಿತ್ತು.

ಹೋಗು. ಮುಂಬರಿಯಲೇ ಬೇಕು. ಅತ್ಯಾತುರದಿಂದ ಸಲಿವನ್ ತಡಕಾಡುತ್ತಿರುವಾಗ ಸಿಕ್ಕಿಹಾಕಿಕೊಂಡಿದ್ದ ಮತ್ತು ಗಾಯಗೊಂಡಿದ್ದ ವ್ಯಕ್ತಿ ರಕ್ತಮಯವಾಗಿದ್ದ ಕೈಯ್ಯನ್ನು ಆಯಾಸದಿಂದ ಮೇಲೆತ್ತಿದ. ಹೊಗೆಯಿಂದ ತುಂಬಿದ್ದ ಗಾಡಿಗೆ ಸಲಿವನ್ ತನ್ನ ದೇಹದ ಮೇಲುಭಾಗವನ್ನು ಒರಗಿಸಿ ವ್ಯಕ್ತಿಯ ಬೆನ್ನ ಹಿಂದೆ ತನ್ನ ಕೈಗಳನ್ನು ಸೇರಿಸಿದ. ಅನಂತರ ವ್ಯಕ್ತಿಯ ತಲೆ ತನ್ನ ಭುಜಕ್ಕೆ ಒರಗಿದ್ದಂತೆ ಅವನು ನಿಧಾನವಾಗಿ ಹಿಂದಕ್ಕೆ ಸರಿಯ ತೊಡಗಿದ.

ಬುಸುಗುಟ್ಟುವಿಕೆಯ ಮಿಡಿತ ವೇಗವಾಯ್ತು. ಜ್ವಾಲೆಯ ಊಟೆಗಳು ಎಲ್ಲೆಡೆಯೂ ಮೇಲೇರಿದುವು. ಹೋಗು, ಹೋಗು ?

ತನ್ನ ಭುಜವನ್ನು ಗಟ್ಟಿಯಾಗಿಸಿಕೊಂಡು, ಸಲಿವನ್ ವ್ಯಕ್ತಿಯನ್ನು ಎತ್ತ ತೊಡಗಿದ. ಜೀವಂತವಾಗಿರುವ ಯಾವುದೋ ಹೊಸ ಶಕ್ತಿಯನ್ನು ಕೂಡಿಸಿಕೊಳ್ಳುತ್ತಿರುವುದೇನೋ ಎನ್ನುವಂತೆ ಬುಸುಗುಟ್ಟುವಿಕೆ ನಿಂತಿತು. ದೇವರು ನಮಗೆ ಸಹಾಯ ಮಾಡಲಿ ಎಂದು ಸಲಿವನ್ ಪ್ರಾರ್ಥಿಸಿದ. ದೀರ್ಘವಾಗಿ ಉಸಿರೆಳೆದುಕೊಂಡು, ತನ್ನಲ್ಲಿದ್ದುದನ್ನೆಲ್ಲಾ ಕೊಟ್ಟು, ಹಠಾತ್ ಸುಲಭವಾಗಿ ವ್ಯಕ್ತಿಯ ಬಳುಕು ದೇಹವನ್ನು ಟ್ರಕ್ಕಿನ ಪಕ್ಕಕ್ಕೆ ಎತ್ತಿದ.

ಸಹಾಯ ಹಸ್ತ ನೀಡಲು ಬಂದ ಟ್ರ್ಯಾಕ್ಟರ್–ಟ್ರೈಲರ್ ಚಾಲಕನಿಗೆ ಸಲಿವನ್ ವ್ಯಕ್ತಿಯನ್ನು ಎತ್ತಿಕೊಡುತ್ತಿದ್ದಂತೆ ಖಾಲಿಯಾಗಿದ್ದ ಗಾಡಿ ಭಗ್ಗನೆ ಹೊತ್ತಿಕೊಂಡಿತು. ಕ್ಷಣಗಳ ತರುವಾಯ ಹತೋಟಿ ಮೀರಿ ಟ್ರಕ್ ಉರಿಯುತ್ತಿದ್ದಂತೆ, ಸಲಿವನ್ ಜಜ್ಜಿ ಹೋಗಿದ್ದ ಕಾರಿನ ಬಳಿಗೆ ಓಡಿದ. ಹರಡುತ್ತಿದ್ದ ಟ್ರಕ್ಕಿನ ಬೆಂಕಿಯ ಜ್ವಾಲೆ ಚಾಲಕ ಚಕ್ರ ಅದುಮಿ ಹಿಡಿದಿದ್ದ ಪ್ರಜ್ಞಾಹೀನ ಮನುಷ್ಯನೊಬ್ಬನಿರುವುದನ್ನು ತೋರಿಸಿ ಕೊಟ್ಟಿತು.

ಟ್ರ್ಯಾಕ್ಟರ್—ಟ್ರೈಲರ್‌ನ ಚಾಲಕ ೧೦೨ ಕಿಲೊ ಇದ್ದ ಗ್ಯಾರಿ ವೇಯ್ನ್ ಟಾಲ್ಮನ್ ಕಾರಿನ ಬಾಗಿಲನ್ನು ತನ್ನೆಲ್ಲಾ ಶಕ್ತಿಯನ್ನೂ ಉಪಯೋಗಿಸಿ ಎಳೆಯಲು ಆಗಲೇ ಆರಂಭಿಸಿದ್ದ.

"ನಾನು ಪ್ರಯತ್ನಿಸುವೆ" ಎಂದ ಸಲಿವನ್. ಅವನು ಜಜ್ಜಿಹೋಗಿದ್ದ ಕಾರಿನ ಒಳಗೆ ಕೈ ಹಾಕಿ ಬಾಗಿಲಿನ ಬೀಗಗಳನ್ನು ತೆರೆದ. ಆದರೂ ಬಾಗಿಲು ತೆರೆದುಕೊಳ್ಳಲಿಲ್ಲ. ಮುಖದ ಮೇಲೆ ರಕ್ತ ಇದ್ದ ದುರ್ದೈವಿ ನೋವಿನಿಂದ ಮುಲುಗುಟ್ಟಿದ.

ಟ್ರಕ್ಕಿನ ಮತ್ತೊಂದು ಟೈರು ಸಿಡಿಯಿತು. ಬರುತ್ತಾ ಇರುವ ಬಿರುಗಾಳಿಯಂತಹ ಸದ್ದುಗಳನ್ನು ತಾಳಿತ್ತು ಬೆಂಕಿ. ತನ್ನ ಬರೀ ಕೈಗಳಿಂದ ಇರುಕಿಹೋಗಿದ್ದ ಬಾಗಿಲಿನೊಡನೆ ಸಲಿವನ್ ಹೋರಾಡತೊಡಗಿದ. ಅವನ ಹಿಂದೆ ಧ್ವನಿಗಳು ಸೇರತೊಡಗಿದುವು. ಸೈರನ್ನುಗಳು ಪ್ರಲಾಪಿಸತೊಡಗಿದುವು, ಅವನು ಒಂದು ಕಾಲನ್ನು ಹಿಂಬಾಗಿಲಿನ ಮೇಲೆ

ಊರಿ, ತನ್ನ ಎಲ್ಲಾ ಶಕ್ತಿಯನ್ನೂ ಒಗ್ಗೂಡಿಸಿ, ಎಳೆದ. ಬ್ಯಾಂಗ್! ಬಾಗಿಲು ತೆರೆದು ಕೊಂಡಿತು, ಹೋಗು! ಹೋಗು!

ಬೆಂಕಿ ಅಪರೂಪವಾಗಿ ತೆಪ್ಪಗಿತ್ತು. ಚಾಲಕನ ಸುರಕ್ಷಾಪಟ್ಟಿಯನ್ನು ಶಸ್ತ್ರಿ ಹಚ್ಚಿ, ಸಲಿವನ್ ಅದನ್ನು ಬಿಚ್ಚಿದ. ಚಾಲಕ ಚಕ್ರದ ಹಿಡಿತದಿಂದ ಮುಕ್ತಿ ದೊರಕಿಸಿಕೊಡಲು ವ್ಯಕ್ತಿಯನ್ನು ಆಸನಕ್ಕೆ ಒತ್ತಿ ಹಿಡಿದ. ಕ್ಷಣದ ನಂತರ ಆತನನ್ನು ಕಾರಿನಿಂದ ಹೊರಕ್ಕೆ ಎಳೆದು ತಂದ.

ಅವನು ಟ್ರಕ್ಕಿನಿಂದ ನಾಲ್ಕು ಜನರನ್ನು ರಕ್ಷಿಸಿ ಕೆಲವೇ ಕ್ಷಣಗಳು ಸರಿದಿತ್ತು. ಈಗ ಅವನು ಮತ್ತು ಟಾಲ್ಮನ್ ಐದನೆಯ ದುರ್ದೈವಿಯನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುತ್ತಿದ್ದಾಗ, ಪ್ರಬಲವಾದ ಗಾಳಿ ಅವರನ್ನು ನೆಲಕ್ಕೆ ಬಿಸುಟಿತು. ಸಲಿವನ್ ತಲೆ ಎತ್ತಿ ನೋಡಿದ. ಬೆಂಕಿ ಹಾಗೂ ಬೂದಿ ೬೦ ಮೀಟರ್ ಎತ್ತರಕ್ಕೆ ಹಾರುತ್ತಿರುವು ದನ್ನು ಕಂಡ.

ನಿಮಿಷಗಳಲ್ಲಿ ಆಂಬ್ಯುಲೆನ್ಸ್ ಬಂದು ಗಾಯಾಳುಗಳನ್ನು ಆಸ್ಪತ್ರೆಗೆ ಕರೆ ದೊಯ್ದಿತು. ಪೋಲೀಸರು ಸಂಚಾರ ನಿಯಂತ್ರಣ ಕೈಗೊಂಡರು.

ಬೆವರಿನಲ್ಲಿ ತೊಯ್ದು ಹೋಗಿದ್ದ ಸಲಿವನ್‌ಗೆ ಮುಖ, ಕೈಗಳಲ್ಲಿ ಗಾಯವಾಗಿ, ಕೊಂಚ ಸುಟ್ಟಿತ್ತು ಕೂಡಾ. ಸಾಕ್ಷಿದಾರನಾಗಿ ತನ್ನ ಹೆಸರನ್ನು ಅವನು ಪೋಲೀಸರಿಗೆ ಕೊಟ್ಟ. ಆತ ಮನೆಗೆ ಹೋಗಲೆಂದು ಕಾರನ್ನು ಹತ್ತುತ್ತಿದ್ದಾಗ, ಮಹಿಳೆಯೊಬ್ಬಳು ಓಡಿಬಂದಳು. ನಾನು ಪಾರುಮಾಡಿದ ನತದೃಷ್ಟರನ್ನು ಉಪಚರಿಸುತ್ತಿದ್ದ ಸಲಿವನ್‌ನನ್ನು ನೋಡಿದ್ದಳು ಆಕೆ.

"ನಾನು ನೋಡಿದವರಲ್ಲೆಲ್ಲಾ ನೀವು ಬಲು ಧೈರ್ಯಶಾಲಿಗಳು. ದೇವರು ನಿಮ್ಮನ್ನು ಹರಸಲಿ" ಎಂದು ಹೇಳುತ್ತಿರುವಾಗ ಆಕೆಯ ಕಣ್ಣುಗಳು ತಂಬಿಬಂದಿ ದ್ದುವು.

ಸಂಕೋಚಗೊಂಡ ಸಲಿವನ್ ಎರಡು ಮಾತು ಗೊಣಗಿ ಹೊರಟುಬಿಟ್ಟ. ಬೆಳಗಿನಝಾವ ಮನೆ ತಲುಪಿದ ಸಲಿವನ್‌ಗೆ ಒತ್ತಡ, ಹರ್ಷಾತಿರೇಕದಿಂದ ತಾನು ಬಳಲಿದ್ದುದು ಅರಿವಾಯಿತು. ಪತ್ನಿಯನ್ನು ಎಬ್ಬಿಸಿ ನಡೆದುದನ್ನೆಲ್ಲಾ ಹೇಳಬೇಕೆನಿ ಸಿತು. ಅಂದು ಐರೀನ್ ಬೆಳಗ್ಗೆ ೫ ಘಂಟೆಗೇ ಏಳಬೇಕಾಗಿತ್ತು. ಆಕೆಯನ್ನು ಮಲಗಿರಲು ಬಿಡಬೇಕೆಂದು ನಿರ್ಧರಿಸಿದ.

ಸಲಿವನ್ ರೆಫ್ರಿಜಿರೇಟರ್ ಬಳಿ ನಡೆದ, ಬೀರ್ ಡಬ್ಬಿ ಒಡೆದು ಕುಳಿತುಕೊಂಡ. ಅವರ ಮನೆಯ ೧೦ ವರ್ಷದ ನಾಯಿ ಶ್ಯಾನನ್ ಅವನ ಮಡಿಲಿಗೆ ಹಾರಿತು.

"ಶ್ಯಾನನ್" ಅವನು ಆರಂಭಿಸಿದ. "ಇವತ್ತು ರಾತ್ರಿಯ ವಿಚಾರವನ್ನು ನಿನಗೆ ಹೇಳುತ್ತೇ....".

ಮೇ ೨೩, ೧೯೮೬ ಅನ್ನಾ ಬೆರಿಯೋಸ್, ಆಕೆಯ ಮಗ ಲೂಯಿ ಮತ್ತು ಅವನ ಸ್ನೇಹಿತ ಜು ಆನ್, ಟ್ರಕ್ಕಿನ ಚಾಲಕ ಪೆಡ್ರೊ ವಿನ್ಸೆಂಟ್; ಮತ್ತು ಅಡಕವಾದ ಕಾರಿನ ಚಾಲಕ ಜಿರೊ ಒಗಾವರ ಜೀವ ಉಳಿಸಿದ್ದಕ್ಕಾಗಿ ಸಲಿವನ್ ಮೇಯರ್‌ರಿಂದ ವಿಶೇಷ ಶ್ಲಾಘನೆಗೆ ಪಾತ್ರನಾದ. ಸಮಾರಂಭ ನಡೆಯುತ್ತಿದ್ದಾಗ ನ್ಯೂರೊಶೇಲ್‌ನ

ಫೈರ್ ಕಮಿಷನರ್ ರೇಮಂಡ್ ಕಿರ್‌ನಾನ್" ಅವರ ಬಗ್ಗೆ ಯಾವಾಗಲೂ ನೀವು, ಓದುವ ಆದರೆ ಯಾವಾಗಲೂ ಭೇಟಿ ಆಗಲಾರದಂತಹವರು 'ನಾಯಕ' ಏಕೆಂದರೆ ಅವರು ತಮ್ಮನ್ನು ಹೆಚ್ಚುಗಾರಿಕೆ ಮಾಡಿದರೆ ಇಷ್ಟಪಡುವುದಿಲ್ಲ" ಎಂಬುವಾಗಿ ಸಲಿವನ್ ಬಗ್ಗೆ ಹೇಳಿದರು.

ಆದರೆ ಜಾನ್ ಸಲಿವನ್ ಈಗಲೂ 'ನಾಯಕ' ಪದ ಕೇಳಿದರೆ ಹಿಂಜರಿಯುತ್ತಾನೆ. ಬೆಂಕಿಯ ಬಳಿಗೆ ತನ್ನ ಒಳ ಮನಸ್ಸು ಕರೆದುಕೊಂಡು ಹೋಯಿತು ಎಂದು ಹಠದಿಂದ ಹೇಳುತ್ತಾನೆ. ಅಲ್ಲದೆ ವರ್ಷಗಳ ತರಬೇತಿ ತನ್ನ ಕಾರ್ಯವನ್ನು ಆಳುತ್ತದೆ ಎನ್ನುತ್ತಾನೆ. "ಸಿದ್ಧವಾಗಿ ನಿಂತಿರುವುದು" ಎಂಬ ತನ್ನ ಆಜೀವ ಪರ್ಯಂತದ ನೀತಿವಾಕ್ಯ ಎಲ್ಲೆಡೆಯ ಅಗ್ನಿಶಾಮಕರಿಗೆ ಸೇರಿದ್ದು ಎಂದು ಸಲಿವನ್ ದಿಟವಾಗಿ ಹೇಳುತ್ತಾನೆ.

ಅನು : ಎಂ. ಎನ್. ಸುಮಿತ್ರಾ

ರಾಜಕೀಯ ಕ್ಷೇತ್ರದಲ್ಲಿಯ ನನ್ನ ಪ್ರಯೋಗಗಳನ್ನು ಭಾರತವೇ ಅಲ್ಲದೆ ಬಹುಮಟ್ಟಿಗೆ ನಾಗರಿಕ ಜಗತ್ತೂ ಅರಿತಿದೆ. ನನಗಾದರೋ ಅವುಗಳು ಹೆಚ್ಚು ಮೌಲ್ಯವಾದವುಗಳಲ್ಲ. ನಾನು ಸಾಧಿಸಬೇಕೆಂದಿರುವುದು ಆತ್ಮ ಸಾಕ್ಷಾತ್ಕಾರ; ದೇವರನ್ನು ಮುಖತಃ ದರ್ಶಿಸಿ ಮೋಕ್ಷಸಾಧನೆ ಮಾಡು ವುದು.

ಗಾಂಧೀಜಿ

ಭಾರತದ ಮಯೂರ ಸಿಂಹಾಸನ ಎಲ್ಲಡಗಿದೆ?

ಶ್ರೀಹರಿ ಮೋಹನ್

ನಾದಿರ್‌ಶಾಹ ಲೂಟಿ ಮಾಡಿದ್ದ ರತ್ನಖಚಿತ ಮಯೂರ ಸಿಂಹಾಸನದ ಬಗ್ಗೆ ಶರ್ಲಾಕ್‌ಹೋಮ್ಸ್‌ನ ಜನಕ ಸರ್ ಆರ್ಥರ್ ಕಾನನ್ ಡೈಲನು ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆದಿದ್ದ:
"ದಿಲ್ಲಿ ಮೊಗಲರ ಅರಮನೆಯಲ್ಲಿಡಲಾಗಿದ್ದ ಮಯೂರಾಕಾರದ ಅದ್ಭುತ ಸಿಂಹಾಸನವನ್ನು ಸುವರ್ಣದಿಂದ ನಿರ್ಮಿಸಲಾಗಿದ್ದು ಅನೇಕಾನೇಕ ವಜ್ರಗಳು, ರತ್ನಗಳಿಂದ ಶೃಂಗರಿಸಲಾಗಿತ್ತು. ಸಿಂಹಾಸನ ಸ್ವರ್ಣಯುಕ್ತ ಪಾದಗಳುಳ್ಳ ಪಲ್ಲಂಗದಂತೆ ಕಾಣಿಸುತ್ತಿತ್ತು. ಪಾದಗಳ ಮೇಲೆ ವಜ್ರ–ವೈಢೂರ್ಯಗಳನ್ನು ಕಲಾತ್ಮಕವಾಗಿ ಜೋಡಿಸಲಾಗಿತ್ತು. ಸಿಂಹಾಸನದ ಪೃಷ್ಠಭಾಗದಲ್ಲಿ ಎರಡು ಮಯೂರಗಳಿದ್ದು, ಇವುಗಳ ಶರೀರ ಹಾಗೂ ರೆಕ್ಕೆಗಳ ಮೇಲೂ ಅನೇಕ ವಜ್ರಗಳು, ರತ್ನಗಳು ಕಂಗೊಳಿಸುತ್ತಿದ್ದವು."
ನಾದಿರಶಾಹನು ತೆಗೆದುಕೊಂಡು ಹೋದ ಮಯೂರ ಸಿಂಹಾಸನ ನಕಲಿ ಸಿಂಹಾಸನವಾಗಿದ್ದು ಅದು ಇಂದಿಗೂ ಟೆಹರಾನ್‌ನ ಅರಮನೆಯ ಖಜಾನೆಯಲ್ಲಿದೆ. ಈ ಸಿಂಹಾಸನವನ್ನು ಮೊಗಲ ಬಾದಶಹರು ಮೂಲ ಸಿಂಹಾಸನವನ್ನು ದರೋಡೆಗಾರರಿಂದ ರಕ್ಷಿಸಲು ನಿರ್ಮಿಸಿದ್ದರೆಂದು ಕೆಲವು ಆಂಗ್ಲ ಇತಿಹಾಸ ಲೇಖಕರು ಹೇಳುತ್ತಾರೆ. ಆ ಕೃತಕ ಸಿಂಹಾಸನ ವಾಸ್ತವಿಕ ಸಿಂಹಾಸನವನ್ನು ಎಷ್ಟು ಹೋಲುತ್ತಿತ್ತೆಂದರೆ, ಲಾರ್ಡ್ ಕರ್ಜನ್ ಅದನ್ನು ಟೆಹರಾನ್‌ನಲ್ಲಿ ನೋಡಿದಾಗ, ತಾನು ನಿಜವಾದ ಸಿಂಹಾಸನವನ್ನೇ ನೋಡುತ್ತಿದ್ದೇನೆಂದು ಅವನಿಗನ್ನಿಸಿತು. ಲಾರ್ಡ್ ಕರ್ಜನ್ ವಾಸ್ತವಿಕ ಸಿಂಹಾಸನವನ್ನು ದಿಲ್ಲಿಯ ಮೊಗಲರ ಅರಮನೆಯ ಒಂದು ಗುಪ್ತ ಸ್ಥಳದಲ್ಲಿ ನೋಡಿದ್ದ.

೧೯೮೪ರ ಮಾರ್ಚ್ ತಿಂಗಳಿನ ಹಿಂದಿ 'ನವನೀತ'ದಲ್ಲಿ ಪ್ರಕಟವಾದ ಶ್ರೀಹರಿ ಮೋಹನ್ ಅವರ "ಭಾರತ್ ಕಾ ತಖ್ತೆತಾಊಸ್ ಕಹಾಂ ಛಿಪಾ ಹೈ?" ಲೇಖನದ ಅನುವಾದ.

ಒಂದು ವೇಳೆ ಈ ಆಂಗ್ಲ ಇತಿಹಾಸ ಲೇಖಕರ ಈ ಹೇಳಿಕೆಯಲ್ಲಿ ವಾಸ್ತವಿಕತೆ ಯಿದ್ದರೆ, ಯಾವ ವಾಸ್ತವಿಕ ಸಿಂಹಾಸನವನ್ನು ನಾದಿರ್‌ಶಾಹನು ಲೂಟಿ ಮಾಡಲಾಗಿರ ಲಿಲ್ಲವೋ, ಅದನ್ನು ಲೂಟಿ ಮಾಡುವಲ್ಲಿ ಅನಂತರ ಆಂಗ್ಲರು ಯಶಸ್ಸು ಪಡೆದರೆಂದು ಹೇಳಬಹುದು.

* * *

ಮಾರ್ಚ್ ೧೭೮೫ರಲ್ಲಿ, ಅನೇಕ ಲಿಖಿತ ಮತ್ತು ಮೌಖಿಕ ಪ್ರಮಾಣಕ್ಕನುಸಾರ ವಾಗಿ, 'ಗ್ರೌಸವೇನರ್' ಎಂಬ ಹಡುಗೊಂದು ಭಾರತದಿಂದ ಇಂಗ್ಲೆಂಡಿಗೆ ಹೊರಟಿತ್ತು. ಹಡಗಿನಲ್ಲಿ ಅನೇಕ ಟನ್ ಬಂಗಾರದೊಂದಿಗೆ ಮಯೂರ ಸಿಂಹಾಸನವೂ ಇತ್ತು.

ಆಗ ಬ್ರಿಟೀಷರು ಫ್ರಾನ್ಸ್ ಮತ್ತು ಹಾಲೆಂಡ್‌ನೊಂದಿಗೆ ಯುದ್ಧ ಮಾಡು ತ್ತಿದ್ದರು. ಈ ಎರಡೂ ದೇಶಗಳೂ, ಬ್ರಿಟನ್ನಿನಂತೆ ಭಾರತದ ಮೇಲೆ ಅಧಿಕಾರ ಸ್ಥಾಪಿಸಲು ಪ್ರಯತ್ನಿಸುತ್ತಿದ್ದವು. ಗ್ರೌಸವೇನರ್ ಹಡಗು ಇಂಗ್ಲೆಂಡಿಗೆ ಹೊರಡಲು ಸಿದ್ಧವಾಗಿ ನಿಂತಿದ್ದಾಗ, ಅದೇ ವೇಳೆಗೆ ಫ್ರಾನ್ಸಿನ ನೌಕಾಬಲ ಭಾರತದ ಕೋರಮಂಡಳ ಸಮುದ್ರ-ತೀರದಲ್ಲಿ ಒಮ್ಮೆಲೆ ಪ್ರಕಟಗೊಂಡಿತ್ತು. ಗ್ರೌಸವೇನರ್ ಹಡಗಿನ ಪ್ರಯಾಣದಲ್ಲಿ ಈ ಕಾರಣದಿಂದ ವಿಳಂಬವಾಯಿತು. ಆ ವೇಳೆಯಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕಾರ್ಖಾನೆ ಮದ್ರಾಸ್‌ನ ಫೋರ್ಟ್‌ಸೆಂಟ್ ಜಾರ್ಜ್‌ನಲ್ಲಿತ್ತು. ಲಾರ್ಡ್ ಮೆಕಾರ್ಟನೆ ಅದರ ಅಧ್ಯಕ್ಷರಾಗಿದ್ದು, ಇಂಗ್ಲೆಂಡ್‌ಗೆ ಹೋಗುವ ಹಡಗುಗಳ ಸಾಗಣೆ ವ್ಯವಸ್ಥೆಯೂ ಇವರ ಜವಾಬ್ದಾರಿಯಾಗಿತ್ತು. ಅವರು ಲಂಡನ್‌ನಲ್ಲಿರುವ ಈಸ್ಟ್ ಇಂಡಿಯಾ ಕಂಪನಿಗೆ ಈ ಹಡಗಿನಲ್ಲಿ ತುಂಬಿದ ವಸ್ತುಗಳ ಸೂಚನೆ ಕೊಡುತ್ತಾ ಬರೆದರು: "ಆದಾಗ್ಯೂ ನಗದು ರೂಪದಲ್ಲಿ ಕಳುಹಿಸುತ್ತಿರುವುದು ತಮ್ಮ ನಿರೀಕ್ಷೆಗಿಂತ ಕಡಿಮೆಯಿದೆ, ಆದರೆ ಅದರ ಕೊರತೆಯನ್ನು ವಜ್ರವೈಢೂರ್ಯಗಳಿಂದ ತುಂಬುತ್ತಿದ್ದೇವೆ."

* * *

ಕಡೆಗೆ ೧೩ ಜುಲೈ ೧೭೮೫ ರಂದು ಗ್ರೌಸವೇನರ್ ಇಂಗ್ಲೆಂಡಿಗೆ ಹೊರಟಿತು. ಫ್ರೆಂಚ್ ಮತ್ತು ಹಾಲೆಂಡ್‌ನವರ ಭಯದಿಂದ ಅದನ್ನು ಮದ್ರಾಸ್‌ನಿಂದ ಕಳುಹಿಸದೆ, ಶ್ರೀಲಂಕಾದ ತ್ರಿಕೋಪಾಲಿ ರೇವುಪಟ್ಟಣದಿಂದ ಕಳುಹಿಸಲಾಗಿತ್ತು. ಹಡಗು, ದಕ್ಷಿಣ ಆಫ್ರಿಕಾದ 'ಕೇಪ್ ಆಫ್ ಗುಡ್ ಹೋಪ್' ಮಾರ್ಗದಿಂದ ಲಂಡನ್ ತಲುಪ ಬೇಕಾಗಿತ್ತು; ಆಗ ಇನ್ನೂ ಸ್ಯೂಜ್ ನಾಲೆಯ ನಿರ್ಮಾಣವಾಗಿರಲಿಲ್ಲ.

ಹಡಗಿನ ಕ್ಯಾಪ್ಟನ್ ಕಾಕ್ಸನ್ ತುಂಬಾ ಅಯೋಗ್ಯ ಹಾಗೂ ಅನನುಭವಿ ಯಾಗಿದ್ದ. ಅವನ ಕೈಕೆಳಗೆ ಕೆಲಸ ಮಾಡುವ ನೌಕರರೂ ಅಷ್ಟೇ ಅಯೋಗ್ಯರಾಗಿದ್ದು ಅನನುಭವಿಗಳಾಗಿದ್ದರು. ಬಿರುಗಾಳಿಯಂಥಾ ಆಕಸ್ಮಿಕ ವಿಘ್ನಗಳನ್ನೆದುರಿಸುವ ಕೌಶಲ್ಯ ಅವರಿಗಿರಲಿಲ್ಲ.

ಕ್ಯಾಪ್ಟನ್ ಮತ್ತು ನೌಕರವರ್ಗದವರಲ್ಲದೆ, ಗ್ರೌಸವೇನರ್‌ನಲ್ಲಿ ೧೮೫ ಪ್ರಯಾಣಿಕರೂ ಇದ್ದರು. ಹಡಗು, ಶ್ರೀಲಂಕಾ ಬಿಟ್ಟಮೇಲೆ ದಕ್ಷಿಣ ಭಾರತದ ಮಹಾ ಸಾಗರ ಪ್ರದೇಶವನ್ನು ಪ್ರವೇಶಿಸಿತು. ಆಗಸ್ಟ್ ಮೂರನೇ ದಿನಾಂಕದವರೆಗೆ ಪ್ರಯಾಣ

ಸುಖಕರವಾಗಿ, ನಿರ್ವಿಘ್ನತೆಯಿಂದ ಸಾಗಿತು. ನಾಲ್ಕನೇ ಆಗಸ್ಟ್ ಮುಂಜಾನೆ ಮೂರೂವರೆಗೆ ಜಾನ್ ಹಾಯನ್ಸ್ ಎಂಬ ನಾವಿಕ ಕಂಡ ದೃಶ್ಯ ಭಯಾನಕವಾಗಿತ್ತು. ಅವನು ಗಟ್ಟಿಯಾಗಿ ಕೆಳಗಿನ ಡೆಕ್‌ನಲ್ಲಿ ಕರ್ತವ್ಯದ ಮೇಲಿದ್ದ 'ಮೇಟ್'ಗೆ ಸೂಚನೆ ಕೊಟ್ಟ: ಮುಂದಕ್ಕೆ ನೆಲ ಕಾಣಿಸುತ್ತಿದೆ ಸಾರ್! ಸಮುದ್ರದ ಬಂಡೆಗಳ ಸುತ್ತಮುತ್ತ ಚಾಚಿದ ಭೂಮಿ!"

"ನಿನ್ನ ತಲೆ ಕೆಟ್ಟದೆಯಾ? ಅಥವಾ ಕುಡಿದದ್ದು ನೆತ್ತಿಗೇರಿದೆಯಾ? ನಾವು ಭೂಮಿಯಿಂದ ಸಾವಿರಾರು ಮೈಲಿ ದೂರದಲ್ಲಿದ್ದೇವೆ. ನಿನ್ನ ತಲೆಹರಟೆ ನಿಲ್ಲಿಸು" ಮೇಟ್ ನಾವಿಕನಿಗೆ ಗದರಿಸಿದ.

ಹಾಯನ್ಸ್ ಸುಮ್ಮನಾದ. ಆದರೆ ಅವನು ತನ್ನ ದೃಷ್ಟಿಯನ್ನು ಸಮುದ್ರದ ಬಂಡೆಗಳ ಸುತ್ತಮುತ್ತ ಚಾಚಿದ ಭೂಮಿಯಿಂದ ಕೀಳಲಿಲ್ಲ. ಅವನ ಅದೃಷ್ಟದಿಂದ ಹಡಗಿನ ಕ್ವಾರ್ಟರ್ ಮಾಸ್ಟರ್ ವಿಲಿಯಮ್ ನಿಕ್ಸನ್ ಕೂಡ ಅಲ್ಲೇ ಇದ್ದ. ಹಾಯನ್ಸ್ ಸನ್ನೆ ಮಾಡಿದ್ದ ಆ ಸಮುದ್ರದ ಬಂಡೆಗಳನ್ನು ಅವನೂ ನೋಡಿದ್ದ. ಅವನು ಓಡೋಡಿ ಕ್ಯಾಪ್ಟನ್‌ನ ಕ್ಯಾಬಿನ್ನಿಗೆ ಬಂದು ಹೇಳಿದ, "ಹಡಗನ್ನು ಕೂಡಲೇ ತಿರುಗಿಸಿ, ಸಾರ್! ನಾವು ಒಂದು ಸಮುದ್ರದ ಬಂಡೆಗೆ ಢಿಕ್ಕಿ ಹೊಡೆಯುವವರಿದ್ದೇವೆ!"

ಕ್ಯಾಪ್ಟನ್ ಕಾಕ್ಸನ್ ತಕ್ಷಣ ಡೆಕ್ ಮೇಲೆ ಬಂದು ತನ್ನ ಕರ್ಮಚಾರಿಗಳಿಗೆ ಆಜ್ಞಾಪಿಸಿದ, "ಅಪಾಯ! ಹಡಗನ್ನು ನಾವು ಸಮುದ್ರದ ಬಂಡೆಯಿಂದ ಪಾರುಮಾಡ ಬೇಕಾಗಿದೆ. ಎಲ್ಲರೂ ಈ ಕೂಡಲೇ ಹಡಗನ್ನು ಬೇರೆ ದಿಕ್ಕಿಗೆ ತಿರುಗಿಸುವ ಕೆಲಸದಲ್ಲಿ ತೊಡಗಿ. ಸ್ವಲ್ಪವೂ ತಡಮಾಡಬೇಡಿ."

ಆದರೆ ಕಾಲ ಮಿಂಚಿತ್ತು. ಕಾಕ್ಸನ್‌ನ ಆಜ್ಞೆ ಇನ್ನೂ ಪೂರೈಸಿರಲಿಲ್ಲ, ಆಗಲೇ ಹಡಗು ನೇರವಾಗಿ ಸಮುದ್ರದ ಬಂಡೆಗೆ ಹೋಗಿ ಬಡಿಯಿತು.

* * *

ಹಡಗು ಬಂಡೆಗೆ ಬಡಿದಾಗ, ಗಾಳಿ ತೀವ್ರವಾಗಿ ಬೀಸುತ್ತಿತ್ತು. ಹೀಗಾಗಿ ಗ್ರೋಸವೇನರ್ ಗಾಳಿಯ ಹೊಡೆತದೊಂದಿಗೆ ಅತಿವೇಗವಾಗಿ ಬಂಡೆಗೆ ಅಪ್ಪಳಿಸಿತು.

ದಕ್ಷಿಣ ಆಫ್ರಿಕಾದ ಆ ಭಾಗದ ಸಮುದ್ರ ತೀರದಲ್ಲಿದ್ದ ಕೆಲವು ಕಪ್ಪು 'ಹಬಶಿ' (ಅಬಿಸೀನಿಯಾ ದೇಶದ ಜನ) ಜನ ಉತ್ಸುಕತೆಯಿಂದ ಈ ದೃಶ್ಯ ನೋಡುತ್ತಿದ್ದರು. ಹಡಗು ಬಂಡೆಗೆ ಅಪ್ಪಳಿಸಿದಾಗ ಅವರು ಓಡೋಡಿ ಬಂಡೆಯ ಸಮೀಪಕ್ಕೆ ಬಂದು, ಹಡಗಿನಲ್ಲಿ ನುಗ್ಗಿದರು. ಹಡಗಿನಲ್ಲಿದ್ದ ವಸ್ತುಗಳು ಹಾಗೂ ಪ್ರಯಾಣಿಕರ ಮೇಲೆ ಈಗ ಅವರ ಸಂಪೂರ್ಣ ಹಿಡಿತವಿತ್ತು.

ಹಡಗಿನೊಳಗೆ ಈ ಹಬಶಿ ಜನ ಬಂಗಾರವಲ್ಲದೆ ತಾಮ್ರ, ಹಾಗೂ ಲೋಹ ಮುಂತಾದ ಧಾತುಗಳಿಂದಾದ ಅನೇಕ ವಸ್ತುಗಳನ್ನು ಕಂಡರು. ಆದರೆ ಅವರು ತಾಮ್ರ, ಲೋಹ ಇತ್ಯಾದಿ ಧಾತುಗಳಿಂದ ನಿರ್ಮಿತಗೊಂಡ ವಸ್ತುಗಳನ್ನು ಲೂಟಿ ಮಾಡುವುದೇ ಉಚಿತವೆಂದು ತಿಳಿದರು. ಅವರ ದೃಷ್ಟಿಯಲ್ಲಿ ಬಂಗಾರಕ್ಕೆ ಬೆಲೆಯಿರಲಿಲ್ಲ; ಕಾರಣ, ಅವರಿದ್ದ ದೇಶದಲ್ಲಿ ಬಂಗಾರಕ್ಕೆ ಕೊರತೆಯಿರಲಿಲ್ಲ.

ಈ ಕಡೆ ಹಬಿಶಿ ಜನ ಕೊಳ್ಳೆಹೊಡೆಯುವಲ್ಲಿ ಮಗ್ನರಾಗಿದ್ದರೆ, ಆ ಕಡೆ, ಹಡಗು—ತೀವ್ರವಾಗಿ ಅಪ್ಪಳಿಸಿದ್ದರಿಂದಾಗಿ—ಓರೆಯಾಗಿ ಮಧ್ಯದಲ್ಲಿ ಎರಡು ಭಾಗವಾಗಿ ಸೀಳಿತು. ಹೀಗಾಗಿ ಅದು ಶೀಘ್ರವೇ ಮುಳುಗಲಾರಂಭಿಸಿತ್ತು. ಹಡಗಿನ ನಾವಿಕರು ವಸ್ತುಗಳ ಯೋಚನೆ ಕೈಬಿಟ್ಟು ತಮ್ಮ ಹಾಗೂ ಪ್ರಯಾಣಿಕರ ಜೀವ ಕಾಪಾಡಲು ಮಗ್ನರಾದರು.

'ಮೇಟ್'ಗೆ ಪೂರ್ವ ಸೂಚನೆ ಕೊಟ್ಟು, ಇತರರೊಂದಿಗೆ ಸುರಕ್ಷಿತವಾಗಿ ದಡ ಸೇರಿದವರಲ್ಲಿ ಹಾಯನ್ಸ್ ನಾವಿಕನೂ ಒಬ್ಬನಾಗಿದ್ದ. ಎಂಟು ವರ್ಷಗಳ ನಂತರ ಅವನು ಮತ್ತೊಂದು ಬ್ರಿಟನ್ ಹಡಗಿನಲ್ಲಿ ಪ್ರಯಾಣಿಸುತ್ತಿದ್ದ ಜಾರ್ಜ್ ಕಾರ್ಟರ್ ಎಂಬ ಕಲಾಕಾರನಿಗೆ ಗ್ರಾಸ್‌ವೇನರ್ ಹಡಗು ಮುಳುಗುವಾಗ ಸಂಭವಿಸಿದ ಘಟನೆಗಳನ್ನು ಈ ರೀತಿ ವರ್ಣಿಸಿದ್ದ:

"ನನ್ನ ಅನುಮಾನದಂತೆ ಹಡಗು ೨೦° ಮತ್ತು ೩೨° ದಕ್ಷಿಣ ಅಕ್ಷಾಂಶ ರೇಖೆಗಳ ಮಧ್ಯೆ ಈಥಾರಿಯಾ ಎಂಬ ಸಮುದ್ರತೀರದಿಂದ ಸುಮಾರು ೩೦೦ ಗಜದ ಅಂತರದಲ್ಲಿ ದುರ್ಘಟನೆಗೊಳಗಾಗಿತ್ತು. ಹಡಗು ಜಲ–ಸಮಾಧಿಯಾಗುವುದನ್ನರಿತ ನಾವು ಕೂಡಲೇ ಒಂದು ತಕ್ಷಣಿಕ ಸೇತುವೆಯನ್ನು ನಿರ್ಮಿಸಿದೆವು. ಪ್ರಯಾಣಿಕರು ಈ ಸೇತುವೆಯಿಂದ ತೀರಕ್ಕೆ ಬಂದರು. ಹಬಿಶಿಗಳಿಂದ ಪಾರಾಗಲು ನಾವಿಕರು ಮತ್ತು ಪ್ರಯಾಣಿಕರು ತಮ್ಮನ್ನು ಅನೇಕ ಗುಂಪುಗಳಲ್ಲಿ ವಿಭಾಗಿಸಿಕೊಂಡರು. ಈ ಎಲ್ಲಾ ಗುಂಪು ಬೇರೆ ಬೇರೆ ದಿಕ್ಕುಗಳಲ್ಲಿ ಸುರಕ್ಷಿತ ಸ್ಥಳ ಹುಡುಕುತ್ತಾ ಮುಂದಕ್ಕೆ ಹೋದವು. ನಾನಿದ್ದ ಗುಂಪಿನಲ್ಲಿ ಅನೇಕ ನಾವಿಕರು, ಅಧಿಕಾರಿಗಳಿದ್ದು ಐದಾರು ಪ್ರಯಾಣಿಕರೂ ಇದ್ದರು. ಮೂರು ತಿಂಗಳ ನಂತರ, ನಾವು ಸ್ವಾರ್ತಕೋಪ್ಸ್ ನದಿ ತೀರದಲ್ಲಿರುವ ಒಂದು ಡಚ್ ಫಾರ್ಮ್‌ಗೆ ಹೋದೆವು. ಈ ಫಾರ್ಮ್‌ನ ಜನರು ನಮ್ಮನ್ನು ಲಂಡನ್ನಿನವರೆಗೆ ತಲುಪಿಸುವ ವ್ಯವಸ್ಥೆ ಮಾಡಿದರು".

* * *

ಹಡಗಿನ ಕ್ಯಾಪ್ಟನ್ ಕಾಕ್ಸನ್ ಇದ್ದ ಗುಂಪು ಮತ್ತೊಂದು ಡಚ್ ಪ್ರದೇಶ ತಲುಪಲು ೪೦ ದಿನಗಳವರೆಗೆ ಒಂದು ಸಾವಿರ ಮೈಲಿಗಳ ಅಂತರವನ್ನು ನಿರ್ಧರಿಸ ಬೇಕಿತ್ತು. ಈ ಗುಂಪಿನಲ್ಲಿ ಆರು ಜನ ಆಂಗ್ಲ ಮಹಿಳೆಯರೂ ಇದ್ದರು. ಅವರೊಂದಿಗೆ ಹಬಿಶಿಯರು ಬಲತ್ಕಾರ ಮಾಡಿದರು. ಕಾಕ್ಸನ್ ಮತ್ತು ಅವನ ಸಂಗಡಿಗರು ಈ ಮಹಿಳೆಯರನ್ನು ಪಾರುಮಾಡಲು ಪ್ರಯತ್ನಿಸಿದಾಗ ತಮ್ಮ ಪ್ರಾಣ ಕಳೆದುಕೊಂಡರು. ಹಬಿಶಿಯನ್ನರು ಉಳಿದ ಆಂಗ್ಲರನ್ನು ತಮ್ಮ ದಾಸರನ್ನಾಗಿ ಮಾಡಿಕೊಂಡರು. ಅವರಲ್ಲಿ ಜೇಂಬರ್ಸ್ ಮತ್ತು ಸಾಂಡರ್ಸ್—ಇವರಿಬ್ಬರು ಹೇಗೋ ಆರು ತಿಂಗಳ ನಂತರ, ಗುಲಾಮಗಿರಿಯಿಂದ ಮುಕ್ತರಾಗಿ ಲಂಡನ್ ತಲುಪುವಲ್ಲಿ ಯಶಸ್ವಿಯಾದರು.

ಹಬಿಶಿಯನ್ನರು ಆಂಗ್ಲ ಮಹಿಳೆಯರನ್ನು ಅನೇಕ ತಿಂಗಳು ತಮ್ಮ ಹಿಡಿತದಲ್ಲಿಟ್ಟು ಕೊಂಡು ನಂತರ ನಿರ್ದಯತೆಯಿಂದ ಅವರನ್ನು ಕೊಂದರು. ಅವರ ಮಕ್ಕಳನ್ನು ಕೊಂದು ಈ ಮೊದಲೇ ತಿಂದುಹಾಕಿದ್ದರು.

* * *

ಆದರೆ ಡಚ್ ಫಾರ್ಮರ್ ಮತ್ತು ಅಲ್ಲಿಯ ಪ್ರದೇಶದ ಜನರು, ಹಡಗಿನಲ್ಲಿದ್ದ ದುರಾದೃಷ್ಟ ಪ್ರಯಾಣಿಕರು ಮತ್ತು ನಾವಿಕರನ್ನು ರಕ್ಷಿಸಿ, ಅವರನ್ನು ಬ್ರಿಟನ್ನಿಗೆ ಕಳುಹಿಸುವಲ್ಲಿ ತುಂಬಾ ಶ್ರಮಿಸಿದರು. ಹಬಿಶಿಯನ್ನರಿಂದ ಅನೇಕ ಆಂಗ್ಲರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿದರು.

ಲಾಯಡ್ಸ್ ಎಂಬ ಕಂಪನಿಗೆ ಗ್ರಾಸವೇನರ್ ದುರ್ಘಟನೆಯ ಸುದ್ದಿ ತುಂಬಾ ತಡವಾಗಿ ಸಿಕ್ಕಿತು. 'ಡೈಲಿ ಎಡವರ್ಟೈಜರ್'ನಲ್ಲಿ ಪ್ರಕಟಗೊಂಡ ಸಮಾಚಾರದಲ್ಲಿ ಹಡಗಿನಲ್ಲಿದ್ದ ಬಂಗಾರ, ಮಯೂರ ಸಿಂಹಾಸನ, ವಜ್ರ-ವೈಢೂರ್ಯ ಹಾಗೂ ನಗದು ಹಣದ ಉಲ್ಲೇಖವಿರಲಿಲ್ಲ. ಆದರೆ, ನಂತರ ಇನ್ನೊಂದು ಸಮಾಚಾರ ಪತ್ರಿಕೆಯಲ್ಲೂ ಹಡಗಿನಲ್ಲಿದ್ದ ಸಾಮಾನುಗಳ ಬೆಲೆ ೩೦೦,೦೦೦ ಪೌಂಡ್ ಎಂದು ಅಂದಾಜು ಮಾಡ ಲಾಗಿದೆ ಎಂದು ತಿಳಿಸಲಾಗಿತ್ತು. ಮಯೂರ ಸಿಂಹಾಸನದ ಬಗ್ಗೆ ಈ ಪತ್ರಿಕೆಯಲ್ಲೂ ಪ್ರಸ್ತಾಪವಿರಲಿಲ್ಲ. ಈಸ್ಟ ಇಂಡಿಯಾ ಕಂಪನಿ ಮತ್ತು ಲಾಯಡ್ಸ್‌ನ ಅಧಿಕಾರಿಗಳು ಬೇಕೆಂತಲೇ ಈ ಸುದ್ದಿಯನ್ನು ಮರೆಮಾಚಿದ್ದರೋ ಅಥವಾ ಅವರ ಗಮನವೆಲ್ಲಾ ಮಯೂರ ಸಿಂಹಾಸನಕ್ಕಿಂತ ಹಬಿಶಿಯನ್ನರ ಕ್ರೌರ್ಯಕ್ಕೆ ತುತ್ತಾದ ಆಂಗ್ಲ ಮಹಿಳೆ ಯರ ಮೇಲಿತ್ತೋ ತಿಳಿಯದು. ಬ್ರಿಟನ್ನಿನ ಮಹಿಳಾ-ಸಂಸ್ಥೆಗಳು ಈ ಕಾಂಡವನ್ನು ಪದೇ-ಪದೇ ಬಯಲಿಗೆಳೆದು ಕಂಪನಿಯನ್ನು ಉಗ್ರವಾಗಿ ನಿಂದಿಸಿತು.

ಒಂದು ಕಡೆ ಈಸ್ಟ ಇಂಡಿಯಾ ಕಂಪನಿಗೆ ಕಹಿ ಮಾತುಗಳನ್ನೆದುರಿಸಬೇಕಾ ಯಿತು. ಮತ್ತೊಂದೆಡೆ, ಒಂದು ವರ್ಷದವರೆಗೆ ಹಡಗು ದುರ್ಘಟನೆಗೊಳಗಾದ ಜಾಗಕ್ಕೆ ಅವರು ಹೋಗದಾದರು. ಕಾರಣ, ಅವರಿಗೂ ಮೊದಲು ಡಚ್ಚರು ಅಲ್ಲಿಗೆ ಹೋಗಿದ್ದರು.

* * *

ಆದರೆ ೧೭೮೮ರಲ್ಲಿ ಓರ್ವ ಫ್ರೆಂಚ್ ಯಾತ್ರಿಕನು ಗ್ರಾಸವೇನರ್ ಹಡಗಿನಲ್ಲಿದ್ದ —ಹಬಿಶಿಯನ್ನರು ಲೂಟಿ ಮಾಡಿದ್ದ ಆ ಖಜಾನೆ ಏನಾಯಿತು ಎಂಬುದನ್ನು ತಿಳಿಯಲು ಆ ಪ್ರದೇಶದ ಯಾತ್ರೆ ಕೈಗೊಂಡ. ಹಬಿಶಿಯನ್ನರನ್ನು ವಿಚಾರಿಸಿದ ಮೇಲೆ, ಹಬಿಶಿ ಯನ್ನರ ಮುಖಂಡನೊಬ್ಬನು ಒಂದು ದೊಡ್ಡ ಹೊಂಡ ತೋಡಿ ರಾತ್ರೋರಾತ್ರಿ ಆ ಖಜಾನೆಯನ್ನೆಲ್ಲಾ ಅಲ್ಲಿ ಹೂತಿಟ್ಟಿದ್ದ ಎಂಬ ವಿಷಯ ತಿಳಿಯಿತು. ಈ ದುರ್ಘಟನೆ ಯಾದ ಕೆಲವೇ ತಿಂಗಳುಗಳಲ್ಲಿ ಅವನು ಇಹಲೋಕ ತ್ಯಜಿಸಿದ್ದ. ಹೀಗಾಗಿ ಅವನು ಖಜಾನೆಯನ್ನು ಎಲ್ಲಿ ಅಡಗಿಸಿಟ್ಟಿದ್ದಾನೆಂಬುದು ಯಾರಿಗೂ ತಿಳಿದಿರಲಿಲ್ಲ.

೧೭೯೦-೯೧ರಲ್ಲಿ ಫ್ರೆಂಚ್ ಯಾತ್ರಿಕನಿಗೆ ದೊರೆತ ಈ ಸೂಚನೆ ಮೇರೆಗೆ ಡಚ್ ಜನರು ಖಜಾನೆ ಅಡಗಿಸಿಟ್ಟಿರಬಹುದಾದ ಜಾಗವನ್ನು ಪತ್ತೆ ಮಾಡಲು ಪ್ರಯತ್ನಿ ಸಿದ್ದರು; ಆದರೆ ಹಬಿಶಿಯನ್ನರ ಪ್ರಮುಖ ಖಜಾನೆಯನ್ನು ಒಂದು ಅಜ್ಞಾತ ಜಾಗದಲ್ಲಿ ಬಚ್ಚಿಟ್ಟಿದ್ದಾನೆ—ಆ ಸ್ಥಳವನ್ನು ತಲುಪಲು ನಾಲ್ಕು ದಿನಗಳು ಹಾಗೂ ಏಳು ದುರ್ಗಮ ನದಿಗಳನ್ನು ದಾಟಬೇಕಾಗುತ್ತದೆ ಎಂಬ ವಿಷಯ ತಿಳಿದು ಅವರು ಸುಮ್ಮನಾದರು. ಆ ಜಾಗ ಪೋರ್ಚುಗೀಸರ ಅಧೀನದಲ್ಲಿದ್ದು ಅಲ್ಲಿಗೆ ಹೊರ ಜನರು ಹೋಗುವಂತೆಯೂ ಇರಲಿಲ್ಲ.

ಸುಮಾರು ೧೮೨೫ರಲ್ಲಿ ದಕ್ಷಿಣ ಆಫ್ರಿಕಾದ ಪ್ರಸಿದ್ಧ ಇತಿಹಾಸ ಸಂಶೋಧಕ ಲೇಖಕರಾದ ಜಾರ್ಜ್ ಮೆಕ್‌ಥೀಲರು, ಗ್ರಾಸವೇನರ್‌ನಲ್ಲಿದ್ದ ಖಜಾನೆಯು ಉಮ್‌ಜೇಂಮುಬು ನದಿಯಿಂದ ಕೆಲವು ಕಿಲೋಮೀಟರ್ ಉತ್ತರಕ್ಕಿರುವ ಒಂದು ಹೊಂಡದಲ್ಲಿ ಬಚ್ಚಿಡಲಾಗಿದೆ ಎಂಬ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು. ಆದರೆ ಈ ಪ್ರದೇಶ ವಿಷಪೂರಿತ ನಾಗರಗಳ ಕ್ಷೇತ್ರವಾಗಿದ್ದು, ಅಲ್ಲಿಗೆ ಹೋಗಿ ಆ ಹೊಂಡವನ್ನು ಹುಡುಕುವ ಪ್ರಯತ್ನವನ್ನು ಯಾರೂ ಮಾಡಲಿಲ್ಲ.

ಕ್ರಮೇಣ, ಜಗತ್ತು ಅದೂ ವಿಶೇಷವಾಗಿ ಬ್ರಿಟನ್ ಜನ ಗ್ರಾಸವೇನರ್ ಮತ್ತು ಅದರಲ್ಲಿದ್ದ ಖಜಾನೆಯನ್ನು ಮರೆಯಲಾರಂಭಿಸಿದರು. ಆದರೆ ಈ ದುರ್ಘಟನೆ ಸಂದು ಸುಮಾರು ನೂರು ವರ್ಷಗಳ ನಂತರ ಅಕಸ್ಮಾತ್ ಮತ್ತೆ ಗುಪ್ತ ಖಜಾನೆಯನ್ನು ಹುಡುಕುವ ಆಸಕ್ತರ ಗಮನ ಗ್ರಾಸವೇನರ್ ಹಡಗಿನೆಡೆಗೆ ಹರಿಯಿತು. ಇದಕ್ಕಿಂತಲೂ ರೋಮಾಂಚಕಾರಿ ವಿಷಯವೇನೆಂದರೆ, ಶರ್ಲಾಕ್ ಹೋಮ್ಸ್ ಎಂಬ ಕಲ್ಪಿತ ಗೂಢಾಚಾರನ ಜನ್ಮದಾತ ಸರ್ ಆರ್ಥರ್ ಶಾನನ್ ಡೈಲನೂ ಕೂಡ ಈ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ಪ್ರಾರಂಭಿಸಿದ್ದು!

* * *

ಅಷ್ಟರಲ್ಲಿ ಬ್ರಿಟನ್ ಮತ್ತು ದಕ್ಷಿಣ ಆಫ್ರಿಕಾದ ಇಬ್ಬರು ಯಾತ್ರಿಕರಿಗೆ, ಹಡಗಿನ ಯಾತ್ರಿಕರು ಮತ್ತು ನಾವಿಕರು ಇಳಿದು ಬಂದಿದ್ದ ಸ್ಥಳದಲ್ಲಿನ—ಒಂದು ಹೊಂಡದಲ್ಲಿ ಬೆಳ್ಳಿ-ಬಂಗಾರದ ಕೆಲವು ನಾಣ್ಯಗಳು ದೊರೆತವು.

ಇಂಥಾ ಕೆಲವು ನಾಣ್ಯಗಳನ್ನು ಬ್ರಿಟನ್ನಿನ ಯಾತ್ರಿಕನೊಬ್ಬ ಆರ್ಥರ್ ಶಾನನ್‌ಗೆ ಕೊಟ್ಟ. ಅಲ್ಲದೆ, ಆ ನಾಣ್ಯಗಳೊಂದಿಗೆ ಒಂದು ರೇಖಾಚಿತ್ರವನ್ನೂ ಕೊಟ್ಟು ಹೇಳಿದ, "ನನಗೆ ಈ ನಕ್ಷೆ, ನಾಣ್ಯಗಳೊಂದಿಗೆ ಸಿಕ್ಕಿತು. ಬಹುಶಃ ನಿಮ್ಮ ಉಪಯೋಗಕ್ಕೆ ಬರಬಹುದು."

ಶಾನನ್ ಡೈಲನು ವಿಶಿಷ್ಟ ವಿಧಾನದಿಂದ ಈ ಬಗ್ಗೆ ಶೋಧ ಪ್ರಾರಂಭಿಸಿದನು. ಕಡೆಗೆ ಅವನು ಸಿದ್ಧಪಡಿಸಿದ ವರದಿಯಲ್ಲಿ ಹೀಗೆ ಬರೆಯಲಾಗಿತ್ತು:

'ಆ ಹಡಗಿನಲ್ಲಿ ಇತಿಹಾಸ ಪ್ರಸಿದ್ಧ ಮಯೂರ ಸಿಂಹಾಸನವೂ ಇತ್ತೆಂಬುದರಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ನಾವಿಕರು ಸಮುದ್ರ ತೀರದ ಬಳಿ ಒಂದು ಅಜ್ಞಾತ ಸ್ಥಳದಲ್ಲಿ ಹೊಂಡ ತೋಡಿ ಅದರಲ್ಲಿ ಮಯೂರ ಸಿಂಹಾಸನದೊಂದಿಗೆ ಹಣ, ವಜ್ರ-ವೈಢೂರ್ಯಗಳನ್ನೂ ಬಚ್ಚಿಟ್ಟರು ಎಂಬುದು ನನ್ನ ಅನಿಸಿಕೆಯಾಗಿದೆ. ನನಗೆ ಕೊಡಲಾದ ನಕ್ಷೆಯಲ್ಲೂ ಆ ಹೊಂಡದೆಡೆಗೇ ಸಂಕೇತವಿದೆ. ಈ ಬಗ್ಗೆ ಮುಂದೆ ಶೋಧನೆ ಮಾಡುವುದು ಅಗತ್ಯ.

(ಶಾನನ್ ಡೈಲನ ಈ ಪೂರ್ಣ ವರದಿ ಅವನ ಆತ್ಮಕಥೆ—'ಮೆಮೋರೀಸ್ ಅಂಡ್ ಎಡ್‌ವೆನ್‌ಚರ್ಸ್'ನಲ್ಲಿ ಓದಬಹುದು.)

ಆದರೆ ಈ ಬಗ್ಗೆ ಮುಂದಕ್ಕೆ ಶೋಧನೆ ಮಾಡುವ ಅಗತ್ಯ ಯಾರಿಗೂ ಕಾಣಲಿಲ್ಲ—ಬ್ರಿಟಿಷ್ ಸರ್ಕಾರಕ್ಕೂ ತೋರಲಿಲ್ಲ ಅಥವಾ ಯಾವುದೇ ಧೈರ್ಯಶಾಲಿಗೂ ತೋರಲಿಲ್ಲ. ಹಾಂ, ೧೯೦೬-೧೯೦೭ರಲ್ಲಿ 'ಗ್ರಾಸವೇನರ್ ಟ್ರೆಜರ್ ರಿಕವರಿ ಸಿಂಡಿಕೇಟ್' ಸ್ಥಾಪನೆ

ಯಾಯಿತು. ಈ ಸಂಸ್ಥೆ ಬ್ರಿಟನ್ ಹಾಗೂ ದಕ್ಷಿಣ ಆಫ್ರಿಕಾ ಸರ್ಕಾರಗಳ ಅನುಮತಿಯೊಂದಿಗೆ ಶೋಧನೆಯನ್ನು ಪ್ರಾರಂಭಿಸಿತು.

* * *

ಆದರೆ ಈ ಶೋಧನಾ–ಅಭಿಯಾನವೂ ಯಶಸ್ವಿಯಾಗಲಿಲ್ಲ. ಬಂಗಾರದ ಕೆಲವು ನಾಣ್ಯಗಳು, ಕಂಚಿನ ಕೆಲವು ಪಾತ್ರೆಗಳು ಹಾಗೂ ಹಳೆ ಪಾದರಕ್ಷೆಗಳಷ್ಟೇ ಈ ಶೋಧನಾ–ಅಭಿಯಾನದಲ್ಲಿ ದೊರೆತವು.

೧೯೩೮ರಲ್ಲಿ ಮಯೂರ ಸಿಂಹಾಸನ ಮತ್ತೆ ಚರ್ಚೆಯ ವಿಷಯವಾಯಿತು. 'ಗ್ರಾಸವೇನರ್ ಬುಲಿಯನ್ ಸಿಂಡಿಕೇಟ್'' ಎಂಬ ಒಂದು ಹೊಸ ಸಂಸ್ಥೆಯ ಕಾರ್ಯದರ್ಶಿಗಳು ಲಂಡನ್‌ನಲ್ಲಿರುವ 'ಇಂಡಿಯಾ–ಹೌಸ್''ಗೆ ಬರೆದ ಒಂದು ಪತ್ರದಲ್ಲಿ—'ನಮ್ಮ ಸಿಂಡಿಕೇಟ್‌ಗೆ ಶೋಧನಾಕಾರ್ಯದಲ್ಲಿ, ಗ್ರಾಸವೇನರ್ ಹಡಗಿನ ಅಂತಿಮ ಪ್ರಯಾಣಕ್ಕೂ ಮೊದಲು, ಈಸ್ಟ್ ಇಂಡಿಯಾ ಕಂಪನಿಯ ಇಬ್ಬರು ಸೈನ್ಯಾಧಿಕಾರಿಗಳು ಇಂಗ್ಲೆಂಡಿನಲ್ಲಿರುವ ತಮ್ಮ ಇಬ್ಬರು ಸಂಬಂಧಿಕರಿಗೆ ಬರೆದಿದ್ದ ಎರಡು ಪತ್ರಗಳು ಸಿಕ್ಕಿವೆ' ಎಂದು ತಿಳಿಸಿದ್ದರು. ಆ ಒಂದು ಪತ್ರದಲ್ಲಿ, ಗ್ರಾಸವೇನರ್ ಮೂಲಕ ಎರಡು ಮಯೂರ ಸಿಂಹಾಸನಗಳನ್ನು ಕಳುಹಿಸಲಾಗುತ್ತಿದೆ' ಎಂದು ಪತ್ರ ಬರೆದವರು ತಿಳಿಸಿದ್ದರು. ಎರಡನೆಯ ಪತ್ರದಲ್ಲಿ, ಒಂದೇ ಮಯೂರ–ಸಿಂಹಾಸನದ ಬಗ್ಗೆ ಪ್ರಸ್ತಾಪವಿತ್ತು. ಆದರೆ ಸಿಂಹಾಸನದೊಂದಿಗೆ ಅಪಾರ ವಜ್ರ–ವೈಢೂರ್ಯ ರತ್ನಾದಿಗಳನ್ನೂ ಕಳುಹಿಸಲಾಗುತ್ತಿದೆ ಎಂದು ತಿಳಿಸಲಾಗಿತ್ತು. ಈ ಎರಡೂ ಪತ್ರಗಳು ಸಿಂಹಾಸನದ ರಹಸ್ಯವನ್ನು ಬಿಡಿಸುವುದಕ್ಕೆ ಪ್ರತಿಯಾಗಿ ಮತ್ತೂ ಸಮಸ್ಯೆಯನ್ನು ಸೃಷ್ಟಿಸಿದವು. ಅಲ್ಲದೆ, ಎರಡನೆಯ ಪತ್ರದಲ್ಲಿ ವಜ್ರ–ವೈಢೂರ್ಯಗಳ ಬೆಲೆ ೫,೯೭,೦೦೦ ಪೌಂಡ್ ಎಂದು ಅಂದಾಜು ಮಾಡಲಾಗಿತ್ತು.

ಇಂಡಿಯಾ ಕಚೇರಿಯ ಪತ್ರವೊಂದು, 'ಹಡಗಿನಲ್ಲಿ ಯಾವುದೇ, ಬೆಲೆಬಾಳುವ ವಸ್ತುವಿರಲಿಲ್ಲ, ಕೇವಲ ನಾಶಪಡಿಸುವಂಥಾ ವಸ್ತುಗಳಿದ್ದವು' ಎಂದು ಸಿಂಡಿಕೇಟ್ ಸದಸ್ಯರಿಗೆ ಸೂಚಿಸಿದಾಗ ವಿಷಯ ಮತ್ತೂ ಕಗ್ಗಂಟಾಯಿತು.

* * *

ಭಾರತದಲ್ಲಿರುವ ಈಸ್ ಇಂಡಿಯಾ ಕಂಪನಿಯ 'ಗ್ರಾಸವೇನರ್'ಗೆ ಸಂಬಂಧಿಸಿದ ಕಾಗದ ಪತ್ರಗಳೆಲ್ಲವೂ ಹಡಗು, ಶ್ರೀಲಂಕಾ ಬಿಟ್ಟ ಎರಡು ದಿನಗಳಲ್ಲೇ—ದುರ್ಘಟನೆಗೂ ಮೊದಲು—ಒಂದು ರಹಸ್ಯಮಯ ಅಗ್ನಿಗೆ ಆಹುತಿಯಾಗಿದ್ದವು. ಹೀಗಾಗಿ ಕಂಪನಿಯ ಅಧಿಕಾರಿಗಳು ನಿಶ್ಚಿತವಾಗಿ ಹಡಗಿನಲ್ಲಿ ಹೇರಲಾಗಿದ್ದ ವಸ್ತುಗಳ ಬಗ್ಗೆ ಹೇಳಲು ಸಾಧ್ಯವಿರಲಿಲ್ಲ. ಲಂಡನ್‌ನಲ್ಲಿರುವ ಈಸ್ಟ್ ಇಂಡಿಯಾ ಕಂಪನಿ ಹಾಗೂ ಲಾಯಡ್ಸ್ ಕಾರ್ಯಾಲಯಗಳಿಗೆ ಕಳುಹಿಸಲಾದ ವಸ್ತುಗಳ ವಿವರಗಳನ್ನೊಳಗೊಂಡ ಎಲ್ಲಾ ಕಾಗದ ಕಂಪನಿಯ ಪತ್ರಗಳೂ ಹಡಗಿನೊಂದಿಗೇ ನಷ್ಟಗೊಂಡಿದ್ದವು.

ಆದರೆ ಎರಡನೇ ಸಿಂಡಿಕೇಟ್‌ನ ಈಜುಗಾರರು, 'ಭಾರತದ ಮಹಾಸಾಗರ ಹಾಗೂ ಅಟ್ಲಾಂಟಿಕ್ ಮಹಾಸಾಗರದ ಗರ್ಭದಲ್ಲಿ ಸಾವಿರಾರು ವರ್ಷ ಪ್ರಾಚೀನ

ಹಾಗೂ ಹೊಸ ಸಾವಿರಾರು ಹಡಗುಗಳು ಬಹುಮೂಲ್ಯ ಸಂಪತ್ತಿನೊಂದಿಗೆ ಧ್ಯಾನಾವಸ್ಥೆ ಯಲ್ಲಿವೆ; ಒಂದು ವೇಳೆ ಅವನ್ನೆಲ್ಲ ಹೊರತೆಗೆದರೆ, ಜಗತ್ತಿನಿಂದ ಬಡತನ, ಹಸಿವು ನಿವಾರಣೆಯಾಗುತ್ತದೆ ಎಂಬುದನ್ನು ತಿಳಿಸಿದರು.

ಸಿಂಡಿಕೇಟಿನ ಈ ಅಭಿಪ್ರಾಯಕ್ಕೆ ಭೂಗರ್ಭ-ವಿಜ್ಞಾನಿಗಳು ಒಂದು ಮಿತಿಯ ವರೆಗೆ ಹೌದೆಂಬ ವಿಚಾರಕ್ಕೆ ಬಂದಿದ್ದಾರೆ. ಸಾಗರದ ಗರ್ಭದಲ್ಲಡಗಿದ ಈ ಸಂಪತ್ತನ್ನು ಹೊರತರಲು ಎಲ್ಲಾ ದೇಶಗಳೂ ಕೂಡಿ ಒಂದು ಮಹತ್ವಾಕಾಂಕ್ಷೆಯ ಯೋಜನೆಯನ್ನು ಸಿದ್ಧಪಡಿಸಬೇಕು ಎಂದು ಭೂಗರ್ಭ-ವಿಜ್ಞಾನಿಗಳು ಹೇಳುತ್ತಾರೆ. ಆದರೆ ಇಂದು, ಅನೇಕ ದೇಶಗಳು ಪೌಶ್ಚಾರಿಕ ಹಾಗೂ ಶೀತ-ಸಮರದಲ್ಲಿರುವುದನ್ನು ಕಂಡಾಗ ಇಂಥಾ ಯೋಜನೆಗಳು ರೂಪುಗೊಳ್ಳುವಂತೆ ಕಾಣುವುದಿಲ್ಲ.

* * *

ಇನ್ನು, ಮಯೂರ ಸಿಂಹಾಸನದ ಬಗ್ಗೆ ಹೇಳುವುದಾದರೆ, ಈ ಕೆಳಗಿನ ಪ್ರಶ್ನೆ ಗಳನ್ನು ಇನ್ನೂ ಬಗೆಹರಿಸಲಾಗಿಲ್ಲ :—

(೧) ಟೆಹರಾನ್‌ನ ಖಜಾನೆಯಲ್ಲಿಟ್ಟ ಮಯೂರ ಸಿಂಹಾಸನ ವಾಸ್ತವ ವಾಗಿಯೂ ನಕಲಿ ಸಿಂಹಾಸನವೇ?

(೨) ಒಂದುವೇಳೆ ಅದು ನಕಲಿ ಸಿಂಹಾಸನವಾಗಿದ್ದರೆ, ಗ್ರೊಸವೇನರ್ ಹಡಗಿನಲ್ಲಿ ಹೋಗುತ್ತಿದ್ದ ಸಿಂಹಾಸನ ವಾಸ್ತವಿಕವಾಗಿತ್ತೆ?

(೩) ಗ್ರೊಸವೇನರ್‌ನಲ್ಲಿ ಎರಡು ಮಯೂರ ಸಿಂಹಾಸನವನ್ನು ಇಂಗ್ಲೆಂಡಿಗೆ ಒಯ್ಯಲಾಗುತ್ತಿತ್ತೆಂಬುದು ನಿಜವಾದರೆ, ಅದರಲ್ಲಿ ಯಾವುದು ನಕಲಿ ಯಾಗಿತ್ತು? ಅಥವಾ ಎರಡೂ ಸಿಂಹಾಸನಗಳೂ ನಕಲಿ ಆಗಿದ್ದವೇ?

(೪) ಗ್ರೊಸವೇನರ್‌ನಲ್ಲಿ ಹೇರಲಾಗಿದ್ದ ಮಯೂರ ಸಿಂಹಾಸನ ಇನ್ನೂ ಹಡಗಿನ ಧ್ವಂಸಾವಶೇಷಗಳೊಂದಿಗೆ ಆ ಸಮುದ್ರ ಬಂಡೆಯ ಸಮೀಪ ಅಡಗಿ ಬಿದ್ದಿದೆಯೇ?

(೫) ಅಥವಾ ಸಮುದ್ರ ತೀರದ ಬಳಿ—ಅಲ್ಲೇ ಎಲ್ಲೋ ಹೊಂಡ ತೋಡಿ ಹೂಳಲಾಗಿತ್ತಲ್ಲ, ಅಲ್ಲೇ ಇನ್ನೂ ಇದೆಯೇ?

(೬) ಒಂದುವೇಳೆ ಅಂತಿಮವಾಗಿ, ನಿಜವಾದ ಮಯೂರ ಸಿಂಹಾಸನ ಎಲ್ಲಿದೆಯೆಂಬುದು ತಿಳಿದರೆ, ಅದನ್ನು ಹೇಗೆ ಹೊರತರಬಹುದು?

—ಈ ಎಲ್ಲಾ ಪ್ರಶ್ನೆಗಳೂ ಸದಾಕಾಲಕ್ಕೂ ಪ್ರಶ್ನೆಗಳಾಗಿಯೇ ಇರುತ್ತವೆಯೆಂದು ತೋರುತ್ತದೆ.

ಅನು : ಡಿ. ಎನ್. ಶ್ರೀನಾಥ್

ಮೃಗವೈದ್ಯ

ಡಾ॥ ರೋರಿ ಫಾಸ್ಟರ

ವಿಸ್ಕಾನ್‌ಸಿನ್‌ನ ಉತ್ತರ ಪ್ರಾಂತ್ಯದ ಪಶುವೈದ್ಯಾಧಿಕಾರಿ ಡಾ॥ ರೋ
ಫಾಸ್ಟರ್ ಕಾಡಿನ ಮೃಗಗಳಿಗೂ, ಪಕ್ಷಿಗಳಿಗೂ ವೈದ್ಯಕೀಯ ನೆರವಿ
ಅಗತ್ಯತೆ ಇರುವುದನ್ನು ಮನಗಂಡ. ಇವುಗಳ ಚಿಕಿತ್ಸೆಯನ್ನು ಸ್ವಂ
ಖರ್ಚಿನಿಂದ ಮಾಡುತ್ತ ವಾಸಿಯಾದ ಬಳಿಕ ಅವುಗಳನ್ನು ಅವುಗ
ಸಹಜ ನೆಲೆಗೆ ತೆಗೆದುಕೊಂಡು ಹೋಗಿ ಬಿಡುತ್ತಿದ್ದ. ವನ್ಯ ಜೀವಿಗ
ರಕ್ಷಣೆಗಾಗಿ ಅಧಿಕಾರಶಾಹಿಯೊಂದಿಗಿನ ಇವನ ಅವಿರತ ಹೋರಾಟ
ಜೊತೆಗೆ ಪೆಟ್ಟುಬಿದ್ದ ಹಾಗೂ ರೋಗಕ್ಕೆ ತುತ್ತಾದ ಪ್ರಾಣಿಗಳ ಚಿಕಿ
ಗಾಗಿ ಅಮೆರಿಕಾದ ಮಧ್ಯಪಶ್ಚಿಮ ಪ್ರಾಂತ್ಯದಲ್ಲಿ ಪ್ರಪ್ರಥವಾಗಿ ಸ್ಥಾ
ಸಿದ ವನ್ಯಮೃಗಗಳ ಆಸ್ಪತ್ರೆಯ ಉದ್ಘಾಟನೆ, ಈ ಎಲ್ಲ ಘಟನೆಗಳ
ಓದುಗರಲ್ಲಿ ಕುತೂಹಲವುಂಟುಮಾಡುತ್ತವೆ.

"Dr. Wildlife" ಎಂಬ ಮನಮಿಡಿಯುವ ಈ ಪುಸ್ತಕದಲ್ಲಿ
ಫಾಸ್ಟರ್ ಪ್ರತಿಯೊಂದು ಪ್ರಾಣಿಯೂ ಮಹತ್ವವುಳ್ಳದೆಂದು ತನ್ನ
ಅನುಭವದಲ್ಲಿನ ದುಃಖದುಮ್ಮಾನಗಳನ್ನು ಸಣ್ಣ ಜೀವಿಯಿಂದಿಡಿದು
ದೊಡ್ಡ ಪ್ರಾಣಿಗಳವರೆಗೆ ಸಮನಾಗಿ ಹಂಚಿಕೊಂಡಿದ್ದಾನೆ.

೧೯೭೭ರ ಮೇ ತಿಂಗಳ ಒಂದು ಹೊತ್ತಾರೆ, ವಿಸ್ಕಾನ್‌ಸಿನ್
ನಲ್ಲಿರುವ ನನ್ನ ಪ್ರಾಣಿ ಚಿಕಿತ್ಸಾಲಯಕ್ಕೆ ಮೊಣಕಾಲಿನವರೆ
ಬಾರಿ ಬೂಟ್ ಹಾಗೂ ಮೇಲೆ ಸಮವಸ್ತ್ರ ಧರಿಸಿದ್ದ ಓವ
ವಾಹನ ಚಾಲಕ ಧಿಡೀರನೆ ನುಗ್ಗಿ ಬಂದ. "ಪೆಟ್ಟು ಬಿದ್ದಿರುವ
ಜಿಂಕೆಮರಿಗೆ ಇಲ್ಲಿ ಚಿಕಿತ್ಸೆ ನೀಡುವಿರೇನು?" ಎಂದು ಚಿಕಿತ್ಸಾಲಯ
ದಲ್ಲಿ ಸ್ವಾಗತಕಾರಿಣಿಯಾಗಿ ಕೆಲಸ ಮಾಡುತ್ತಿದ್ದ ಪತ್ನಿ ಲಿಂಡಾ
ಳನ್ನು ಕೇಳಿದ.

೧೯೮೭ರ ಫೆಬ್ರವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ಡಾ॥ ವೈಲ್
ಲೈಫ್" ಎಂಬ ಲೇಖನದ ಅನುವಾದ.

ಬಾಲ್ಯದಿಂದಲೂ ವಾಲ್ ಡಿಸ್ನಿಯ 'ಬ್ಯಾಂಬಿ' ಬಗ್ಗೆ ಮಾರುಹೋಗಿದ್ದ ನನ್ನ
ಂಡಾ "ಓ! ಯಾಕಿಲ್ಲ?" ಎಂದಳು ತತ್‌ಕ್ಷಣವೇ. ಈ ಸಂಭಾಷಣೆ ಆಲಿಸಿದ ನಾನು
ಳಗೆ ಬಂದೆ. ಆಗಲೇ ಲಿಂಡಾ ರೋಗಿ ಕುರಿತ ಮಾಹಿತಿ ಹಾಳೆಯನ್ನು ಭರ್ತಿ ಮಾಡಲು
ಪ್ರಾರಂಭಿಸಿದ್ದಳು. "ಜಿಂಕೆಮರಿ ಹೆಸರೇನು? ಅದರ ವಯಸ್ಸೆಷ್ಟು?"

ಆ ವ್ಯಕ್ತಿ ಸ್ವಲ್ಪ ತಬ್ಬಿಬ್ಬುಗೊಂಡಂತೆ ಕಂಡುಬಂದ. "ಓ! ನಿಮಗೆ ಅರ್ಥವಾಗೆ
ಲ್ಲ ಅಂತ ಕಾಣುತ್ತೆ. ಅದು ನಾನು ಸಾಕಿದ ಮುದ್ದು ಜಿಂಕೆಮರಿ ಅಲ್ಲ. ಮೀನು
ಡಿಯಲು ಹೊರಟಿದ್ದೆ. ನನ್ನ ಮುಂದೆ ಹೋಗುತ್ತಿದ್ದ ಕಾರೊಂದು ಅದಕ್ಕೆ ಬಡಿ
ಯಿತು. ಆದರೆ ಅದರ ಚಾಲಕ ಕಾರನ್ನು ನಿಲ್ಲಿಸಲಿಲ್ಲ. ನಾನೂ ಜಿಂಕೆ ಬೇಟೆಗಾರನೇ,
ದರೂ ಅದನ್ನು ಅಲ್ಲೇ ಆ ಸ್ಥಿತಿಯಲ್ಲಿ ಬಿಡಲು ಮನಸ್ಸು ಒಪ್ಪಲಿಲ್ಲ."

ಅವನು ಹೊರಗೆ ಬಂದ. ಅವನ ಹಿಂದೆ ಹೊರಟೆ. ಹೊರಗೆ ನಿಲ್ಲಿಸಿದ್ದ ಅವನ
ಟ್ರಕ್ಕಿನ ಹಿಂಬದಿಯಲ್ಲಿ ಮೂಳೆ ಮುರಿದು ಅದುರುತ್ತಿದ್ದ ಎಳೆ ಜಿಂಕೆ ಮರಿಯನ್ನು
ನೋಡಿದೆ. ಹೊಡೆತ ಜೋರಾಗಿಯೇ ಬಿದ್ದಿತ್ತು. ಮೆಲ್ಲಗೆ ಮೇಲೆತ್ತಿದೆ. ಆ ವ್ಯಕ್ತಿ
ಡಾಕ್ಟ್ರೇ, ನನಗೆ ನಂಬಿಕೆ ಇದೆ, ನೀವು ವಾಸಿ ಮಾಡ್ತೀರಾ ಅಂತ" ಎಂದೆನ್ನುತ್ತ
ಟ್ರಕ್ಕನ್ನು ಸ್ಟಾರ್ಟ್ ಮಾಡಿದ.

ನಾನು ಮತ್ತು ಲಿಂಡಾ ಅದನ್ನು ಚಿಕಿತ್ಸಾಲಯದ ಮೇಜಿನ ಮೇಲೆ ಮಲಗಿಸಿ
ದೆವು. ಅದು ನಡುಗುತ್ತಿತ್ತು. ಅದರ ಕಾಲುಗಳು ಕಡ್ಡಿಯಂತೆ ಉದ್ದವಾಗಿದ್ದವು.
ಇನ್ನೂ ಬಲಿತಿರದ ಎಳೆಕಾಲುಗಳು. ಚುಕ್ಕೆ, ಚುಕ್ಕೆಗಳುಳ್ಳ ದೇಹದ ಭಾರವನ್ನು
ಎಳೆ ಕಾಲುಗಳು ಹೊರಲಾರದಂತಿದ್ದವು. ಅವರ ಹೃದಯದ ಬಡಿತ ಸಿಕ್ಕಾಪಟ್ಟೆ
ಡಿದುಕೊಳ್ಳುತ್ತಿತ್ತು. ಕಣ್ಣಿನಲ್ಲಿ ಭಯದ ತಲ್ಲಣವನ್ನು ನಾನು ಗಮನಿಸಿದೆ. ಸಿಂಬಳ
ಸೋರುತ್ತಿದ್ದ ಅದರ ಕಪ್ಪು ಮೂಗು ನನ್ನಿಂದ ಭರವಸೆಯನ್ನು ಬಯಸುತ್ತಿರುವಂತೆ
ನನ್ನ ಅಂಗೈಯನ್ನು ಒತ್ತಿ ಮೂಸಿತು.

ಇದೇ ಪ್ರಥಮ ಬಾರಿಗೆ ನಾನು ಬಿಳಿ ಬಾಲದ ಜಿಂಕೆಮರಿಯೊಂದನ್ನು ನೋಡಿದ್ದು.
ಅದರ ಹೊಕ್ಕುಳ ಬಳ್ಳಿ ಸುರುಟಿಕೊಂಡಿತ್ತು. ಆದರೆ ಇನ್ನೂ ಅಂಟಿಕೊಂಡಿತ್ತು. ೭
. ಜಿ. ತೂಕದ ಅದು, ಹುಟ್ಟಿ ಅಂದಾಜು ೪೮ ಗಂಟೆಗಳಾಗಿತ್ತಷ್ಟೆ. ತಲೆಯ ಮೇಲೆ
ರಡು ಕಡೆ ತರಚಿತ್ತು. ಸೋರಿದ ರಕ್ತ ಕೆನೆಗಟ್ಟಿ ತರಚುಗಾಯ ಮುಚ್ಚಿಕೊಂಡಿತ್ತು.
ಅಂತಹ ತೀವ್ರ ಹೊಡೆತವೇನಲ್ಲ. ಆದರೆ ಅದರ ಎಡಭಾಗದ ತೊಡೆಯನ್ನು ಮುಟ್ಟಿ
ದಾಗ ಉದ್ದುದ್ದ ಮೂಳೆಯ ತೊಡೆಯೆಲುಬು ಮುರಿದಿರುವುದು ಗೋಚರಿಸಿತು. ಈ
ಮರಿ ಮೂರು ಕಾಲುಗಳಲ್ಲಿ ನಡೆಯಲು ಅಶಕ್ತವಾಗಿತ್ತು. ಆ ಮೀನು ಹವ್ಯಾಸಿ
ಅದನ್ನು ಹೆದ್ದಾರಿಯಲ್ಲೇ ಬಿಟ್ಟೇನಾದರೂ ಹೋಗಿದ್ದರೆ ನಿಜಕ್ಕೂ ಅದು ಬದುಕುಳಿಯು
ತ್ತಿರಲಿಲ್ಲ!

"ಬೆಚ್ಚಗೆ ಮಲಗಿಸು, ಈ ರಾತ್ರಿಗೆ ಶಸ್ತ್ರಚಿಕಿತ್ಸೆ ಮಾಡೋಣ" ಎಂದು ಲಿಂಡಾಳಿಗೆ
ಹೇಳಿದೆ. ಎಕ್ಸ್-ರೇ ಚಿತ್ರ ಮೂಳೆ ಮುರಿತವನ್ನು ಖಾತ್ರಿ ಪಡಿಸಿತ್ತು. ಲಿಂಡಾ ಇಡೀ
ದಿನಾ ಜಿಂಕೆಮರಿಯನ್ನು ಪ್ರೀತಿಯಿಂದ ಆರೈಕೆ ಮಾಡಿದಳು. ತಲೆ ಮೇಲಿನ ಗಾಯ
ವನ್ನು ಶುಚಿಗೊಳಿಸಿ, ಆ್ಯಂಟಿಸೆಪ್ಟಿಕ್ ಹಚ್ಚಿದಳು. ಜೊತೆಗೆ ಈ ಮುದ್ದುಮರಿಗೆ
'ಫೆಲಿನಾ' ಎಂದು ಹೆಸರಿಟ್ಟಳು.

ಆಸ್ಪತ್ರೆ ಬಾಗಿಲು ಮುಚ್ಚಿದ ಮೇಲೆ ನಾವು ಶಸ್ತ್ರಚಿಕಿತ್ಸೆ ಮಾಡಿದೆವು. ಲಿಂಡಾ ಅನೆಸ್ತೇಸಿಯಾ ನಿಯಂತ್ರಿಸಿದರೆ, ನಾನು ಮೂಳೆ ಮುರಿತವನ್ನು ಸರಿಪಡಿಸಿದೆ. ತೊಡೆ ಯೆಲುಬಿನ ನೇರಕ್ಕೆ ಎರಡು ಸ್ಟೇನ್‌ಲೆಸ್ ಪಿನ್‌ಗಳನ್ನು ಜೋಡಿಸಿ ಮುರಿದ ಭಾಗ ವನ್ನು ಸ್ವಾಸ್ಥಜಾಗಕ್ಕೆ ಕೂರಿಸಿದೆ. ಬೇಗ ವಾಸಿಯಾಗುವಂತಹ ಸೂಕ್ಷ್ಮ ಹೊಲಿಗೆ ಗಳನ್ನು ಹಾಕಿದೆ. ಸಾಕಷ್ಟು ಎಚ್ಚರಿಕೆ ವಹಿಸಿದೆ. ಈಗ ನಮಗೆ ಉಳಿದಿದ್ದ ಕೆಲಸವೆಂದರೆ ಕೇವಲ ಅದರ ಆರೈಕೆ ಹಾಗೂ ಅದು ಮೇಲೇಳುವುದನ್ನು ಕಾಯುವುದು ಮಾತ್ರ. ಲಿಂಡಾ ಅದರ ಬಳಿ ಕುಳಿತಳು. ಸುವರ್ಣ ಬಣ್ಣದ ಮೇಲೆ ಬೆಳ್ಳಿ ಚುಕ್ಕೆಗಳುಳ್ಳ ಅದರ ಮೈಯನ್ನು ನೇವರಿಸುತ್ತಾ "ಏನಾಗುತ್ತೋ, ಎಚ್ಚರವಾಗಲು ತುಂಬಾ ಹೊತ್ತು ತೆಗೆದುಕೊಳ್ಳುತ್ತಾ ಇದೆ. ಏನಾಗುತ್ತೋ" ಎಂದು ಮತ್ತೆ ಶಂಕೆ ವ್ಯಕ್ತಪಡಿಸಿದಳು.

ಅಲುಗಾಡಲು ಫೆಲಿನಾ ಎರಡು ಗಂಟೆ ತೆಗೆದುಕೊಂಡಳು. ಎದ್ದು ಕುಳಿತು ತನ್ನ ಸುಂದರ ಕಂದು ಬಣ್ಣದ ನಯನಗಳಿಂದ ನಮ್ಮೆಡೆಗೆ ನೋಡಿದಳು. "ಎಲ್ಲ ಸರಿ ಯಾಗಿ ನಡೆಯಿತು ಎಂದು ಕಾಣುತ್ತದೆ. ಆದರೂ ವಾಸಿಯಾಗಲು ಸಾಕಷ್ಟು ಸಮಯ ಬೇಕು" ಎಂದೆ. ಲಿಂಡಾ "ಇವಳನ್ನು ಇಲ್ಲಿ ಬಿಡಲು ಆಗುವುದಿಲ್ಲ. ಮನೆಗೆ ಒಯ್ಯೋಣವೇ?" ಎಂದು ಕೇಳಿದಳು. ಆ ಕ್ಷಣ ನನ್ನ ಮನಸ್ಸು ಕರಗಿತು. "ಖಂಡಿತ, ಇಲ್ಲಿ ಒಬ್ಬಳನ್ನೇ ಒಂಟಿಯಾಗಿ ಬಿಟ್ಟರೆ ಬೆದರಬಹುದು. ಆದರೆ ಅಲ್ಲೂ ಅವಳಿಗೆ ಕಿರಿಕಿರಿಯಾಗ ಬಹುದು. ಅಲ್ಲಿಗೆ ಹೊಂದಿಕೊಳ್ಳುತ್ತಾಳೋ ಇಲ್ಲವೋ, ನೀನು ಅವಳನ್ನು ಹೆಚ್ಚಿಗೆ ಮನಸ್ಸಿಗೆ ಹಚ್ಚಿಕೋ ಬೇಡ" ಬಾಲ್ಯಾವಸ್ಥೆಯಲ್ಲಿ ಪೆಟ್ಟಾದ ವನ್ಯಮೃಗಗಳನ್ನು ಬೆಳೆಸುವುದು ತುಂಬಾ ಪ್ರಯಾಸಕರದ ಕೆಲಸವೆಂಬುದನ್ನು ಬಲ್ಲ ನಾನು ಹೀಗೆ ಹೇಳ ಬೇಕಾಯಿತು.

ಆ ರಾತ್ರಿಯಿಂದ ಲಿಂಡಾ ಈ ಮುದ್ದು ಮರಿಯ ಆರೈಕೆ ಪ್ರಾರಂಭಿಸಿದಳು. ಮೊದಲಿಗೆ ಪ್ರತಿ ಎರಡು ಗಂಟೆಗೊಮ್ಮೆ ಎಚ್ಚೆತ್ತು ಆರೈಕೆ. ಅನಂತರ ಹಗಲು-ರಾತ್ರಿ ಫೆಲಿನಾಳ ದುರ್ಬಲವಾದ ಗಂಟಲಿಗೆ ವಿಟಮಿನ್ ಮಾತ್ರೆಗಳನ್ನು ತಳ್ಳುವುದು, ಆ್ಯಂಟಿ ಬಯೋಟಿಕ್ಸ್ ಕೊಡುವುದು, ಶೀಷೆಯಲ್ಲಿ ಹಾಲು ಕುಡಿಸುವುದು, ಕಾಲಿಗೆ ಮಾಲೀಷ್ ಮಾಡುವುದರಲ್ಲಿ ಮುಳುಗಿಹೋದಳು. ಅವಳ ಆಸಕ್ತಿ ಫಲ ನೀಡಿತು. ಜಿಂಕೆಮರಿ ಫೆಲೀನಾ ಸುಪುಷ್ಟವಾಗುವ ಲಕ್ಷಣಗಳನ್ನು ತೋರಿದಳು.

ಜುಲೈ ತಿಂಗಳ ವೇಳೆಗೆ ಮೂಳೆ ಮುರಿತ ವಾಸಿಯಾಗುತ್ತಾ ಬಂದಿತು. ನಾವೀಗ ಫೆಲಿನಾಳನ್ನು ಬಂಧನದಲ್ಲಿಡಲು ಇಚ್ಛಿಸಲಿಲ್ಲ. ಅವಳು ಮನಸ್ವೇಚ್ಛೆಯಂತೆ ಸುತ್ತಿ ಬರಲು ಬಿಟ್ಟೆವು. ರಾತ್ರಿ ವೇಳೆ ಫೆಲಿನಾ ನಮ್ಮ ಮನೆ ಸನಿಹದ ಕಾಡಿನಲ್ಲಿ ಮಲಗಲು ಹೋಗುತ್ತಿದ್ದಳು. ಹಗಲು ಹೊತ್ತು ನಮ್ಮ ಜೊತೆ ಇರುತ್ತಿದ್ದಳು. ಲಿಂಡಾ ಹಾಗೂ ಫೆಲಿನಾ ಜೊತೆಗೂಡಿ ಕಾಡಿನಲ್ಲಿ ಸುತ್ತಿಬರಲು ಹೋಗುತ್ತಿದ್ದರು. ಒಮ್ಮೊಮ್ಮೆ ಈರ್ವರೂ ಮೌನವಾಗಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡಿರುತ್ತಿದ್ದರು.

ಶರತ್ಕಾಲ ಆಗಮನವಾಗುತ್ತಿದ್ದಂತೆ, ಫೆಲಿನಾ ಹತ್ತಿರ ಹತ್ತಿರ ೩೦ ಕೆ. ಜಿ ತೂಗುವಂತಾಗಿ, ಮೈಮೇಲಿನ ಗಾಯದ ಕಲೆಗಳು ಅದೃಶ್ಯವಾದವು. ಈಗ ಅವಳ ನಿಸರ್ಗದತ್ತವಾದ ಹುಟ್ಟರಿವು ಮೂಡತೊಡಗಿ ಅವು ತಮ್ಮಷ್ಟಕ್ಕೆ ತಾವೇ ಗೋಚರಿಸಲ

ಪ್ರಾರಂಭಿಸಿದುವು. ಇತ್ತೀಚೆಗೆ ಅವಳು ಹೆಚ್ಚೆಚ್ಚು ಹೊತ್ತು ಕಾಡಿನಲ್ಲಿ ಕಳೆಯ ಲಾರಂಭಿಸಿದ್ದಳು. ಒಂದು ರಾತ್ರಿ ಮಲಗುವಾಗ, ಲಿಂಡಾ ಹೊರಗಿನ ಕತ್ತಲೆಯೆಡೆ ದೃಷ್ಟಿಸುತ್ತ "ಇತ್ತೀಚೆಗೆ ಫೆಲಿನಾ ನಮ್ಮಿಂದ ತುಂಬಾ ದೂರವಾಗುತ್ತಿದ್ದಾಳೆ ಅಂತ ನನಗನ್ನಿಸುತ್ತಿದೆ. ನನಗೆ ನನ್ನ ಮುದ್ದು ಮರಿ ಕೈತಪ್ಪಿದಂತೆ ಕಾಣಿಸ್ತಿದೆ" ಎಂದಳು. ಅವಳ ಧ್ವನಿಯಲ್ಲಿ ಮಮತೆ ತುಳುಕುತ್ತಿತ್ತು.

'ಇಂತಹ ದಿನ ಬರುತ್ತದೆಂದು ನಾನು ಮೊದಲೇ ಎಚ್ಚರಿಸಿದ್ದೆನಲ್ಲ. ಫೆಲಿನಾ ಈಗ ಸ್ವತಃ ತನ್ನ ಅನ್ನವನ್ನು ತಾನೇ ಸಂಪಾದಿಸಿಕೊಳ್ಳಬಲ್ಲಳು ಜೊತೆಗೆ ಅವಳ ಕಾಲು ಕೂಡ ಶಕ್ತವಾಗಿದೆ. ನನಗೀಗ ಅವಳನ್ನು ಅವಳ ಪಾಡಿಗೆ ಬಿಟ್ಟುಬಿಡಬೇಕು ಅಂತ ಅನ್ನಿಸ್ತಿದೆ" ಎಂದೆ.

"ಹೌದು, ಅವಳೀಗ ಸ್ವತಂತ್ರವಾಗಿರಲು ಸಾಧ್ಯ" ಎಂದು ದನಿಗೂಡಿಸಿದಳು ಲಿಂಡಾ.

ಸೆಪ್ಟೆಂಬರ್ ತಿಂಗಳ ಅಂತ್ಯದ ಒಂದು ದಿನ ಫೆಲಿನಾಳನ್ನು ನಮ್ಮ ಟ್ರಕ್ಕಿಗೆ ಹತ್ತಿಸಿ ಕೊಂಡು ಹೊರಟೆವು. ಇಕ್ಕೆಡೆಗಳಲ್ಲೂ ಟಪಟಪನೆ ತರಗೆಲೆ ಉದುರುತ್ತಿತ್ತು. ಸಣ್ಣ ದಾಗಿ ಸೋನೆ ಮಳೆ ಕೂಡ ಬೀಳುತ್ತಿತ್ತು. ಇಬ್ಬರಲ್ಲಿ ಯಾರೂ ಮಾತಿಗೆ ಇಳಿಯಲಿಲ್ಲ. ಫೆಲಿನಾ ಬಂಧನವನ್ನು ಇಚ್ಛಿಸುತ್ತಿರಲಿಲ್ಲವಾದ್ದರಿಂದ, ಪ್ರಯಾಣಕ್ಕೆ ಅನುಕೂಲವಾಗ ಲೆಂದು ನಾನು ಅವಳಿಗೆ ಪ್ರಭಾವ ಬೀರುವ ಶಾಮಕ ಔಷಧಿಯನ್ನು ಕೊಟ್ಟಿದ್ದೆ. ನಾವು ಹೆದ್ದಾರಿಯಿಂದ ದೂರದ ಒಂದು ನಿರ್ಜನ ಸ್ಥಳ ಸೇರಿದ ಮೇಲೆ ಅವಳ ನಿದ್ರೆ ಹೆಚ್ಚು ಕಡಿಮೆ ಹತ್ತು ನಿಮಿಷ ಮುಂದುವರಿಯಿತು.

ಅನಂತರ ನಾನು ಟ್ರಕ್‌ನಿಂದ ಫೆಲಿನಾಳನ್ನು ಕೆಳಗಿಳಿಸಿದೆ. ಫೆಲಿನಾಗೆ ನೀಡಿದ್ದ ಶಾಮಕ ಔಷಧಿಯ ಪ್ರಭಾವ ಇಳಿಯುವವರೆಗೂ ನಾನು ಮತ್ತು ಲಿಂಡಾ ಈ ಹೆಣ್ಣು ಮರಿಯನ್ನು ತಬ್ಬಿ ಹಿಡಿದು ಮರವೊಂದಕ್ಕೆ ಒರಗಿ ಕುಳಿತೆವು. ಲಿಂಡಾಳ ಕಡೆ ದೃಷ್ಟಿಸಿದೆ. ಅವಳು ಮೌನವಾಗಿ ಕಣ್ಣೀರು ಅವಳ ಕಪೋಲವನ್ನು ತೋಯಿಸುತ್ತಾ ಕೆಳಗಿಳಿದು, ಅವಳು ತಬ್ಬಿ ಹಿಡಿದಿದ್ದ ಫೆಲಿನಾಳ ನವಿರು ರೇಷ್ಮೆಯ ತಲೆಯ ಮೇಲೆ ತೊಟ್ಟಿಕ್ಕುತ್ತಿತ್ತು.

ಫೆಲಿನಾ ಇನ್ನು ಮುಂದೆ ತನ್ನ ಜೀವನವನ್ನು ತಾನೇ ನಿರ್ವಹಿಸಬೇಕಾಗಿತ್ತು. ನಾನು ಮತ್ತು ಲಿಂಡಾ ದುಃಖತಪ್ತರಾಗಿದ್ದೆವು. ನಾವು ಅವಳಿಗೆ ಪ್ರೀತಿ ಮತ್ತು ದಯೆಯನ್ನಷ್ಟೇ ಧಾರೆಯೆರೆದಿದ್ದೆವು. ನಮ್ಮನ್ನು ನಂಬಿದಂತೆ ಬೇರೆಯವರನ್ನು ನಂಬ ಬೇಡವೆಂದು ಅವಳಿಗೆ ನಾವು ಹೇಗೆ ಎಚ್ಚರಿಸುವುದು ? ವನ್ಯ ಜೀವಿಗಳ ಕೊಲೆಗಡುಕರ ವಾಸನೆಯನ್ನು ಹಿಡಿಯಬಲ್ಲಳೇ? ದಟ್ಟ ಹಿಮಕ್ಕೆ ಬಲಿಯಾದರೆ? ಅವಳು ಬಾಳಲು ಹೇಗೆ ಜನಿಸಿದಳೋ ಹಾಗೆ ಬದುಕಲು ಒಂದು ಅವಕಾಶವನ್ನೊದಗಿಸುವುದಷ್ಟೇ ನಾವೀಗ ಮಾಡಬೇಕಾದ ಆದ್ಯ ಕರ್ತವ್ಯವಾಗಿತ್ತು.

ತತ್‌ಕ್ಷಣ ಎಚ್ಚರಗೊಂಡ ಫೆಲಿನಾ ಮೇಲಕ್ಕೆ ನೆಗೆದಳು. ತನ್ನ ಕೊನೆಯ ವಿದಾಯದ ಆಲಿಂಗನ ಸೂಚಿಸಲೋ ಎಂಬಂತೆ ಸುಮಾರು ಹೊತ್ತು ನಿಂತು ಲಿಂಡಾ ಳನ್ನೇ ತದೇಕವಾಗಿ ದಿಟ್ಟಿಸಿ, ಅನಂತರ ಕುಪ್ಪಳಿಸುತ್ತಾ, ಆಹ್ಲಾದಕರ ಗಾಳಿಯನ್ನು

ಆಘ್ರಾಣಿಸುತ್ತಾ, ಮುಂದೆ ಕಾಣುವ ಸಣ್ಣ ದಿಣ್ಣೆಯ ತುದಿಯನ್ನು ಏರಿದಳು. ನಮ್ಮ ಅಂತಿಮ ಅಗಲುವಿಕೆಯನ್ನು ಅರಿತವಳಂತೆ ಅಲ್ಲಿ ನಿಂತು ಆಕೆ ಹಿಂದಿರುಗಿ ನೋಡಿದಳು. ಅನಿರೀಕ್ಷಿತವಾಗಿ ವೃಕ್ಷಗಳ ಮರೆಯಿಂದ ತೂರಿಬಂದ ಸೂರ್ಯನ ಕಿರಣಗಳು ಫೆಲಿನಾಳ ಹೊಂಬಣ್ಣದ ಪ್ರಭೆಯನ್ನು ಪ್ರತಿಬಿಂಬಿಸಿತು. ವಿಶಾಲವೂ ಮೋಹಕವೂ ಆದ ಅವಳ ಕಂದು ಬಣ್ಣದ ನಯನಗಳು ಅರೆಕ್ಷಣ ನಮ್ಮನ್ನು ಹಿಡಿದಿಟ್ಟವು. ಅನಂತರ ಅವಳು ತನ್ನ ಬಾಲವನ್ನು ಚಿಮ್ಮುತ್ತಾ ನಮ್ಮಿಂದ ಬಹು ದೂರಕ್ಕೆ ಮರೆಯಾದಳು.

ಕಡಲಹಕ್ಕಿ ಆರ್‌ವಿಲ್ಲೆ

ಫೆಲಿನಾ ನಮ್ಮ ಬದುಕಿಗೆ ಪ್ರವೇಶಿಸಿದ ಮೊದಲ ತಿಂಗಳಲ್ಲಿ ನಾನು ಹೆಚ್ಚು, ಹೆಚ್ಚು ಪೆಟ್ಟುಬಿದ್ದ ವನ್ಯಜೀವಿಗಳನ್ನು ಆರೈಕೆ ಮಾಡಲು ಪ್ರಾರಂಭಿಸಿದೆ. ವನ್ಯಜೀವಿಗಳ ಪಾಲನೆ, ಪುನರ್ವಸತಿ ಕುರಿತ ನನಗೆ ದೊರೆತ ಪ್ರತಿಯೊಂದು ಪುಸ್ತಕಗಳನ್ನೂ ಓದಿದೆ. ಇದರಿಂದ ಆರೈಕೆ ಹೊಂದಿದ ಅರ್ಧದಷ್ಟು ವನ್ಯಜೀವಿಗಳು ಎಂದೆಂದಿಗೂ ಬಂಧನದಿಂದ ಬಿಡುಗಡೆ ಹೊಂದುವುದಿಲ್ಲವೆಂಬ ಸತ್ಯ ತಿಳಿದುಬಂದಿತು. ಇನ್ನುಳಿದ ಅರ್ಧ ಅವುಗಳಿಗೆ ತಗಲಿದ ಪೆಟ್ಟಿನಿಂದ ಸಾಯುತ್ತಿದ್ದವು—ಬಹಳಷ್ಟು ಕಾರಿನಿಂದ ಅಥವಾ ಬಂದೂಕಿನಿಂದ—ಅಥವಾ ಅಂಗ ಊನವಾಗಿ ಉಳಿದು ಪುನಃ ಕಾಡಿನಲ್ಲಿ ಬದುಕುಳಿಯಲಾರದಂತಹ ಸ್ಥಿತಿ ತಲುಪುತ್ತಿದ್ದವು. ಈ ವಾಸ್ತವತೆಯನ್ನು ಅರಿತ ಮೇಲೆ ನನಗೆ ಆಶಾಭಂಗವಾಗಿ ಉತ್ಸಾಹ ಇಳಿಯಿತು. ಈ ಕಡಲಹಕ್ಕಿಯ ಪ್ರಸಂಗ ಇದಕ್ಕೊಂದು ನಿದರ್ಶನ.

“ಇದು ಆರ್‌ವಿಲ್ಲೆ” ಎಂದಳು. ನೀಲಿ ಕಣ್‌ಗಳ ನಸು ಹೊಂಬಣ್ಣದ ನಾರ್ತ್‌ಲ್ಯಾಂಡ್ ಕಾಲೇಜಿನ ಕನ್ಯೆ—ಸ್ವಾಗತ ಕೌಂಟರಿನ ಮೇಲೆ ಮರದ ಪೆಟ್ಟಿಗೆಯೊಂದನ್ನು ಇಡುತ್ತಾ, “ಸಮುದ್ರದ ತಡಿಯಲ್ಲಿ ವಾಯುವಿಹಾರಕ್ಕೆ ಹೊರಟಿದ್ದೆ. ಇದು ಅಲ್ಲಿ ಬಂಡೆಯೊಂದರ ಮೇಲೆ ಕುಳಿತಿತ್ತು. ನಾನು ಹತ್ತಿರ ಹೋದರೂ ಹಾರಿ ಹೋಗಲು ಯತ್ನಿಸಲಿಲ್ಲ. ಒಂಟಿಯಾಗಿ ಸುಮ್ಮನೆ ಕುಳಿತಿತ್ತು. ಹಸಿದಿರುವಂತೆ ಕಂಡಿತು. ಕೈಗೆತ್ತಿಕೊಂಡೆ. ನನ್ನ ಅಜ್ಜನ ಹೆಸರನ್ನು ಇದಕ್ಕೆ ಇಟ್ಟೆ.”

ಆ ಕಡಲ ಹಕ್ಕಿಯನ್ನು ಪರೀಕ್ಷಿಸುತ್ತಾ “ಇದಕ್ಕೆ ಎಕ್ಸ್-ರೇ ಹಾಗೂ ಇತರೆ ಕೆಲವು ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ ಎಂದು ಆ ಕಾಲೇಜು ಕನ್ಯೆಗೆ ಹೇಳಿದೆ. ಆ ಹೊಳೆಯುವ ನೀಲಿ ಕಣ್ಣುಗಳು ಗಾಬರಿಯಿಂದ ನನ್ನೆಡೆಗೆ ನೋಡಿದವು. “ಮೊದಲೇ ಹೇಳುತ್ತೇನೆ, ಅದರ ಚಿಕಿತ್ಸೆಯ ವೆಚ್ಚವನ್ನು ಒಮ್ಮೆಲೇ ನಾನು ನೀಡಲಾರೆ” ಎಂದಳು. “ಫೀ ಇಲ್ಲವೇ ಇಲ್ಲ! ವನ್ಯಜೀವಿಗಳಿಗೆ ಚಿಕಿತ್ಸೆ ಮಾಡುವುದೇ ನನ್ನ ಹವ್ಯಾಸ” ಎಂದೆ ಮುಗುಳ್ನಗುತ್ತ.

“ತುಂಬಾ ಒಳ್ಳೆಯ ಕೆಲಸ” ಎಂದಳು ಮೃದುವಾಗಿ. “ನಾನು ಮಾಡುವುದೇನಾದರೂ ಇದ್ದರೆ ಹೇಳಿ. ಆರ್‌ವಿಲ್ಲೆ ಹುಷಾರಾಯಿತೆಂದರೆ ಅದನ್ನು ನಾನು ಮತ್ತೆ ಸರೋವರಕ್ಕೆ ಬಿಟ್ಟುಬರುತ್ತೇನೆ.”

“ಹುಷಾರಾದರೆ ಅದೇ ಹಾರಿಹೋಗುತ್ತದೆ” ಎಂದೆ ನಗುತ್ತಾ.

ಚಿಕಿತ್ಸಾ ಕೋಣೆಗೆ ಆ ಪಕ್ಷಿಯಿದ್ದ ಪೆಟ್ಟಿಗೆಯನ್ನು ತೆಗೆದುಕೊಂಡು ಒಳಹೋದೆ. ಆರ್‌ವಿಲ್ಲೆ ತುಂಬಾ ಕಾತುರದಿಂದ ಸುತ್ತಲೂ ದೃಷ್ಟಿಸಿತು. ಒಂದಿನಿತೂ ಗಾಬರಿ ಕಾಣಲಿಲ್ಲ ಅದರಲ್ಲಿ. ಪೆಟ್ಟಿಗೆಯೊಳಕ್ಕೆ ಕೈಹಾಕಿ ಅದನ್ನು ಹಿಡಿದುಕೊಂಡು ತಪಾಸಣಾ ಮೇಜಿನ ಮೇಲೆ ಇಟ್ಟೆ. ಅದರ ಅಚ್ಚ ಬೂದು ಬಣ್ಣದ ಕಪ್ಪು ತುದಿಯ ರೆಕ್ಕೆಗಳನ್ನು ಅದರ ತೆಳು ಬೂದು ಬಣ್ಣದ ದೇಹಕ್ಕೆ ಒತ್ತಿ ಅಚ್ಚುಕಟ್ಟಾಗಿ ಮಡಚಿದೆ. ಹೊಳೆಯುವ ಸ್ಟೀಲ್ ಮೇಜಿನ ಮೇಲೆ ತನ್ನ ಕಾಲುಗಳನ್ನೂರಲು ಅದು ತಟ್ಟಾಡುತ್ತಾ ಲಘುವಾಗಿ ಬೊಬ್ಬೆ ಹಾಕಿತು.

ಆರ್‌ವಿಲ್ಲೆಯ ಅಸಾಮಾನ್ಯ ಚರ್ಯೆಗೆ ಕಾರಣವಾಗಿರುವ ನ್ಯೂನತೆಗಳನ್ನು ಹುಡುಕುತ್ತಾ ಅದರ ದೇಹದ ಮೇಲೆಲ್ಲಾ ನಿಗಾ ಇಟ್ಟು ಕೈಯಾಡಿಸಿದೆ. ಜಲಚರ ಜೀವಿಗಳಲ್ಲಿ ರೆಕ್ಕೆ ಭಾಗದಲ್ಲಿ ಮೀನಿನ ಮೊಟ್ಟೆ ರೋಗ ಹಾಗೂ ಅಂಗಾಂಗಗಳಲ್ಲಿ ನಾಟಿರುವ ಮೀನನ್ನು ಹಿಡಿಯಲು ಬಳಸುವ ಕೊಕ್ಕೆಗಳು ಸರ್ವೇಸಾಧಾರಣ ಸಮಸ್ಯೆ. ಈ ತರಹದ ಸಮಸ್ಯೆ ಯಾವುದೂ ಆರ್‌ವಿಲ್ಲೆಯಲ್ಲಿ ಕಾಣಬರಲಿಲ್ಲ. ಅನಂತರ ಅದರ ಸೋಗೆಯ ಎಡಭಾಗದ ತಳದಲ್ಲಿ ಪುಕ್ಕಗಳ ನಡುವೆ ಒಂದು ಸಣ್ಣ ಊತವನ್ನು ಗುರುತಿಸಿದೆ. ಒತ್ತು ಒತ್ತಾದ ಉದ್ದನೆಯ ಗರಿಗಳನ್ನು ಅಗಲಿಸಿ ನೋಡಿದರೆ ಅಲ್ಲಿ ದ್ರಾಕ್ಷಿ ಗಾತ್ರದ ಒಂದು ಗುಳ್ಳೆ ಗೋಚರಿಸಿತು. ಅದು ಬಾತುಕೊಂಡು ಕಾದ ಕೆಂಡದಂತೆ ಇತ್ತು. ಮುಟ್ಟಿ ನೋಡಿದಾಗ ಒಳಭಾಗದಲ್ಲಿ ಒಂದು ಗೆಡ್ಡೆ ಚೆನ್ನಾಗಿ ಬೆಳೆದಿರುವುದು ಗೊತ್ತಾಯಿತು. ಅದನ್ನು ತೆಗೆಯುವುದು ಅನಿವಾರ್ಯವಾಗಿತ್ತು.

ಆರ್‌ವಿಲ್ಲೆಯನ್ನು ಶಸ್ತ್ರಚಿಕಿತ್ಸೆಗೆ ತಯಾರಿ ಮಾಡುವ ಪೂರ್ವಭಾವಿಯಾಗಿ ಅದಕ್ಕೆ ಪುಷ್ಟಿಕರವಾದ ಸೀಗಡಿ, ವಿಟಮಿನ್ ಮತ್ತು ಖನಿಜ ಪದಾರ್ಥಗಳನ್ನು ಹೆಚ್ಚೆಚ್ಚು ತಿನ್ನಿಸಿದೆ. ಮೂರು ದಿನಗಳ ನಂತರ ನಾನು ಮತ್ತು ಹೊಸದಾಗಿ ನೇಮಕಗೊಂಡ ನನ್ನ ಟೆಕ್ನೀಷಿಯನ್ ಕರೆನ್*, ಇಬ್ಬರೂ ಶಸ್ತ್ರ ಚಿಕಿತ್ಸೆ ಪ್ರಾರಂಭಿಸಿದೆವು. ದೇಹದ ಕೆಳಭಾಗದ ಗೆಡ್ಡೆಯಲ್ಲಿ ಬೇರುಬಿಟ್ಟಿದ್ದ ರೋಮಗಳು ಮಿನಮಿನ ಮಿರುಗುವ ಸ್ನಾಯುವನ್ನು ಮುತ್ತಿದ್ದವು. ಆದಷ್ಟೂ ಈ ರೋಮಗಳನ್ನು ಕೀಳಲು ನನಗೆ ಒಂದು ಗಂಟೆ ಹಿಡಿಯಿತು. ಸಂಪೂರ್ಣವಾಗಿ ಈ ತಂತುಗಳನ್ನು ಆರ್‌ವಿಲ್ಲೆಯ ದೇಹದಿಂದ ತೆಗೆಯುವುದೆಂದರೆ ಅದರ ಸ್ನಾಯುಗಳನ್ನು ಹಾಗೂ ಕೇಂದ್ರ ನರಗಳನ್ನು ಮತ್ತಷ್ಟು ಕತ್ತರಿಸುವ ಪ್ರಸಂಗ ಸಂಭವಿಸುತ್ತಿತ್ತು.

ಟೇಬಲಿನ ಮೇಲೆ ಆರ್‌ವಿಲ್ಲೆಯ ಪಕ್ಕದಲ್ಲಿ ರಾಶಿ ಬಿದ್ದಿದ್ದ ರಕ್ತಸಿಕ್ತ ದುರ್ಮಾಂಸವನ್ನು ನೋಡಿ ಕರೆನ್ "ಇದರ ಬಗ್ಗೆ ಏನು ಹೇಳುವಿರಿ?" ಎಂದಳು.

"ಅರ್ಬುದ" ನಾನು ಹತಾಶೆಯಿಂದ ಗೊಣಗಿದೆ.

"ಪಕ್ಷಿಗಳಿಗೂ ಅರ್ಬುದ ಬರುತ್ತದೆಂದು ನನಗೆ ತಿಳಿದಿರಲಿಲ್ಲ"

"ಅವೂ ಸಹ ಇತರೆ ಜೀವಿಗಳಂತೆ ಅರ್ಬುದ ರೋಗಕ್ಕೆ ಬಲಿಯಾಗುತ್ತವೆ" ಬೇಸರದಿಂದ ನುಡಿದೆ.

[* ಕೆಲವು ವ್ಯಕ್ತಿಗಳ ಹಾಗೂ ಸ್ಥಳದ ಹೆಸರನ್ನು ಬದಲಾಯಿಸಲಾಗಿದೆ.]

ಆರ್‌ವಿಲ್ಲೆ ಚೆನ್ನಾಗಿ ಚೇತರಿಸಿಕೊಂಡಿತು. ಆದರೆ, ೧೧ ದಿನಗಳ ನಂತರ ನನ್ನ ಅಪೇಕ್ಷೆಯ ಮೇರೆಗೆ ಅದರ ಭೌತಿಕಲಕ್ಷಣದ ಮೇಲೆ ದೊರೆತ ವರದಿಯಲ್ಲಿದ್ದಂತೆ "ಪೈಬ್ರೋಸರ್‌ಕೋಮ" ಪಕ್ಷಿಯನ್ನು ರಕ್ಷಣೆ ಮಾಡುತ್ತಿರುವುದು ತಿಳಿದು, ಆರ್‌ವಿಲ್ಲೆಗೆ ಪುನಃ ಅರ್ಬುದ ತಾಗದು ಎಂದುಕೊಂಡೆ ಮನಸ್ಸಿನಲ್ಲಿ.

ಮುಂದಿನ ಮೂರು ವಾರಗಳಲ್ಲಿ ನಾನು ಮತ್ತು ಆರ್‌ವಿಲ್ಲೆ ನಿಕಟ ದೋಸ್ತಿಗಳಾದೆವು. ಅದಕ್ಕೆ ವಿಶೇಷ ತರಬೇತಿ ನೀಡಲು ನನ್ನ ಹೆಚ್ಚಿನ ವೇಳೆಯನ್ನು ಮೀಸಲಿಟ್ಟೆ. ಸ್ವತಃ ನಾನೇ ಕಾಳು ತಿನ್ನಿಸುತ್ತಿದ್ದೆ. ಆಗಿಂದಾಗ್ಗೆ ಶಸ್ತ್ರಚಿಕಿತ್ಸೆ ಮಾಡಿದ ಜಾಗವನ್ನು ಪರಿಶೀಲಿಸುತ್ತಿದ್ದೆ. ಪುನಃ ಗೆಡ್ಡೆ ಬೆಳೆಯುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಲು. ಆರ್‌ವಿಲ್ಲೆಗೆ ಶಸ್ತ್ರಚಿಕಿತ್ಸೆ ಮಾಡಿದ ೩೩ ದಿನಗಳ ಅನಂತರ ನನಗೆ ಅದೇ ಜಾಗದಲ್ಲಿ ಒಂದು ಗಟ್ಟಿ ವಸ್ತು ಕೈಗೆ ಸಿಕ್ಕಿತು. ಪುನಃ ಅರ್ಬುದ ಗೆಡ್ಡೆ ಮರಳಿತ್ತು!

ಪಕ್ಷಿಯ ಹಣೆ ಬರಹ ಊಹಿಸಿದ ನಾನು ಮರುಕವುಳ್ಳವನಾಗಿ ಅದನ್ನು ಚಿರನಿದ್ರೆಗೆ ಕಳುಹಿಸಬೇಕೆಂದು ತೀರ್ಮಾನಿಸಿದೆ. ಆದರೆ ಆರ್‌ವಿಲ್ಲೆ ನೋವುಣ್ಣುವಂತೆ ಕಾಣುತ್ತಿರಲಿಲ್ಲ. ಚುರುಕಾಗಿತ್ತು. ಚೆನ್ನಾಗಿ ತಿನ್ನುತ್ತಿತ್ತು. ನಾನು ದೃಢವಾಗಿ ಹೇಳಿದೆ "ಈ ಪರೀಕ್ಷೆಯಲ್ಲಿ ನಾವೀರ್ವರೂ ಜಯಶಾಲಿಗಳಾಗುತ್ತೇವೆ."

ಆರ್‌ವಿಲ್ಲೆ ಮತ್ತೆ ನಾಲ್ಕುವಾರ ಆನಂದದಿಂದ ಕಳೆಯಿತು. ಈ ಸಮಯದಲ್ಲಿ ಆಸ್ಪತ್ರೆಗೆ ಭೇಟಿ ನೀಡಿದ ಅನೇಕರು ಅರ್ಬುದ ರೋಗಕ್ಕೆ ಬಲಿಯಾದ ಇದನ್ನು ನೋಡಿ ದೇವರ ಸೃಷ್ಟಿಯಲ್ಲಿ ಎಲ್ಲ ಜೀವಿಗಳಲ್ಲಿಯೂ ಕೆಲವು ಸಾಮಾನ್ಯಗುಣಗಳಿದ್ದು ಅವು ಒಬ್ಬರನ್ನೊಬ್ಬರನ್ನು ಬಂಧಿಸಿಡುತ್ತದೆ ಎಂಬುದನ್ನು ಮನಗೊಂಡರು. ಬಹಳ ಹೆಚ್ಚೆಂದರೆ ಜೀವನದ ಅಂತಿಮ ಎಲ್ಲೆ—ಸಾವು; ನಾವೆಲ್ಲರೂ ಸಾಯಲೇಬೇಕು. ಆದ್ದರಿಂದ ಮುಖ್ಯವಾದುದ್ದೆಂದರೆ ಜೀವನವನ್ನು ಹೇಗೆ ಸಾಗಿಸಿದ ಎಂಬುದು. ಇಲ್ಲಿ ಆರ್‌ವಿಲ್ಲೆ ತನ್ನ ಇಹಜೀವನವನ್ನು ಸಂಪೂರ್ಣವಾಗಿ ಅನುಭವಿಸುತ್ತಿತ್ತು.

ಪ್ರತಿದಿನ ಆರ್‌ವಿಲ್ಲೆಗೆ ನನ್ನ ಚಿಕಿತ್ಸಾ ಕೊಠಡಿಯಲ್ಲಿ ಕುಳಿತುಕೊಳ್ಳಲು ಅನುವು ಮಾಡಿದೆ. ಅಲ್ಲಿ ಅದು ಚಿಕಿತ್ಸಾಲಯದ ಚಟುವಟಿಕೆಗಳನ್ನೆಲ್ಲಾ ಗಮನಿಸುತ್ತಿತ್ತು. ತನ್ನ ಪ್ರೀತಿಯ ನಾಯಿಯನ್ನು ಕಂಡು ಆರ್‌ವಿಲ್ಲೆ "ಕೀ—ಹೂ....ಕೀ—ಹೂ" ಎಂದು ಚುಡಾಯಿಸುತ್ತಿತ್ತು. ನಾನು ಆಸ್ಪತ್ರೆಯಲ್ಲಿ ವೇಳೆ ಮೀರಿದ ಮೇಲೆ ಕೆಲಸಮಾಡುತ್ತಾ ಕುಳಿತಿದ್ದರೆ, ಆರ್‌ವಿಲ್ಲೆ ನನ್ನ ಟೇಬಲಿನ ಮೇಲೆ ಕುಳಿತು ನಾನು ಬರೆದ ಹಾಳೆಗಳ ಮೇಲೆಲ್ಲಾ ಕಣ್ಣಾಡಿಸುತ್ತಿತ್ತು.

ಆಗಸ್ಟ್ ಮಾಸದ ಒಂದು ಮುಂಜಾನೆ ಆಸ್ಪತ್ರೆಗೆ ಬಂದ ನನಗೆ, ಕರೆನ್ "ಆರ್‌ವಿಲ್ಲೆ ಸ್ಥಿತಿ ವಿಷಮಿಸಿರುವ ಹಾಗೆ ಕಾಣಿಸ್ತಿದೆ. ಅದರ ಕಣ್ಣುಗಳು ಕಳೆಗುಂದಿವೆ ರೂಢಿಯಂತೆ ಅದು ಕಲರವ ಮಾಡುತ್ತಿಲ್ಲ" ಎಂದಳು.

ಅಪಾಯ ಗ್ರಹಿಸಿದ ನಾನು, ಆರ್‌ವಿಲ್ಲೆಯ ಪಂಜರದ ಬಳಿ ಧಾವಿಸಿದೆ. ಅದರ ದೃಷ್ಟಿ ಶೂನ್ಯದಲ್ಲೆಲ್ಲೋ ನೆಟ್ಟಿತ್ತು. ಯಾವುದರೆಡೆಯೋ ಹರಿದಿದ್ದ ಅದರ ನೋಟ ನನಗೆ ಗೋಚರಿಸುತ್ತಿರಲಿಲ್ಲ. ಆಹಾರವನ್ನು ತಿನ್ನಿಸಲು ಕೈನೀಡಿದೆ. ಮುಟ್ಟಲಿಲ್ಲ. ತನ್ನ ಸಾವು ಸಮೀಪಿಸುತ್ತಿದೆ ಎನ್ನುವುದು ಆರ್‌ವಿಲ್ಲೆಗೆ ಅರಿವಾಗಿದೆ ಎಂಬ ಅನುಮಾ

ತತ್‌ಕ್ಷಣ ನನಗೆ ಹೊಳೆಯಿತು. ನಾನು ಮನಸ್ಸಿನಲ್ಲಿ ದೈವೇಚ್ಛೆ ಇದ್ದಂತೆ ಆಗಲಿ ಎಂದುಕೊಂಡೆ.

ಹಗಲಿಡೀ ಅದನ್ನು ಪರೀಕ್ಷಿಸುತ್ತಾ ಅದರ ಪಂಜರದ ಸುತ್ತಾ ಸುತ್ತಾಡುತ್ತಿದ್ದೆ. ಪ್ರಾರಂಭಕ್ಕೆ ಅದು ಕ್ರೂರ ವಿಧಿಯಿಂದ ಪಾರಾದಂತೆ ಕಂಡಿತು. ಆದರೆ ಅಂದೇ ಸಂಜೆಯ ವೇಳೆಗೆ ಅದರ ಸ್ಥಿತಿ ಶೀಘ್ರವಾಗಿ ಉಲ್ಬಣಿಸಿತು. ಸಂಜೆ ಆಸ್ಪತ್ರೆಯ ಬಾಗಿಲು ಮುಚ್ಚಿ ಮನೆಗೆ ಹೊರಡಲು ಸಿದ್ಧಳಾಗುತ್ತಿದ್ದ ಕರೆನ್‌ಳಿಗೆ "ನಾನು ಇನ್ನೂ ಸ್ವಲ್ಪ ಹೊತ್ತು ಇದ್ದು ಬರುವೆ. ಇನ್ನೂ ಅನೇಕ ಚಾರ್ಟ್‌ಗಳನ್ನು ಭರ್ತಿ ಮಾಡಬೇಕಾಗಿದೆ. ನೀನು ಹೋಗು, ನಾಳೆ ಬೆಳಗ್ಗೆ ಭೇಟಿಯಾಗೋಣ" ಎಂದು ಒಂದು ಸದುದ್ದೇಶದ ಸುಳ್ಳನ್ನು ಹೇಳುವಾಗ ನನ್ನ ಕಣ್ಣುಗಳು ಅವಳ ಕಣ್ಣುಗಳನ್ನು ಎದುರಿಸಲಾರದೇ ಹೋದವು.

ಕರೆನ್ ನಿರ್ಗಮಿಸಿದ ಅನಂತರ ನನ್ನ ದೃಷ್ಟಿ ಆರ್‌ವಿಲ್ಲೆಯ ಕಡೆ ತಿರುಗಿತು. ಇನ್ನು ಮಹಾಸಾಗರದ ಮೇಲೆ ಅದರ ಚೈತನ್ಯದಾಯಕ ಗಗನದಾರಾಟ ನಿಂತಂತೆ. ಒಂಟಿಯಾಗಿ ಅದನ್ನು ಅಲ್ಲಿ ಬಿಟ್ಟು ಮನೆಗೆ ಹೋಗಲು ಮನಸ್ಸುಬಾರದೆ ಪಂಜರದ ಬಳಿಯೇ ಕುಳಿತೆ. ಆಗಸ್ಟ್ ತಿಂಗಳ ಆ ಸೆಕೆಗಾಲದ ರಾತ್ರಿಯಲ್ಲಿ ಆರ್‌ವಿಲ್ಲೆ ಸತ್ತಾಗ ನಾನು ಅದರ ಪಕ್ಕದಲ್ಲೇ ಇದ್ದೆ.

ಗೂಬೆ ಮತ್ತು ಮಿಸೆಸ್ ಮೊಸೇಲಿ

ನಾನು ನಾಯಿಯೊಂದಕ್ಕೆ ಶಸ್ತ್ರಚಿಕಿತ್ಸೆ ಮಾಡುತ್ತಿದ್ದೆ. "ಒಬ್ಬ ಹೆಂಗಸು ಗೂಬೆಯೊಂದನ್ನು ತಂದಿದ್ದಾಳೆ. ಅದಕ್ಕೆ ತನ್ನ ಕಾರಿನಿಂದ ಢಿಕ್ಕಿ ಹೊಡೆದಳಂತೆ. ನೀವೊಂದು ಸಾರಿ ಅದನ್ನು ನೋಡಬೇಕಂತೆ" ಎಂದು ಕರೆನ್ ಹೇಳಿದಳು. "ಇನ್ನೊಂದು ೧೫ ನಿಮಿಷ ಅಂತ ಹೇಳು" ಎಂದೆ. ಕರೆನ್ ನಿರ್ಗಮಿಸಿದಳು. ನಾನು ನನ್ನ ಕಾರ್ಯದಲ್ಲಿ ಪುನಃ ಮಗ್ನನಾದೆ. ಐದು ನಿಮಿಷ ಉರುಳಿತು.

ಕರೆನ್ ಪುನಃ ಒಳಗೆ ಇಣುಕಿದಳು. ಮುಖದಲ್ಲಿ ಕಿರುನಗೆ ಸೂಸುತ್ತಾ "ಮಿಸೆಸ್ ಮೊಸೇಲಿ ಆ ಗೂಬೆ ಬಗ್ಗೆ ಹುಚ್ಚುಚ್ಚಾಗಿ ಆಡುತ್ತಿದ್ದಾಳೆ, ಡಾಕ್ಟರ್ ಫಾಸ್ಟರ್. ಬೇಗ ಬರುತ್ತೀರಾ ?" ಎಂದು ಹೇಳಿದಳು.

ನಾನು ನಾಯಿಗೆ ಸುಸೂತ್ರವಾಗಿ ಶಸ್ತ್ರಚಿಕಿತ್ಸೆ ಮಾಡಿ ಮುಗಿಸಿ ಹೊರಬಂದೆ. ಮೊಸೇಲಿ ಕಣ್ಣಾಲಿ ತುಂಬಿತ್ತು. ಕಡಿಮೆ ಎಂದರೂ ೮೦ ವರ್ಷ ವಯಸ್ಸಿನ ಈ ವೃದ್ಧೆ ನನ್ನನ್ನು ಹೆಚ್ಚು ಆಕರ್ಷಿಸಿದರೂ ನಾನು ಸಹಾಯ ಮಾಡಲಾಗಲಿಲ್ಲ. ಗುಂಗುರು ಬಿಳಿ ತಲೆಗೂದಲು. ತೀಕ್ಷ್ಣವಾದ ನೀಲಿ ಕಣ್ಣುಗಳು ಕನ್ನಡಕದೊಳಗಿಂದ ಮಿನುಗುತ್ತಿದ್ದವು. ಎದೆಯ ಮೇಲೆ ಎದ್ದು ಕಾಣುವಂತೆ "ಮುತ್ತಜ್ಜಿ" ಎಂಬ ಬರಹ ಅಚ್ಚೊತ್ತಿದ್ದ ತೆಳು ನೀಲಿ ಬಣ್ಣದ ಟಿ ಶರ್ಟ್ ಮತ್ತು ನೀಲಿ ಬಣ್ಣದ ಟೆನ್ನಿಸ್ ಷೂ ಧರಿಸಿದ್ದ ಅವಳನ್ನು ನೋಡಿ ಮೆಚ್ಚಿಗೆಯಾಯಿತು.

ಆಕೆ ಬಿಕ್ಕಳಿಸುತ್ತಾ "ಓ! ಡಾಕ್ಟರ್ ಫಾಸ್ಟರ್, ನನಗೆ ತುಂಬಾ ವ್ಯಥೆಯಾಗುತ್ತಿದೆ. ನನ್ನ ಈ ಐವತ್ತು ವರ್ಷಗಳ ಡ್ರೈವಿಂಗ್‌ನಲ್ಲಿ ಪ್ರಾಣಿಗಳಿಗೆ ಢಿಕ್ಕಿ ಹೊಡೆದದ್ದು

ಇದೇ ಪ್ರಥಮಬಾರಿಗೆ. ನೀವು ಇದನ್ನು ಹೇಗಾದರೂ ಬದುಕಿಸಲೇಬೇಕು" ಎಂದ ಮೆಲುಧ್ವನಿಯಲ್ಲಿ ಉಕ್ಕಿ ಬರುತ್ತಿದ್ದ ಉದ್ವೇಗವನ್ನು ನುಂಗಿಕೊಳ್ಳುತ್ತ.

ಒಂದು ತರದಲ್ಲಿ ಇದು ಅವಳ ಕಟ್ಟಾಜ್ಞೆಯಂತೆ ತೋರಿತು. ಟೇಬಲಿನ ಮೇ ಅಂಗಾತ ನಿಸ್ತೇಜವಾಗಿ, ಮೃತವಾಗಿರುವಂತೆ ಕಾಣುವ ಗೂಬೆಯನ್ನು ಪರೀಕ್ಷಿಸ ಕೈಗೆತ್ತಿಕೊಂಡೆ. ಆಶ್ಚರ್ಯವೆಂದರೆ ಅದರ ಹೃದಯದಲ್ಲಿ ಮಿಡಿಯುತ್ತಿದ್ದ ಹೃದ ಸ್ಪಂದನ ಮಂದವಾಗಿ ಕೇಳಿಸಿತು. ಅಕ್ಷಿಪಟಲದ ಪ್ರತಿಫಲನ ಪರೀಕ್ಷಿಸಲು ಅದರ ವಿಶಾ ವಾದ ಕೆಂಗಂದು ಬಣ್ಣದ ಕಣ್ಣೊಂದನ್ನು ಅಗಲಿಸಿದೆ. ಕಣ್ಣು ರೆಪ್ಪೆ ನಿಧಾನವಾಗಿ ಮು ಕೊಂಡಿತು. "ಬದುಕಿದೆ, ಆದರೆ ಪ್ರಜ್ಞಾಹೀನವಾಗಿದೆ" ಎಂದೆ.

ಅದರ ಬೂದು ಕಂದು ಬಣ್ಣದ ಪುಕ್ಕ ಹಾಗೂ ಅದರ ಹೊಟ್ಟೆ ಭಾಗದಲ್ಲಿ ಹೊ ಅಪರೂಪದ ಬಿಳುಪಿಗೆ ಮಾರು ಹೋದ ಮಿಸೆಸ್ ಮೊಸೇಲಿ ಅದನ್ನು ಪ್ರೀತಿಯಿ ನೇವರಿಸಿದಳು. "ತುಂಬಾ ಮುದ್ದಾಗಿದೆ. ನೀವು ಇದನ್ನು ಬದುಕಿಸುತ್ತೀರೆಂಬ ಭರ ನನಗಿದೆ" ಎನ್ನುತ್ತ ನಿಟ್ಟುಸಿರುಬಿಟ್ಟಳು.

"ನನ್ನಿಂದಾಗುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ" ಎಂದು ಭರವಸೆಯಿತ್ತ ಮಿಸೆಸ್ ಮೊಸೇಲಿ ನನಗೆ ವಿದಾಯ ಹೇಳಿ ಹೊರಟಳು.

ಮಿದುಳು ಊತ ತಡೆಗಟ್ಟಲು ರೋಗಿಗೆ ಆ್ಯಂಟಿಬಯೋಟಿಕ್ಸ್ ಹಾಗೂ ಒಂ ಸ್ಟೆರಾಯಿಡ್ ನೀಡಿದೆ. ಪಕ್ಷಿಯನ್ನು ಪಂಜರದೊಳಗೆ ಬಿಟ್ಟೆ. ನನ್ನ ಕೈಲಿ ಸಾಧ್ಯವಾ ದನ್ನು ಮಾಡಿದ ನಾನು ಆ ಪಕ್ಷಿಯನ್ನು ಕುರಿತು "ಮಿಸೆಸ್ ಮೊಸೇಲಿಗೋಸ್ಕರವಾದ ಚೇತರಿಸಿಕೋ" ಎಂದು ಹರಸಿದೆ. ಆದರೆ ಈ ನನ್ನ ರೋಗಿ ಮುಂಜಾನೆವರೆಗೂ ಬದುಕಿ ತ್ತಾನೆಂಬ ಭರವಸೆ ಮಾತ್ರ ನನ್ನಲ್ಲಿ ಇರಲಿಲ್ಲ.

ನನ್ನ ಭರವಸೆಗೂ ಮೀರಿದ ಆಶ್ಚರ್ಯವೆಂದರೆ ಅದು ಬದುಕಿತ್ತು! ಆದರೆ ನಿಲ್ಲ ತ್ರಾಣವಿರಲಿಲ್ಲ. ನನ್ನೆಡೆಗೆ ನೋಡಿ ತನ್ನ ಹೊಳೆವ ವಿಶಾಲವಾದ ಕಣ್ಣುಗಳ ಮಿಟುಕಿಸಿತು. ಕಾಲು ಅಲ್ಲಾಡಿಸಿತು. ಭಲೆ!

ಒಂದು ಗಂಟೆ ಕಳೆದಿರಬಹುದು. ಮಿಸೆಸ್ ಮೊಸೇಲಿ ಆಸ್ಪತ್ರೆಯ ಹೆಬ್ಬಾಗಿಲಿ "ನಾನು ಸ್ಪ್ಯಾನ್‌ಫೀಲ್ಡ್‌ನನ್ನು ನೋಡಲು ಬಂದಿರುವೆ" ಎಂದು ಕರೆನ್‌ಳಿಗೆ ಹೇಳುತ ಒಳ ನುಗ್ಗಿದಳು. ಚಕಿತಗೊಂಡ ಕರೆನ್ "ಯಾರು ಸ್ಪ್ಯಾನ್‌ಫೀಲ್ಡ್ ?" ಎಂ ಕೇಳಿದಳು. "ಅದೇ ನನ್ನ ಮುದ್ದು ಮರಿ ಗೂಬೆ. ಅದಕ್ಕೆ ನಾನಿಟ್ಟಿರೋ ಹೆಸರು ಅದು ಅವಳು ತೊಟ್ಟಿದ್ದ ಕಡುಗೆಂಪು ಬಣ್ಣದ ಶರ್ಟ್‌ಗೆ ಹೋಲುವ ಕ್ಯಾನ್‌ವಾಸ್ ಬ್ಯಾಗಿ ಒಂದು ಪೊಟ್ಟಣ ಹೊರತೆಗೆದು "ಇಲ್ಲಿ ನೋಡು, ಸಿಹಿ ಉಂಡೆ! ನಿನಗೆ ಮತ್ತು ಡ ಫಾಸ್ಟರ್‌ಗೆ" ಎಂದಳು.

ಅದೃಷ್ಟಶಾಲಿ ಸ್ಪ್ಯಾನ್‌ಫೀಲ್ಡ್ ಇದ್ದ ಚಿಕಿತ್ಸಾ ಕೊಠಡಿಗೆ ಕರೆನ್ ಜೊತೆಗ ಮಿಸೆಸ್ ಮೊಸೇಲಿ ಒಳಬಂದಳು. ಮಿಸೆಸ್ ಮೊಸೇಲಿ ಪಕ್ಕದಲ್ಲಿದ್ದ ಕುರ್ಚಿಯೊಂದ ಎಳೆದುಕೊಂಡು ಪಂಜರದ ಬಳಿ ಕುಳಿತು, ತಾನು ತಂದಿದ್ದ ಸಿಹಿಉಂಡೆ ತಿನ್ನಲು ಪ್ರಾರ ಸಿದಳು. ಉಂಡೆಯನ್ನು ಬಾಯಾಡಿಸುತ್ತಾ ಮಧ್ಯೆ, ಮಧ್ಯೆ ಅವಳು ಸ್ಪ್ಯಾನ್‌ಫೀಲ ಶಾನೋರ್ವಳೇ ಮುದ ನೀಡುವವಳಂತೆ ಅದನ್ನು ಮುದ್ದು ಮಾಡುತ್ತಾ ತಾನು ಸ

ಕಾಲ ಅದಕ್ಕೆ ಒಡನಾಡಿಯಾಗಿ ಇರುವೆನೆಂದು ಭರವಸೆ ನೀಡುತ್ತಿದ್ದಳು. ವಿಚಿತ್ರವೆಂದರೆ ಸ್ವಾನ್‌ಫೀಲ್ಡ್ ಅವಳ ಎಲ್ಲ ಮಾತುಗಳನ್ನೂ ಮನಸ್ಸಿಟ್ಟು ಕೇಳುತ್ತಿರುವಂತೆ ಅವಳತ್ತಲೇ ನೆಟ್ಟನೋಟದಿಂದ ನೋಡುತ್ತಿತ್ತು.

ಪ್ರತಿದಿನ ಮಿಸೆಸ್ ಮೊಸೇಲಿ, ಸ್ವಾನ್‌ಫೀಲ್ಡ್‌ನನ್ನು ಭೇಟಿ ಮಾಡುವುದು, ಪ್ರೋತ್ಸಾಹದ ನುಡಿ ನುಡಿಯುವುದು ಪ್ರೀತಿಯಿಂದ ಅದರ ತಲೆ ತಟ್ಟುವುದು ನಡೆದಿತ್ತು. ಒಂದು ವಾರ ಕಳೆದಿತ್ತು. "ಸ್ವಾನ್‌ಫೀಲ್ಡ್ ಈಗ ಚೇತರಿಸಿಕೊಳ್ಳುತ್ತಿದ್ದಾನೆ. ನೀವು ಅವನನ್ನು ಬಿಡುಗಡೆ ಮಾಡುವ ದಿನ ಹೇಳಿ, ಅಂದು ನಾನು ಇಲ್ಲಿ ಇರಲೇ ಬೇಕು" ಎಂದಳು.

ನಾನು ಸ್ಪಷ್ಟವಾಗಿ ಹೇಳಿದೆ, ತಲೆಯಲ್ಲಾಡಿಸುತ್ತ "ಸ್ವಾನ್‌ಫೀಲ್ಡ್‌ನ ಸ್ನಾಯುಗಳಿಗೆ ಒಂದೆರಡು ವಾರದ ಮಾಲೀಷ್ ಅಗತ್ಯವಿದೆ. ಯೋಚನೆ ಮಾಡಬೇಡಿ. ನನ್ನ ಸಹೋದರ ರೇಸ್ ಬೇಸಿಗೆ ರಜೆಯಲ್ಲಿ ನನಗೆ ಸಹಾಯಮಾಡಲು ನಾಳೆ ಇಲ್ಲಿಗೆ ಬರುತ್ತಿದ್ದಾನೆ. ಅವನು ಪಶುವೈದ್ಯ ವಿದ್ಯಾರ್ಥಿ. ಪಕ್ಷಿಗಳಿಗೆ ಮಾಲೀಷ್ ಮಾಡುವುದರಲ್ಲಿ ನಿಸ್ಸೀಮ."

ಮಿಸೆಸ್ ಮೊಸೇಲಿ ನನ್ನನ್ನು ಬಿಗಿದಪ್ಪಿದಳು. ಸ್ವಾನ್‌ಫೀಲ್ಡ್‌ಗಾಗಿ ನಾನು ಓರ್ವ ವಿಶೇಷ ತಜ್ಞನನ್ನು ಕರೆಸುತ್ತಿದ್ದೇನೆಂದು ಆಕೆ ಭಾವಿಸಿದ್ದಾಳೆಂದು ನನಗನಿಸಿತು.

ಮಿಸೆಸ್ ಮೊಸೇಲಿಯೊಂದಿಗೆ ರೇಸ್ ತುಂಬಾ ಹೊಂದಿಕೊಂಡಿದ್ದ. ಈಗ ಆಕೆ ಅವನಿಗಾಗಿಯೂ ತಾಜಾ ಸಿಹಿ ಉಂಡೆಗಳನ್ನು ತಂದುಕೊಡುತ್ತಾ "ಹೇ ಯಂಗ್ ಮ್ಯಾನ್, ನಿನ್ನ ಸ್ಟೈಲ್ ನನಗೆ ತುಂಬಾ ಹಿಡಿಸಿತು" ಎನ್ನುತ್ತಿದ್ದಳು. ರೇಸ್ ಅವಳನ್ನು ಚುಡಾಯಿಸುವುದು, ತಮಾಷೆಮಾಡುವುದು, ಮಾಡುತ್ತಿದ್ದ. ಅವಳಂತೂ ರೇಸ್‌ನ ಕಪ್ಪು ಕಣ್ಣುಗಳಿಗೆ ಮಾರುಹೋಗಿದ್ದಳು.

ಅನಂತರ ಸ್ವಾನ್‌ಫೀಲ್ಡನಿಗೆ ನೀಡಿದ ಚಿಕಿತ್ಸೆ ಸ್ವಲ್ಪ ಕೈತಪ್ಪಿದಂತೆ ಕಂಡಿತು. ಒಂದು ದಿನ ನಾನು ಬೇಟೆನಾಯಿಯೊಂದಕ್ಕೆ ಕಿತ್ತುಬಂದಿದ್ದ ಚರ್ಮದ ಭಾಗಕ್ಕೆ ಹೊಲಿಗೆ ಹಾಕುತ್ತಿದ್ದೆ. ಒಳಗೆ ಬಂದ ರೇಸ್‌ನ ಮುಖದಲ್ಲಿ ಮ್ಲಾನತೆ ತುಂಬಿತ್ತು. ಮೇಲುಧ್ವನಿಯಲ್ಲಿ "ಸ್ವಾನ್‌ಫೀಲ್ಡ್" ಎಂದು ಗೊಣಗಿದ.

"ಏನಾಯಿತು ಅದಕ್ಕೆ? ಆರೋಗ್ಯವಾಗಿಲ್ಲವೇ?"

"ತುಂಬಾ ಚೆನ್ನಾಗಿದೆ! ನನ್ನ ಕೈ ಜಾರಿ ಅದು ಬಹಳ ದೂರಕ್ಕೆ ಹಾರಿ ಹೋಯಿತು!" ರೇಸ್ ಕಷ್ಟಪಟ್ಟು ಹೇಳಿದ.

"ಓಹ್! ಇಲ್ಲ! ಈ ಹೊಡೆತವನ್ನು ಮಿಸೆಸ್ ಮೊಸೇಲಿ ಸಹಿಸಲಾರಳು. ಅವಳು ಸ್ವಾನ್‌ಫೀಲ್ಡ್‌ನ ಹಾರಾಟವನ್ನು ನೋಡುವುದಕ್ಕಾಗಿಯೇ ತನ್ನ ಕ್ಯಾಲಿಫೋರ್ನಿಯಾ ಪ್ರವಾಸವನ್ನು ಮುಂದೂಡಿದ್ದಾಳೆ."

"ನನಗೆ ಎಲ್ಲಾ ಗೊತ್ತಿದೆ. ಏನೂ ಹೇಳಬೇಡಿ" ಎನ್ನುತ್ತಾ ನನ್ನ ಸಹೋದರ ದಡದಡನೆ ಹೊರಟುಹೋದ.

ಮರುದಿನ ಮುಂಜಾನೆ ಹತ್ತುಗಂಟೆ ಸಮಯಕ್ಕೆ ಸರಿಯಾಗಿ ಚಿಕಿತ್ಸಾಲಯದ ಹೆಬ್ಬಾಗಿಲಲ್ಲಿ ಸಂಭ್ರಮದಿಂದ ಮಿಸೆಸ್ ಮೊಸೇಲಿ ಕಾಣಿಸಿಕೊಂಡಳು. ಎರಡೂ

ಕೈಯಲ್ಲಿ ತಾಜಾ ಸಿಹಿ ಉಂಡೆ ತುಂಬಿದ ಕೈಚೀಲ ಹಿಡಿದಿದ್ದಳು. ನೇರವಾಗಿ ಸ್ಪ್ಯಾನ್‌ಫೀಲ್ಡ್‌ನನ್ನು ನೋಡಲು ಚಿಕಿತ್ಸಾ ಕೊಠಡಿಯತ್ತ ನಡೆದಳು. ಆ ಕ್ಷಣದಲ್ಲಿ ನಾನು ಅಲ್ಲೊಂದು ಆಸ್ಫೋಟವನ್ನು ನಿರೀಕ್ಷಿಸಿದ್ದೆ. ಆದರೆ ಅಂಥಾದ್ದೇನೂ ಆಗಲಿಲ್ಲ. ಪರಿಶೀಲಿಸಲು ನಾನು ಒಳಗೆ ಹೋದೆ. ಪಂಜರದೊಳಗಿದ್ದ ಮಂಕಾದ ಗೂಬೆಯತ್ತ ಮಿಸೆಸ್ ಮೊಸೇಲಿ ಕಣ್ಣು ಹಾಯಿಸಿದ್ದಳು. ಅಂದು ಮುಂಜಾನೆ ಕಾರೊಂದು ಗೂಬೆಯೊಂದಕ್ಕೆ ಢಿಕ್ಕಿ ಹೊಡೆದಿತ್ತು. ರೇಸ್ ಅದನ್ನು ಆಗಲೇ ಪಂಜರದೊಳಕ್ಕೆ ಸೇರಿಸಿ ಬಿಟ್ಟಿದ್ದ! ಮಿಸೆಸ್ ಮೊಸೇಲಿ ಇದನ್ನೇ ತನ್ನ ಸ್ಪ್ಯಾನ್‌ಫೀಲ್ಡ್ ಎಂದು ನಂಬಿದ್ದಳು.

ರೇಸ್ ಅನಂತರ ಕೊಠಡಿಯ ಚಿಲಕ ಹಾಕಿ "ಹೇ, ಮಿಸ್ಸ್ ಮೊಸೇಲಿ, ನಿನ್ನ ಸ್ಪ್ಯಾನ್‌ಫೀಲ್ಡ್ ಚೆನ್ನಾಗಿ ಚೇತರಿಸಿಕೊಳ್ಳುತ್ತಿದೆ. ಆದರೆ ಈ ದಿನ ಮುಂಜಾನೆ ಮಾಲೀಷ್ ಮಾಡುವಾಗ ಅದಕ್ಕೆ ಇನ್ನೂ ಕೆಲವು ದಿನಗಳ ಚಿಕಿತ್ಸೆಯ ಅಗತ್ಯವಿದೆ ಎನಿಸಿತು. ರೆಕ್ಕೆಯ ಸ್ನಾಯುಗಳನ್ನು ಇನ್ನೂ ಸದೃಢಗೊಳಿಸಬೇಕು. ಪೂರ್ಣವಾಗಿ ಗುಣವಾಗದೇ ಅದನ್ನು ಬಿಡುಗಡೆ ಮಾಡಲು ನೀನು ಇಷ್ಟಪಡುವುದಿಲ್ಲ ಅಲ್ಲವೆ?" ಎಂದು ಗೂಬೆಯನ್ನು ತೋರಿಸುತ್ತಾ ಹಸನ್ಮುಖದಿಂದ ನುಡಿದ. ಮಿಸೆಸ್ ಮೊಸೇಲಿ ನಕಲಿ ಸ್ಪ್ಯಾನ್‌ಫೀಲ್ಡ್‌ನನ್ನು ಅತಿಶ್ರದ್ಧೆಯಿಂದ ನೋಡಿದಳು. ದಟ್ಟವಾದ ರೆಕ್ಕೆ ಪುಕ್ಕಗಳೊಳಗಿಂದ ಅದರ ಸ್ನಾಯುಗಳನ್ನು ನೋಡುವುದು ಪ್ರಯಾಸದ ಕೆಲಸವೇ. ಆದರೆ ಮಿಸೆಸ್ ಮೊಸೇಲಿ ರೇಸ್‌ನ ಚಾತುರ್ಯಕ್ಕೆ ಒಳಗಾಗಿದ್ದಳು. "ರೇಸ್, ನನಗೆ ನೀನು ಹೇಳುತ್ತಿರುವುದು ಗೊತ್ತಾಯಿತು. ಒಟ್ಟಿನಲ್ಲಿ ಅದು ಹೆಚ್ಚು ದಿನ ಬದುಕೋ ಹಾಗೆ ಮಾಡಬೇಕು. ನನ್ನ ಸ್ಪ್ಯಾನ್‌ಫೀಲ್ಡ್‌ಗೆ ಅತ್ಯುತ್ತಮ ಮಟ್ಟದ ಚಿಕಿತ್ಸೇ ಕೊಡಬೇಕು" ಎನ್ನುತ್ತಾ ರೇಸ್ ಕೈಗೆ ಸಿಹಿ ಉಂಡೆ ತುಂಬಿದ ಕೈ ಚೀಲ ಕೊಟ್ಟಳು.

ಮೂರು ವಾರಗಳ ಬಳಿಕ ರೇಸ್ ಮತ್ತು ಮಿಸೆಸ್ ಮೊಸೇಲಿ ಸ್ಪ್ಯಾನ್‌ಫೀಲ್ಡ್-II ಅನ್ನು ನಿಗಧಿತ ವೇಳೆಯಲ್ಲಿ ಹೊರ ಪ್ರಪಂಚಕ್ಕೆ ಹಾರಿಬಿಟ್ಟರು. ಈ ಸಂತೋಷ ಸಂಭ್ರಮದ ಸಮಯದಲ್ಲಿ ಮಿಸೆಸ್ ಮೊಸೇಲಿ ರೇಸ್‌ನನ್ನು ಬಾಚಿತಬ್ಬಿ ಅವನ ಕೆನ್ನೆಗೆ ಮುತ್ತಿಟ್ಟಳು. ಈ ಘಟನೆ ಅಪೂರ್ವವಾಗಿತ್ತು.

ಒಂದು ದಿನ ಸಂಜೆ ಆಸ್ಪತ್ರೆಯಲ್ಲಿ ತುಂಬಾ ಒತ್ತಡದ ಕೆಲಸ ಮುಗಿಸಿ ಮನೆಗೆ ಮರಳಿದೆ. ಲಿಂಡಾಳನ್ನು ಕುರಿತು "ನಾವಿನ್ನೂ ಸ್ವಲ್ಪ ಶ್ರಮಪಡಬೇಕಾಗಿದೆ. ನಮ್ಮ ಬಳಿ ಆಸ್ಪತ್ರೆಯಲ್ಲಿ ೧೭ ಪಂಜರಗಳಿವೆ. ಅವುಗಳಲ್ಲಿ ೧೪ ಈ ದಿನ ಭರ್ತಿ ಆಗಿವೆ" ಎಂದೆ.

"ಕೆಲವನ್ನು ಬೇರೆ ಕಡೆಗೆ ಸಾಗಾಕಲು ಆಗುವುದಿಲ್ಲವೆ?"

"ಎಲ್ಲಿಗೆ?" ಕಹಿಯಾಗಿ ಕೇಳಿದೆ. "ಇಲ್ಲಿಂದ ಹತ್ತಿರದಲ್ಲಿರುವ ವನ್ಯಜೀವಿ ಕೇಂದ್ರ ಕೂಡ ಇರುವುದು ೨೮೦ ಕಿ. ಮೀ. ದೂರದಲ್ಲಿ. ಜೊತೆಗೆ ಅವರು ಬೇಟೆಯ ಪಕ್ಷಿಗಳನು ಮಾತ್ರ ಸೇರಿಸಿಕೊಳ್ಳುತ್ತಾರೆ."

ಕ್ಷಣ ಹೊತ್ತು ನಾವು ಮೌನವಾದೆವು. ಕೊನೆಗೆ ಲಿಂಡಾ "ಈಗ ನಾವೇನ್ಮಾಡೋಣಾ ?" ಎಂದಳು.

"ಆಯಿತು. ಇವತ್ತು ಯೋಚನೆ ಮಾಡ್ತೀನಿ. ಬರೀ ಯೋಚನೆ ಶಿಳಿತಾ? ವನ್ಯಜೀವಿಗಳ ರಕ್ಷಣೆಗೆ, ಏತಕ್ಕೆ ನಾವು ಲಾಭವಿಲ್ಲದ ಸಂಸ್ಥೆಯೊಂದನ್ನು ಕಟ್ಟಬಾರದು."

"ಉದ್ದೇಶವೇನೊ ತುಂಬಾ ಸೊಗಸಾಗಿದೆ."

"ನಿಧಿ ಎತ್ತಬಹುದು. ಹಾಗೂ ಸದಸ್ಯರನ್ನು ಆಕರ್ಷಿಸಬಹುದು. ಜೊತೆಗೆ ಈ ಆಸ್ಪತ್ರೆಗೆ ಸೇರಿಕೊಂಡಂತೆ ಮತ್ತೊಂದನ್ನು ಕಟ್ಟಬಹುದು. ದುಬಾರಿ ವೆಚ್ಚ ತಗಲುವುದಿಲ್ಲ" ಎಂದೆ ನಾನು.

"ಫೆಂಟಾಸ್ಟಿಕ್!" ಲಿಂಡಾಳ ನೀಲಿ ಕಣ್ಣುಗಳು ಸಂಭ್ರಮದಿಂದ ಅರಳಿದವು.

ಈ ಅಪರೂಪ ವನ್ಯಜೀವಿ ಕೇಂದ್ರದ ಸಾಧ್ಯಾಸಾಧ್ಯತೆಯ ಬಗ್ಗೆ ಚರ್ಚಿಸುತ್ತಾ ರಾತ್ರಿ ಎರಡೂವರೆ ಗಂಟೆಯವರೆಗೆ ಎಚ್ಚರದಿಂದಿದ್ದೆವು. ಈ ಮಹತ್ತರವಾದ ಯೋಜನೆಯೆಡೆಗೆ ನಮ್ಮ ಆಲೋಚನೆ ಸಾಗಿತ್ತು.

೧೯೭೪ರ ಬೇಸಿಗೆಯ ಅಂತ್ಯದ ವೇಳೆಗೆ ಯೋಜನೆಯ ರೂಪುರೇಖೆ ಸಿದ್ಧವಾಯಿತು. ಕರ ವಿನಾಯಿತಿ ಸೌಲಭ್ಯ ಬಯಸಿ ಅರ್ಜಿ ಸಲ್ಲಿಸಿದೆವು. ಅದು ಮಂಜೂರಾಗಿ ನಮ್ಮ ಕೇಂದ್ರವು ಒಂದು ಕರ ವಿನಾಯಿತಿ ಪಡೆದ ಲಾಭವಿಲ್ಲದ ಸಂಸ್ಥೆ ಎಂಬ ಅರ್ಹತೆಯನ್ನು ಗಳಿಸಿತು. ನಾನು ನನ್ನ ಸಮಯ ಹಾಗೂ ವೈದ್ಯಕೀಯ ನೆರವನ್ನೆಲ್ಲ ಇದಕ್ಕೆ ಉಚಿತವಾಗಿ ಧಾರೆಯೆರೆದೆ. ಆಕಾಂಕ್ಷಿ ೩೦೦ ಸದಸ್ಯರನ್ನು ಒಗ್ಗೂಡಿಸಲಾಯಿತು. ಕಟ್ಟಡ ನಿರ್ಮಾಣಕ್ಕೆ ನಿಧಿ ಸಂಗ್ರಹಿಸತೊಡಗಿದೆವು.

ನಮ್ಮ ಈ ಕಾರ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ವಿರೋಧಿಗಳು ಇದ್ದಾರೆಂದು ತಿಳಿದು ನಾನು ಆಶ್ಚರ್ಯಪಟ್ಟೆ. ಈ ಯೋಜನೆಯನ್ನು ವಿರೋಧಿಸುವವರು ಬಗೆಬಗೆಯ ಕಾರಣಗಳನ್ನು ಮುಂದೊಡ್ಡುತ್ತಾ ಬಂದರು. ಅವುಗಳಲ್ಲಿ ಒಂದಂತೂ ಪುನಃ ಪುನಃ ತಲೆ ಎತ್ತುತ್ತಲೇ ಇದ್ದಿತು: ವನ್ಯಮೃಗಗಳ ಸಂರಕ್ಷಣೆಗೆ ನಾವು ಏನೂ ಮಾಡುತ್ತಿಲ್ಲವೆಂದು. ಅಪಾಯದಲ್ಲಿರುವ ವನ್ಯಜೀವಿಗಳನ್ನು ಸಂರಕ್ಷಿಸುವುದನ್ನು ಬಿಟ್ಟು ಒಂದು ವನ್ಯಜೀವಿಯನ್ನು ಸಂರಕ್ಷಿಸುವುದು ವನ್ಯಜೀವಿಗಳ ಸಮೂಹದಲ್ಲಿ ಒಟ್ಟಾರೆ ಅಷ್ಟು ಮುಖ್ಯವಲ್ಲವೆಂದು ನಾನು ಆಗಿಂದಾಗ್ಗೆ ಹೇಳುತ್ತಾ ಅದನ್ನು ಮನಗಂಡಿದ್ದೆ.

ಸಾರ್ವಜನಿಕ ಪ್ರತಿರೋಧದ ಜೊತೆಗೆ ವಿಸ್ಕಾನ್‌ಸಿನ್‌ನ ನೈಸರ್ಗಿಕ ಸಂಪನ್ಮೂಲ ಇಲಾಖೆಯ ಅಧಿಕಾರಶಾಹಿಯಿಂದಲೂ ನಾವು ಟೀಕೆಗಳನ್ನು ಕೇಳಬೇಕಾಯಿತು. ಅವರ ವನ್ಯಜೀವಿ ತಜ್ಞರು ನನಗೆ ಪತ್ರ ಬರೆಯುತ್ತಾ ಒಂದೊಂದು ವನ್ಯಮೃಗಗಳಿಗೆ ನಾವು ನೀಡುವ ಚಿಕಿತ್ಸೆಯು ಪ್ರಾಮುಖ್ಯತೆಯನ್ನು ಹೊರತುಪಡಿಸಿ ತಪ್ಪು ಕಲ್ಪನೆಯನ್ನು ಉಂಟುಮಾಡುತ್ತದೆ. ಆಸಕ್ತಿಯುಳ್ಳವರು ಅವುಗಳ ವಸತಿ ಮತ್ತು ಸಂತತಿಯ ಬಗ್ಗೆ ಗಮನಹರಿಸಬೇಕೇ ಹೊರತು ಒಂದು ಪಕ್ಷಿ ಅಥವಾ ಒಂದು ಪ್ರಾಣಿಯ ಬಗೆಗಲ್ಲ ಎಂದು ತಿಳಿಸಿದ್ದರು. ಸರ್ಕಾರದ ನಿಯಮದಲ್ಲಿ ಒಂದೊಂದು ಪ್ರಾಣಿಗೂ ರಕ್ಷಣೆ ಅಗತ್ಯ ಎಂದು ತಿಳಿಸಿರುವುದರಿಂದ ಅವರ ಈ ಟೀಕೆ ಸಕಾರಣವಲ್ಲವೆಂದು ನನಗೆ ಕಂಡು ಬಂದು ನಾನು ನನ್ನ ಅಭಿಪ್ರಾಯವನ್ನು ಅವರಿಗೆ ಹೇಳಿಯೂ ಆಯಿತು. ನನಗೆ ಅದೊಂದು ಕಹಿ ಹಾಗೂ ನಿರುತ್ಸಾಹದ ಸಮಯವಾಗಿತ್ತು.

ಶರತ್ಕಾಲದಲ್ಲಿ ಒಮ್ಮೆ ಕರೆನ್ ನನ್ನನ್ನೊಂದು ಪ್ರಶ್ನೆ ಕೇಳಿದಳು "ಡಾ|| ಫಾಸ್ಟರ್, ನೀವು ವನ್ಯಜೀವಿ ಚಿಕಿತ್ಸಾಲಯನ್ನು ಸ್ಥಾಪಿಸಿದ್ದಕ್ಕೆ ಪಶ್ಚಾತ್ತಾಪ ಪಡುವಿರೇನು? ಅಂದರೆ ಈ ಎಲ್ಲಾ ಪ್ರತಿರೋಧಗಳು ನಿಮ್ಮ ಭಾಗಕ್ಕೆ ಒಂದು ಬಗೆಯ ಮುಳ್ಳುಗಳಲ್ಲವೇ?"

ನಾನು ಕರೆನ್‌ಳೆಡೆಗೆ ಅರ್ಥಗರ್ಭಿತ ನೋಟ ಹರಿಸಿದೆ. ಅವಳ ಪ್ರಶ್ನೆಗೆ ಉತ್ತರಿಸು ವುದಕ್ಕೆ ಬದಲು "ಆ ನೀರಕ್ಕಿಯನ್ನು ಸರೋವರಕ್ಕೆ ಬಿಡಲು ಈ ದಿನ ನನ್ನ ಜೊತೆ ಬರುವೆಯಾ ?" ಎಂದು ಕೇಳಿದೆ.

ಇದೊಂದು ಜಲಚರ ಪಕ್ಷಿ. ಬಾತುಕೋಳಿಯ ಗಾತ್ರದಷ್ಟಿರುತ್ತದೆ. ನೀಳದೇಹದ ದಷ್ಟಪುಷ್ಟ ಕತ್ತಿನ, ಚೂಪಾದ ಕೊಕ್ಕಿನ ಪಕ್ಷಿ ಇದು. ಮುಂಜಾನೆ ಮತ್ತು ರಾತ್ರಿಯ ವೇಳೆ ಉಂಟುಮಾಡುವ ಭಾರಿ ಕಲರವಕ್ಕೆ ನೀರಹಕ್ಕಿ ಹೆಸರುವಾಸಿ. ಆಹಾರಕ್ಕಾಗಿ ನೀರಿನಲ್ಲಿ ೯೦ ಮೀಟರ್ ಆಳದವರೆಗೂ ಮುಳುಗಬಲ್ಲ ಇವು ಮುಳುಗುಹಾಕುವುದರಲ್ಲಿ ವಿಶೇಷ ಪರಿಣಿತ ಜಲಚರ ಪಕ್ಷಿ.

ಲೂನಾರ್ ಎಂದು ಕರೆಯಲ್ಪಡುವ ಈ ನೀರು ಹಕ್ಕಿಗೆ ಮೀನಿನ ಗಾಳದಿಂದಾದ ಗಾಯಕ್ಕಾಗಿ ಚಿಕಿತ್ಸೆ ನೀಡಿದ್ದೆವು. ಆ ಪ್ರದೇಶದಲ್ಲೇ ವಿಸ್ತಾರವಾದ ಟ್ರೌಟ್ ಸರೋವರಕ್ಕೆ ಕರೆನ್ ಮತ್ತು ನಾನು ಕಾರಿನಲ್ಲಿ ಹೊರಟೆವು. ನಾನು ಕಾರನ್ನು ನಿಲ್ಲಿಸಿದೆ. ಲೂನಾರ್ ಇದ್ದ ಪೆಟ್ಟಿಗೆಯನ್ನು ಕೆಳಗಿರಿಸಿದೆವು. ೪ ಕೆ. ಜಿ. ತೂಕದ ಈ ಲೂನಾರ್ ಪಕ್ಷಿ ನಾವು ಪೆಟ್ಟಿಗೆಯ ಮುಚ್ಚಳ ತೆರೆದಿದ್ದೇ ತಡ ಚಂಗನೆ ಹಾರಿ, ಸ್ಪಟಿಕದಂತೆ ತಿಳಿಯಾಗಿದ್ದ ಆ ಸರೋವರದ ನೀರಿನಲ್ಲಿ ಮುಳುಗಿತು.

ಲೂನಾರ್ ವೇಗವಾಗಿ ಈಜುತ್ತಾ, ಆಳಕ್ಕೆ ಮುಳುಗುವುದನ್ನು ನೋಡುತ್ತಾ ಸ್ವಲ್ಪ ಹೊತ್ತು ನಿಂತುಕೊಂಡೆವು. ಅಂದು ಅದು ನೀರಿನಲ್ಲಿ ಮುಳುಗುತ್ತ ನೂರಾರು ಅಡಿಗಳ ದೂರದಲ್ಲಿ ಮೇಲೇಳುತ್ತಾ ಅಂದಿನ ಸಂಜೆಯ ಪ್ರಶಾಂತ ಮೌನವನ್ನು ತನ್ನ ಕೂಗಿನಿಂದ ಛಿದ್ರಛಿದ್ರಗೊಳಿಸಿತು. ಅದು ಪುನಃ ಮೇಲೆದ್ದು ನೀರಿಗೆ ಮುಳುಗಿದುದನ್ನು ನೋಡಿ ಸಂತೋಷದಿಂದ ನನ್ನ ಮೈ ಝುಂ ಎಂದಿತು. ನೀರಿನಿಂದ ಅದು ಮೇಲಕ್ಕೆ ತೂರಿ ಬಂದು ಮೇಲೆ ತನ್ನ ರೆಕ್ಕೆಗಳನ್ನು ನೋಡಿಕೊಂಡಿತು. ತನ್ನ ಕಾಲುಗಳ ಸಹಾಯದಿಂದ ದಿಗಂತಕ್ಕೆ ಏರುವ ಮುನ್ನ ನೀರಿನ ಅಲೆಗಳ ಅಡ್ಡಗಲಕ್ಕೆ ಸುಮಾರು ಒಂದು ನೂರು ಮೀಟರ್ ದೂರದವರೆಗೆ ಹಾರಿತು. ಹಾರಾಟದ ಗುರಿ ಸಮತೋಲನ ಗಳಿಸಲು ಇದು ಸಾಮಾನ್ಯವಾಗಿ ಅವಶ್ಯವಿರುವಂತಹ ದೂರ. ಅನಂತರ, ನಿಧಾನವಾಗಿ ಸಾಗರದ ಮೇಲೆ ಲಂಬೋನ್ನತಿಯನ್ನು ಗಳಿಸಿ ಮೇಲೇರಿತು.

ದಿಗಂತಕ್ಕೆ ಏರಿದ ಲೂನಾರ್ ನಮ್ಮ ಕಣ್ಣಿಗೆ ಒಂದು ಸಣ್ಣ ಚುಕ್ಕೆಯಂತೆ ಕಂಡಿತು. ನಾನು ಕರೆನ್‌ಳ ಕಡೆಗೆ ತಿರುಗಿದೆ. ಕರೆನ್ "ಏನೂ ಹೇಳುವ ಅವಶ್ಯಕತೆ ಇಲ್ಲ ಅರ್ಥವಾಯಿತು" ಎಂದಳು.

ಅಸಾಧಾರಣ ವ್ಯಕ್ತಿ ಹರ್ ಡಾಕ್ಟರ್ ಸ್ಕಿಮಿಡ್

೧೯೭೫ರ ನವೆಂಬರ್ ಮಾಹೆಯಲ್ಲಿ ಪ್ರಥಮ ಬಾರಿಗೆ ನಾನು ಮಾರ್ಟಿ ಸ್ಮಿತ್‌ನನ್ನು ಏಮ್ಸ್‌ನ ಐಯೋವ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಭೇಟಿಯಾದೆ. ಕನ್ನಡಕದಾರಿ ಮಾರ್ಟಿ, ಆಗ ಹಿರಿಯ ಪಶುವೈದ್ಯ ವಿದ್ಯಾರ್ಥಿ. ಎತ್ತರದ, ಸಣಕಲು ದೇಹದ, ಗುಂಗುರು ಕೂದಲ ಮಾರ್ಟಿ ಮತ್ತು ನಾನು ಅಚ್ಚುಮೆಚ್ಚಿನ ಗೆಳೆಯರಾದೆವು. ಅದೇ ರೀ... ಪಶುವೈದ್ಯ ಕಾಲೇಜಿನ ಪ್ರವೇಶ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಮಾರ್ಟಿಯ ಪತ್ನಿ ಜೂಡಿ ಮತ್ತು ಲಿಂಡಾ ಸ್ನೇಹಿತರಾದರು.

ಮಾರ್ಶ್ವಿ ೧೯೪೮ ಜೂನ್‌ನಲ್ಲಿ ವಿಸ್ಕಾನ್ಸಿನ್‌ನ ಮ್ಯಾಡಿಸನ್‌ನಲ್ಲಿನ ತನ್ನ ಖಾಸಗಿ ವೃತ್ತಿಯನ್ನು ಬಿಟ್ಟು ನನ್ನ ಜೊತೆ ಪಾಲುದಾರನಾಗಿ ಮಿನೋಕ್ವಾಕ್ಕೆ ಬಂದು ಸೇರಿದ. ನಾವೀರ್ವರು ಒಟ್ಟಿಗೆ ಕೆಲಸ ಪ್ರಾರಂಭಿಸಿ ಆಗಲೇ ತಿಂಗಳು ಕಳೆದಿತ್ತು. ಮಾರ್ಶ್ವಿ ಟೆಲಿಫೋನಿನಲ್ಲಿ ಹೆಂಗಸೋರ್ವಳೊಡನೆ ಮಾತನಾಡುತ್ತಿದ್ದ.

"ಇದು ವನ್ಯಜೀವಿ ಕೇಂದ್ರ ನಾ ?"

"ತಾತ್ಕಾಲಕ್ಕೆ ಏನಾಗಬೇಕಾಗಿತ್ತು ?" ಎಂದು ಕೇಳಿದ.

"ಒಂದು ಕ್ರೌಂಚ ಪಕ್ಷಿ–ನೀಲಿಬಣ್ಣದ್ದು ಅಂತ ಅನ್ನಿಸುತ್ತೆ. ನಮ್ಮ ಮನೆ ಕಿಟಕಿಯ ಮೂಲಕ ಒಂದು ವಾರದಿಂದ ನೋಡುತ್ತಿದ್ದೇನೆ. ಅದು ಸರೋವರದ ಮಧ್ಯದ ಒಂದು ಸಣ್ಣ ದಿಣ್ಣೆ ಮೇಲೇನೇ ಕುಳಿತಿದೆ ಆ ಸ್ಥಳ ಬಿಟ್ಟು ಜರುಗೇ ಇಲ್ಲ, ಅಲ್ಲೇ ಇದೆ. ಬಹುಶಃ ಪೆಟ್ಟುಬಿದ್ದಿರಬಹುದು".

"ಪೆಟ್ಟು ಬಿದ್ದಿರುವ ಲಕ್ಷಣಗಳೇನಾದರೂ ನಿಮಗೆ ಕಾಣಿಸುತ್ತಿದೆಯೇ ?"

"ನನಗೇನೋ ಕಾಣಿಸುತ್ತಿಲ್ಲ" ಎಂದಳು ತೀಕ್ಷ್ಣವಾಗಿ. "ಅದು ಸರೋವರದೊಳಗೆ ಇದೆ. ಅಲ್ಲಿ ಬಹಳಷ್ಟು ಪಕ್ಷಿಗಳಿವೆ. ಆದರೆ ಅವು ಒಂದೇ ಸ್ಥಳದಲ್ಲಿ ನಿಲ್ಲವುದೇ ಇಲ್ಲ".

"ಓ. ಕೆ, ಕೆಲಸ ಮುಗಿಸಿ ರಾತ್ರಿ ಅಲ್ಲಿಗೆ ಬಂದು ನೋಡುತ್ತೇನೆ" ಎಂದು ಮಾತು ಮುಗಿಸಿದ.

ಅಂದು ಸಂಜೆ ನನಗೆ ಯಾವ ಕಾರ್ಯಕ್ರಮವೂ ಇಲ್ಲದಿದ್ದುದರಿಂದ ನಾನೂ ಮಾರ್ಶ್ವಿ ಜೊತೆ ಅಲ್ಲಿಗೆ ಹೋದೆ. ಸುಮಾರು ೮ ಗಂಟೆ ಸಮಯ. ನಾವು ಆ ಹೆಂಗಸಿನ ಮನೆ ಅಂಗಳದಿಂದ ನಿಂತು ನೋಡಿದೆವು. ೨೦೦ ಮೀಟರ್ ದೂರದಲ್ಲಿ ಒಂದು ಸಣ್ಣ ದಿಣ್ಣೆ ಕಾಣುತ್ತಿದೆ. ಅದು ಗಿಡ ಮರಗಳಿಂದ ಆವರಿಸಿತ್ತು. ನೀಲಿ ಬಣ್ಣದ ಕ್ರೌಂಚ ಪಕ್ಷಿಗಳು ಆ ಸರೋವರದ ಜೊಂಡು ಹುಲ್ಲು ಹಾಗೂ ನೈದಿಲೆ, ತಾವರೆಗಳ ನಡುವೆ ಕುಳಿತಿದ್ದವು. ಆ ಹೆಂಗಸು "ಅದು ಹಾರುವುದಿಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆ" ಎಂದಳು. ತನ್ನ ಮನೆಯ ಮುಂಭಾಗದಲ್ಲಿ ಗೂಟಕ್ಕೆ ಬಿಗಿದಿದ್ದ ದೋಣಿಯಡೆಗೆ ಬೆರಳು ಮಾಡಿ ತೋರಿಸುತ್ತಾ "ಏತಕ್ಕೆ ಈ ದೋಣಿ ತೆಗೆದುಕೊಂಡು ಹೋಗಿ ನೀವು ಸನಿಹದಿಂದ ನೋಡಬಾರದು"? ಎಂದಳು.

ನಾವು ಶರ್ಟ್ ಮತ್ತು ಟೈ ಧರಿಸಿದ್ದೆವು. ಹುಡುಗಾಟಕ್ಕೆ ದೋಣಿ ಹತ್ತಿದೆವು. ಮಾರ್ಶ್ವಿ ಮುಂಭಾಗದಲ್ಲಿ ಕುಳಿತ, "ನಾನು ಆ ಪಕ್ಷಿಯನ್ನು ಹಿಡಿಯುತ್ತೇನೆ. ನೀನು ನನ್ನ ಪಕ್ಕಾನೇ ಇರು. ಹಿಡಿಯೋಣ."

ನಾನು ಮಾರ್ಶ್ವಿಗೆ "ನೀನೇ ಏಕೆ ಹುಟ್ಟು ಹಾಕಬಾರದು. ಜ್ಞಾಪಕವಿರಲಿ, ನೀನು ನನ್ನನ್ನು ಕರೆದುಕೊಂಡು ಬಂದದ್ದು" ಎಂದೆ ದೋಣಿಗೆ ನೀರು ತುಂಬಿದುದನ್ನು ನೋಡಿ.

"ಇಲ್ಲ ಫಾಸ್ಟರ್, ನೀನು ಹುಟ್ಟು ಹಾಕು. ಈ ಪಕ್ಷಿಗಳ ಬಗ್ಗೆ ನನಗೆ ಸಾಕಷ್ಟು ಅನುಭವವಿದೆ. ಕತ್ತಲೆಯಾಗುತ್ತಾ ಬಂದಿತು. ಬೇಗೆ ಬೇಗ ಹುಟ್ಟು ಹಾಕು."

ದಿಣ್ಣೆಯನ್ನು ಸೇರುತ್ತಿದ್ದಂತೆ ನನ್ನ ರಟ್ಟೆಗಳಲ್ಲಿ ನೋವು ಕಾಣಿಸಲಾರಂಭಿಸಿತು. ಆ ಪಕ್ಷಿ ಕುಳಿತಲ್ಲಿಂದ ಸುಮಾರು ೧೦ ಮೀಟರ್ ದೂರದಲ್ಲಿ ನಮ್ಮ ದೋಣಿಯ ತಳಭಾಗಕ್ಕೆ ಏನೋ ತಗಲಿ ಧಡ್ ಎಂದು ನಿಂತಿತು.

"ಫಾಸ್ಟರ್ ಹೋಗು ಹಿಡಿ ಅದನ್ನ" ಎಂದು ನನಗೆ ಆದೇಶಿಸಿದ. ನಾನು ಪಕ್ಷಿ ಹಿಡಿಯುವುದರಲ್ಲಿ ಒಳ್ಳೆ ಪಳಗಿದ ಬೇಟೆನಾಯಿಯೋ ಎಂಬಂತೆ.

"ನಾನು ಹಿಡಿಯುವುದಿಲ್ಲ. ನೀನಾದರೆ ಒಳ್ಳೆ ಎಕ್ಸ್‌ಪರ್ಟ್ ಹೋಗಿ ಹಿಡಿ" ಎಂದೆ.

ಒಲ್ಲದ ಮನಸ್ಸಿನಿಂದ ಮಾರ್ಬಿ ಶೂ, ಕಾಲುಚೀಲ ಬಿಚ್ಚಿ ದೋಣಿಯಿಂದ ಕೆಳಗಿಳಿದ. ೯೦ ಕೆ. ಜಿಯ ಈ ವ್ಯಕ್ತಿಗೆ ಮೃದು ಹಾಗೂ ಕೆಸೆಗಟ್ಟಿದ ಸರೋವರದ ತಳ ದಾರಿ ಬಿಟ್ಟಿತು. ಪ್ರತಿಯೊಂದು ಹೆಜ್ಜೆ ಮುಂದಡಿ ಇಟ್ಟಾಗಲೂ ಅವನು ತುಸುವೇ ನೀರೊಳಗೆ ಇಳಿಯುತ್ತಿದ್ದ. ಕೊನೆಗೆ ಮಂಡಿವರೆಗೂ ನೀರು ಬಂದಿತು. "ಫಾಸ್ಟರ್, ಇದೊಳ್ಳೆ ಅಸಂಬದ್ಧ, ಇಲ್ಲಿ ನಾವೇನು ಮಾಡುತ್ತಿರೋದು ?" ಎಂದು ಕೇಳಿದ.

"ಅದೇ ನೀಲಿ ಕ್ರೌಂಚ ಪಕ್ಷಿ" ಎಂದು ಜ್ಞಾಪಿಸಿದೆ.

"ಓ, ಸರಿ" ಎನ್ನುತ್ತಾ ಜೊಂಡು ಹುಲ್ಲಿನ ಎಡೆಯಲ್ಲಿ ತಟ್ಟಾಡುತ್ತ ಮುಂದು ಮುಂದಕ್ಕೆ ಹೋದ. ಇನ್ನೇನು ಅವನು ಆ ಪಕ್ಷಿಯಿಂದ ಕೇವಲ ಒಂದೆರಡು ಮೀಟರ್ ದೂರದಲ್ಲಿ ಇದ್ದಾನೆ ಎನ್ನುವಷ್ಟರಲ್ಲಿ ಆ ಪಕ್ಷಿ ಜೋರಾಗಿ ಕರ್ಕಶ ಶಬ್ದ ಮಾಡುತ್ತ ನಿದ್ರಿಸುತ್ತಿದ್ದ ತನ್ನ ಸಹಚರ ಬಳಗವನ್ನು ಎಚ್ಚರಿಸಿ ಮೇಲಕ್ಕೆ ಹಾರಿ ಆ ಸರೋವರದ ಮತ್ತೊಂದು ಬದಿಗೆ ಹಾರಿ ಹೋಯಿತು.

ಮಾರ್ಬಿ ಈಗ ಟೊಂಕದವರೆಗೆ ಬಂದ ನೀರಿನಲ್ಲಿ ನಿಂತಿದ್ದ. ಅವನ ತಿಳಿ ನೀಲಿ ಶರ್ಟ್ ಹಾಗೂ ಪಟ್ಟೆ ಟೈ ಬಗ್ಗಡವಾಯಿತು. ಮುಖ ಹುಳಿಯಾಯಿತು. ನಾನು ಕುಳಿತಲ್ಲಿಂದಲೇ ಅವನೆಡೆ ನೋಡಿ ಮುಗಳ್ನಕ್ಕೆ.

ಹಳದಿ ಬಣ್ಣದ ನಾಡ ದೋಣಿಯೊಂದು ಸರೋವರದ ಆ ಬದಿಯ ತುದಿಯನ್ನು ಸುತ್ತಿಕೊಂಡು ನಮ್ಮೆಡೆಗೆ ಬರುತ್ತಿರುವುದು ಕಾಣಿಸಿತು. ನನಗೆ ಈ ಸಮಯದಲ್ಲಿ ನನ್ನ ಗುರುತಿನವರಾರನ್ನೂ ಭೇಟಿಯಾಗಲು ಮನಸ್ಸಿರಲಿಲ್ಲ. ತತ್‌ಕ್ಷಣ ದೋಣಿಯಲ್ಲಿ ಹುದುಗಿದೆ. ಆದರೆ ನನ್ನ ನಗೆಗೇಡಿ ಗೆಳೆಯನಿಗೆ ಬಚ್ಚಿಟ್ಟುಕೊಳ್ಳಲು ಆಸ್ಪದವೇ ಇರಲಿಲ್ಲ.

ಆ ನಾಡ ದೋಣಿ ನಮ್ಮ ಸನಿಹಕ್ಕೆ ಬರುತ್ತಿದ್ದಂತೆ ಅದರಲ್ಲಿದ್ದ ಈರ್ವರಲ್ಲಿ ಒಬ್ಬ "ನೀವು ಡಾ|| ಸ್ಮಿತ್ ಅವರಾ ?" ಎಂದು ಕೂಗಿ ಕೇಳಿದ.

ಓ, ಇಲ್ಲ, ಎಂದಿತು ಮನಸ್ಸು. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ನಾವು ಅವರಿಂದ ತಪ್ಪಿಸಿಕೊಳ್ಳದೇ ಹೋದರೆ ಅನೇಕ ಸ್ಥಳೀಯವಾಸಿಗಳು ಈಗಾಗಲೇ ಸಂಶಯ ಪಟ್ಟಂತೆ ವನ್ಯಜೀವಿ ಚಿಕಿತ್ಸಾಲಯ ನಡೆಸುವ ನಾವು—ವೈದ್ಯರು ಅಲ್ಪಜ್ಞಾನಿಗಳು ಎಂಬ ಅವರ ಹೇಳಿಕೆಯು ಧೃಡವಾಗುವ ಸಂಭವವುಂಟು. ಈಗ ನನಗೆ ಜರ್ಮನ್ ಭಾಷೆಯಲ್ಲಿ ಸ್ಪಷ್ಟವಾಗಿ "ನೀವು ಯಾರನ್ನೋ ತಪ್ಪು ತಿಳಿದಿದ್ದೀರಾ ಸ್ಮಿಮಿಡ್ ನಾನಲ್ಲ" ಎಂದುದು ಕೇಳಿಸಿತು.

"ನಾನು ನೀವೆಲ್ಲೋ ಆ ನಮ್ಮ ಪಶುವೈದ್ಯರೇನೋ ಎಂದುಕೊಂಡೆ, ಕ್ಷಮಿಸಿ" ಎಂದ ಆ ಮನುಷ್ಯನನ್ನು ಹೊತ್ತು ನಾಡದೋಣಿ ಕತ್ತಲೆಯ ಮಂಜು ಮುಸುಕಿನಲ್ಲಿ ಮುಂದಕ್ಕೆ ಧಾವಿಸಿತು.

ನಾನು ಮಾರ್ಬಿಗೆ "ಹೇ! ಸೊಗಸುಗಾರ, ದೋಣಿ ಹತ್ತಪ್ಪ" ಎಂದು ನಿರ್ದೇಶಿಸಿದೆ.

“ಆಯಿತು, ನಾನೂ ಹಾಗೇ ಮಾಡೋಣ ಎಂದುಕೊಂಡಿದ್ದೆ” ಎಂದ ಹರ್ ಡಾಕ್ಟೋರ್ ಸ್ಕಿಮಿಡ್.

ಮುಂದಿನವಾರ ಕಾರಿನಲ್ಲಿ ನಾನು ಅದೇ ಸರೋವರದ ಬಳಿಗೆ ಬಂದೆ. ಖಚಿತವಾಗಿ ಅದೇ ನೀಲಿ ಬಣ್ಣದ ಕ್ರೌಂಚ ಪಕ್ಷಿ, ಅದೇ ಸ್ಥಳದಲ್ಲಿ ನಿಂತಿತ್ತು. ಅದರ ಮೀನಿನ ಕಣಜಕ್ಕೆ ನಾವು ನೀಡಿದ್ದ ಅಹಿತಕರ ಭೇಟಿಯಿಂದ, ಪಕ್ಷಿಗಳ ನಿಸ್ಸೀಮ ನಮ್ಮ ಹರ್ ಡಾಕ್ಟೋರ್ ಸ್ಕಿಮಿಡ್‌ನಿಗೆ ಉಂಟಾದಷ್ಟು ಕಿರಿಕಿರಿ ಅದಕ್ಕೆ ಈ ಸಾರಿ ಉಂಟಾಗಿರಲಿಲ್ಲ.

ತೋಳನ ಕಣ್ಣುಗಳು

ಆಸ್ಪತ್ರೆಯ ನಾಯಿಗೂಡು ಅಪರೂಪದ ಪ್ರಶಾಂತತೆಯನ್ನು ಸೂಸುತ್ತಿತ್ತು. ನನ್ನ ಎಡಬದಿಯ ಸ್ಟೀಲ್ ಪಂಜರದಲ್ಲಿ ಮೂರು ಮಾರ್ಜಾಲಗಳು ಮೌನವಾಗಿ ಕುಳಿತಿದ್ದವು. ೮ ವರ್ಷದ ಘಾಟಿ, ಗಂಡು ಬೆಕ್ಕು ಬೆಂಜಮಿನ್ ಬಾಗಿಲ ಹತ್ತಿರವಿತ್ತು. ಇದು ಪ್ರತಿ ೨–೩ ತಿಂಗಳಿಗೊಮ್ಮೆ ನನ್ನ ಹತ್ತಿರ ತಪಾಸಣೆಗೆ ಬರುತ್ತಿತ್ತು. ಆಗ ತಾನೇ ಅದರ ಕುತ್ತಿಗೆಯ ಭಾಗದಲ್ಲಿ ಆಗಿದ್ದ ಕುರುವಿನ ಕೀವು ಸೋರಿಸಿ, ಒಂದು ನಳಿಕೆಯನ್ನು ತೂರಿಸಿ ಹೊಲಿದಿದ್ದೆ; ಕೀವು ಸ್ರವಿಸಲು. ಬೆಂಜಮಿನ್‌ನನ್ನು ಗೂಡಿನೊಳಗೆ ಕೂಡಿ ಹಾಕಿದಾಗ ಗದ್ದಲವನ್ನುಂಟುಮಾಡುತ್ತಿತ್ತು. ಆದರೆ ಈ ದಿನ ಗಲಾಟೆ ಮಾಡಲಿಲ್ಲ. ಬದಲಿಗೆ ಗೂಡಿನ ಮೂಲೆಯಲ್ಲಿ ಮುದುರಿಕೊಂಡು ಕುಳಿತು ಕೊಠಡಿಯ ಕೇಂದ್ರದೆಡೆಗೆ ನೆಟ್ಟ ದೃಷ್ಟಿ ಹರಿಸಿತ್ತು.

ಸಾಕಿದ ರೋಗಿನಾಯಿ–ನಗೆಟ್, ಗೂಡಿನ ಮೂಲೆಯಲ್ಲಿ ಭಯದ ಶಂಕೆಯನ್ನು ಗ್ರಹಿಸಿ ಮುದುಡಿಕೊಂಡಿತ್ತು. ಮಂಡಿಯ ಶಸ್ತ್ರಚಿಕಿತ್ಸೆಯಿಂದ ಪುನಃ ಚೆನ್ನಾಗಿಯೇ ನೇರ್ಪಾಯಿತು. ಆದರೆ ಬಾಹ್ಯನೋಟಕ್ಕೆ ಯಾರಾದರೂ ಅದರ ಜೀವಿತದ ದಿನಗಳನ್ನು ಎಣಿಕೆಮಾಡಬಹುದಿತ್ತು. ಹಾಗಿತ್ತು ಅದರ ದೇಹ ಸಿರಿ.

ಇದಕ್ಕೆಲ್ಲಾ ಕಾರಣ, ಕೊಠಡಿಯ ಮಧ್ಯದಲ್ಲಿ ತಂತಿಯ ಪಂಜರದೊಳಗೆ ಬಂಧಿಸಿಟ್ಟಿದ್ದ ಉತ್ತರಧ್ರುವ ಪ್ರದೇಶದ ಘನಗಾಂಭೀರ್ಯದ ಶ್ವೇತವರ್ಣದ ತೋಳ. ಈ ತೋಳನನ್ನು ನಿಸರ್ಗದೊಳಕ್ಕೆ ಸ್ವತಂತ್ರಗೊಳಿಸಿದರೆ ಅದು ಏನು ಮಾಡಬಹುದೆಂದು ಈ ಬೆಕ್ಕು ಮತ್ತು ನಾಯಿಗಳು ಯೋಚಿಸುತ್ತಿರುವಂತೆ ನನಗೆ ಭಾಸವಾಯಿತು. ನನ್ನ ಮನದಲ್ಲೂ ಅದೇ ಆಲೋಚನೆ ಹತ್ತಿತು.

ಅಲಾಸ್ಕಾದ ಕಗ್ಗತ್ತಲ, ದುರ್ಗಮ ಕಾಡಿನ ದಾರಿಯಲ್ಲಿ ೪೦ ಕಿಲೋ ತೂಕದ ತೋಳ ಆಯಾಸವಿಲ್ಲದೆ ಚಲಿಸುತ್ತಿತ್ತು. ವೃಕ್ಷಗಳ ನಡುವೆ ಅದರ ಗಾಂಭೀರ್ಯದ ಚಲನೆ ಸಾವಕಾಶವಾಗಿ ತಾಳಲಯಗತಿಯಲ್ಲಿತ್ತು. ಮಂಜು ಮುಸುಕಿದ ನೆಲದ ಅಡ್ಡಗಲಕ್ಕೆ ಅದರ ಬಲಿಷ್ಠ ದೇಹದ ಸ್ನಾಯು ತೇಲಿದಂತೆ ತೋರುತ್ತಿತ್ತು....

“ರೋರಿ ?”

ನಾನೀಗ ವಾಸ್ತವಕ್ಕೆ ಹಿಂತಿರುಗಿದೆ. ಲಿಂಡಾ ಹೊಸಲಿನಲ್ಲಿ ನಿಂತಿದ್ದನ್ನು ನೋಡಿದೆ.

“ಓಯ್ ರೋರಿ !” ಲಿಂಡಾ ಕೂಗಿದಳು. ಅವಳ ಕಣ್ಣುಗಳು ಆಶ್ಚರ್ಯದಿಂದ ಅರಳಿದ್ದವು. “ಅದರ ಕಣ್ಣುಗಳು ಅದೆಷ್ಟು ಪ್ರಜ್ವಲಿಸುತ್ತಿವೆ ನೋಡು !” ಎಂದಳು.

ಹೌದು, ಆ ಕಣ್ಣುಗಳು ಈರ್ಷ್ಯೆಯಿಂದ ಇರಿಯುವಂತೆ, ಸೆಳೆಯುತ್ತಿವೆ. ಅವುಗಳ ಮೋಡಿಗೆ ಒಳಗಾಗದೆ ತೋಳನೆಡೆಗೆ ನೋಡುವುದು ಸಾಧ್ಯವೇ ಆಗುತ್ತಿಲ್ಲ. ಇತರೆ ರೋಗಿ ನಾಯಿಗಳ ಕಣ್ಣನ್ನು ನೋಡಿ ಯಾವುದಾದರೂ ಪ್ರಾಣಿ ಸ್ನೇಹಮಯಿಯೇ ಅಥವಾ ಆಕ್ರಮಣಕಾರಿಯೇ ಎಂದು ನಾನು ಹೇಳಬಲ್ಲೆ. ಆದರೆ ತೋಳನ ಕಣ್ಣುಗಳು ಏನನ್ನೂ ವ್ಯಕ್ತಪಡಿಸುತ್ತಿಲ್ಲ.

"ಅದು ಬಿಯರ್ ಪಾರ್ಕ್‌ನಿಂದ ಬಂದಿದೆ. ಅದೊಂದು ರಸ್ತೆ ಬದಿಯ ವನ್ಯಜೀವಿ ಕೇಂದ್ರ. ಅಲ್ಲಿಯ ಪರಿಸ್ಥಿತಿ ತುಂಬಾ ಭೀಕ್ಷಣ. ಹಿಂದಿನ ರಾತ್ರಿ ರೊಪ್ಪದ ಬೇಲಿಗೆ ಅದರ ಬಲಭಾಗದ ಮುಂಗಾಲು ಸಿಕ್ಕಿಕೊಂಡಿತ್ತು. ರಕ್ತ ಚಲನೆ ನಿಂತು ರಕ್ತ ಹೆಪ್ಪು ಗಟ್ಟಿ ಕಾಲು ಊದಿದೆ. ದೇಹದ ಉಷ್ಣತೆ ಶೂನ್ಯಕ್ಕಿಂತ ೩೫ ಡ್ರಿಗಿ ಕೆಳಗೆ ಇಳಿದಿದೆ. ನಾನು ಆ ಭಾಗವನ್ನು ಕತ್ತರಿಸದೇ ಬೇರೆ ಏನೂ ಮಾಡುವಂತಿಲ್ಲ. ನಾನು ಹಾಗೆ ಮಾಡದೇ ಹೋದರೆ ಅದು ಬದುಕುವುದಿಲ್ಲ" ಎಂದು ಖಿನ್ನನಾಗಿ ವಿವರಿಸಿದೆ.

ಸಾಕಿದ ಪ್ರಾಣಿಗಳು ಹಾಗೂ ವನ್ಯಜೀವಿ—ಪಳಗಿಲ್ಲದ ಕಾಡಿನ ಜೀವಿಗಳಿಗೆ ಮಾತ್ರ ನನ್ನ ಪಶುವೈದ್ಯ ಚಿಕಿತ್ಸೆಯು ಮೀಸಲಿತ್ತು. ಸೆರೆಹಿಡಿದ ವನ್ಯಜೀವಿಗಳ ಬಗ್ಗೆ ನನಗೆ ಅಷ್ಟಾಗಿ ಆಸಕ್ತಿ ಇರಲಿಲ್ಲ. ಏತಕ್ಕೆಂದರೆ ಕೆಟ್ಟ ಹವ್ಯಾಸದಿಂದ ಸೆರೆಹಿಡಿದ ಈ ನತದೃಷ್ಟ ಪ್ರಾಣಿಗಳಿಗೆ ಚಿಕಿತ್ಸೆ ಮಾಡಿದರೆ ಇವುಗಳನ್ನು ಸರಿಯಾದ ಆರೈಕೆ, ಪಾಲನೆ ಹಾಗೂ ವಸತಿ ಇಲ್ಲದ ಸೆರೆಗೆ ತಳ್ಳಲು ನಾನೇ ಸಹಾಯಕನಾದಂತೆ ಎಂದು ಭಾವಿಸಿದ್ದೆ. ಆದಾಗ್ಯೂ ಆಗೊಮ್ಮೆ ಈಗೊಮ್ಮೆ ಈ ನನ್ನ ನಿರ್ಧಾರ ಬದಲಾಗುತ್ತಿತ್ತು. ಈ ಘನಗಾಂಭೀರ್ಯದ ತೋಳಕ್ಕೆ ನನ್ನ ಸೇವೆ ಬೇಕಾಗಿತ್ತು.

ಪಂಜರದ ತಂತಿಯ ಸದುವಿನ ಮೂಲಕ ತೋಳದ ಫಕ್ಕೆಗೆ ಅನೆಸ್ತೀಸಿಯಾ ಕೊಟ್ಟೆ. ೭೦ ನಿಮಿಷಗಳ ನಂತರ ಅದು ನಿದ್ರೆಯ ಗುಂಗಿಗೆ ತುತ್ತಾಯಿತು. ಪಂಜರದಿಂದ ಶಸ್ತ್ರಚಿಕಿತ್ಸೆಯ ಕೊಠಡಿಗೆ ತಂದು ಮಲಗಿಸಿದೆವು. ಅದರ ಸೊಂಪಾದ ಮೈ ಚರ್ಮಕ್ಕೆ ಮಾರುಹೋದ ನಾನು ಅದರ ಮೈಯನ್ನು ಮೃದುವಾಗಿ ನೇವರಿಸಿದೆ. ಅತ್ಯಂತ ಮೋಹಕ ಪ್ರಾಣಿ ಅದು !

ಅದರ ಕಾಲಿನ ಶಸ್ತ್ರ ಚಿಕಿತ್ಸೆ ಮಾಡಲು ನನ್ನ ಸಹಾಯಕಿ ಕರೆನ್ ತಯಾರಾದಳು. ನಾನು ಅದರ ಮುಂಗಾಲಿನ ಮೇಲೆ ಕಪ್ಪಾಗುತ್ತಿದ್ದ ಭಾಗದಿಂದ ಕೆಲವು ಸೆಂಟಿಮೀಟರ್‌ನಷ್ಟು ಮೇಲಕ್ಕೆ ಒಂದು ಕಚ್ಚನ್ನು ಮಾಡಿದೆ. ನಾನು ಅದರ ದೇಹದ ಮೇಲ್ಮೈನ ರಕ್ತನಾಳವೊಂದನ್ನು ಕತ್ತರಿಸುತ್ತಿದ್ದಂತೆ ರಕ್ತ ಜಲ್ಲೆಂದು ನನ್ನ ಕೈಗವಸಿನ ಮೇಲೆಲ್ಲಾ ಚಿಮ್ಮಿತು. ತತ್‌ಕ್ಷಣವೇ ಸಾಧ್ಯವಾದಷ್ಟುಮಟ್ಟಿಗೆ ರಕ್ತಸೋರದಂತೆ ರಕ್ತ ಹೊರಬರುವ ನಾಳಗಳನ್ನೆಲ್ಲ ಭದ್ರವಾಗಿ ಕಟ್ಟಿದೆ. ಈ ಪ್ರಾಣಿಯ ಅಂಗಚ್ಛೇದನಕ್ಕೆ ಎರವಾದ ಸಂದರ್ಭವನ್ನು ನೆನೆಸಿಕೊಂಡು, ನಾನು ಶಸ್ತ್ರಕ್ರಿಯೆಯ ಉದ್ದಕ್ಕೂ ಮನಸ್ಸಿನಲ್ಲೇ ಶಪಿಸತೊಡಗಿದೆ.

ನನಗೆ ಈಗ ಅದರ ಮೂಳೆ ನೋಡಿ ಎಲ್ಲಾ ತಿಳಿಯಿತು. ನನ್ನಲ್ಲಿ ಭುಗಿಲೆದ್ದ ರೋಷವನ್ನು ಒಂದು ನಿಮಿಷ ಕೂಡ ಅದುಮಿಡಲು ಆಗಲಿಲ್ಲ. "ಇಡೀ ಈ ಪ್ರಕರಣವೇ ನನ್ನ ರಕ್ತವನ್ನು ಕುದಿಸುತ್ತಿದೆ. ಇದು ಅನಗತ್ಯ ಹಾಗೂ ಮೂರ್ಖತನದಿಂದ ಕೂಡಿದ್ದು" ಎಂದು ಕೆರಳಿದೆ. "ನಿನಗೆ ಗೊತ್ತೆ, ಇದು ಯಾರು ಮಾಡಿದ ತಪ್ಪು?"

"ವನ್ಯ ಜೀವಿಗಳನ್ನು ಪ್ರದರ್ಶನಕ್ಕಿಟ್ಟರೋ ಆ ಯಜಮಾನನದೇ ?" ಎಂದಳು ಕರೆನ್ ಮುಖ ಮೇಲೆತ್ತುತ್ತಾ.

ಮೂಳೆ ಎರಡು ತುಂಡಾಗುತ್ತಿದ್ದಂತೆ ಲಟಕ್ ಎಂಬ ಶಬ್ದ ಜೋರಾಗಿ ಬಂತು.

"ಹೌದು, ಆದರೆ ಅದಕ್ಕಿಂತಲೂ ಹೆಚ್ಚಿನದು ಬೇರೆ ಇದೆ. ಅದೆಂದರೆ ಈ ವಿಸ್ಕಾನ್‌ಸಿನ್‌ನ ಕಾನೂನು. ಆ ಕಾನೂನೇ ಈ ತೋಳವನ್ನು ವಿಸ್ಕಾನ್‌ಸಿನ್‌ನಲ್ಲಿ ಬಲೆಗೆ ಕೆಡುವಿ ಇಲ್ಲಿ ಮಾರಾಟ ಮಾಡಲು ಅನುವು ಮಾಡಿಕೊಟ್ಟಿದೆ" ಎಂದು ಗೊಣಗಿದೆ.

ನಾನು ಅದರ ಚರ್ಮದ ಮೇಲೆ ಕೊನೆಯ ಹೊಲಿಗೆ ಹಾಕುವ ಹೊತ್ತಿಗೆ ೯೦ ನಿಮಿಷಗಳು ಉರುಳಿದ್ದವು. ಕತ್ತರಿಸಿ ಹಾಕಿದ್ದ ಆ ಕಾಲೊಂದನ್ನು ಬಿಟ್ಟು ಉಳಿದ ಭಾಗಕ್ಕೆ ಏನೂ ತೊಂದರೆ ಇದ್ದಂತೆ ಕಾಣಲಿಲ್ಲ. ಈ ತೋಳ ಪುನಃ ಪಂಜರದಲ್ಲಿ ಸೆರೆಯಾಗಿರಲು ಬದುಕುಳಿಯಬೇಕಾಗಿತ್ತು !

ಮರು ದಿನ ಮುಂಜಾನೆ ಅದರ ಮಾಲೀಕ ತನ್ನ ಒಡನೆ ಒಯ್ಯಲು ಬಂದ. "ಆರೋಗ್ಯವಾಗಿದೆ ಅಂತ ಕಾಣುತ್ತೆ ಅಲ್ವಾ"? ಎಂದು ಕೇಳಿದ. ನಾನು ಮಾತನಾಡಲಿಲ್ಲ. ನನ್ನಲ್ಲಿ ಉಕ್ಕುತ್ತಿದ್ದ ಉದ್ವೇಗವನ್ನು ನಿಯಂತ್ರಿಸಲು ಕಷ್ಟಪಡುತ್ತಿದ್ದೆ. ನನ್ನ ಉದ್ವೇಗವನ್ನು ಅದುಮಿ, ಮೆಲುದನಿಯಲ್ಲಿ "ಶಸ್ತ್ರಚಿಕಿತ್ಸೆ ಸರಾಗವಾಗಿ ಆಯಿತು" ಎಂದೆ. ಅವನು ಹಾಗೂ ಅವನ ಆಳು ತೋಳವಿದ್ದ ಪಂಜರವನ್ನು ತಮ್ಮ ಟ್ರಕ್‌ನ ಹಿಂಬದಿಗೆ ಹೇರುವ ದೃಶ್ಯವನ್ನು ನನ್ನ ಕಛೇರಿಯ ಕಿಟಕಿಯ ಮೂಲಕ ನೋಡುತ್ತಾ ನಿಂತೆ. ಟ್ರಕ್ ತೋಳವನ್ನು ಮತ್ತಷ್ಟು ಕುಲುಕಾಡಿಸುತ್ತ ರಭಸದಿಂದ ಮರೆಯಾಯಿತು. ತನಗೆ ಒದಗುವ ದುಃಸ್ಥಿತಿಯ ಅರಿವು ಅದಕ್ಕಿದ್ದಂತೆ ಕಾಣಲಿಲ್ಲ. ಆದರೆ ಆ ಕ್ಷಣದಲ್ಲಿ, ನಾನು, ಅದರ ಕಣ್ಣುಗಳಲ್ಲಿ ಹುದುಗಿದ್ದ ಭಾವನೆಗಳನ್ನು ಅರ್ಥಮಾಡಿಕೊಂಡೆ.

ಉತ್ತರಧ್ರುವದ ಆ ಸುಂದರ ತೋಳನಲ್ಲಿ ಉತ್ಸಾಹವಾಗಲೀ ಜೀವವಾಗಲೀ ಇರಲಿಲ್ಲ. ಅಲಾಸ್ಕಾದಲ್ಲಿ ಅದನ್ನು ಸೆರೆ ಹಿಡಿದು ಬೋನಿಗೆ ತಳ್ಳಿದ ದಿನವೇ ಅದು ಗತಿಸಿತ್ತು.

ಉದ್ದೇಶಪೂರ್ವಕ

ಒಂದು ದಿನ ಮುಖದ ಮೇಲೆಲ್ಲಾ ಕಲೆಗಳುಳ್ಳ ಓರ್ವ ಬಾಲಕ ತನ್ನ ತಾಯಿಯೊಡಗೂಡಿ ಚಿಕಿತ್ಸಾಲಯಕ್ಕೆ ಬಂದ. ಬಾಲಕನ ಕೈಯಲ್ಲಿ ಒಂದು ಕಾಗದದ ಕವರ್ ಇತ್ತು. ಅದರೊಳಗೆ ಒಂದು ಕಪ್ಪೆ. ಮೀನಿನ ಗಾಳದ ಕೊಕ್ಕೆಗೆ ಅದರ ಬಾಯಿಯ ಮೇಲ್ಭಾಗ ಸಿಕ್ಕಿಕೊಂಡಿತ್ತು.

ಆ ಬಾಲಕನ ತಾಯಿ ಮಗನನ್ನು ಮುಂದಕ್ಕೆ ತಳ್ಳುತ್ತಾ "ಹೇಳು ಬಿಲ್ಲಿ ಡಾಕ್ಟರಿಗೆ, ಏನು ನಡೆಯಿತು ಅಂತಾ" ಎಂದಳು.

ಬಿಲ್ಲಿ ಬಾಯಿ ಬಿಡಲಿಲ್ಲ. ತುದಿಗಣ್ಣಿನಲ್ಲಿ ನೀರು ತುಂಬಿ ತುಳುಕುತ್ತಿತ್ತು. ನಾನು ಅವನ ದುಃಖ ಹಗುರಗೊಳಿಸಲು ಯೋಚಿಸಿ, "ಏನು ಎಂದು ನಾನೇ ಹೇಳಲಾ ಬಿಲ್ಲಿ, ನೋಡು, ನಾನು ಹೇಳ್ತೀನಿ. ನೀನು ಗಾಳ ಹಿಡಿದು ಸರೋವರದ ಮರಳ ದಂಡೆ

ಮೇಲೆ ಹೊರಟಿದ್ದೆ, ಮೀನು ಹಿಡಿಯುವುದಕ್ಕೆ ಅಲ್ವಾ? ನಾನು ಹೇಳಿದ್ದು ಸರಿ ತಾನೆ?"

ಬಿಲ್ಲಿ ಮೌನವಾಗಿ ಕತ್ತನ್ನು ಅಲ್ಲಾಡಿಸಿದ.

"ಆಮೇಲೆ ನಿನ್ನ ಕಣ್ಣಿಗೆ ಈ ದಢೂತಿ ಕಪ್ಪೆ ಬಿತ್ತು. ಈ ಕಪ್ಪೆಯನ್ನು ಹಿಡಿಯಲು ನೀನು ಹಿಂದೆ ಬೇಸಿಗೆ ರಜೆಯಲ್ಲೂ ಪ್ರಯತ್ನಿಸಿದ್ದೆ, ಅಲ್ವೇ? ಆದರೆ ಅದು ನಿನಗೆ ಚೆನ್ನಾಗಿ ಆಟ ಆಡಿಸಿತು. ಕೈಗೆ ಸಿಗಲಿಲ್ಲ ಅಲ್ವಾ?"

ಪುನಃ ದುಃಖದಿಂದ ಕತ್ತನ್ನು ಅಲ್ಲಾಡಿಸಿದ.

"ಅದು ನಿನಗೆ ಸಿಗದೆ ಆಳ ನೀರಿನಲ್ಲಿ ಒತ್ತಿಗೆಯೊಳಗೆ ಸೇರಿಕೊಂಡಿತು. ನಿನಗೆ ಅದನ್ನು ನೋಯಿಸಲು ಮನಸ್ಸಾಗಲಿಲ್ಲ. ನಿನಗೆ ಅದನ್ನು ಹಿಡಿದು ಕಣ್ತುಂಬ ನೋಡಬೇಕೆಂಬ ಆಸೆ ಅಷ್ಟೇ. ಅದಕ್ಕೆ ನೀನು ಏನು ಮಾಡಿದೆ ಎಂದರೆ ಗಾಳದ ಕೊಕ್ಕೆಗೆ ಒಂದು ಹುಳು ಸಿಕ್ಕಿಸಿದೆ. ಆ ಕಾಳವನ್ನು ಕಪ್ಪೆಯ ಎದುರಿಗೆ ಹಿಡಿದೆ.

"ನಿಜ! ಡಾಕ್ಟರ್, ಮುಂದೇನಾಯ್ತು ಅಂತ ನೀವೇ ಊಹಿಸಿ?" ಎಂದಳು ಆ ಬಾಲಕನ ತಾಯಿ.

"ಕಪ್ಪೆ ಬಿಲ್ಲಿಯ ಗಾಳದ ಕಡೆಗೆ ಎಗರಿತು. ಪ್ರಾಯಶಃ ಒಂದೆರಡು ಬಾರಿ ಅ ಹುಳು ಹಿಡಿಯುವಲ್ಲಿ ತಪ್ಪಿರಬಹುದು. ಅನಂತರ ಹುಳು ಹಿಡಿಯಲು ಹೋಗಿ ತಾನೇ ಸಿಕ್ಕಿಕೊಂಡಿತು."

"ಇನ್ನೂ ಮುಂದಕ್ಕೆ ಹೇಳಿ" ಎಂದಳು ಆಕೆ.

"ಸರಿ, ಬಿಲ್ಲಿ ಆಮೇಲೆ ನೀನು ಹೆದರಿಕೊಂಡುಬಿಟ್ಟೆ. ಗಾಳಕ್ಕೆ ಸಿಕ್ಕಿಕೊಂಡ ಕಪ್ಪೆಯನ್ನು ಏನು ಮಾಡಬೇಕೆಂದು ತೋಚದೆ ಗಾಬರಿಯಲ್ಲಿ ಗಾಳದ ಕಡ್ಡಿಯನ್ನು ಗಾ ಯಲ್ಲಿ ತೂಗಾಡಿಸಿಕೊಂಡು ಮನೆಗೆ ಓಡಿ ಬಂದೆ. ಗದ್ದಲ ಕೇಳಿಸಿಕೊಂಡ ನಿನ್ನ ತಾಯಿ ಮನೆಯಿಂದ ಹೊರಗೆ ಬಂದರು. ನನ್ನ ಊಹೆಯಂತೆ ಕಪ್ಪೆಯನ್ನು ನೋಡಿದ ಕೂಡ ಒಂದೆರಡು ಬಾರಿ ಚೀರಿರಬೇಕು."

"ಇನ್ನೂ ಹೆಚ್ಚು, ಆರೇಳು ಸಾರಿ" ಎಂದಳು ಬಾಲಕನ ತಾಯಿ.

"ಬಹುಶಃ ನಿಮ್ಮ ತಂದೆ ಮೀನು ಹಿಡಿಯಲು ಹೋಗಿರಬೇಕು. ನಿನ್ನ ತಾಯಿ ಗಾಳದಿಂದ ಕಪ್ಪೆ ಬಿಡಿಸಲು ಹೆದರಿಕೆ. ಅದಕ್ಕೆ ನೀನು ಇಲ್ಲಿಗೆ ಬಂದೆ ಅಲ್ಲವೇ?" ಎಂದ ನಗುತ್ತ ಕೇಳಿದೆ.

ಬಿಲ್ಲಿ ಈಗ ಸಮಾಧಾನದ ನಿಟ್ಟುಸಿರು ಬಿಟ್ಟ. ಮುಖದಲ್ಲಿ ಮುಗುಳ್ನ ಮಿಂಚಿತು.

"ಸರಿ ಬಿಲ್ಲಿ, ಈಗ ಎಲ್ಲಿ ನೋಡೋಣ, ನಿನ್ನ ಕಪ್ಪೆನಾ."

ಕಪ್ಪೆಯಿದ್ದ ಪೇಪರ್ ಬ್ಯಾಗನ್ನು ಮುಂದಿಟ್ಟ. ಈ ರೋಗಿಗೆ ಚಿಕಿತ್ಸೆ ನೀಡ ಬ್ಯಾಗೊಳಗೆ ಕೈಹಾಕಿದೆ. ಜೋರಾಗಿ ಒದರಾಡಿತು. ಕೊನೆಗೆ ನನ್ನ ಹಿಡಿತ ಭ ವಾಯಿತು. ಚೀಲದಿಂದ ಹೊರ ತೆಗೆದು ಪರೀಕ್ಷಿಸಿದೆ. ಗಾಳದ ಕೊಕ್ಕೆ ಕಪ್ಪೆ ಮೇಲ್ತುಟಿಯ ಸ್ಪರ್ಶಾಂಗದ ಆಳಕ್ಕೆ ನಾಟಿತ್ತು.

"ಬಿಲ್ಲಿ, ಕಪ್ಪೆ ಹೆಸರೇನಪ್ಪ?"

"ನಾನು....ನಾನು—ಬರ್ಟ್ ಅಂತ...."

"ಒಳ್ಳೆಯ ಹೆಸರಿಟ್ಟಿದ್ದೀಯ ಬರ್ಟ್. ನಾಯಿ ಅಥವಾ ಬೆಕ್ಕಿಗೆ ಕೊಟ್ಟಂತೆ 'ಕಪ್ಪೆಗೂ ಅನೆಸ್ತೀಸಿಯಾ ಕೊಡಲು ಬರುವುದಿಲ್ಲ. ನಾನು ಕೊಕ್ಕೆ ತೆಗೆಯುವಾಗ ಯಾರಾದರೂ ಅದನ್ನು ಭದ್ರವಾಗಿ ಹಿಡಿದಿರಬೇಕು. ಬಿಲ್ಲಿ, ನೀನು ಹಿಡಿದಿರುವೆಯಾ ಅಥವಾ ಯಾರ ನ್ನಾದರೂ ಕರೆಯಲಾ?"

ಬಿಲ್ಲಿ ಧೈರ್ಯದಿಂದ "ಬೇಡಿ, ನಾನೇ ಹಿಡಿದುಕೊಳ್ಳುತ್ತೇನೆ" ಎಂದ. ಬಿಲ್ಲಿ ಬರ್ಟ್‌ನನ್ನು ಭದ್ರವಾಗಿ ಹಿಡಿದ. ಕಪ್ಪೆಯ ಸ್ಪರ್ಶಾಂಗವನ್ನು ಕತ್ತರಿಸಿ, ಅದರ ತುಟಿಗೆ ನಾಟಿದ್ದ ಕೊಕ್ಕೆಯನ್ನು ಹೊರಕ್ಕೆಳೆದೆ. ಈಗ ಅದು ನಿರಾತಂಕವಾಯಿತು.

"ಆಯಿತು ಬಿಲ್ಲಿ. ಈಗ ಏನೂ ತೊಂದರೆ ಇಲ್ಲ. ಬ್ಯಾಗೊಳಗೆ ಅದನ್ನು ಇಡು. ಆಮೇಲೆ ಅದನ್ನು ಎಲ್ಲಿ ಹಿಡಿದಿದ್ದೇಯೋ ಅದೇ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಬಿಟ್ಟುಬಿಡು."

ಬಿಲ್ಲಿ ಈಗ ಖುಷಿಯಿಂದ ಬ್ಯಾಗೊಳಗೆ ಅದನ್ನು ನುಸುಳಿಸಿದ. ಚೀಲದ ಮೇಲೆ ಮೃದುವಾಗಿ ಸವರಿದ. ಸಂತೋಷದ ಮುಗುಳ್ನಗೆ ಬೀರುತ್ತ ಅವನು ಹಾಗೂ ಅವನ ತಾಯಿ ಚಿಕಿತ್ಸಾಲಯದಿಂದ ಹೊರಬಿದ್ದರು. ನನಗೆ ಈಗ ನನ್ನ ಬಾಲ್ಯದ ದಿನಗಳು ನೆನಪಿಗೆ ಬಂದವು.

ಬಿಲ್ಲಿಯಷ್ಟೇ ವಯಸ್ಸಿನವನಾಗಿದ್ದಾಗಿನ ದಿನಗಳನ್ನು ನೆನೆಸಿಕೊಂಡೆ. ಕಪ್ಪೆ ಎಂದರೆ ನನಗೆ ಎಲ್ಲಿಲ್ಲದ ಭಯ. ನನ್ನ ಓರಗೆಯ ಬಹಳಷ್ಟು ಸ್ನೇಹಿತರಂತೆ ನನಗೂ ಹುಳು–ಹುಪ್ಪಟೆಗಳನ್ನು ಕಂಡರೆ ಅಷ್ಟಕಷ್ಟೇ. ದೇವರೊಬ್ಬನಿಗೇ ಗೊತ್ತು ನಾನು ಅದೆಷ್ಟು ಕಪ್ಪೆಗಳನ್ನು ಕೊಂದಿರಬಹುದೆಂದು. ನಾವು ಇಂದು ಸ್ಥಾಪಿಸಿರುವ ಈ ವನ್ಯ ಜೀವಿ ಕಾರ್ಯಕ್ರಮ ಪ್ರಾಯಃಶಃ ನಾನು ಬಾಲಕನಾಗಿದ್ದಾಗ ತಿಳಿದಿರದಂತ ವಿಷಯ ಗಳನ್ನು ಬಿಲ್ಲಿಯಂತಹ ಎಳೆಯರಿಗೆ ತಿಳಿಸಲು ಸಹಾಯಕವಾಗುತ್ತದೆ.

ಆಗುತ್ತದೆ, ನಿಜ ಎಂದು ಯೋಚಿಸಿದೆ. ಬಿಲ್ಲಿ ಒಳ್ಳೆಯ ಹುಡುಗ, ಅವನಿಗೆ ಸಹಾಯ ಮಾಡಿದ್ದು ನನಗೆ ಸಂತೋಷ ನೀಡಿತ್ತು. ನಾನು ಬರ್ಟ್‌ನನ್ನು ಗಾಳದ ಕೊಕ್ಕೆಯಿಂದ ಬಿಡುಗಡೆಗೊಳಿಸಿದ್ದು ಕಪ್ಪೆಗಳ ಜಗತ್ತಿನಲ್ಲಿ ನನ್ನ ಸಾಧನೆ ಏನೇನೂ ಅಲ್ಲ. ಆದರೂ ಅದು ಪ್ರಾರಂಭ ಅಷ್ಟೇ.

ಒಂದು ಸಣ್ಣ ಹಕ್ಕಿ

ವಿಸ್ಕಾನ್‌ಸಿನ್‌ನ ನಮ್ಮ ಕಡೆಯಲ್ಲಿ ಪಕ್ಷಿ ವೀಕ್ಷಕರಿಗೆ ನೀರಹಕ್ಕಿ ಅಥವಾ ಗೊರವನ ಹಕ್ಕಿ ಕಂಡೊಡನೆ ವಸಂತ ಋತುವಿನ ಆಗಮನದ ಮುನ್ಸೂಚನೆ ದೊರೆತಂತೆ. ಹಿಮದ ಗಡ್ಡೆ ಕರಗಿ, ಟೋಮಹಾಕ್ ನದಿ ಪುನಃ ಉತ್ಸಾಹಿ ಯುವಕರ ದೇಶಿ ದೋಣಿಯಾನಕ್ಕೆ ಅನುವಾದಂತೆ. ಆದರೆ ನನ್ನ ದೃಷ್ಟಿಯಲ್ಲಿ ನನಗೆ ಯಾರಾದರೂ ಮೊದಲು ಆಗತಾನೇ ಹುಟ್ಟಿದ ವನ್ಯಜೀವಿ ರೋಗಿಯೊಂದನ್ನು ನನ್ನ ಚಿಕಿತ್ಸಾಲಯಕ್ಕೆ ತರದ ಹೊರತು ಚಳಿಗಾಲ ಅಧಿಕೃತವಾಗಿ ಮುಗಿಯಿತು ಎಂದು ಹೇಳುವಂತಿರಲಿಲ್ಲ.

೧೯೮೩ರ ಮೇ ಮಾಹೆಯ ಒಂದು ನೀರ ಹಾಗೂ ಮಂಕು ಕವಿದ ಸಂಜೆಯ ವಾತಾವರಣದಲ್ಲಿ ಒಂದು ಪ್ರಕರಣ ಘಟಿಸಿತು. ಕರೆನ್ ಒಳಗೆ ಬಂದಾಗ ನಾನು

ಪ್ರಯೋಗಾಲಯದಲ್ಲಿ ಕೆಲವು ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡುತ್ತಿದ್ದೆ. ಕರೆನ್ ಹೇಳಿದಳು "ಡಾ|| ಫಾಸ್ಟರ್, ಜಿಮ್ ಹಾಗೂ ಬಿವರ್ಲಿಕ್ಲೈನ್ ಇಬ್ಬರು ಪೆಟ್ಟು ಬಿದ್ದ ಮೊಲವೊಂದನ್ನು ತಂದಿದ್ದಾರೆ. ಮುಂಭಾಗದ ಕೊಠಡಿಯಲ್ಲಿ ಕುಳಿತಿದ್ದಾರೆ. ನಿಮಗೆ ಅವರ ಜ್ಞಾಪಕ ಇದೆಯಾ? ಅವರ ಹತ್ತಿರ ಎರಡು ಐರಿಷ್ ಬೇಟೆ ನಾಯಿಗಳು ಮತ್ತು ಒಂದು ಬೆಕ್ಕು ಇದೆ."

ಜ್ಞಾಪಕಕ್ಕೆ ಬಂತು. ಜಿಮ್ ಪರವಾಗಿಲ್ಲ. ಆದರೆ ಬಿವರ್ಲಿ ಸ್ವಲ್ಪ ಜಗಳಗಂಟಿ. ಯಾವಾಗಲೂ ಅವರಿಬ್ಬರೂ ಯಾವುದಾದರೊಂದು ವಿಷಯದ ಬಗ್ಗೆ ಜಗಳ ಕಾಯು ತ್ತಿದ್ದರು.

ಜಿಮ್ ಮತ್ತು ಬಿವರ್ಲಿ ಜೋರಾಗಿ ವಾದ ಮಾಡುತ್ತಿದ್ದಾಗ ಕರೆನ್ ಬಂದು ನನಗೆ ತಿಳಿಸಿದಳು. ನಾನು ಅವರ ಸಂಭಾಷಣೆ ಆಲಿಸಿದೆ.

"ಇದು ವೃಥಾ ಕಾಲಹರಣ. ನೂರಾರು ಮೊಲಗಳು ಕಾಡಿನಲ್ಲಿ ಸಾಯುತ್ತಿರ ವಾಗ ಇಲ್ಲಿ ನೀನು ಒಂದು ಮೊಲವನ್ನು ಬದುಕಿಸಲು ಪ್ರಯತ್ನಿಸುವುದರಲ್ಲಿ ಯಾ ಅರ್ಥವಿದೆ" ಎಂದು ಜಿಮ್ ಹೇಳುತ್ತಿದ್ದ.

"ಪಾಪ, ಬಡಪಾಯಿ. ಬದುಕಿಕೊಳ್ಳಲಿ. ಅದರ ಗೂಡಿನ ಮೇಲೆ ನಿನ್ನ ಯಂತ್ರ ಹರಿಸಿದ್ದು ನಿನ್ನ ತಪ್ಪು ತಾನೆ" ಎಂದು ಪ್ರಶ್ನಿಸಿದಳು.

"ಓ! ಬಿವರ್ಲಿ, ಪ್ರಕೃತಿಯಲ್ಲಿ ಕೆಲವು ಪ್ರಾಣಿಗಳು ಈ ರೀತಿಯಲ್ಲಿ ಸಾಯುತ್ತವೆ ನೀನು ಸಾಕಷ್ಟು ಡಿಸ್ನಿ ಮೂವಿಗಳನ್ನು ನೋಡಿರುವೆ. ನಿನಗೆ ಇದು ಅಷ್ಟು ಸುಲಭವಾ ಅರ್ಥವಾಗುವುದಿಲ್ಲ. ವನ್ಯಜೀವಿಗಳ ಜೀವನಕ್ರಮವೇ ಹಾಗೆ" ಎಂದು ಜಿಮ್ ಅಲಕ್ಷ ದಿಂದ ನುಡಿದ.

"ಓ! ಹಾಗಾ! ಹಾಗಿದ್ದರೆ ಅದರ ಗೂಡನ್ನು ಧ್ವಂಸ ಮಾಡಿದ ಆ ನಿನ್ನ ಹುಲ್ಲ ಕತ್ತರಿಸುವ ಯಂತ್ರ ಸಹ ನಿಸರ್ಗದ ಕೊಡುಗೆಯೇ?" ಎಂದು ಛೇಡಿಸಿದಳು ಬಿವರ್ಲಿ

"ನೋಡು ಬಿವರ್ಲಿ, ಈ ಮೊಲ ಚೆನ್ನಾಗಾದರೂ ಕಾಡಿನಲ್ಲಿ ಯಾವುದಾದರ ಪ್ರಾಣಿ ತಿಂದು ಹಾಕುತ್ತೆ. ನರಿ ಬಿಡುತ್ತಾ? ಗರುಡ, ನೀರಹಕ್ಕಿ ಮುಂತಾದ ಪಕ್ಷಿಗಳನ ಬದುಕಿಸುವುದನ್ನೇನೋ ನೋಡಿದ್ದೇನೆ. ಆದರೆ ಮೊಲನಾ ಎಲ್ಲಾದರೂ ಉಂಟಾ ಫಾಸ್ಟರ್‌ಗೆ ಮಾಡೋಕೆ ಇನ್ನೂ ಎಷ್ಟೋ ಒಳ್ಳೆಯ ಕೆಲಸಗಳಿವೆ" ಎಂದ ಜಿಮ್.

ರಸಾಯನಿಕ ಪರೀಕ್ಷೆ ಮುಗಿದ ಬಗ್ಗೆ ವಿದ್ಯುದ್ಯಂತ್ರ ಸೂಚನೆ ನೀಡಿತು. ನಾ ಕೂಡಲೇ ಫಲಿತಾಂಶಗಳನ್ನು ಬರೆದಿಟ್ಟು ಪರೀಕ್ಷಾ ಕೊಠಡಿಗೆ ಬಂದೆ. ಆ ದಂಪತಿ ಸಂಭಾಷಣೆಯನ್ನು ಆಲಿಸದವನಂತೆ ಅವರ ಕುಶಲ ವಿಚಾರಿಸಿದೆ.

"ನಮಗೇನಿದೆ ಈ ಪೆಟ್ಟಿಗೆಯಲ್ಲಿ?" ಎಂದು ಕೇಳಿದೆ.

ಅದನ್ನು ತನ್ನೆಡೆಗೆ ಎಳೆದುಕೊಂಡ ಬಿವರ್ಲಿ, ಇಂಪಾದ ಕಂಠದಲ್ಲಿ "ಇದರೊ ಈಗ ತಾನೇ ಹುಟ್ಟಿದ ಬನ್ನಿ ಇದೆ" ಎನ್ನುತ್ತ ಆ ಪೆಟ್ಟಿಗೆಯನ್ನು ಎತ್ತಿ ತಪಾಸಣೆ ಮೇಜಿನ ಮೇಲಿಟ್ಟಳು. "ಜಿಮ್ ಹುಲ್ಲುಗಾವಲನ್ನು ಮಟ್ಟಸ ಮಾಡುತ್ತಿದ್ದಾಗ ಯಂ ವನ್ನು ಅದರ ಗೂಡಿನ ಮೇಲೆ ಹರಿಸಿದ. ಅದರ ಬ್ಲೇಡ್ ಇದಕ್ಕೆ ತಗಲಿದೆ. ಇ ವಾಸಿಯಾಗಬಹುದೆಂದು ನನಗನಿಸುತ್ತದೆ" ಎಂದಳು.

ಜಿಮ್ ಏನೊಂದು ಮಾತನಾಡಲಿಲ್ಲ. ಪತ್ನಿಯೆಡೆ ದುರುಗುಟ್ಟಿ ನೋಡುತ್ತ ನಿಟ್ಟುಸಿರು ಬಿಟ್ಟ, ಬೇಸರದಿಂದ.

"ಆಯಿತು, ನೀವು ಅದನ್ನು ಇಲ್ಲಿ ಬಿಡಿ, ಅದರ ಆರೋಗ್ಯ ನಾನು ನೋಡಿಕೊಳ್ಳುವೆ" ಎಂದು ಹೇಳಿದೆ.

ಚಿಕಿತ್ಸಾಲಯದ ಮುಂಬಾಗಿಲವರೆಗೆ ಹೋಗಿ ಅವರನ್ನು ಬೀಳ್ಕೊಡುವಾಗ, ಚಿಕಿತ್ಸಾಲಯಕ್ಕೆ ಮೊಲದ ಮರಿ ತಂದಿದ್ದಕ್ಕೆ ಅವರಿಗೆ ವಂದನೆ ಸಲ್ಲಿಸಿ ಒಳಬಂದೆ.

ಮಿಸೆಸ್ ಕ್ಲೈನ್ ಹೊರಟು ಹೋದ ಮೇಲೆ ಪೆಟ್ಟಿಗೆಯ ಮುಚ್ಚಳ ತೆಗೆದೆ. ಒಳಗಡೆ ಭಯದಿಂದ ವಿಹ್ವಲವಾಗಿ ನಡುಗುತ್ತಿದ್ದ ಪುಟ್ಟಮರಿಯನ್ನು ಮೃದುವಾಗಿ ಕೈಗೆತ್ತಿಕೊಂಡೆ, ಅದಕ್ಕೆ ಬಿದ್ದಿರುವ ಪೆಟ್ಟನ್ನು ಪರೀಕ್ಷಿಸಲು. ಆ ಮೊಲ ಕೇವಲ ೯ ಸೆಂಟಿಮೀಟರಿನಷ್ಟು ಉದ್ದವಿತ್ತು. ಬೆನ್ನ ಮೇಲೆ ನವಿರಾದ ಕಂದುಬಣ್ಣದ ಪುಟ್ಟ ಪುಟ್ಟ ತುಪ್ಪಳ ಹಾಗೂ ತಳಭಾಗದಲ್ಲಿ ಅಪ್ಪಟ ಶ್ವೇತವರ್ಣದ್ದು. ಸಣ್ಣ ಕೆಂಪನೆಯ ನಾಸಿಕ, ಕಲ್ಲಿ ಮೀಸೆಯ ಈ ಮರಿಯನ್ನು ಮೇಜಿನ ಮೇಲೆ ಮಲಗಿಸಿದಾಗ ರಂಪಾಟ ಮಾಡಿತು.

ಅದರ ದೇಹದ ಎಡಭಾಗದ ಕೊನೆಯ ಪಕ್ಕೆಲುಬಿನ ಮೇಲೆ ಸಣ್ಣ ಕಚ್ಚು ಬಿದ್ದಿತ್ತು. ಆ ಯಂತ್ರದ ಬ್ಲೇಡಿನ ಹೊಡೆತದ ಗುರುತು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಹೊಸ ಕಿಂಡಿಯ ಮೂಲಕ ಸಣ್ಣ ಕೆಂಬಣ್ಣದ ಕರುಳಿನ ಕುಣಿಕೆಗಳು ಕಾಣಿಸುತ್ತಿದ್ದವು. ತುಪ್ಪಟದ ಚೂರುಪಾರು, ಹುಲ್ಲುಕಡ್ಡಿ, ಮಣ್ಣು ಹೊಟ್ಟೆಯೊಳಗೆ ಸೇರಿಕೊಂಡಿತ್ತು.

ಈ ಐದು ವರ್ಷಗಳಲ್ಲಿ, ನಾನು ಯಾವುದೇ ಒಂದು ಪ್ರಾಣಿಯ ಜೀವವನ್ನು ಉಳಿಸಬೇಕೇ ಬೇಡವೇ ಎಂದು ನೂರಾರು ಬಾರಿ ಯೋಚಿಸಿ ತೀರ್ಮಾನಿಸಬೇಕಾಗುತ್ತಿತ್ತು. ವಿಶೇಷವಾಗಿ ಈ ತೀರ್ಮಾನ ಮನಸ್ಸಿಗೆ ಸುಲಭವಾಗಿ ಹೊಳೆಯುತ್ತಿತ್ತು. ರಣಹದ್ದಿಗಾಗಲೀ ಅಥವಾ ಕಡಲಹದ್ದಿಗಾಗಲೀ ಚಿಕಿತ್ಸೆ ನೀಡಲು ನಾನು ನಿಜಕ್ಕೂ ಹಿಂಜರಿಯುತ್ತಿರಲಿಲ್ಲ. ಆದರೆ ಆಗ ತಾನೇ ಹುಟ್ಟಿದ ಈ ಪುಟಾಣಿ ಮೊಲದ ಮರಿ ಬಗ್ಗೆ ಜಿಮ್‌ಕ್ಲೈನನ ವಾದ ಸರಿಯಿರಬಹುದು. ಈ ರೋಗಿಯಂತಹ ರೋಗಿಗಳು ಕಾಡಿನಲ್ಲಿ ಸಾವಿರಾರು ಅಥವಾ ಪ್ರಾಯಶಃ ಮಿಲಿಯನ್‌ಗಟ್ಟಳೆ ಇರಬಹುದು.

'ಮೊಲದ ಅಸಂಖ್ಯಾತ ಸಂತತಿಯಲ್ಲಿ ಈ ಮರಿಯ ಪ್ರಾಣ ಅಷ್ಟು ಮಹತ್ವದ್ದಲ್ಲದಿರಬಹುದು. ಜೊತೆಗೆ ಈಗಲೇ ಇದಕ್ಕೆ ಚಿಕಿತ್ಸೆ ಪ್ರಾರಂಭಿಸುವುದೆಂದರೆ ಕರೆನ್‌ಳನ್ನು ಮತ್ತೆ ೪೫ ನಿಮಿಷಗಳವರೆಗೆ ಇಲ್ಲೇ ನಿಲ್ಲಿಸಿಕೊಂಡಂತೆ. ಆಗಲೇ ೭ ಗಂಟೆಯಾಗುತ್ತಾ ಬಂದಿತ್ತು. ಸರಿಯಾದ ಚಿಕಿತ್ಸೆ ಅಂದಮೇಲೆ ಅನೆಸ್ತೀಸಿಯಾ ನೀಡಿ ಅನಂತರ ಗಾಯವನ್ನು ಮುಚ್ಚಲು ತುಂಬಾ ಜಟಿಲವಾದ ಹೊಲಿಗೆ ಹಾಕಬೇಕು. ಇದಕ್ಕೆಲ್ಲಾ ಸಾಕಷ್ಟು ಸಮಯ ಹಿಡಿಯುತ್ತಿತ್ತು.

ಇದೆಲ್ಲವನ್ನೂ ಯೋಚಿಸಿದ ನಾನು ಈ ರೋಗಿಯನ್ನು ಈ ರಾತ್ರಿ ಮನೆಗೆ ಸಾಗಿಸಿ ಅಲ್ಲಿ ಶಾಖದ ತಡಿ ಮೇಲೆ ಮಲಗಿಸುವುದೇ ಮೇಲೆಂದು ಯೋಚಿಸಿದೆ. ಲಿಂಡಾ ಆಗಲೀ ಅಥವಾ ನಾನಾಗಲೀ ರಾತ್ರಿ ಅದಕ್ಕೆ ಹಾಲು ಹಾಗೂ ಔಷಧಿ ಕುಡಿಸಲು ಕನಿಷ್ಠ ಎರಡು ಬಾರಿ ಏಳಬೇಕಿತ್ತು. ಇಷ್ಟು ಸಣ್ಣ ಮರಿಗೆ ಆರೈಕೆ ಬಹಳ ಹೆಚ್ಚೆನಿಸಿತು.

ಶಸ್ತ್ರಚಿಕಿತ್ಸೆ ಈಗಲೇ ಮಾಡಿದರೆ ಅದು ಬದುಕುಳಿಯುವುದರ ಬಗ್ಗೆ ನನಗೆ ಅನುಮಾನವಿತ್ತು. ಈ ಹಿಂದಿನ ನನ್ನ ಅನುಭವದಂತೆ ಇಂತಹ ಶಸ್ತ್ರಚಿಕಿತ್ಸೆಗಳು ಶೇ. ೫೦

ರಷ್ಟು ಮಾತ್ರ ಯಶಸ್ವಿಯಾಗುವ ಸಂಭವವಿತ್ತು. ನಾನು ಈ ಮೊಲದ ಜೀವವ
ಉಳಿಸಿದರೂ ಅದು ಗೂಬೆಗೋ, ನರಿಗೋ ಅಥವಾ ಕಾರಿನಡಿಗೆ ಸಿಕ್ಕಿಯೋ ಸಾ
ಬಹುದು. ಈ ದೃಷ್ಟಿಯಲ್ಲಿ ಜಿಮ್‌ನ ಮಾತು ಸತ್ಯ.

ಈ ಎಲ್ಲ ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡ ನಾನು ನನ್ನ ಕರ್ತ
ವನ್ನು ಮಾಡಿ ಮುಗಿಸಿದೆ.

ಲಿಂಡಾ ಅದರ ಬಗೆಗೆಲ್ಲಾ ತಲೆಕೆಡಿಸಿಕೊಳ್ಳಲಿಲ್ಲ. ಉತ್ಸುಕಳಾಗಿ ತಾನೇ ರಾ
ಎಚ್ಚರಗೊಂಡು ಈ ಹೊಸ ರೋಗಿಗೆ ಹಾಲು ಕುಡಿಸಿ, ಆರೈಕೆ ಮಾಡಿದಳು.

ಪ್ರೀತ್ಯರ್ಥ

೧೯೮೨ರ ವಸಂತ ಋತುವಿನ ರಾತ್ರಿ ಹಿತಕರವಾಗಿತ್ತು. ನೂರು ವರ್ಷಗಳ
ಹಳೆಯದಾದ ಆ ಬಿಳಿ ಬಣ್ಣದ ಬೃಹತ್ ಪೈನ್ ವೃಕ್ಷದ ಉನ್ನತ ಸ್ತೂಪಾಕಾ
ತುತ್ತತುದಿ ಕಪ್ಪು ವೆಲ್‌ವೆಟ್ ಬಣ್ಣದ ಹೊದಿಕೆಯ ಆಗಸವನ್ನು ದಿಟ್ಟಿಸುತ್ತಿ
ಅದನ್ನು ಒರಗಿಕೊಂಡು ನಾನು ಮತ್ತು ಲಿಂಡಾ ಕುಳಿತಿದ್ದೆವು. ದಿಗಂತದಲ್ಲಿ ಆಗ
ನೆತ್ತಿಗೇರಿದ್ದ ಪೂರ್ಣಚಂದ್ರ ಬೆಳದಿಂಗಳ ಮಂದಾರ ಕಿರಣಗಳನ್ನು ಅಂಗಳದಲ್ಲಿ ಚೆಲ್ಲಿ
ಕಾರಿಗೆ ಸಿಕ್ಕಿ ಕಾಲು ಮುರಿದುಕೊಂಡಿದ್ದ ಎಳೆ ಜಿಗರೆಮರಿಗೆ ಲಿಂಡಾ ಹಾಲು ಕುಡಿ
ತ್ತಿದ್ದಳು. ಅದರ ಕಂದುಬಣ್ಣದ ಕಣ್ಣುಗಳು ಭಯದಿಂದ ಅರಳಿದ್ದವು.

"ಅದು ಚೇತರಿಸಿಕೊಳ್ಳುತ್ತಿದೆ" ಎಂದು ಲಿಂಡಾಳಿಗೆ ನಾನು ಭರವಸೆ ನೀಡಿದೆ.

ನಮ್ಮೆದುರು ನನ್ನ ಹಾಗೂ ಮಾರ್ಶಿಯ ಹೆಸರಿನಲ್ಲಿ ನಿರ್ಮಿಸಿದ್ದ ಮೊಟ್ಟಮೊದ
ಪಾಸ್ಟರ್–ಸ್ಮಿತ್ ವನ್ಯಜೀವಿ ಚಿಕಿತ್ಸಾಲಯ ಎದ್ದು ಕಾಣುತ್ತಿತ್ತು. ನಮ್ಮ ಬಲಗ
ಇದ್ದ ೭ ಮೀಟರ್ ಉದ್ದದ ವರಾಂಡ, ಇತ್ತೀಚೆಗೆ ಕೆಲವೇ ವಾರಗಳ ಮುಂಚೆ
ಮುಗಿದಿದ್ದ ಪ್ರಾಣಿ ಚಿಕಿತ್ಸಾಲಯಕ್ಕೆ ಕೂಡಿಕೊಂಡಿತ್ತು. ಬೇಗ್ಗೆ ಉದ್ಘಾಟನೆಯ
ಲಿರುವ ನಾರ್ತ್‌ವುಡ್ ವನ್ಯಜೀವಿ ಚಿಕಿತ್ಸಾಲಯವು, ಪೆಟ್ಟು ಬಿದ್ದ ವನ್ಯಜೀವಿ
ಚಿಕಿತ್ಸೆ ಹಾಗೂ ಪುನರ್ವಸತಿಗಾಗಿಯೇ ಕಟ್ಟಲ್ಪಟ್ಟ, ಅಮೆರಿಕಾದ ಮಧ್ಯಪಶ್ಚಿ
ಪ್ರಾಂತ್ಯದಲ್ಲಿಯ ಪ್ರಪ್ರಥಮ ಪ್ರಾಣಿ ಚಿಕಿತ್ಸಾಲಯ.

ಇಂತಹ ಆಧುನಿಕ ಸೌಲಭ್ಯಗಳಿಂದ ಸುಸಜ್ಜಿತವಾದ ಚಿಕಿತ್ಸಾಲಯ ನೋಡಿ
ನಾನು, ಈ ನಿಟ್ಟಿನಲ್ಲಿಯ ನನ್ನ ಪ್ರಥಮ ಸಾಹಸವನ್ನು ನೆನೆಯದೇ ಇರಲಾಗಲಿ
ನನಗೆ ಜ್ಞಾಪಕವಿದ್ದಂತೆ ಒಂದು ಸಾರಿ ಮಾರ್ಶಿ, ರೇಸ್ ಮತ್ತು ನಾನು ಒಂ
ಪೆಟ್ಟುಬಿದ್ದ ಜಿಂಕೆಗೆ ಶಸ್ತ್ರಚಿಕಿತ್ಸೆ ಮಾಡುವ ಸಂದರ್ಭ ಒದಗಿ ಬಂದಿತ್ತು. ಅಂ
ನಾವು ಎರಡು ಮರದ ನಿಲುವುಗಳ ಮೇಲೆ ಒಂದು ಅಗಲವಾದ ಪ್ಲೈವುಡ್ ಹ
ಯನ್ನು ಇಟ್ಟು, ಅದನ್ನೇ ಶಸ್ತ್ರ ಚಿಕಿತ್ಸೆಯ ಮೇಜನ್ನಾಗಿ ಮಾಡಿಕೊಳ್ಳಬೇಕ
ಪರಿಸ್ಥಿತಿ. ಆ ಜಾಗವಾದರೋ ಒಂದು ಹಳೇಕಾಲದ ಶೆಡ್. ಆದರೆ ಅಲ್ಲಿಂದೀಚೆಗೆ ಅದೆ
ದೂರ ಸಾಗಿದ್ದೇವೆ ನಾವು!

ಈ ದಿನಗಳು ಲಿಂಡಾಳಿಗೂ ಅವಿಶ್ರಾಂತವಾಗಿದ್ದವು. ಅನೇಕ ವನ್ಯಜೀವಿ
ಆರೈಕೆಯ ನಡುವೆಯೇ ಆಕೆ ಮಗಳು ಅಲಿ ಮತ್ತು ಮಗ ಮೈಕ್‌ಗೆ ಜನ್ಮವಿತ್ತ
ಆದರೆ ವರುಷಗಳು ಉರುಳಿದ್ದೇ ಗೊತ್ತಾಗಲಿಲ್ಲ. ಲಿಂಡಾ ನಿಜಕ್ಕೂ ಸಹಜ ಸುಂದರ

ಅವಳು ಚಿಗರೆಯ ಮೇಲೆ ವಾಲಿಕೊಂಡು ಮುದ್ದು ಮಾಡುತ್ತಾ ಹಾಲು ಕುಡಿಸುವಾಗ ಅವಳ ಸುಂದರ ಕಪ್ಪು ಕೂದಲು ಭುಜದ ಮೇಲಿಂದ ಇಳಿದು ಚಿಗರೆಯ ತಲೆ ಮೇಲೆ ಹರಡಿತ್ತು. ಆಗ ಆಕೆ ಅಪ್ಸರೆಯಂತೆ ಕಂಡಳು, ನನ್ನ ಕಣ್ಣಿಗೆ.

"ಲಿಂಡಾ! ಇದು ನನ್ನ ಕಲ್ಪನೆಯೋ ಅಥವಾ ಈ ಚಿಗುರೇನೂ ಫೆಲಿನಾ ತರಹ ಕಾಣುತ್ತೊ?" ಎಂದು ಕೇಳಿದ. ಈ ಚಿಗರೆಯೂ ಫೆಲಿವಾಳನ್ನೇ ಹೋಲುತ್ತಿತ್ತು.

ಆಗ ತಾನೇ ಹುಟ್ಟಿದ ಚಿಗರೆ ಎಂದು ಭಾವಿಸಿ ಲಿಂಡಾ ಈ ಚಿಗರೆ ಮರಿಯನ್ನು ತೊಟ್ಟಿಲಿನಲ್ಲಿಟ್ಟು ಮಗುವಿನಂತೆ ತೂಗಿದಳು. "ನನಗೆ ಗೊತ್ತಿಲ್ಲ, ರೋರಿ. ಈ ಬೆಳದಿಂಗಳು ಚಿನ್ನಾಟ ತೋರುತ್ತಿದೆ. ಆಮೇಲೆ—" ಎನ್ನುತ್ತ ಲಿಂಡಾ ತಲೆ ಕೊಡವಿದಳು.

ನಾನು ನಗುತ್ತಾ ಚಿಗರೆಯ ನವಿರಾದ ಮೈ ಸವರಲು ಅದರ ಬಳಿಗೆ ಹೋದೆ. "ನನಗೆ ಗೊತ್ತು. ಎಲ್ಲಾ ಚಿಗರೆಗಳೂ ಒಂದೇ ತರಹ ಕಾಣುತ್ತವೆ". ಲಿಂಡಾಳ ಹತ್ತಿರ ಸರಿದೆ. ಅವಳು ನನ್ನ ಭುಜಕ್ಕೆ ತಲೆ ಒರಗಿಸಿದಳು. ಪ್ರಶಾಂತತೆಯ ತೆರೆಯೊಂದು ಗಾಳಿಯಲ್ಲಿ ತೂಗಾಡುತ್ತಿತ್ತು.

ಕತ್ತು ಉಳುಕಿದಂತಾಗಿ ತತ್‌ಕ್ಷಣ ಎಚ್ಚರಗೊಂಡೆ. ಫೈನ್ ಮರಕ್ಕೆ ಒರಗಿ ಕುಳಿತದ್ದಕ್ಕೆ ಬೆನ್ನಲ್ಲಿ ಸಣ್ಣಗೆ ನೋವು ಕಾಣಿಸಿತು. ಗಡಿಯಾರ ನೋಡಿದೆ. ಆಗಲೇ ಅಪರಾತ್ರಿ ಸಮಯ ೩–೩೦ ಆಗಿತ್ತು. ಲಿಂಡಾಳನ್ನು ನೋಡಿದೆ. ಅವಳನ್ನು ಹಾಗೂ ಅವಳ ಮಡಿಲಲ್ಲಿ ಮಲಗಿದ್ದ ಚಿಗರೆಯನ್ನು ಗಾಢನಿದ್ರೆ ಅಪ್ಪಿತ್ತು.

"ಲಿಂಡಾ, ಏಳು, ಆಗಲೇ ೩–೩೦" ಎಂದು ಕಿವಿಯಲ್ಲಿ ಪಿಸುಗುಟ್ಟಿದೆ.

ಚಿಗರೆಯನ್ನು ಅಂಗಳದ ಒಂದು ಮೂಲೆಯಲ್ಲಿ ಹುಲ್ಲಿನ ಹಾಸಿಗೆಯ ಮೇಲೆ ಮಲಗಿಸಿದೆವು. ಲಿಂಡಾ ಮುದ್ದು ಮಗುವನ್ನು ಲಲ್ಲೆಗರೆವಂತೆ ಅದನ್ನು ಮೃದುವಾಗಿ ತಟ್ಟಿದಳು. ಅದು ಕೆಲವು ನಿಮಿಷಗಳಲ್ಲೇ ನಿದ್ರಾಲೋಕಕ್ಕೆ ತೆರಳಿತು, ರಾತ್ರಿಯ ಉಳಿದ ನಿದ್ದೆಯನ್ನು ಕಳೆಯಲು.

"ಆಲಿ ಮತ್ತು ಮೈಕ್ ಮಲಗಿದರೇ".

"ಮಲಗಿರಬಹುದು. ರಾತ್ರಿ ನಿನ್ನ ತಂಗಿ ಜೊತೆ ಇದ್ದರು. ಬೆಳಿಗ್ಗೆ ಬೇಗ ಏಳಿಸು. ಉದ್ಘಾಟನಾ ಸಮಾರಂಭಕ್ಕೆ ಅವರೂ ನಮ್ಮ ಜೊತೆ ಬರಲಿ. ಆಲಿ, ಈ ಹೊಸ ಚಿಗರೆಯನ್ನು ನೋಡಿ ಖುಷಿಯಾಗುತ್ತಾಳೆ."

ನಾವು ಅಂಗಳ ಬಿಟ್ಟು ವನ್ಯಜೀವಿ ಚಿಕಿತ್ಸಾಲಯಕ್ಕೆ ಬಂದೆವು. ಹೊಸ ಕಟ್ಟಡ, ಮಂದ ಪ್ರಕಾಶನದ ಹೊನಲಿನಲ್ಲಿ ಪ್ರಶಾಂತತೆಯಿಂದ ತುಂಬಿತ್ತು. ವನ್ಯ ಜೀವಿ ರೋಗಿಗಳು ಇನ್ನೂ ಹಳೇ ಕಟ್ಟಡದಲ್ಲೇ ಇದ್ದವು, ಹೊಸ ಕಟ್ಟಡಕ್ಕೆ ಬರಲು ಅದರ ಉದ್ಘಾಟನೆಯನ್ನು ನಿರೀಕ್ಷಿಸುತ್ತಾ.

"ಲಿಂಡಾ, ಇಂಥ ಪ್ರಶಾಂತತೆಯನ್ನು ಅನುಭವಿಸುವುದು ಇದೇ ಕೊನೆಯ ಬಾರಿ ಎಂದು ನನಗನ್ನಿಸುತ್ತಿದೆ. ಪುನಃ ಎಂದಿಗೂ ಇಂತಹ ಪ್ರಶಾಂತತೆ ಇಲ್ಲಿ ಮರುಕಳಿಸುವುದಿಲ್ಲವೇನೋ" ಎಂದೆ.

ಲಿಂಡಾಳಿಗೆ ಅರ್ಥವಾಯಿತು. ನನ್ನ ಕೈ ಹಿಡಿದುಕೊಂಡಳು. ನಾವಿಬ್ಬರು ಒಬ್ಬರಿಗೊಬ್ಬರು ಒತ್ತರಿಸಿಕೊಂಡು ಚಿಕಿತ್ಸಾ ಕೊಠಡಿಯವರೆಗೆ ಬಂದೆವು. ಬೀರುಗಳಲ್ಲಿ ಸಾಲಾಗಿ ಜೋಡಿಸಿಟ್ಟಿದ್ದ ಔಷಧಿ ಶೀಷೆಗಳು, ಮೂಲೆಯಲ್ಲೊಂದು ಧಡೂತಿ

ರೆಫ್ರಿಜಿರೇಟರ್, ಅದರ ಬಾಗಿಲು ತೆರೆದೆ. ಅದರಲ್ಲಿ ಸ್ಥಳೀಯ ಹೋಟೆಲ್ ಮಾಲೀಕರ ಪ್ರಾಣಿಗಳಿಗೆಂದು ಉಚಿತವಾಗಿ ನೀಡಿದ್ದ ಸೀಗಡಿ, ಮಾಂಸದ ತುಣುಕು, ವಗೈರೆಗ ಪ್ಯಾಕೆಟ್ ತುಂಬಿತ್ತು.

ಪಕ್ಕದ ಕೊಠಡಿಯ ಬಾಗಿಲಮೇಲೆ "ನೀರಹಕ್ಕಿ" ಎಂದು ಬರೆದು ಅಂಟಿಸಿದ್ ಚೀಟಿ ಕಾಣಿಸಿತು. ನಾವು ಚಿಕಿತ್ಸೆ ನೀಡುತ್ತಿದ್ದ ಅಮೆರಿಕಾದ ಜೌಗು ಪ್ರದೇಶದ ಹಕ್ ಮತ್ತು ಕ್ರೌಂಚ ಪಕ್ಷಿಯೊಂದನ್ನು ಈ ಕೊಠಡಿಗೆ ವರ್ಗಾಯಿಸಬೇಕಿತ್ತು. ಪೆಟ್ಟು ಬಿ ಬಾತು ಹಾಗೂ ನೀರಹಕ್ಕಿಗಳಿಗೆಂದು ಈ ಕೊಠಡಿಯಲ್ಲಿ ಗೋಡೆಗೆ ಹೊಂದಿಕೊಂಡಂ ನಿರ್ಮಿಸಿದ್ದ ಆಳವಾದ ಒಂದು ನೀರಿನ ತೊಟ್ಟಿ, ಅವುಗಳಿಗೆ ಪ್ರಶಸ್ಥವಾಗಿತ್ತು. ಮುಂದಿನದ ಪಕ್ಷಿಗಳ "ಹಾರಾಟದ ಕೊಠಡಿ". ಬೇಟೆಗೆ ಗುರಿಯಾಗುವ ಪಕ್ಷಿಗಳ ಪುನರ್‌ವಸತಿಗಾ ನಿರ್ಮಿಸಲಾಗಿತ್ತು. ಮತ್ತೊಂದು ಕೊಠಡಿಯಲ್ಲಿ ಬರೀ ಪಂಜರಗಳು ಇತರೆ ವನ್ಯ ಜೀವಿಗ ಸಂರಕ್ಷಣೆಗೆ.

"ಹೊರಗಡೆ ಇನ್ನೂ ಮೂರು ಹಾರಾಟದ ಪಂಜರಗಳಿವೆ" ಎಂದೆ ನಾನ ಅನ್ಯಮನಸ್ಕನಾಗಿ. "ನನಗೆ ಗೊತ್ತು" ಎಂದು ಲಿಂಡಾ ಮೃದುವಾಗಿ ನಕ್ಕಳು. ನಾನ ನೆಟ್ಟ ನೋಟದಿಂದ ಲಿಂಡಾಳನ್ನು ದೃಷ್ಟಿಸಿದೆ. ನನ್ನ ಲಿಂಡಾ ಅಪೂರ್ವ ಸುಂದರಿ. ನಾನ ಹೇಗೆ ಈ ಚಿಕಿತ್ಸಾಲಯದ ಒಂದು ಅವಿಭಾಜ್ಯ ಅಂಗವೋ ಹಾಗೆಯೇ ಅವಳೂ ಇದರ ಒಂದಾಗಿದ್ದಳು.

ಸ್ವಾಗತ ಕೊಠಡಿಯಲ್ಲಿಟ್ಟಿದ್ದ ಫೋನಿನ ಪಕ್ಕದ ಮೇಜಿನ ಮೇಲೆ ಸಂದೇಶ ಓಲೆಗಳ ರಾಶಿ ಬಿದ್ದಿತ್ತು. "ಚಿಗರೆ ಬಂದಾಗಿನಿಂದ ನನಗೆ ಇವುಗಳನ್ನು ನೋಡುವುದ ಮರತೇ ಹೋಯಿತು. ರೇಸ್ ಮಿಚಿಗನ್‌ನಿಂದ ಫೋನ್ ಮಾಡಿದ್ದ. ನಾ ಸಮಾರಂಭಕ್ಕೆ ಬರಲು ರಾತ್ರಿ ಇಡೀ ಕಾರ್ ಡ್ರೈವ್ ಮಾಡಿಕೊಂಡು ಬರುತ್ತಾ ನಂತೆ. ಅವನ ಫೈನಲ್ ಪರೀಕ್ಷೆ ಚೆನ್ನಾಗಿ ಆಯಿತಂತೆ, ನಿಮಗೆ ತಿಳಿಸು ಅಂದ" ಎಂದಳ ಲಿಂಡಾ ಮುಗುಳ್ನಗುತ್ತಾ.

ಏಳು ವರ್ಷಗಳು ಕಳೆದವು. ಇನ್ನೊಂದು ವರ್ಷ ಬಾಕಿ ಇದೆ, ೮ ವರ್ಷಕ್ಕೆ. ತ ಕೊಡವಿಕೊಂಡೆ; ನಾನು ಪಶುವೈದ್ಯ ವಿದ್ಯಾರ್ಥಿಯಾಗಿದ್ದಾಗಿನ ದಿನಗಳನ್ನು ನೆನಪಿ ಕೊಳ್ಳುತ್ತಾ.

"ನಿಮಗೊಂದು ಪತ್ರ ಇದೆ ಇಲ್ಲಿ. ಯಾರೋ ಪಶುವೈದ್ಯರದು. ಒರೆಗಾನ್‌ನಿಂದ.

ನನಗೆ ಒರೆಗಾನ್‌ನಲ್ಲಿ ಪರಿಚಯದವರು ಯಾರೂ ಇರಲಿಲ್ಲ. ಲಿಂಡಾ ನನಗೆ ಪತ್ರ ಕೊಟ್ಟಳು. ಅದನ್ನು ನೋಡುತ್ತಿದ್ದಂತೆ ನಾನು ದಿಗ್ಭ್ರಾಂತನಾದೆ. ಅದರ ಮೇ "ಮೃಗ ವೈದ್ಯ, ಮಿನೋಕ್ವಾ ವಿಸ್ಕಾನ್‌ಸಿನ್" ಎಂದು ಬರೆದಿತ್ತು !

ಅದ್ಹೇಗೋ ನನ್ನ ಮನೆ ಹೊಸಲಿನವರೆಗೂ ಬಂದಿದ್ದ ಆ ಪತ್ರವನ್ನು ಎಚ್ಚರಿ ಯಿಂದ ಒಡೆದು ಓದಿದೆ. ನಮ್ಮ ವನ್ಯಜೀವಿ ಚಿಕಿತ್ಸಾಲಯದ ಉದ್ಘಾಟನೆಯ ಬಗ್ ವೃತ್ತಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವನ್ನು ನೋಡಿ, ಆ ಪಶುವೈದ್ಯ ತಾನ ಸ್ವತಃ ಅಂತಹದೊಂದು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಮನಸ್ ಮಾಡಿದ್ದ. ಈ ಕಾರ್ಯದಲ್ಲಿ ನನಗೆ ಎದುರಾದ ಎಡರು–ತೊಡರುಗಳನ್ನು ತಿಳಿಸಬೇಕೆಂದ ಬರೆದಿದ್ದ. ಮುಂದೆ ನನಗೆ ಶುಭವಾಗಲೆಂದು ಹಾರೈಸಿದ್ದ.

"ಮೃಗವೈದ್ಯ" ಎಂದು ಅದರ ಮೇಲೆ ಬರೆದಿದ್ದನ್ನು ನೋಡಿದ ನಾನು ಆಶ್ಚರ್ಯ ಹಾಗೂ ಸಂತೋಷದಿಂದ ಅದನ್ನು ಲಿಂಡಾಳಿಗೆ ಕೊಟ್ಟೆ. ಅವಳೂ ಓದಿ ಖುಷಿ ಪಟ್ಟಳು. ನನ್ನೆಡೆಗೆ ನೋಡುತ್ತ "ಅವರಿಗೆ ಏನೆಂದು ಬರೆಯುವಿರಿ?" ಎಂದು ಕೇಳಿದಳು.

"ಸಿಜಾನೇ ಹೇಳೋಣ ಅಂತ ಯೋಚನೆ ಮಾಡಿದ್ದೀನಿ, ಬಾ, ಬಾ, ಇನ್ನು ಐದು ಗಂಟೆಗಳೊಳಗೆ ವಾಪಸ್ಸು ಬರಬೇಕು."

ಚಿಗರೆಯನ್ನು ಮತ್ತೊಂದು ಸಾರಿ ನೋಡೋಣವೆಂದುಕೊಂಡು ಅಂಗಳಕ್ಕೆ ಬಂದೆವು. ಅದರ ಮೈ ಸವರಲು ಲಿಂಡಾ ಬಾಗಿದಳು.

"ಆ ಡಾಕ್ಟರ್ ನಿಮಗೆ ಎದುರಾದ ಸಮಸ್ಯೆಗಳನ್ನು ಕೇಳಿದ್ದಾರೆ". "ನನಗೇನೋ ಯಾವ ಸಮಸ್ಯೆಯು ನೆನಪೂ ಇಲ್ಲ. ನಿನಗಿದೆಯಾ?"

ಆ ಮುಗ್ಧ ಪ್ರಾಣಿಯನ್ನು ನೋಡುತ್ತ, ಈ ಹತಾಶ ವನ್ಯಜೀವಿಗೆ ಹೇಗೆ ನಮ್ಮ ಪ್ರೀತಿ ಮತ್ತು ಹಾರೈಕೆ ಅತ್ಯವಶ್ಯಕವೋ ಹಾಗೆಯೇ ಎಲ್ಲ ಆಘಾತ ವನ್ಯಜೀವಿಗಳು ಹಾಗೂ ದಿಕ್ಕಿಲ್ಲದ ಪ್ರಾಣಿಗಳಿಗೆ ಈ ತರಹದ ಸಹಾಯ ಹಸ್ತ ಬೇಕೇಬೇಕು, ಎಂದು ಯೋಚಿಸಿದೆ.

"ನಾವು ಮಾಡುತ್ತಿರುವುದನ್ನೇ ಬರೆದರೆ ಸಾಕಲ್ಲವೇ" ಎಂದೆ.

ಸಹಾಯ ಹಸ್ತ

ಈ ಪುಸ್ತಕ ಪ್ರಕಟಣೆಗೆ ಸ್ವೀಕೃತಗೊಂಡ ಸ್ವಲ್ಪ ಕಾಲದಲ್ಲೇ ನನಗೆ ನನ್ನಲ್ಲೇ ಏನೋ ನ್ಯೂನತೆ ಉಂಟಾದಂತೆ ಭಾಸವಾಯಿತು. ಈ ಹಿಂದೆ ನನ್ನ ರೋಗಿ ಪ್ರಾಣಿಗಳನ್ನು, ಪರೀಕ್ಷಿಸಲು ಸುಲಭವಾಗಿ ಎತ್ತಿ ಶಸ್ತ್ರಚಿಕಿತ್ಸೆಯ ಮೇಜಿನ ಮೇಲಿಡುತ್ತಿದ್ದ ನನಗೆ ಈಗ ಅವು ಅತಿ ಭಾರವಾದಂತೆ ತೋರುತ್ತಿದ್ದವು. ಶಸ್ತ್ರಚಿಕಿತ್ಸೆ ಮಾಡುವಾಗ ಶಸ್ತ್ರಗಳನ್ನು ಕೆಳಗೆ ಬೀಳಿಸುತ್ತಿದ್ದೆ. ನನ್ನ ಪ್ರತಿರೂಪ ವಿಪರೀತ ದೊಡ್ಡದಾದಂತೆ, ಕೈಗಳು ದುರ್ಬಲವಾದಂತೆ ತೋರಿತು. ನರರೋಗ ತಜ್ಞರನ್ನು ಕಂಡೆ. ನನಗೆ ನರರೋಗ ತಗಲಿದೆ ಎಂದೂ ಆ ಕಾರಣ ದೇಹದ ಭಾಗಗಳು ಜಡವಾಗುವುದೆಂದೂ ಅವರು ಪತ್ತೆ ಹಚ್ಚಿದರು.

ಸಾಮಾನ್ಯವಾಗಿ ಈ ರೋಗ ತುಂಬಾ ಅಪಾಯಕಾರಿಯಾಗಿದ್ದು, ದಿನೇ ದಿನೇ ಉಲ್ಬಣಿಸುತ್ತ ತಗುಲಿದ ನಾಲ್ಕು ವರುಷಗಳಲ್ಲಿ ರೋಗಿಯನ್ನು ಚಿರನಿದ್ರೆಗೆ ಕಳುಹಿಸುತ್ತದೆ. ಯೋಚನೆಯ ಸಾಗರವೇ ನನ್ನನ್ನು ಕವಿಯಿತು. ಆದರೂ ಮನಸ್ಸನ್ನು ಗಟ್ಟಿಮಾಡಿಕೊಂಡೆ. ನಾನು ವನ್ಯಜೀವಿಗಳ ಸಂರಕ್ಷಣೆಗಾಗಿ ವಿನಿಯೋಗಿಸಿದ ಕಾಲವೇ ನನ್ನ ಜೀವನದ ಅತ್ಯಮೂಲ್ಯ ಕಾಲವೆಂದು ಮನಗಂಡೆ. ಎಲ್ಲೋ ಕೆಲವರಲ್ಲಿ ಇಲ್ಲದಿರಬಹುದು ಆದರೂ ನಮ್ಮಲ್ಲಿ ಬಹಳಷ್ಟು ಜನರಲ್ಲಿ ಈ ಮೃಗವೈದ್ಯನ ಭಾವನೆ ಸ್ವಲ್ಪವಾದರೂ ಮನೆ ಮಾಡಿದೆ ಎಂದು ನನ್ನ ನಂಬಿಕೆ. ಈ ಭಾವನೆ, ನಮಗಿಂತ ಅದೃಷ್ಟ ಹೀನರೆನಿಸಿದ ವನ್ಯಜೀವಿಗಳೆಡೆಗೆ ಸಹಾಯಹಸ್ತ ಚಾಚಬೇಕೆಂದು. ಇನ್ನೂ ನಿಮ್ಮ ಅಂತರ್ಯದಲ್ಲಿ ಆ ಸ್ಫೂರ್ತಿ ಜಾಗೃತಗೊಂಡಿಲ್ಲದಿದ್ದರೆ, ಈಗ ಅದಕ್ಕೆ ಸಮಯ ಬಂದಿದೆ, ಎದ್ದೇಳಿ. ನಿಮ್ಮ ಅಂತಃಸ್ಫೂರ್ತಿಯನ್ನು ಬಡಿದೆಬ್ಬಿಸಿ ವನ್ಯಜೀವಿಗಳ ಸಂರಕ್ಷಣೆಗೆ.

ಅನು : ಎಸ್. ಎನ್. ಲಕ್ಷ್ಮೀಪತಿ

ಯಶಪಾಲ್

ಪ್ರಧಾನ್ ಗುರುದತ್ತ

ನಾಡಿನ ರಾಜಕೀಯ ಇತಿಹಾಸದಲ್ಲಿ—ಅದರಲ್ಲಿಯೂ ನಮ್ಮ ನಾಡಿನ ಸ್ವಾತಂತ್ರ್ಯ ಸಾಧನೆಯ ಇತಿಹಾಸದಲ್ಲಿ—ಶಾಶ್ವತವಾದ ಗುರುತನ್ನು ಬಿಟ್ಟುಹೋಗಿರುವ ಮಹಾಚೇತನಗಳು ಹಲವು ಇರಬಹುದು; ನಾಡಿನ ಸಾಹಿತ್ಯೇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿರುವ ಸಾಹಿತಿಗಳೂ ಹಲವರಿರಬಹುದು; ಆದರೆ, ಈ ಎರಡರಲ್ಲಿಯೂ ಹಿರಿಯ ಸಾಧನೆಯನ್ನು ತನ್ನದಾಗಿಸಿಕೊಂಡಿರುವ ಚೇತನಗಳು ವಿರಳ. ಯಶಪಾಲ್ ಅಂಥ ವಿರಳ ಚೇತನವೂ ಹೌದು; ಅಂಥ ಚೇತನಗಳಲ್ಲಿ ಅಗ್ರಪಂಕ್ತಿಗೆ ಅರ್ಹರಾಗಿರುವವರೂ ಹೌದು. ನಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅವರ ಕ್ರಾಂತಿಕಾರಿ ಜೀವನ ಮೈನವಿರೇಳಿಸುವಷ್ಟು ರೋಮಾಂಚಕವಾಗಿದೆ; ಮಾನವತಾವಾದಿ ವಿಚಾರಧಾರೆಯ ಪ್ರಬಲ ಸಮರ್ಥಕರಾಗಿ ಪ್ರೇಮಚಂದರ ಉತ್ತರಾಧಿಕಾರಿ ಎಂಬ ಕೀರ್ತಿಯನ್ನು ಗಳಿಸಿರುವ ಅವರ ಸಾಹಿತ್ಯಿಕ ಸಾಧನೆ ಗೌರವಾರ್ಹವಾಗಿದೆ. ಇಬ್ಬಗೆಯಾದ ಈ ಸಾಧನೆಗಳಿಂದಾಗಿ ಅವರು ನಮ್ಮ ನಾಡಿನ ರಾಜಕೀಯ ಹಾಗೂ ಸಾಹಿತ್ಯಿಕ ಇತಿಹಾಸಗಳಲ್ಲಿ ಅಮರರಾಗಿ ಪರಿಣಮಿಸಿದ್ದಾರೆ.

ಯಶಪಾಲ್ ಡಿಸೆಂಬರ್ ೩, ೧೯೦೩ ರಂದು ಫಿರೋಜ್‌ಪುರದ ದಂಡಿನಲ್ಲಿ ಹುಟ್ಟಿದರು. ಇವರ ತಂದೆ-ತಾಯಿ ಕಾಂಗಡಾ ಜಿಲ್ಲೆಯ ನಿವಾಸಿಗಳಾಗಿದ್ದುದರಿಂದ ಇವರ ಮೊದಲ ವಿದ್ಯಾಭ್ಯಾಸ ನಡೆದದ್ದು ಕಾಂಗಡಿಯ ಗುರುಕುಲದಲ್ಲಿ. ಇವರ ಕುಟುಂಬಕ್ಕೆ ಆಧಾರವಾಗಿದ್ದುದು ಅಧ್ಯಾಪಿಕೆಯಾಗಿದ್ದ ಇವರ ತಾಯಿ ಸಂಪಾದಿಸಿ ತರುತ್ತಿದ್ದ ೩೦ ರೂ.ಗಳ ತಿಂಗಳ ಸಂಬಳ. ಇದರಲ್ಲಿಯೇ ಮನೆಯ ಖರ್ಚು ಹಾಗೂ ಯಶಪಾಲರ ವಿದ್ಯಾಭ್ಯಾಸದ ಖರ್ಚನ್ನು ಸರಿದೂಗಿಸುವುದು ಅಸಾಧ್ಯವಾದ ಸಂಗತಿಯಾಗಿರಲಿಲ್ಲವಾದರೂ, ಕಷ್ಟಕರವಾಗಿದ್ದಿತೆಂಬುದರಲ್ಲಿ ಅನುಮಾನವೇನೂ ಇಲ್ಲ. ಆದ್ದರಿಂದ ಕಾಂಗಡಿಯ ಗುರುಕುಲದಲ್ಲಿ ಅವರು ಶುಲ್ಕವಿನಾಯಿತಿ ಪಡೆ

ವಿದ್ಯಾರ್ಥಿಯಾಗಿದ್ದರು. ಏಳನೆಯ ತರಗತಿಯಲ್ಲಿ ಓದುತ್ತಿದ್ದಾಗ ಅವರ ಆರೋಗ್ಯ ಹದಗೆಟ್ಟಿತು. ಹೀಗಾಗಿ, ಅವರ ತಾಯಿ ಅವರನ್ನು ಲಾಹೋರಿಗೆ ಕರೆದುಕೊಂಡು ಹೋದರು. ಲಾಹೋರಿನ ಡಿ.ಎ.ವಿ. ಶಾಲೆಯಲ್ಲಿ ಅವರ ವಿದ್ಯಾಭ್ಯಾಸ ಮುಂದುವರಿಯಿತು. ಮುಂದೆ, ತಾಯಿಯೊಡನೆ ಫಿರೋಜ್‌ಪುರಕ್ಕೆ ತೆರಳಬೇಕಾಯಿತು. ಅಲ್ಲಿಯ ಮನೋಹರಲಾಲ್ ಪ್ರೌಢಶಾಲೆಯಲ್ಲಿ ಈ ಹಂತದ ವಿದ್ಯಾಭ್ಯಾಸವನ್ನು ಮುಗಿಸಿದ ಅವರು, ಆ ತರುವಾಯ ಮತ್ತೆ ಲಾಹೋರಿನ ನ್ಯಾಷನಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿಯನ್ನು ಪಡೆದರು. ಸ್ವಾತಂತ್ರ್ಯೇತಿಹಾಸದ ಸ್ಮರಣೀಯ ವ್ಯಕ್ತಿಗಳಲ್ಲಿ ಒಬ್ಬರಾದ ಲಾಲಾ ಲಜಪತರಾಯ್ ಈ ಕಾಲೇಜಿನ ಸಂಸ್ಥಾಪಕರಾಗಿದ್ದರೆಂಬುದನ್ನೂ ಇಲ್ಲಿ ಉಲ್ಲೇಖಿಸಬೇಕು. ಏಕೆಂದರೆ, ಒಂದು ರೀತಿಯಲ್ಲಿ ನಿರಾಶರಾಗಿಯೇ ಯಶಪಾಲ್ ಈ ಕಾಲೇಜಿಗೆ ಸೇರಿಕೊಂಡಿದ್ದರು. ಆರ್ಯಸಮಾಜಕ್ಕೆ ಸೇರಿದ್ದ ತಮ್ಮ ತಾಯಿಯ ಪ್ರಭಾವದಿಂದಾಗಿ ಮೊದಮೊದಲು ಆರ್ಯಸಮಾಜದ ಆಂದೋಳನಗಳಲ್ಲಿ ಭಾಗವಹಿಸುತ್ತಿದ್ದ ಯಶಪಾಲರು, 'ರೌಲತ್ ಕಾಯ್ದೆ'ಯ ವಿರುದ್ಧವಾಗಿ ೧೯೧೯ರಲ್ಲಿ ಕಾಂಗ್ರೆಸ್ ನಡೆಸಿದ ರಾಷ್ಟ್ರವ್ಯಾಪಿ ಆಂದೋಳನದಿಂದ ದೂರವಾಗಿ ಉಳಿಯುವುದು ಸಾಧ್ಯವೇ ಇರಲಿಲ್ಲ. ಮುಂದೆ ೧೯೨೦–೨೧ರಲ್ಲಿ ಫಿರೋಜ್‌ಪುರದಲ್ಲಿ ಕಾಂಗ್ರೆಸ್ ಕಾರ್ಯಚಟುವಟಿಕೆಗಳು—ಅದರಲ್ಲಿಯೂ ವಿಶೇಷವಾಗಿ ಸ್ವದೇಶಿ ಆಂದೋಳನ ಅಥವಾ ಚಳವಳಿ—ಪರಿಣಾಮಕಾರಿಯಾಗಿ ನಡೆಯುವಲ್ಲಿ ಯಶಪಾಲರೂ ವಿಶೇಷವಾಗಿ ಶ್ರಮಿಸಿದ್ದರು. ೧೯೨೨ರಲ್ಲಿ ಚೌರಚಾರಾದ ಘಟನೆಯ ತರುವಾಯ—ಈ ಸಂದರ್ಭದಲ್ಲಿ ಕೆಲವು ಇಂಗ್ಲಿಷ್ ಅಧಿಕಾರಿಗಳನ್ನು ಭಾರತೀಯರು ಕೊಂದುಹಾಕಿದ್ದುದರಿಂದಾಗಿ—ಗಾಂಧೀಜಿಯವರು ತಮ್ಮ ಅಸಹಕಾರ ಚಳವಳಿಯನ್ನು ರದ್ದುಪಡಿಸಿದಾಗ ಘೋರ ನಿರಾಶೆಗೆ ಒಳಗಾದ ವ್ಯಕ್ತಿಗಳಲ್ಲಿ ಯಶಪಾಲರೂ ಒಬ್ಬರಾಗಿದ್ದರು. ಈ ನಿರಾಶೆಯೇ ಅವರನ್ನು ಲಾಹೋರಿನ ನ್ಯಾಷನಲ್ ಕಾಲೇಜಿಗೆ ಎಳೆದು ತಂದಿತ್ತು.

ನ್ಯಾಷನಲ್ ಕಾಲೇಜಿನಲ್ಲಿ ಯಶಪಾಲರಿಗೆ ಭಗತ್‌ಸಿಂಹ, ಸುಖದೇವ, ಭಗವತೀ ಚರಣ ಮೊದಲಾದವರ ಪರಿಚಯ ಉಂಟಾಯಿತು. ಅಸಹಕಾರ ಚಳವಳಿಗಿಂತಲೂ ಪ್ರಬಲವಾದ ರಾಜಕೀಯ ಅಸ್ತ್ರಗಳನ್ನು ಉಪಯೋಗಿಸಿ ನಾಡಿನ ಸ್ವಾತಂತ್ರ್ಯವನ್ನು ಸಾಧಿಸಬೇಕೆಂಬ ಧ್ಯೇಯವನ್ನು ಹೊಂದಿದ್ದ ಈ ಮಿತ್ರರು ಯಶಪಾಲರನ್ನು ಸಹಜವಾಗಿಯೇ ತಮ್ಮತ್ತ ಸೆಳೆದುಕೊಂಡರು. ಗಾಂಧೀಜಿಯವರ ಅಹಿಂಸಾಮಾರ್ಗಕ್ಕಿಂತ ಕ್ರಾಂತಿಕಾರಿ ಮಾರ್ಗವೇ ಫಲಕಾರಿಯಾಗುತ್ತದೆಂಬುದು ಇವರೆಲ್ಲರ ದೃಢವಾದ ನಂಬಿಕೆಯಾಗಿತ್ತು. ಹೀಗಾಗಿ, 'ಕ್ರಾಂತಿಕಾರಿ ದಳ' ಹಾಗೂ 'ನೌಜವಾನ್ ಭಾರತ ಸಭಾ'ಗಳು ಜನ್ಮ ತಳೆದುವು. ಕ್ರಾಂತಿಕಾರಿ ದಳದ ಗುಪ್ತ ಕಾರ್ಯಚಟುವಟಿಕೆಗಳಲ್ಲಿ ತೊಡಗುವ ಸಲುವಾಗಿ ಭಗತ್‌ಸಿಂಹ ಮತ್ತು ಇತರರು ಓದಿಗೆ ಮಂಗಳವನ್ನು ಹಾಡಿ, ಅಲ್ಲಿಂದ ಪರಾರಿಯಾದರು. ಆದರೆ, ಯಶಪಾಲರು ಅಲ್ಲಿಯೇ ಉಳಿದು ಬಿ. ಎ. ಪದವಿಯನ್ನು ಗಳಿಸಿ, ಅದೇ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿ, ಈ ದಳವನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿದರು.

೧೯೨೮ರಲ್ಲಿ ಅಸ್ತಿತ್ವಕ್ಕೆ ಬಂದ 'ಹಿಂದೂಸ್ತಾನ್ ಸಮಾಜವಾದಿ ಪ್ರಜಾತಂತ್ರ ಸೇನೆ'ಯ ಸಕ್ರಿಯ ಕಾರ್ಯಕರ್ತರಾಗಿ ಸರ್ದಾರ್ ಭಗತ್‌ಸಿಂಹ, ಚಂದ್ರಶೇಖರ

ಅಜಾದ್ ಮತ್ತು ಸುಖದೇವ್ ಅವರಂಥ ಕ್ರಾಂತಿಕಾರಿಗಳ ಜೊತೆಯಲ್ಲಿ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದ ಯಶಪಾಲರು 'ಸೈಮನ್ ಆಯೋಗ'ದ ಬಹಿಷ್ಕಾರ, ಸ್ಯಾಂಡರ್ಸ್ ಕೊಲೆ, ಲಾಹೋರ್ ಒಳಸಂಚು, ವೈಸ್‌ರಾಯ್ ಪ್ರಯಾಣ ಮಾಡುತ್ತಿದ್ದ ರೈಲುಬೋಗಿಯ ಸ್ಫೋಟನೆಯಂಥ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪಾಲುಗೊಂಡಿದ್ದರು. ಅವರು ಸ್ವಾತಂತ್ರ್ಯಕ್ಕಾಗಿ ಹಾತೊರೆಯು ತ್ತಿದ್ದ ಭಾರತೀಯ ಯುವಶಕ್ತಿಯ ಪ್ರತೀಕವೇ ಆಗಿದ್ದರು. ಅನೇಕ ಸಂದರ್ಭಗಳಲ್ಲಿ ಅವರು ಭೂಗತರಾಗಿಯೂ ತಮ್ಮ ಚಟುವಟಿಕೆಗಳನ್ನು ನಡೆಸಬೇಕಾಯಿತು. ಅವರ ಬಂಧನಕ್ಕೆ ಸರ್ಕಾರ ಬಹುಮಾನವನ್ನೂ ಘೋಷಿಸಿತ್ತು. ೧೯೩೨ ರಲ್ಲಿ ಬಂಧಿತರಾದ ಅವರಿಗೆ ಜೀವಾವಧಿ ಸೆರೆವಾಸವನ್ನು ವಿಧಿಸಲಾಗಿತ್ತು. ಬರೈಲಿಯ ಸೆಂಟ್ರಲ್ ಜೈಲಿನಲ್ಲಿ ಇದ್ದಾಗ ೧೯೩೬ ರಲ್ಲಿ ಶ್ರೀಮತಿ ಪ್ರಕಾಶವತಿ ಕಪೂರ್ ಅವರೊಂದಿಗೆ ಅವರ ಮದುವೆ ನಡೆಯಿತು. ಕ್ರಾಂತಿದಳದ ಗುಪ್ತ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದ ಆರೋಪದ ಮೇಲೆಯೇ ಶ್ರೀಮತಿ ಪ್ರಕಾಶವತಿ ಅವರು ಬಂಧಿತರಾಗಿ ಸೆರೆವಾಸವನ್ನು ಅನುಭವಿಸು ತ್ತಿದ್ದರು. ಈ ಮದುವೆ ಯಶಪಾಲರ ಕ್ರಾಂತಿಕಾರಿ ಜೀವನದ ಅರ್ಥಪೂರ್ಣ ಘಟನೆಯೂ ಹೌದು. ಮಧ್ಯಂತರ ಅವಧಿಯ ಸಂಯುಕ್ತ ಪ್ರಾಂತ್ಯಗಳ ಕಾಂಗ್ರೆಸ್ ಸರ್ಕಾರದ ಮಧ್ಯ ಪ್ರವೇಶದಿಂದ ೧೯೩೮ ರ ಮಾರ್ಚ್‌ನಲ್ಲಿ ಅವರನ್ನು ಬಿಡುಗಡೆ ಮಾಡಲಾಯಿತು. ತಮ್ಮ ಕ್ರಾಂತಿಕಾರಿ ಗೆಳೆಯರು ಆ ಹೊತ್ತಿಗಾಗಲೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆಹುತಿ ಯಾಗಿದ್ದುದರಿಂದ, ಯಶಪಾಲರು ಬಂದೂಕಿನಿಂದ ಗುಂಡು ಹಾರಿಸುವ ಕೆಲಸಕ್ಕೆ ಬಿಡುವು ಕೊಟ್ಟು, ತಮ್ಮ ಲೇಖನಿಯ ಮೂಲಕ ಶಬ್ದರೂಪದ ಗುಂಡುಗಳನ್ನು ಹಾರಿಸತೊಡಗಿದರು. ಇಲ್ಲಿಯೂ ಜನಜಾಗೃತಿಯನ್ನು ಸಾಧಿಸಿದ್ದಲ್ಲದೆ, ತಮ್ಮ ಅದ್ವಿತೀಯ ಸಾಹಿತ್ಯಿಕ ಪ್ರತಿಭೆಯನ್ನೂ ಅವರು ಮೆರೆದರು.

ವಾಸ್ತವವಾಗಿ ಯಶಪಾಲರ ಸಾಹಿತ್ಯಿಕ ಜೀವನ ಬಹಳ ಹಿಂದೆಯೇ ಆರಂಭ ಗೊಂಡಿತ್ತು. ಲಾಹೋರಿನಿಂದ ಪರಾರಿಯಾಗಿದ್ದ ಮೂರು ವರ್ಷಗಳ ಅವಧಿಯಲ್ಲಿ ಯಶಪಾಲರು ಒಂದಲ್ಲ ಒಂದು ಬಗೆಯ ಬರವಣಿಗೆಯಲ್ಲಿ ತೊಡಗಿದ್ದರು. 'ಹಿಂದೂಸ್ತಾನ ಸಮಾಜವಾದಿ ಪ್ರಜಾತಂತ್ರ ಸೇನೆ'ಯ ಪರವಾಗಿ 'ಫಿಲಾಸಫಿ ಆಫ್ ದಿ ಬಾಂಬ್' ಎಂಬ ಕಿರುಹೊತ್ತಗೆಯನ್ನು ಅವರು ಪ್ರಕಟಿಸಿದ್ದರು. ಆಗಲೇ ಒಂದು ಕ್ರಾಂತಿಕಾರಿ ನಾಟಕವನ್ನೂ ಅನುವಾದಿಸಿದ್ದಂತೆ ಕಾಣುತ್ತದೆಯಾದರೂ ಅದಿನ್ನೂ ಪ್ರಕಟವಾಗಿಲ್ಲ. ಹೆಸರು ಬದಲಾಯಿಸಿ ಋಷಭಚರಣ ಜೈನರ ಮೂಲಕ ಪ್ರಕಟಪಡಿಸಿದ್ದ 'ಗಾಂಧಿ ಔರ್ ಲೆನಿನ್' (ಗಾಂಧಿ ಮತ್ತು ಲೆನಿನ್) ಎಂಬ ಅವರ ಗ್ರಂಥವನ್ನು, ರಹಸ್ಯ ಹೊರಬಿದ್ದ ಬಳಿಕ, ಆಂಗ್ಲ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತ್ತು. ಸೆರೆಮನೆಯಿಂದ ಹೊರ ಬಂದ ಬಳಿಕ, ಪಂಜಾಬಿಗೆ ಹಿಂದಿರುಗಲು ಸಾಧ್ಯವಿಲ್ಲದೆ ಇದ್ದುದರಿಂದ, ಮಾಹೆಯಾನ ಎಪ್ಪತ್ತೈದು ರೂ.ಗಳ ವೇತನದ ಮೇಲೆ ಲಖ್ನೌನಿಂದ ಹೊರಡುತ್ತಿದ್ದ ವಾರಪತ್ರಿಕೆ ಯೊಂದರ ಉಪಸಂಪಾದಕರಾಗಿ ದುಡಿಯತೊಡಗಿದರು. ಕೆಲಕಾಲಾನಂತರ ೧೯೩೮ರಲ್ಲಿ ತಮ್ಮ ಪತ್ನಿಯ ನೆರವಿನೊಂದಿಗೆ 'ವಿಪ್ಲವ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿದರು. 'ಬಾಗೀ' (ಕ್ರಾಂತಿಕಾರಿ) ಎಂಬ ಹೆಸರಿನಲ್ಲಿ ಅದರ ಉರ್ದು ಆವೃತ್ತಿಯನ್ನೂ ಹೊರ

ತೊಡಗಿದರು. ಈ ಪತ್ರಿಕೆಯಲ್ಲಿನ 'ಚಕ್ಕರ್ ಕ್ಲಬ್', 'ಮಾರ್ಕ್ಸ್‌ವಾದದ ಪಾಠಶಾಲೆ', 'ಸಿಂಹಾವಲೋಕನ' (ಇದು ಅವರ ಆತ್ಮಕಥೆ, ಮುಂದೆ ಗ್ರಂಥರೂಪದಲ್ಲಿಯೂ ಪ್ರಕಟವಾಯಿತು) ಮೊದಲಾದ ಅಂಕಣಗಳು ತುಂಬ ಜನಪ್ರಿಯವಾಗಿದ್ದುವು. ಅದು ತನ್ನ ಕಾಲದ ಅತ್ಯಂತ ಜನಪ್ರಿಯ ಹಾಗೂ ಪ್ರಭಾವಶಾಲಿ ಪತ್ರಿಕೆಯಾಗಿತ್ತು. ಆಂಗ್ಲ ಸರ್ಕಾರದ ವಿರೋಧದಿಂದಾಗಿ, ೧೯೪೧ರಲ್ಲಿ ಇದರ ಹೆಸರನ್ನು 'ವಿಪ್ಲವೀ ಟ್ರ್ಯಾಕ್ಟ್' ಎಂದು ಬದಲಾಯಿಸಲಾಯಿತು. ೧೯೪೨ರಲ್ಲಿ ಮತ್ತೆ ಯಶಪಾಲರನ್ನು ಬಂಧಿಸಿದಾಗ ಈ ಪತ್ರಿಕೆ ನಿಂತುಹೋಯಿತು. ಆದರೂ, ರಾಜಕೀಯ-ಪತ್ರಿಕೋದ್ಯಮ ಪ್ರಕಾರಕ್ಕೆ ಅಡಿಗಲ್ಲನ್ನು ಹಾಕಿದ ಹಾಗೂ ಅನೇಕ ನಗರಗಳಲ್ಲಿನ ಔದ್ಯೋಗಿಕ ಕ್ಷೇತ್ರಗಳಲ್ಲಿ ಕಾರ್ಮಿಕ ಸಂಘಟನೆಯನ್ನು ಸಾಧಿಸಿದ, ಕಾರ್ಮಿಕ ಸಂಘಗಳ (ಟ್ರೇಡ್ ಯೂನಿಯನ್) ಭಾವನೆಯನ್ನು ಜಾಗೃತಗೊಳಿಸಿದ ಶ್ರೇಯಸ್ಸು ಅದಕ್ಕೆ ಸಂದಿದೆ. ೧೯೪೮ರಲ್ಲಿ ಸ್ವತಂತ್ರ ಭಾರತದ ಸರ್ಕಾರವೂ ಪೂರ್ವಪರಿಶೀಲನ (censor) ವ್ಯವಸ್ಥೆಯನ್ನು ಜಾರಿಗೆ ಕೊಟ್ಟ ಹಾಗೂ ಯಶಪಾಲರನ್ನು ಲಖ್ನೌ ನಗರದಿಂದ ಬಹಿಷ್ಕರಿಸಿದ ಪರಿಣಾಮವಾಗಿ ಈ ಪತ್ರಿಕೆ ಶಾಶ್ವತವಾಗಿ ಕೊನೆಯುಸಿರನ್ನೆಳೆಯಿತು. ಮುಂದೆಯೂ ಯಶಪಾಲರು 'ನಯಾ ಪಥ್' (ಹೊಸ ಹಾದಿ) ಮೊದಲಾದ ಅನೇಕ ಪತ್ರಿಕೆಗಳ ಸಂಪಾದಕರಾಗಿ, ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿದರು.

ಬಹುಭಾಷೆಗಳ ಪರಿಚಯವಿದ್ದ ಯಶಪಾಲರು ಬೇರಾವುದೇ ವಿದೇಶೀ ಭಾಷೆಯಲ್ಲಿ ಅಲ್ಲದಿದ್ದರೂ ತಮಗೆ ವಿಶೇಷ ಪ್ರಭುತ್ವವಿದ್ದ ಇಂಗ್ಲಿಷ್‌ನಲ್ಲಿ ಕೃತಿರಚನೆಗೆ ತೊಡಗಬಹುದಿತ್ತು ಹಾಗೂ ಹಾಗೆ ಮಾಡಿಯೂ ಇದ್ದರು. ಆದರೆ ಅವರ ಮನಸ್ಸು ಇದನ್ನು ಒಪ್ಪಲಿಲ್ಲ. ತಮ್ಮ ತಾಯ್ನುಡಿಯಲ್ಲಿಯೇ ಬರೆಯಬೇಕೆಂದು ಅವರು ನಿರ್ಧರಿಸಿದರು. ತಮ್ಮ ಆತ್ಮಕಥೆಯಾಗಿರುವ 'ಸಿಂಹಾವಲೋಕನ'ದಲ್ಲಿ ಅವರು ತಮ್ಮ ಈ ನಿರ್ಧಾರದ ಬಗ್ಗೆ ಹೀಗೆ ಹೇಳಿದ್ದಾರೆ:

> "ಮೊದಲು ನಾನು ಇಂಗ್ಲಿಷ್‌ನಲ್ಲಿ ಬರೆಯಲು ಆರಂಭಿಸಿದೆ. ಕೆಲವು ಎಕ್ಸರ್‌ಸೈಜ್ ಪುಸ್ತಕಗಳನ್ನು ತುಂಬಿಸಿದೆ. ಆಮೇಲೆ ನಾನು ಯೋಚಿಸಿದೆ: ನನಗೆ ನನ್ನದೇ ಆದ ಭಾಷೆಯೊಂದಿದೆ. ಆ ಭಾಷೆಯಲ್ಲಿ ನಾನೇಕೆ ಬರೆಯಬಾರದು ? ಸಾಹಿತ್ಯಿಕ ದೃಷ್ಟಿಯಿಂದ ಬೆಲೆ ಬಾಳುವಂಥದೇನನ್ನಾದರೂ ನಾನು ಬರೆಯಬಲ್ಲೆನಾದರೆ, ಇಂಗ್ಲಿಷ್ ಸಾಹಿತ್ಯವನ್ನು ಸಮೃದ್ಧಗೊಳಿಸುವುದು ನನ್ನ ಕರ್ತವ್ಯವೋ ಅಥವಾ ನನ್ನದೇ ಭಾಷೆಯಾದ ಹಿಂದಿಯನ್ನೋ? ಇದೇ ಸರಿಯೆಂಬುದು ನನಗೆ ಎಷ್ಟರಮಟ್ಟಿಗೆ ಮನದಟ್ಟಾಯಿತು ಎಂದರೆ ಹಿಂದಿಯಲ್ಲಿ ಮಾತ್ರವೇ ಬರೆಯಬೇಕೆಂದು ನಾನು ಒಂದು ಬಗೆಯಲ್ಲಿ ಪ್ರತಿಜ್ಞೆಯನ್ನೇ ಮಾಡಿದೆ...."

ಅವರ ಈ ನಿರ್ಧಾರಕ್ಕಾಗಿ ಹಿಂದೀ ಸಾಹಿತ್ಯಲೋಕ ಇಂದು ಅವರಿಗೆ ಋಣಿಯಾಗಿದೆ. ವಾಸ್ತವವಾಗಿ ಇಂದು ಅವರು, ಆದರ್ಶವಾದದಲ್ಲಿಯೇ ಆರಂಭಿಸಿ ಯಥಾರ್ಥವಾದ ಅಥವಾ ವಾಸ್ತವವಾದದ ನೆಲೆಯನ್ನು ತಲುಪಿ, ಅದರಲ್ಲಿಯೇ ಬಾಳಿನ ಹಾಗೂ

ಸಾಹಿತ್ಯದ ಅರ್ಥ ಮತ್ತು ಗುರಿಗಳನ್ನು ಕಂಡುಕೊಂಡ ಹಾಗೂ ತಮ್ಮ ಈ ದರ್ಶನದ ಕುರುಹಾಗಿ 'ಗೋದಾನ'ದಂಥ ಅಪೂರ್ವ ಕಾದಂಬರಿಯನ್ನು ಹಿಂದೀ ಜಗತ್ತಿಗೆ ತಮ್ಮ ಅಳಿಯದ ಕಾಣಿಕೆಯಾಗಿ ನೀಡಿದ ಪ್ರೇಮಚಂದರ ಉತ್ತರಾಧಿಕಾರಿ ಎನಿಸಿಕೊಂಡಿದ್ದಾರೆ. ಕಾರ್ಲೈನ್ ಫ್ರೆಂಡ್ ಎಂಬ ಅಮೆರಿಕನ್ ವಿದ್ವಾಂಸರು ಅವರ ಸಾಧನೆಯನ್ನು ಹೀಗೆ ಗುರುತಿಸಿದ್ದಾರೆ:

> "ಶ್ರೀಸಾಮಾನ್ಯನ ಬಗೆಗಿನ ತಮ್ಮ ಕಾಳಜಿ ಹಾಗೂ ಸಾಮಾಜಿಕ ನ್ಯಾಯದ ಬಗೆಗಿನ ಬಾಧ್ಯತೆ, ಮಾನವ ಸ್ವಭಾವದ ಬಗೆಗಿನ ಚಾಂಚಲ್ಯದ ಅರಿವು, ಕರುಣೆ ಮತ್ತು ಹಾಸ್ಯಗಳ ಸಮಾವೇಶದೊಂದಿಗೆ ಮಾನವಜೀವಿಗಳನ್ನು ಚಿತ್ರಿಸಬಲ್ಲ ಸಾಮರ್ಥ್ಯ ಮತ್ತು ಸರಳ ಹಾಗೂ ಶಕ್ತಿಪೂರ್ಣ ಶೈಲಿ—ಇವುಗಳಿಂದಾಗಿ ಯಶಪಾಲರು ಹಿಂದೀ ಸಾಹಿತ್ಯದಲ್ಲಿ ಪ್ರೇಮಚಂದರ ಸ್ಥಾನಕ್ಕೆ ಉತ್ತರಾಧಿಕಾರಿಯಾಗಿದ್ದಾರೆ."

೧೯೩೯ರಲ್ಲಿ ಆರಂಭಗೊಂಡ ಅವರ ಸಾಹಿತ್ಯಸೃಷ್ಟಿ ೧೯೭೬ರವರೆಗೆ (ಮರಣ : ೨೬ ಡಿಸೆಂಬರ್ ೧೯೭೬) ಸತತವಾಗಿ ಮುಂದುವರಿಯಿತು. ೧೭ ಕಥಾಸಂಕಲನಗಳು, ೧೨ ಕಾದಂಬರಿಗಳು, ೪ ರಾಜಕೀಯ ಪ್ರಬಂಧ ಸಂಕಲನಗಳು, ೫ ಹಾಸ್ಯ ಹಾಗೂ ನಿರೂಪಣಾತ್ಮಕ ಪ್ರಬಂಧ ಸಂಕಲನಗಳು, ೩ ಭಾಗಗಳಲ್ಲಿರುವ ಅವರ ಕ್ರಾಂತಿಕಾರಿ ಜೀವನದ ನೆನಪುಗಳು, ೩ ಪ್ರವಾಸಕಥನಗಳು, ೧ ಏಕಾಂಕ ನಾಟಕ ಸಂಗ್ರಹ ಹಾಗೂ ೬ ಅನುವಾದಿತ ಗ್ರಂಥಗಳು (ಕಾದಂಬರಿಗಳು ಮತ್ತು ಪ್ರಬಂಧ ಸಂಕಲನಗಳು) —ಹೀಗೆ ಒಟ್ಟು ೫೧ ಗ್ರಂಥಗಳನ್ನು ಅವರು ಭಾರತೀಯ ಸಾಹಿತ್ಯಕ್ಕೆ ಕಾಣಿಕೆಯಾಗಿ ಕೊಟ್ಟಿದ್ದಾರೆ.

'ದೇವ್ ಪುರಸ್ಕಾರ' (೧೯೫೫), 'ನೆಹರೂ ಪುರಸ್ಕಾರ' (೧೯೬೯), 'ಮಂಗಲ ಪ್ರಸಾದ್ ಪಾರಿತೋಷಕ' (೧೯೭೧), 'ಡಿ.ಲಿಟ್. ಪ್ರಶಸ್ತಿ' (೧೯೭೪—ಆಗ್ರಾ ವಿಶ್ವವಿದ್ಯಾಲಯ), 'ಸಾಹಿತ್ಯವಾರಿಧಿ ಪ್ರಶಸ್ತಿ' (೧೯೬೭), 'ಪದ್ಮಭೂಷಣ ಪ್ರಶಸ್ತಿ' (೧೯೭೦), 'ಸಾಹಿತ್ಯ ವಾಚಸ್ಪತಿ ಪ್ರಶಸ್ತಿ' (೧೯೭೫), 'ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ' (೧೯೭೬)—ಹೀಗೆ ಪ್ರಶಸ್ತಿಗಳ, ಅಭಿನಂದನೆಗಳ ಸುರಿಮಳೆಯೇ ಅವರ ಮೇಲೆ ಆಗಿದೆ. ಅನೇಕ ಅಭಿನಂದನ ಗ್ರಂಥಗಳನ್ನೂ ಅವರಿಗೆ ಸಲ್ಲಿಸಲಾಗಿದೆ. 'ದಿವ್ಯಾ' ಎಂಬ ಅವರ ಐತಿಹಾಸಿಕ ಕಾದಂಬರಿ "ಹಿಂದಿಯ ಏಳು ಯುಗಾಂತಕ ಕಾದಂಬರಿಗಳಲ್ಲಿ ಒಂದು" ಎಂಬ ಖ್ಯಾತಿಯನ್ನು ಗಳಿಸಿದೆ. ಇಂಗ್ಲಿಷ್‌ನಲ್ಲಿ ಈಗಾಗಲೇ ಪ್ರಕಟವಾಗಿರುವ ಅವರ 'ಅಮಿತಾ' ಎಂಬ ಇನ್ನೊಂದು ಐತಿಹಾಸಿಕ ಕಾದಂಬರಿಯನ್ನು ಅಂತರರಾಷ್ಟ್ರೀಯ ಭಾಷೆಗಳಲ್ಲಿ ಅನುವಾದಕ್ಕಾಗಿ 'ಯುನೆಸ್ಕೋ' ಆಯ್ದುಕೊಂಡಿದೆ. ೧೯೬೦ರಲ್ಲಿ ಪ್ರಕಟವಾದ 'ಝೂಠಾ ಸಚ್' (ಸುಳ್ಳು ಸತ್ಯ) ದೇಶವಿಭಜನೆಯ ದುರಂತ ಅಧ್ಯಾಯವನ್ನು ಅದರ ಎಲ್ಲ ಮುಖಗಳಲ್ಲಿ, ತುಂಬ ಪರಿಣಾಮಕಾರಿಯಾಗಿ ಚಿತ್ರಿಸಿರುವ ಮಹಾ ಕಾದಂಬರಿ. ಪಂಜಾಬ್ ಸರ್ಕಾರ ಮತ್ತು ಉತ್ತರ ಪ್ರದೇಶ ಸರ್ಕಾರಗಳಿಂದ ಅತ್ಯುತ್ತಮ ಕೃತಿ ಎಂಬ ಪ್ರಶಸ್ತಿಗೆ ಪಾತ್ರವಾಗಿರುವ ಈ ಕೃತಿ "ಜಗತ್ತಿನ ಹತ್ತು ಅತ್ಯುತ್ತ

ಕಾದಂಬರಿಗಳಲ್ಲಿ ಒಂದು" ಎಂದೂ, "ಭಾರತೀಯ ಸಾಹಿತ್ಯದ ಶಾಶ್ವತ ನಿಧಿ" ಎಂದೂ, "ಅನೇಕ ವರ್ಷಗಳವರೆಗೆ ಭಾರತೀಯ ಕಾದಂಬರಿಕಾರರಿಗೆ ಆದರ್ಶಪ್ರಾಯವಾಗಿ ಉಳಿಯುವ ಕೃತಿ" ಎಂದೂ, "ವಿಕ್ಟರ್ ಹ್ಯೂಗೋ ಮತ್ತು ಟಾಲ್‌ಸ್ಟಾಯ್ ಅವರ ಕೃತಿಗಳಿಗಿಂತಲೂ ಮಹತ್ತರವಾದ ಕೃತಿ" ಎಂದೂ, "ಜಗತ್ತಿನ ಯಾವುದೇ ಶ್ರೇಷ್ಠ ಕಾದಂಬರಿಗೆ ಹೆಗಲೆಣೆಯಾಗಿ ನಿಲ್ಲಬಲ್ಲಂಥ ಕಾದಂಬರಿ" ಎಂದೂ ಬಗೆಬಗೆಯಾಗಿ ಪ್ರಶಂಸೆಯನ್ನು ಸೂರೆಗೊಂಡಿದೆ.

ಜಗತ್ತಿನ ಅನೇಕ ಭಾಷೆಗಳಿಗೆ ಹಾಗೂ ಹಲವು ಭಾರತೀಯ ಭಾಷೆಗಳಿಗೆ ಅವರ ಕಥೆ ಕಾದಂಬರಿಗಳು ಅನುವಾದಗೊಂಡಿವೆ. ಅವರ 'ಮನುಷ್ಯನ ರೂಪ' (ನ್ಯಾಷನಲ್ ಬುಕ್ ಟ್ರಸ್ಟ್), 'ದಿವ್ಯಾ', 'ಅಮಿತಾ' ಮತ್ತು 'ದಾದಾ—ಕಾಮ್ರೇಡ್' (ಈ ಮೂರೂ ಕೃತಿಗಳ ಪ್ರಕಾಶಕರು: ಡಿ. ವಿ. ಕೆ. ಮೂರ್ತಿ, ಮೈಸೂರು) ಕಾದಂಬರಿಗಳು ಕನ್ನಡದಲ್ಲಿಯೂ ಬೆಳಕು ಕಂಡಿವೆ.

ಹೀಗೆ, ಯಶಪಾಲ್ ಅವರು ನಮ್ಮ ನಾಡಿನ ಸ್ವಾತಂತ್ರ್ಯೇತಿಹಾಸದಲ್ಲಿ ಮಾತ್ರವಲ್ಲದೆ, ಸಾಹಿತ್ಯೇತಿಹಾಸದಲ್ಲೂ ಗೌರವಪೂರ್ಣವಾದ ಸ್ಥಾನವನ್ನು ಗಳಿಸಿದ್ದಾರೆ.

ಎಂಥ ವಿಶ್ವಕತ್ತಲೆಯಾದರೂ, ಒಂದು ಹಣತಿಯ ಪ್ರಕಾಶವನ್ನು ನಾಶಗೊಳಿಸಲಾರದು. ಎಂಥ ದುಷ್ಟ ಶಕ್ತಿಯಾದರೂ ಸತ್ಯದ ಪ್ರಕಾಶವನ್ನು ನಾಶಗೊಳಿಸಲಾರದು.

ಗಾಂಧೀಜಿ

ಸಮಾಜ ಸೇವೆ

ಯಶಪಾಲ್

ವಿಜಯದಶಮಿಯ ಎಂಟು ದಿನಗಳ ರಜೆಯನ್ನು ಕಳೆಯುವ ಸಲು
ವಾಗಿ ನಾಥ ಲಾಹೋರಿಗೆ ಬಂದಿದ್ದ. ಅವನ ಆತಿಥ್ಯದಲ್ಲಿ ಉಪಗ್ರಹ
ದಂತೆ ಅವನ ಜೊತೆಜೊತೆಗೆ ಅಂಟಿಕೊಂಡು ಅಲೆದಾಡುತ್ತಿದ್ದೆ.
'ವಂದೇ ಮಾತರಮ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಜಾಹೀರಾ
ತೊಂದನ್ನು ಓದಿ, ನಾಥ ಹೇಳಿದ: "ಇಂದು ಸಂಜೆ ಎಸ್.ಪಿ.ಎಸ್.ಕೆ
(Society for the Promotion of Scientific
Knowledge) ಹಾಲ್‌ಗೆ ಹೋಗಬೇಕು."
ನಾನು ಕೇಳಿದೆ; "ಏಕೆ, ಅಲ್ಲೇನಿದೆ?"
ಅವನು ಉತ್ತರಿಸಿದ: "ಅಲ್ಲಿ ಒಂದು ಭಾಷಣ ಇದೆ."
ಭಾಷಣಗಳ ವಿಷಯದಲ್ಲಿ ನಾಥನ ಹೃದಯದಲ್ಲಿ ಇಂಥ ಅನುರಾಗ
ಮೂಡಿದೆ ಎಂಬುದು ನನಗೆ ಗೊತ್ತಿರಲಿಲ್ಲ. ನಾನು ಕೇಳಿದೆ: "ಎಂಥ
ಭಾಷಣ?"
ನಾಥ ಹೇಳಿದ: "ಯಾವುದೂ ಸರಿಯಾಗಿ ನೆನಪಿಲ್ಲ. ಆದರೆ ಭಾಷಣ
ವಂತೂ ಇದೆ. ಮಾಯಾಲಾಂದ್ರದ ನೆರವಿನೊಂದಿಗೆ ಭಾಷಣ
ನಡೆಯಲಿದೆ—ಸಂಜೆ ಐದು ಘಂಟೆಗೆ. 'ವಂದೇಮಾತರಮ್'
ಪತ್ರಿಕೆಯಲ್ಲಿ ಜಾಹೀರಾತು ಪ್ರಕಟವಾಗಿತ್ತು. ನೀನು ಅದನ್ನು
ನೋಡಲಿಲ್ಲವೇನು?"
ನಗುತ್ತ ನಾನು ಹೇಳಿದೆ: "ಮಾಯಾಲಾಂದ್ರವನ್ನು ನೋಡಲು
ಹೋಗಬೇಕೆ? ಅದಕ್ಕೆ ಬದಲಾಗಿ ಸಿನೆಮಾಕ್ಕೆ ಏಕೆ ಹೋಗ
ಬಾರದು? ಈಗಿನ ಕಾಲದಲ್ಲಿ ಮಾಯಾಲಾಂದ್ರವನ್ನು ನೋಡು
ವುದು ಅಂದರೆ ಎತ್ತಿನ ಗಾಡಿಯಲ್ಲಿ ಪ್ರಯಾಣಮಾಡಿದಂತೆಯೆ
ಸರಿ."
ನಾಥ ಹೇಳಿದ: "ಇಲ್ಲ, ನಿನಗೆ ಅರ್ಥವಾಗಿಲ್ಲ."
ನಾನು ಮನಸ್ಸಿನಲ್ಲೆಯೇ ನಕ್ಕು ಸುಮ್ಮನಾದೆ. ಆ ಕಾಲವ
ಒಂದಿತ್ತು: ನಾಥ ನಮ್ಮ ಕಾಲೇಜಿನ 'ಸಂಚಾರಿ' ತಂಡದ ನಾ

ಕರಣಗೊಂಡ ನಾಯಕನೇ ಆಗಿದ್ದ. ಈ ಹಾರಾಟವೆಲ್ಲ ಆಗ ಅವನಿಗೆ ಶೋಭಿಸುತ್ತಿತ್ತು. ಆದರೆ, ಈಗಂತೂ ನಾಥ ಲಾಹೋರಿನಿಂದ ದೂರ ಹೋಗಿ, ಸಹಾರನ್‌ಪುರದಲ್ಲಿ ವಾಸ ಮಾಡುತ್ತಿದ್ದ. ಹೀಗಾಗಿ, ಈಗಲೂ ಅವನು ಭಾಷಣ, ಸಿನೆಮಾ ಮತ್ತು ಥಿಯೇಟರುಗಳ ವಿಷಯದಲ್ಲಿ ನಮಗಿಂತಲೂ ಹೆಚ್ಚಿನ ತಿಳಿವಳಿಕೆಯನ್ನು ತೋರುವದಾದರೆ, ಅದನ್ನು ದುಸ್ಸಾಹಸವೆಂದಲ್ಲದೆ ಬೇರೆ ಏನೆಂದು ತಾನೆ ಹೇಳಲು ಸಾಧ್ಯ?

ಮನಸ್ಸಿನಲ್ಲಿಯೇ ಹೇಳಿಕೊಂಡೆ: "ನೋಡಪ್ಪ ನೋಡು! ಮಾಯಾಲಾಂದ್ರವನ್ನೇ ನೋಡು! ಸಹಾರನ್‌ಪುರದಲ್ಲಿ ಗೊಂಬೆಯಾಟವನ್ನೇ ನೋಡುತ್ತ ಇದ್ದಿರಬೇಕು! ಇದೇ ನಿನಗೆ ಮಹಾಸಂಗತಿಯಾಗಿ ಬಿಟ್ಟಿದೆ!"

ಸಭಾಂಗಣದಲ್ಲಿ ಪ್ರೇಕ್ಷಕರ ಸಂಖ್ಯೆ ಹೆಚ್ಚಾಗಿಯೇನೂ ಇರಲಿಲ್ಲ. ಆದರೂ, ನಾಥ ಕುರ್ಚಿಯಲ್ಲಿ ಹೋಗಿ ಕುಳಿತುಕೊಳ್ಳದೆ, ಬಲಗಡೆಯ ಗೋಡೆಗೆ ಒರಗಿಕೊಂಡು ನಿಂತಿದ್ದ. ನಾನು ಅವನ ಅಪ್ಪಣೆಗಾಗಿ ಕಾದುನಿಂತಿರುವ ಸೇವಕನಂತೆ ಅವನ ಪಕ್ಕದಲ್ಲಿ ನಿಂತಿದ್ದೆ. ಪ್ರೊಫೆಸರ್ ಆದ್ರೆ ಅಂದಿನ ಭಾಷಣಕಾರರಾಗಿದ್ದರು. 'ನಾಗರಿಕತೆಯ ವಿಕಾಸದಲ್ಲಿ ನಾರಿಯ ಪಾತ್ರ' ಎಂಬುದು ಅಂದಿನ ಭಾಷಣದ ವಿಷಯವಾಗಿತ್ತು.

ದಕ್ಷಿಣ ದ್ವೀಪಗಳ ಅರೆ-ಕಾಡು ಜನಾಂಗಗಳು, ಆಸ್ಟ್ರೇಲಿಯಾದ ಬುಶ್‌ಮೆನ್, ಹಾಗೂ ನೀಗ್ರೋಗಳು ಮತ್ತು ರೆಡ್-ಇಂಡಿಯನ್ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯ ಚಿತ್ರಗಳನ್ನು ತೋರಿಸಿ, ವಾಸ್ತವವಾಗಿ ನಾರಿಯೇ ಸಮಾಜದಲ್ಲಿ ಸಂಯೋಜಕಿಯೂ ವ್ಯವಸ್ಥಾಪಕಿಯೂ ಆಗಿದ್ದಾಳೆ ಎಂಬುದನ್ನು ಪ್ರೊಫೆಸರ್ ಆದ್ರೆಯವರು ಒತ್ತಿಹೇಳಿದರು. ಸಮಾಜದ ಸುಸ್ವರೂಪ ಮತ್ತು ಸುವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ನಾರಿಗೆ ಪುರುಷ ಕೃತಜ್ಞನಾಗಿರಬೇಕೆಂದೂ, ಮುಂದೆಯೂ ನಾರಿಯೇ ತನ್ನ ಸ್ಥಾನವನ್ನು ಅಲಂಕರಿಸಿ, ಸಮಾಜ ಹುಚ್ಚಾಗದಂತೆ ನೋಡಿಕೊಳ್ಳುತ್ತಾಳೆಂದೂ ಅವರು ಪ್ರತಿಪಾದಿಸಿದರು.

ಭಾಷಣವೇನೂ ಕೆಟ್ಟದ್ದಾಗಿರಲಿಲ್ಲ. ಆದರೆ, ನನ್ನ ಮನಸ್ಸು ಅದರಲ್ಲಿ ಲೀನವಾಗಲಿಲ್ಲ. ನಾನು ಕಣ್ಣೆತ್ತಿ ನಾಥನನ್ನೇ ನೋಡುತ್ತಿದ್ದೆ. ಅವನ ದೃಷ್ಟಿ ಮಾಯಾಲಾಂದ್ರದ ಚಿತ್ರಗಳತ್ತ ಹರಿದಿರಲಿಲ್ಲ. ಎಡಬದಿಯಲ್ಲಿ ಮೊದಲ ಮೂರು ಅರ್ಧಸಾಲುಗಳಲ್ಲಿ ಕುಳಿತಿದ್ದ ಮಹಿಳೆಯರ ನಡುವೆ ಸುಳಿದಾಡುತ್ತಿತ್ತು. ವಿಶೇಷವಾಗಿ ಅವನನ್ನೇ ಗಮನಿಸಿದಾಗ, ಮೊದಲ ಸಾಲಿನ ಮೊದಲ ಕುರ್ಚಿಯಲ್ಲಿ ಕುಳಿತಿದ್ದ ನಾರೀಮಣಿಯಲ್ಲಿ ಅವನ ದೃಷ್ಟಿ ನೆಟ್ಟುಹೋಗಿದೆ ಎಂಬುದು ನನಗೆ ಅರಿವಾಯಿತು.

ಮೊಣಕೈಯಿಂದ ತಿವಿದು ನಾನು ಕೇಳಿದೆ: "ಇದೇನಾ ನೀನು ಭಾಷಣ ಕೇಳುತ್ತಾ ಇರೋದು?"

ನನ್ನ ಪ್ರಶ್ನೆಗೆ ಉತ್ತರವನ್ನೇನೂ ಹೇಳದೆ ಅವನು ಕೇಳಿದ: "ಅವಳು ಯಾರು ಅಂತ ನಿನಗೆ ಗೊತ್ತೇನು?"

ಆ ಮುಖ ನನಗೆ ಪರಿಚಿತವಾದುದೇನೂ ಆಗಿರಲಿಲ್ಲ. ನಾನು ಕೇಳಿದೆ: "ಅದಿರಲಿ. ಅದೇಕೆ ಬೇಕು? ಹೇಳು."

ನಿಟ್ಟುಸಿರು ಬಿಡುತ್ತ ನಾಥ ಹೇಳಿದ: "ನಿನಗೆ ಕಾಣಿಸುತ್ತ ಇಲ್ಲವೇನು? ಆಧುನಿಕ ರಮಣಿಯರ ಸಮುದಾಯದಲ್ಲಿ ಯಾವ ಮೂರು 'ಸುಕಾರ'ಗಳಿರಬೇಕು—ಅಂದರೆ,

ಸುಶಿಕ್ಷಿತಳೂ ಸುಸಂಸ್ಕೃತಳೂ ಸುಅಲಂಕೃತಗಳೂ ಆಗಿರಬೇಕು—ಎಂದು ನಾವು ಬಯಸು ಶ್ರೇವೋ ಅವೆಲ್ಲ ಅವಳಲ್ಲಿ ಸಮೃದ್ಧ ಪ್ರಮಾಣದಲ್ಲಿ ಸಂಗಮಿಸಿವೆಯಲ್ಲವೆ ?"

ನಾಥನ ಮಾತಿನಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲ. ಶರೀರಶಾಸ್ತ್ರದ ದೃಷ್ಟಿಯಿಂದ ಆ ಯುವತಿ ಮುಗ್ಧತೆಯ ವಯಸ್ಸನ್ನು ದಾಟಿ ಬಂದಿದ್ದಳಾದರೂ, ಮುಖದ ಮೇಲೆ ಆ ಮುಗ್ಧತೆ ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಸುಳಿದಾಡುತ್ತಲೇ ಇತ್ತು. ನದಿಯ ತೀರದಲ್ಲಿ ಅರಳಿನಿಂತಿರುವ, ಬೀಸಿಕೊಂಡು ಬಂದ ತಂಗಾಳಿಯಲ್ಲಿ ತೂನೆದಾಡುವ ಹೂವಿನಂತೆ ಇದ್ದ ಹಾಗೂ ನಳನಳಿಸುವ ಹಸಿರು ಹುಲ್ಲಿನಂತೆ ಹೆಜ್ಜೆಹೆಜ್ಜೆಗೂ ಕಣ್ಣುನ ಗಳನ್ನು ಸೆಳೆಯುತ್ತಿದ್ದ ಅವಳ ಕಣ್ಣುಗಳು, ಲತೆಯಂತೆ ಬಾಗಿ ಬಳುಕುತ್ತಿದ್ದ ಅವಳ ವೈಸಿರಿ—ಇವೆಲ್ಲವುಗಳಿಂದ ಲಾವಣ್ಯ ತುಂಬಿ ತುಳುಕುತ್ತಿತ್ತು. ಮುಖದ ಮೇಲಿನ ಆ ಸ್ನಿಗ್ಧತೆ—ಅದು ಪೌಡರಿನ ಲೇಪನದಿಂದ ಬಂದಿದ್ದೇನೂ ಆಗಿರಲಿಲ್ಲವೆಂದೇ ನನಗೆ ತೋರುತ್ತಿತ್ತು—ಕೌಮಾರ್ಯಕ್ಕೆ ಪೋಷಕವಾಗಿಯೇ ಇದ್ದಿತು. ತೆಳುವಾದ ಅವಳ ಉಡುಗೆ-ತೊಡುಗೆಗಳು, ಕಟ್ಟು ಇಲ್ಲದಿದ್ದರೂ ಕಣ್ಣಿಗೆ ಅಂಟಿ ಕೂಡುವಂತಿದ್ದ ಆ ಕನ್ನಡಕ—ನವನಾಗರಿಕತೆಯ ಈ ಎಲ್ಲ ಚಿಹ್ನೆಗಳೂ ಅಲ್ಲಿದ್ದುವು.

ನಾಥನತ್ತ ನೋಡುತ್ತ ನಾನು ಕೇಳಿದೆ: "ಪ್ರೇಮದ ಹೊಳೆ ಉಕ್ಕಿ ಹರಿಯುತ್ತ ಇದೆಯೇನು ?"

ಗಂಭೀರವಾದ ಮುಖಭಾವದಿಂದ ಅವನೆಂದ : "ತೆಪ್ಪಗಿರು !"

ಭಾಷಣ ಮುಗಿದ ಬಳಿಕ ಆ ರಮಣೀಮಣಿ ಮನೋಹರವಾದ ಉಪೇಕ್ಷೆಯಿಂದ ಅರ್ಧ ತಲೆಯ ಮೇಲೆ ಸೆರಗೆಳೆದುಕೊಂಡು, ಮೂಗಿನ ಮೇಲೆ ಅಂಟಿದಂತೆ ಕುಳಿತಿದ್ದ ಕನ್ನಡಕವನ್ನು ಸರಿಪಡಿಸಿಕೊಂಡು, ತೋಳಿಲ್ಲದ ಕುಪ್ಪಸವನ್ನು ತೊಟ್ಟಿದ್ದ ತನ್ನ ವೈಸಿರಿಯನ್ನು ಮೆರೆಯುತ್ತ ಮುಂದೆ ಸಾಗಿದಾಗ, ಮಂತ್ರಮುಗ್ಧನಂತೆ ನಾಥ ಅವಳನ್ನೆ ನೋಡುತ್ತ ನಿಂತುಬಿಟ್ಟಿದ್ದ.

ಅಲ್ಲಿಗೆ ಬಂದಿದ್ದವರಲ್ಲಿ, ನಮಗೆ ಪರಿಚಿತರಾಗಿದ್ದವರಲ್ಲಿ ಶ್ರೀಯುತ ವಿಷ್ಣು ಮತ್ತು ಅವರ ಪತ್ನಿ ಕೂಡ ಇದ್ದರು. ವಿಚಾರಿಸಿದಾಗ, ಆ ಮೋಹಕ ರಮಣಿಯ ಹೆಸರು 'ಉಷಾ ಮೆಹತಾ' ಎಂಬುದಾಗಿ ತಿಳಿಯಬಂದಿತು.

ವಿಷ್ಣು ಅವರನ್ನು ನಾಥ ಕೇಳಿದ: "ಆಕೆಯನ್ನು ಪರಿಚಯಿಸಿಕೊಡಲು ಸಾಧ್ಯವೆ ?"

"ಏಕಾಗಿ ಅವಳನ್ನು ಪರಿಚಯಿಸಿಕೊಡಬೇಕು" ಎಂದು ವಿಷ್ಣು ಅವರು ಕೇಳಿದಾಗ ನಾನೇ ವಿವರಣೆಯನ್ನು ನೀಡಿದೆ: "ನಾಥ ಪ್ರೇಮಬಾಣಕ್ಕೆ ಗುರಿಯಾಗಿದ್ದಾನೆ—ಅದರಲ್ಲಿಯೂ ಮೊದಲ ನೋಟದಲ್ಲಿಯೇ !"

ನಿರುತ್ಸಾಹದ ನಗೆಯನ್ನು ಚೆಲ್ಲುತ್ತ ವಿಷ್ಣು ಅವರೆಂದರು : "ಸಾಧ್ಯವೇ ಇಲ್ಲ. ಹೊರನೋಟಕ್ಕೆ ಅಮೃತ ಶಿಲೆಯ ಪುತ್ಥಳಿಯಂತೆ ಇರುವ ಆಕೆ, ಆಂತರಿಕವಾಗಿ ಅಷ್ಟೆ ನಿರುತ್ಸಾಹದಾಯಕಿ ಹಾಗೂ ಭಾವಶೂನ್ಯೆ."

ಶ್ರೀಮತಿ ವಿಷ್ಣು ಅವರು ಅಭಿಮಾನದಿಂದ ಒಂದಿಷ್ಟು ತಲೆಯೆತ್ತಿ ಹೇಳಿದರು: "ಅವಳು ಮದುವೆ ಆಗುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಾಳೆ. ಎಲ್ಲೆಲ್ಲಿಂದಲೋ ಬಂ ಗಂಡುಗಳನ್ನೆಲ್ಲ ತಿರಸ್ಕರಿಸಿಬಿಟ್ಟಿದ್ದಾಳೆ."

ನಿರ್ಭಾವದಿಂದ ವಿಷ್ಣು ಹೇಳಿದರು : "ಅವಳು ಕಾಮಿನಿಯ ಆಧುನಿಕ ಆವೃತ್ತಿಯೇ ಆಗಿದ್ದಾಳೆ. ಪ್ರಾಚೀನ ಕಾಲದ 'ಕಾಮು'ನ ಪಂಚಬಾಣಗಳೂ ಅವಳ ವಿಷಯದಲ್ಲಿ ವ್ಯರ್ಥವಾಗಿಬಿಡುತ್ತವೆ."

ನಾರಿಯರ ಸಮುದಾಯದ ಗೌರವವನ್ನು ರಕ್ಷಿಸುವ ದೃಷ್ಟಿಯಿಂದ, ಅವರ ಮಾತಿಗೆ ಪ್ರತಿಭಟನೆಯನ್ನು ತೋರುತ್ತ ಶ್ರೀಮತಿ ವಿಷ್ಣು ಅವೆಂದರು : "ನಾರಿಯರ ಸಮುದಾಯದ ಸೇವೆಯನ್ನೇ ಅವಳು ತನ್ನ ಬಾಳಿನ ವ್ರತವಾಗಿ ಅಂಗೀಕರಿಸಿದ್ದಾಳೆ. ಈ ಸಮಾಜಸೇವೆಗಾಗಿ ತನ್ನ ಬಾಳನ್ನೇ ಮುಡಿಪಾಗಿಡುವುದು ಅವಳ ಇಚ್ಛೆಯಾಗಿದೆ. ಅದರಲ್ಲಿ ತಪ್ಪೇನಿದೆ?" ಮತ್ತಷ್ಟು ಉತ್ಸಾಹದಿಂದ ಅವರು ಮುಂದುವರಿದು ಹೇಳಿದರು : "ಅಪ್ಪಾ, ಅವಳೆಂದೂ ಮದುವೆಯಾಗುವುದು ಸಾಧ್ಯವೇ ಇಲ್ಲ. ಜನ ಏಕಾಗಿ ಮದುವೆಯಾಗುತ್ತಾರೆ ಎಂಬುದೂ ಅವಳಿಗೆ ಗೊತ್ತೇ ಇಲ್ಲ"

ಸಹಾನುಭೂತಿಯಿಂದ ನಾನು ನಾಥನತ್ತ ನೋಡಿದೆ. ಅವನು ಪರ್ವತದಂತೆ ನಿಶ್ಚಲನಾಗಿಬಿಟ್ಟಿದ್ದ. ಅವನೆಂದ : "ನೀವು ಒಮ್ಮೆ ಆಕೆಯನ್ನು ನಿಮ್ಮ ಮನೆಗೆ ಆಹ್ವಾನಿಸಿ. ಮುಂದಿನದನ್ನು ಆಮೇಲೆ ನೋಡೋಣ."

ಯಾವ ನೆಪದಲ್ಲಿ ಆಹ್ವಾನಿಸುವುದು ಎಂಬುದು ಈಗ ಅವರ ಸಮಸ್ಯೆಯಾಗಿತ್ತು. ನಾಥನ ಆಲೋಚನೆ ಒಮ್ಮೊಮ್ಮೆ ಹೇಗಿರುತ್ತದೆ ಎಂದರೆ ಇಡೀ ರಾಷ್ಟ್ರದ ಉದ್ಧಾರ ಅಥವಾ ವಿನಾಶ ತನ್ನ ಆಲೋಚನೆಯನ್ನೇ ಆಧರಿಸಿಕೊಂಡಿದೆಯೇನೋ ಎಂಬಂತೆ ಅವನು ಚಡಪಡಿಸುತ್ತ ಇರುತ್ತಾನೆ. ವಿಷ್ಣುರವರ ಭುಜದ ಮೇಲೆ ಕೈಯಿರಿಸುತ್ತ ನಾಥ ಹೇಳಿದ : "ನಾನು ವಿದೇಶದಿಂದ ಹಿಂದಿರುಗಿ ಬಂದ ಸಂತೋಷದ ನೆಪದಲ್ಲಿ ನೀವೇಕೆ ಒಂದು ಸಂತೋಷ ಕೂಟವನ್ನು ಏರ್ಪಡಿಸಬಾರದು?"

"ತುಂಬ ಒಳ್ಳೆಯ ಆಲೋಚನೆ!" ಎಂದು ನಾನು ನಗೆಯಾಡಿದೆ. ಸಕ್ಕರೆ ಉತ್ಪಾದನೆಯ ವಿಷಯದಲ್ಲಿ ಹೆಚ್ಚಿನ ಅನುಭವವನ್ನು ಪಡೆದುಕೊಂಡುಬರುವ ಸಲುವಾಗಿ ಆರು ತಿಂಗಳಕಾಲ ನಾಥ ಜಾವಾ ದ್ವೀಪದಲ್ಲಿದ್ದು ಬಂದಿದ್ದ. ಅಲ್ಲಿಂದ ಹಿಂದಿರುಗಿ ಬಂದು ಸುಮಾರು ಒಂಬತ್ತು ತಿಂಗಳೇ ಕಳೆದುಹೋಗಿತ್ತು. ಆಗಿನಿಂದಲೂ ಅವನು ಸಕ್ಕರೆ ಕಾರ್ಖಾನೆಯ ಕೆಲಸ ಕಾರ್ಯಗಳಲ್ಲಿಯೇ ಮುಳುಗಿಹೋಗಿದ್ದ. ಇದೇ ಅವನು ವಿದೇಶದಿಂದ ಹಿಂದಿರುಗಿ ಬಂದ ವೈಶಿಷ್ಟ್ಯವಾಗಿತ್ತು. ಜಾವಾದಿಂದ ಹಿಂದಿರುಗಿ ಬಂದ ಬಳಿಕ, ವಿಷ್ಣುವಿನ ಆತಿಥ್ಯವನ್ನು ನಾಥ ಇನ್ನೂ ಅಂಗೀಕರಿಸಿರಲಿಲ್ಲ ಎಂಬುದೇನೋ ಸತ್ಯ ಸಂಗತಿಯಾಗಿತ್ತು.

ಆಹ್ವಾನ ಪತ್ರಿಕೆಯೊಂದನ್ನು ಸಿದ್ಧಪಡಿಸಲಾಯಿತು : "ಪ್ರಿಯ ಸ್ನೇಹಿತರೆ, ದಕ್ಷಿಣ ದ್ವೀಪಗಳ ಪ್ರವಾಸದಿಂದ ಹಿಂದಿರುಗಿ ಬಂದಿರುವ ಶ್ರೀ ಪ್ರಮೋದನಾಥ್ ಅವರ ಗೌರವಾರ್ಥ ಇದೇ... ರ....ವಾರದಂದು ಸಂಜೆ ನಾಲ್ಕು ಘಂಟೆಗೆ ನಮ್ಮ ಮನೆಯಲ್ಲಿ ಏರ್ಪಡಿಸಲಾಗಿರುವ ಸಂತೋಷ ಕೂಟದಲ್ಲಿ ತಾವು ದಯಮಾಡಿ ಭಾಗವಹಿಸಬೇಕೆಂದು ಕೋರುತ್ತೇವೆ. ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಿರುವ ..."

ಶ್ರೀಮತಿ ವಿಷ್ಣು ಅವರು ಕುಮಾರಿ ಮೆಹತಾಳ ಸಹಪಾಠಿಯಾಗಿದ್ದರು. ಕುಮಾರಿ ಮೆಹತಾಳಿಗೆ ಕಳಿಸಿದ ಆಹ್ವಾನ ಪತ್ರಿಕೆಯಲ್ಲಿ ಆಕೆ ತಮ್ಮ ಪತಿಯಿಂದಲೂ ಇನ್ನೊಂದು ವಾಕ್ಯವನ್ನು ಸೇರಿಸಿದರು.

ನಾವೆಲ್ಲ ಸಂತೋಷಕೂಟದ ಏರ್ಪಾಟಿನಲ್ಲಿ ತೊಡಗಿದೆವು. ಸಂತೋಷಕೂಟ ಭರ್ಜರಿಯಾಗಿರಬೇಕೆಂಬುದು ನಾಥನ ಒತ್ತಾಯದ ಆಸೆಯಾಗಿತ್ತು. ಇತ್ತ ನಾಥ ತಾನೇ ಗ್ರಂಥಾಲಯಕ್ಕೆ ತೆರಳಿ, ವಿಶ್ವಕೋಶದಲ್ಲಿ ಜಾವಾ–ಸುಮಾತ್ರಾ ದ್ವೀಪಗಳ ಬಗ್ಗೆ ಇದ್ದ ಮಾಹಿತಿಯನ್ನು ಅಭ್ಯಸಿಸತೊಡಗಿದ—ಅದರ ಬಗ್ಗೆ 'ಸಂಶೋಧನೆ'ಯನ್ನೇ ನಡೆಸಿದ ಎನ್ನಬೇಕು.

ಆಹ್ವಾನಿತರ ಸಂಖ್ಯೆ ತುಂಬ ಸೀಮಿತವಾಗಿಯೇ ಇತ್ತು. ಗೊತ್ತುಪಡಿಸಲಾಗಿದ್ದ ಸಮಯಕ್ಕಿಂತ ಸ್ವಲ್ಪ ತಡವಾಗಿ ಕುಮಾರಿ ಮೆಹತಾ ಕಾರಿನಲ್ಲಿ ಬಂದಿಳಿದಳು. ಕುಮಾರಿ ಮೆಹತಾಳಿಗೆ ಸ್ವಂತದ ಕಾರಿಲ್ಲವೆಂಬ ಮಾಹಿತಿಯನ್ನು ನಾಥ ಆ ಹೊತ್ತಿಗಾಗಲೇ ಸಂಗ್ರಹಿಸಿದ್ದ. ಯಾರದೋ ಕಾರನ್ನು ಅವಳು ಎರವಲಾಗಿ ತಂದಿದ್ದಾಳೆ ಎಂದು ಊಹಿಸಲಾಯಿತು. ಅವಳ ಕೈಯಲ್ಲಿ ಇಂಗ್ಲಿಷ್ ಭಾಷೆಯ ಸಚಿತ್ರ ವಾರಪತ್ರಿಕೆಯೊಂದಿತ್ತು. ಅದು ಸಾಮಾನ್ಯವಾಗಿ ಗಂಭೀರ ಸ್ವಭಾವದ ಓದುಗರೇ ಹೆಚ್ಚಾಗಿ ಓದುವಂಥ ಪತ್ರಿಕೆಯಾಗಿತ್ತು. ಅದು ಅವಳ ಸಾಹಿತ್ಯಿಕ ಅಭಿರುಚಿಯ ಪ್ರತೀಕವೂ ಆಗಿತ್ತು.

ಕುಮಾರಿ ಮೆಹತಾ ಅರ್ಧ ಇಂಗ್ಲಿಷ್, ಅರ್ಧ ಪಂಜಾಬಿಯಲ್ಲಿ ಹೇಳಿದಳು: "....So Sorry. ನನ್ನಿಂದ ತಡವಾಗಿಬಿಟ್ಟಿತು." ಅನಂತರ ಅಲ್ಲಿದ್ದ ಜನರಿಗೆ ಬಾಗಿ ಅಭಿವಂದನೆಗಳನ್ನು ಸಲ್ಲಿಸಿದಳು.

ಶ್ರೀಮತಿ ವಿಷ್ಣು ಅವಳನ್ನು ಪರಿಚಯಿಸಿಕೊಟ್ಟರು: "ಕುಮಾರಿ ಉಷಾ ಮೆಹತಾ. ಜಲವರ್ಣ ಕಲಾವಿದೆ." ಅನಂತರ ನಾಥ್ ಅವರ ಕಡೆ ನೋಡಿ ಹೇಳಿದರು: "ಶ್ರೀ ಪ್ರಮೋದನಾಥ ಶುಕ್ಲ. ಇವರು ದಕ್ಷಿಣ ದ್ವೀಪಗಳಲ್ಲಿ ಆರು ತಿಂಗಳ ಕಾಲ ಪ್ರವಾಸ ಮಾಡಿ ಹಿಂದಿರುಗಿದ್ದಾರೆ."

ನಾಥನ ಪ್ರಶಾಂತ ಗಾಂಭೀರ್ಯ ಮತ್ತು ಸಜ್ಜನಿಕೆಗಳಿಗೆ ಮೇರೆಯೇ ಇರಲಿಲ್ಲ. ಅವನು ವಿನಯದಿಂದ ಮೇಜಿನವರೆಗೂ ಬಾಗಿನಿಂತು ಅವಳ ಪರಿಚಯವನ್ನು ಸ್ವೀಕರಿಸಿದ ಹಾಗೂ ಕುಮಾರಿ ಮೆಹತಾ, ಬಾತುಕೋಳಿಯ ಕತ್ತಿನಂತೆ ಬಳುಕಿ, ಕುರ್ಚಿಯಲ್ಲಿ ಕುಳಿತುಕೊಳ್ಳುವವರೆಗೂ ನಿಂತೇ ಇದ್ದ.

ಚಹಾದ ಮೊದಲ ಬಟ್ಟಲನ್ನು ಅವರೆಲ್ಲ ಹೀರಿ ಮುಗಿಸುತ್ತಿದ್ದಂತೆಯೇ, ಆ ಕೂಟದಲ್ಲಿ ದಕ್ಷಿಣ ದ್ವೀಪಗಳ ಬಗೆಗಿನ ಮಾತು ಮೂಡಿಬಂದಿತು. ನಾಥ್ ಹೇಳಿದ: "ನನಗಂತೂ ಯೂರೋಪಿನ ಸಂಸ್ಕೃತಿಗಿಂತಲೂ ಏಷ್ಯಾದ ಸಂಸ್ಕೃತಿಯ ವಿಷಯದಲ್ಲಿಯೇ ಹೆಚ್ಚಿನ ಒಲವಿದೆ. ಆದ್ದರಿಂದಲೇ ನಾನು ಯೂರೋಪಿಗೆ ಹೋಗದೆ, ಪ್ರಾಚೀನ ನಾಗರಿಕತೆಯ 'ಚಿತ್ರಸಂಪುಟ'ದಂತಿರುವ ಈ ದ್ವೀಪಗಳ ಪ್ರವಾಸ ಮಾಡಿಬಂದೆ."

ತಾನು ಈ ಮಹತ್ವಪೂರ್ಣ ದ್ವೀಪಗಳಲ್ಲಿ ಕಂಡಿರುವಂಥ ವೈಶಿಷ್ಟ್ಯಗಳು ಜಗತ್ತಿನ ಬೇರಾವ ದೇಶಗಳಲ್ಲಿಯೂ ಕಾಣದೊರೆಯುವುದಿಲ್ಲವೆಂದೂ ಅವನು ತಿಳಿಸಿದ. ಈ ದ್ವೀಪಗಳಲ್ಲಿನ ಸಾಮಾಜಿಕ ಸಮಸ್ಯೆಗಳ ಬಗೆಗಿನ ತನ್ನ ಹೆಚ್ಚಿನ ಅರಿವನ್ನೂ ಅವನು ಪ್ರಕಟಿಸಿದ.

ಕುಮಾರಿ ಮೆಹತಾ ತುಂಬ ಗಾಂಭೀರ್ಯದಿಂದ ಪ್ರಶ್ನಿಸಿದಳು: "ಭಾರತೀಯ ಮಹಿಳೆಯರಿಗಿಂತ ಅಲ್ಲಿಯ ಮಹಿಳೆಯರು ಯಾವ ರೀತಿಯಲ್ಲಿ ಭಿನ್ನವಾಗಿದ್ದಾರೆ?"

ಉತ್ತರ ಕೊಡುವಾಗ, ತನ್ನ ವಾಕ್ಚಾತುರ್ಯವನ್ನೆಲ್ಲ ಮೆರೆಯುತ್ತ, ಅವನು ಯೂರೋಪ್ ಮತ್ತು ಅಮೆರಿಕಾಗಳಲ್ಲಿನ ಸಾಮಾಜಿಕ ಸಂಸ್ಥೆಗಳ ಬಗ್ಗೆ ವಿವರಿಸ ತೊಡಗಿದ. ಸ್ವಾರಸ್ಯವೆಂದರೆ ಯಾರೋ ಒಬ್ಬರು ಕೇಳಿಯೇಬಿಟ್ಟರು: "ನೀವು ಯೂರೋಪ್ ಮತ್ತು ಅಮೆರಿಕಾಗಳಿಗೆ ಯಾವಾಗ ಹೋಗಿದ್ದಿರಿ? ಅದಕ್ಕೂ ಈ ವಿಷಯಕ್ಕೂ ಎಲ್ಲಿಯ ಸಂಬಂಧ?"

ಅವಕಾಶ ದೊರೆತಾಗಲೆಲ್ಲ ಅವನು ಕುಮಾರಿ ಮೆಹತಾಳನ್ನು 'ಕುಮಾರಿ ಉಷಾ', 'ಉಷಾ ಅವರೆ' ಎಂದೆಲ್ಲ ಸಂಬೋಧಿಸುತ್ತ, ಇಂಗ್ಲಿಷ್ ಕಲಬೆರಕೆಯ ವಾಕ್ಯ ಗಳನ್ನು ಹೇಳುತ್ತ, ಈ ಪ್ರವಾಸದ ಬಗ್ಗೆ ಇನ್ನು ಮುಂದೆ ಇಂಗ್ಲಿಷ್‌ನಲ್ಲಿಯೇ ಮಾತ ನಾಡುವುದು ತನ್ನ ಮಟ್ಟಿಗೆ ಸಹಜವಾಗಿರುತ್ತದೆ ಎಂಬ ಭಾವನೆಯನ್ನುಂಟುಮಾಡಿದ. ತಾನು ಪಂಜಾಬಿಯಲ್ಲಿ ಮಾತನಾಡಲು ಯತ್ನಿಸಿದ್ದರೆ, ಅದು ಅಲ್ಲಿದ್ದ ಇತರರ ಸೌಲಭ್ಯ ಕ್ಕಾಗಿ ಮಾತ್ರವೇ ಎಂಬ ಮಾತನ್ನೂ ಹೇಳಿದ.

ಮುಂದುವರಿದು ಅವನು ಹೇಳಿದ: "ರಾಜಕೀಯ ಆಂದೋಳನಗಳಿಗಾಗಿ ಹಾಗೂ ಇತರ ಸಮಸ್ಯೆಗಳಿಗಾಗಿ ನಮ್ಮ ನಾಡಿನಲ್ಲಿ ಅದೆಷ್ಟು ಹಣವನ್ನೂ, ಶ್ರಮವನ್ನೂ ನಾವು ವಿನಿಯೋಗಿಸುತ್ತಿದ್ದೇವೆಯೋ ಅದರಲ್ಲಿ ಅರ್ಧದಷ್ಟನ್ನಾದರೂ ಮಹಿಳೆಯರ ಉನ್ನತಿಗಾಗಿ ನಾವು ಬಳಸಿದರೆ, ಅದರಿಂದ ನಮಗೆ ನಾಲ್ಕೈದು ಪಟ್ಟು ಹೆಚ್ಚು ಲಾಭ ದೊರೆಯು ತ್ತದೆ." ಈ ಮಾತನ್ನು ಕೇಳಿ ಉಷಾ ಉತ್ಸಾಹದಿಂದ ಕುಣಿದೆದ್ದಳು. ಅವನು ಮತ್ತೆ ಹೇಳಿದ: "ಅನುಕೂಲವಾದೊಡನೆಯೇ ಈ ವಿಷಯದ ಬಗ್ಗೆ ನಾನೊಂದು ಪುಸ್ತಕವನ್ನೇ ಬರೆಯಬೇಕೆಂದುಕೊಂಡಿದ್ದೇನೆ. ಆದರೆ, ಇದು ವಾಸ್ತವವಾಗಿ ಮಹಿಳೆಯರಿಂದಲೇ ಆಗ ಬೇಕಾಗಿರುವಂಥ ಕೆಲಸ. ಅವರಿಗೆ ನೆರವಾಗುವುದಷ್ಟೇ ಪುರುಷರು ಮಾಡಬೇಕಾಗಿರುವ ಕೆಲಸ."

ನಾಥನ ಈ ಮಾತುಗಳು ಉಷಾಳಿಗೆ ದೇವವಾಣಿಯಂತೆಯೇ ತೋರಿದುವು. ಅವನು ಮತ್ತೆ ಹೇಳಿದ: "ಈ ಕಾರ್ಯಕ್ಕಾಗಿ ದೇಶವ್ಯಾಪಿ ಆಂದೋಳನವನ್ನು ನಡೆಸು ವುದು ಹಾಗೂ ಮಹಿಳೆಯರ ಸಂಘಟನೆಯನ್ನು ಸಾಧಿಸುವುದು ಅಗತ್ಯವಾಗಿದೆ." ಶ್ರೀಮತಿ ವಿಷ್ಣು ಅವರನ್ನು ಸಂಬೋಧಿಸಿ ಹೇಳಿದರೂ, ಉಷಾಳನ್ನೇ ಮನಸ್ಸಿನಲ್ಲಿಟ್ಟು ಕೊಂಡಿದ್ದಂತೆ ಹೇಳಿದ: "ಮಹಿಳೆಯರು ಪುರುಷರ ಸೇವೆಯ ಸಾಧನವಾಗಿಯೇ ಏಕೆ ಉಳಿದುಕೊಂಡಿರಬೇಕು? ಅವರೇಕೆ ಸ್ವತಂತ್ರ ಬಾಳುವೆಯನ್ನು ನಡೆಸಬಾರದು? ಈ ಆಂದೋಳನದ ಕರ್ಣಧಾರರಾಗಿ, ಚುಕ್ಕಾಣಿಯನ್ನು ಹಿಡಿದುಕೊಂಡು ನೀವೆಲ್ಲ ಮುಂದೆ ಸಾಗಬೇಕು."

ನಾಥನ ಈ ಮಾತುಗಳಿಂದ ಶ್ರೀಮತಿ ವಿಷ್ಣು ಅವರೂ ತುಂಬ ಪ್ರಭಾವಿತರಾದರು. ಕುಮಾರಿ ಮೆಹತಾ ಕೋಮಲವಾದ ಧ್ವನಿಯಲ್ಲಿ ಹೇಳಿದಳು: "ಈ ವಿಷಯದ ಬಗ್ಗೆ ನಾನೂ ಏನೋ ಒಂದಿಷ್ಟು ಬರೆಯುತ್ತಿದ್ದೇನೆ. ನಿಮಗೆ ಬಿಡುವಿದ್ದರೆ, ನನಗೆ ಒಂದಿಷ್ಟು ಸಹಾಯಮಾಡಿ."

ನಾನು ನಾಥನ ಬಳಿಯೇ ಕುಳಿತಿದ್ದೆ. ಕೆಮ್ಮುವ ನೆಪದಲ್ಲಿ, ಕರವಸ್ತ್ರವನ್ನು ಬಾಯಿಗೆ ಅಡ್ಡವಾಗಿಟ್ಟುಕೊಂಡು, ಅವನ ಕಿವಿಯಲ್ಲಿ ಹೇಳಿದೆ: "ಶಹಭಾಷ್ ಗುರು!"

ನನ್ನ ಮಾತಿಗೆ ಉತ್ತರವನ್ನು ಕೊಡುವಷ್ಟು ಪುರಸೊತ್ತು ಅವನಿಗೆ ಇರಲಿಲ್ಲ ಕುಮಾರಿ ಮೆಹತಾಳ ಕೋರಿಕೆಗೆ ಉತ್ತರವಾಗಿ ಅವನು ಹೇಳಿದ ಮಾತಿನಿಂದ, ತನ ಬಾಳನ್ನು ಸಾಮಾಜಿಕ ಕ್ರಾಂತಿಗಾಗಿಯೇ ಅರ್ಪಿಸಿಬಿಟ್ಟಿರುವುದಾಗಿಯೂ, ಈ ಬಗೆಯ ಯಾವುದೇ ಕಾರ್ಯದಲ್ಲಿ ಸರ್ವವಿಧದಿಂದಲೂ ನೆರವಾಗಲು ತಾನು ಸಿದ್ಧವಿರುವ ದಾಗಿಯೂ ತಿಳಿಸಿದಂತೆ ನನಗೆ ತೋರಿತು.

ಸಂತೋಷ ಕೂಟ ಕೊನೆಗೊಂಡಿತು. ಆಹ್ವಾನಿತರು ಹೊರಡಲು ಸಿದ್ಧರಾದರು ಕುಮಾರಿ ಮೆಹತಾಳ ಬಳಿಗೆ ನಡೆದು ಬಂದು ನಾಥ ಹೇಳಿದ. "ನಿಮ್ಮ ಕಾರು ಇನ್ನೂ ಬರಲೇ ಇಲ್ಲವೇನು ?"

ಉಪೇಕ್ಷೆಯ ಭಾವದಿಂದಲೋ ಎಂಬಂತೆ ಕುಮಾರಿ ಮೆಹತಾ ಹೇಳಿದಳು "ಅಂಥ ಆಗತ್ಯವೇನಿದೆ, ಹೇಳಿ. ಬಿಸಿಲು ಕಂತಿದೆ. ಹತ್ತಿರದಲ್ಲಿಯೇ ಇರುವ ನನ್ನ ಗೆಳ ಯೊಬ್ಬಳ ಮನೆಗೆ ಹೋಗಿ ಬರಬೇಕಾಗಿದೆ."

ಕುಮಾರಿ ಮೆಹತಾ ಹಳೆಯ ಅನಾರ್ಕಲೀ ಬಡಾವಣೆಯಲ್ಲಿ ವಾಸವಾಗಿದ್ದಾ ಎಂಬುದನ್ನು ಅವನು ಈಗಾಗಲೇ ತಿಳಿದುಕೊಂಡಿದ್ದ. ತನ್ನ ಚಿನ್ನದ ಕೈಗಡಿಯಾರದತ್ತ ದೃಷ್ಟಿ ಹರಿಸುತ್ತ ಅವನು ಹೇಳಿದ: "ಹೆಚ್ಚು ಸಮಯವಂತೂ ಇಲ್ಲವೇ ಇಲ್ಲ. ನಾನು ಒಂದೆರಡು ಕಡೆಗಳಿಗೆ ಹೋಗಬೇಕಾಗಿದೆ. ಒಂದು ಟ್ಯಾಕ್ಸಿಯವನ್ನು ತರಿಸಿಕೊಳ ತ್ತೇನೆ."

ಚಪರಾಸಿಯ ಈ ಕೆಲಸ ನನ್ನಪಾಲಿಗೆ ಬಂದಿತು. ಅವನಿಗೆ ಹಿಡಿಶಾಪ ಹಾಕುತ್ತ ಹತ್ತಿರದ ಮನೆಯೊಂದರಿಂದ ಫೋನ್ ಮಾಡಿ, ಟ್ಯಾಕ್ಸಿಯೊಂದನ್ನು ತರಿಸಿ ನಿಲ್ಲಿಸಿದೆ. ನ ಗೈರು ಹಾಜರಿಯಲ್ಲಿಯೇ, ಅವರಿಬ್ಬರೂ ಟ್ಯಾಕ್ಸಿಯಲ್ಲಿ ಜೊತೆ ಜೊತೆಯಾಗಿ ಹೋಗು ವಿಚಾರ ತೀರ್ಮಾನವಾಗಿ ಬಿಟ್ಟಿತ್ತು.

ಮಾರನೆಯ ದಿವಸ ಸಂಜೆ ನಾಲ್ಕು ಘಂಟೆಗೆ ತನ್ನ ಮನೆಗೆ ಚಹಾಪಾನಕ್ಕಾ ಬರುವಂತೆ ಕುಮಾರಿ ಮೆಹತಾ ನಾಥನನ್ನು ಆಹ್ವಾನಿಸಿದ್ದಳು. ರಾತ್ರಿಯೆಲ್ಲ ಅವ ಗೂಢ ವಿಚಾರಗಳಲ್ಲಿ ಮಗ್ನನಾಗಿದ್ದ. ಬೆಳಗ್ಗೆ ಚಹಾ ಕುಡಿದ ಮೇಲೆ, ನಾ ಅವನೊಂದಿಗೆ ಕಾರುಗಳ ವ್ಯಾಪಾರಿಗಳಾಗಿದ್ದ 'ಪ್ಯಾರೇಲಾಲ್ ಅಂಡ್ ಸನ್ಸ್' ಅವರಲ್ಲಿ ಹೋಗಬೇಕಾಗಿ ಬಂದಿತು. ಅಲ್ಲಿಗೆ ಹೋದಾಗ ನಾಥ್ ಒಳ್ಳೆಯ ಕಾರೊಂದ ನ ನೋಡುವ ಇಚ್ಛೆಯನ್ನು ವ್ಯಕ್ತಪಡಿಸಿದ.

ಮ್ಯಾನೇಜರ್ ತುಂಬ ವಿನಯದಿಂದ ಕೇಳಿದ. "ಯಾವ ಕಂಪೆನಿಯ ಕಾರನ ನೀವು ನೋಡ ಬಯಸುತ್ತೀರಿ, ಸಾರ್ ?"

ಉಪೇಕ್ಷೆಯಿಂದ ನಾಥ್ ಉತ್ತರಿಸಿದ: "ಮನೆಯಲ್ಲಿ ಇಂಥದೇ ಬ್ಯಾಂಡಿನ ಕಾರನ ತರುತ್ತೇನೆ ಎಂದೇನೂ ಆಣೆ ಪ್ರಮಾಣ ಮಾಡಿ ಬಂದಿಲ್ಲ. ಯಾವುದು ಮನಸ್ಸಿ ಹಿಡಿಸಿದರೆ ಅದನ್ನು ಕೊಂಡುಕೊಳ್ಳುತ್ತೇನೆ."

ಆ ಮ್ಯಾನೇಜರ್ ಹಲ್ಲುಕಿರಿದು, ಗಿರಾಕಿಯ ಈ ಹಾಸ್ಯವನ್ನು ಸ್ವಾಗತಿಸಿದ ಹಾ ಆಸ್ಟಿನ್ 'ಕಾರೊಂದರ ಬಳಿಗೆ ನಮ್ಮನ್ನು ಕರೆದೊಯ್ದ. 'ಮಾರಿಸ್' ಮತ್ತು 'ಡಾ ಕಾರುಗಳ ವಿಚಾರವನ್ನು ಎತ್ತುತ್ತ ನಾಥ್ ಹೇಳಿದ: "ನಾನು ಯಾವಾಗಲೂ

ಸಿಲಿಂಡರುಗಳ ಕಾರನ್ನೇ ಇಷ್ಟಪಡುತ್ತೇನೆ. ತಪ್ಪಾಗಿ ಒಂದು ಸಲ ನಾಲ್ಕು ಸಿಲಿಂಡರುಗಳ ಕಾರನ್ನು ಕೊಂಡುಕೊಂಡೆ. ಅದು ತುಂಬ ತೊಂದರೆ ಕೊಟ್ಟಿತು. ಅದನ್ನು ಮಾರಿ ಕೈತೊಳೆದುಕೊಳ್ಳಬೇಕಾಯಿತು."

ಕಾರಿನ ಜೊತೆಯಲ್ಲಿಯೇ ಅವನು ಎರಡು-ಮೂರು ಬಗೆಯ ಲಾರಿಗಳ ಬೆಲೆಯನ್ನೂ ವಿಚಾರಿಸಿಕೊಂಡ. ಕೊನೆಗೆ ಒಂದು 'ಆಸ್ಟಿನ್' ಕಾರನ್ನು ಕೊಳ್ಳುವ ಬಗ್ಗೆ ಒಪ್ಪಂದಕ್ಕೆ ಬರಲಾಯಿತು. ಟೈರುಗಳನ್ನು ಬದಲಾಯಿಸುವ ಅಗತ್ಯವಿತ್ತು. ಕೆಲವು ಹೆಚ್ಚಿನ ವಸ್ತುಗಳನ್ನೂ ಅದಕ್ಕೆ ಅಳವಡಿಸಬೇಕಾಗಿತ್ತು. ಬಿಲ್ ಐದೂವರೆ ಸಾವಿರ ರೂಪಾಯಿಗಳಿಗೆ ಬಂದಿತ್ತು. 'ಇವತ್ತು ಇವನೇನು ಪಜೀತಿ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿದ್ದಾನೆ?' ಎಂದು ನಾನು ಕಕ್ಕಾಬಿಕ್ಕಿಯಾಗ ತೊಡಗಿದ್ದೆ.

ಬಿಲ್ಲನ್ನು ಕೈಗೆ ತೆಗೆದುಕೊಂಡು ಅವನು ಹೇಳಿದ: "ಕಾರಿಗೆ ಎಲ್ಲವನ್ನೂ ಫಿಟ್ ಮಾಡಿಸಿದ ಮೇಲೆ ನನ್ನ ಡ್ರೈವರ್ ಬಂದು ಕಾರನ್ನು 'ಟೆಸ್ಟ್' ಮಾಡುತ್ತಾನೆ ಹಾಗೂ ಅವನೇ ಚೆಕ್ಕನ್ನು ಕೊಟ್ಟು ಕಾರನ್ನು ತೆಗೆದುಕೊಂಡು ಬರುತ್ತಾನೆ." ಹೀಗೆಂದು ಹೇಳಿ ಅವನು ಬಿಲ್ಲನ್ನು ತನ್ನ ಜೇಬಿಗೆ ತುರುಕಿಕೊಂಡ.

ಅಂಗಡಿಯಿಂದ ಕ್ಷೇಮವಾಗಿ ಹೊರಬಿದ್ದ ಬಳಿಕ, ಅವನಿಗೆ ಕೈಮುಗಿದು ಹೇಳಿದೆ: "ಧನ್ಯನಾದೆ ಗುರು!"

ಇದಾದ ಬಳಿಕ 'ನಾರಾಯಣದಾಸ್ ಅಂಡ್ ಸನ್ಸ್' ಎಂಬ ಹೆಸರಿನ ಕಾರುಗಳ ವ್ಯಾಪಾರಿಗಳ ಅಂಗಡಿಯ ಸರದಿ ಬಂದಿತು. ಇಲ್ಲಿ ಒಂದು 'ಬ್ಯೂಕ್ ಸೆಲೂನ್' ಕಾರನ್ನು ಕೊಳ್ಳುವ ಬಗ್ಗೆ ಒಪ್ಪಂದಕ್ಕೆ ಬರಲಾಯಿತು. ಇಲ್ಲಿಯೂ ಆರೂವರೆ ಸಾವಿರ ರೂಪಾಯಿಗಳ ಬಿಲ್ಲನ್ನು ಜೇಬಿಗೆ ತುರುಕಿಕೊಂಡು, ಸಂಜೆಯ ಹೊತ್ತಿಗೆ ಕಾರು ಸಿದ್ಧವಾದರೆ, ನಮ್ಮ ಡ್ರೈವರ್ ಬಂದು ಚೆಕ್ಕನ್ನು ಕೊಟ್ಟು, ಕಾರನ್ನು ತೆಗೆದುಕೊಂಡು ಬರುತ್ತಾನೆಂದು ತಿಳಿಸಲಾಯಿತು.

ಆಮೇಲೆ 'ಹಯಾತ್ ಫರ್ನಿಚರ್' ಸಂಸ್ಥೆಗೆ ಹೋದೆವು. ಇಲ್ಲಿ ಬೀಟಿ ಮರದ ಡ್ರಾಯಿಂಗ್ ರೂಮ್ ಸೆಟ್, ಒಂದು ಡ್ರೆಸ್ಸಿಂಗ್ ಟೇಬಲ್ ಮತ್ತು ಗಾರ್ಡನ್ ಚೇರ್‌ಗಳನ್ನು ಆಯ್ಕೆಮಾಡಲಾಯಿತು. ಸಾವಿರದ ಏಳುನೂರ ಐವತ್ತು ರೂಪಾಯಿಗಳ ಬಿಲ್ಲನ್ನು ಜೇಬಿನಲ್ಲಿರಿಸಿಕೊಂಡು, ಅಲ್ಲಿಂದ 'ಕೃಷ್ಣ ಕಾರ್ಪೆಟ್ ಸ್ಟೋರ್ಸ್'ಗೆ ಹೋದೆವು. ಇಲ್ಲಿ ಕೆಲವು ರತ್ನಗಂಬಳಿಗಳನ್ನು, ಸ್ಯಾಟಿನ್ ಬಟ್ಟೆಗಳನ್ನು ಆಯ್ಕೆ ಮಾಡಲಾಯಿತು. ಒಂದೂವರೆ ಸಾವಿರ ರೂಪಾಯಿಗಳ ಬಿಲ್ಲನ್ನು ಜೇಬಿನಲ್ಲಿರಿಸಿಕೊಂಡು, ಸಂಜೆ ನಮ್ಮ ಗುಮಾಸ್ತರು ಬಂದು, ಚೆಕ್ ಪಾವತಿಮಾಡಿ, ಆ ವಸ್ತುಗಳನ್ನೆಲ್ಲ ತೆಗೆದುಕೊಂಡು ಬರುತ್ತಾರೆಂದು ತಿಳಿಸಿ, ಅಲ್ಲಿಂದ ನಾವು ಹೊರ ಬಂದೆವು.

ಗಡಿಯಾರ ಮೂರೂವರೆ ಘಂಟೆಯನ್ನು ತೋರಿಸುತ್ತಿತ್ತು. ಕಾಲುನಡಿಗೆಯಲ್ಲಿಯೇ ನಾವು ಪುರಸಭಾ ಮಾರುಕಟ್ಟೆಯ ಬಳಿಗೆ ಬಂದೆವು. ನಾಲ್ಕು ಗಂಟೆಗೆ ಆರು ನಿಮಿಷ ಉಳಿದಿದ್ದಾಗ ನಾಥ ಟ್ಯಾಕ್ಸಿಯಲ್ಲಿ ಕುಳಿತು, ಕುಮಾರಿ ಮೆಹತಾಳ ಮನೆಯನ್ನು ತಲುಪಿದ.

* * *

ಕಾರು ಬಂದ ಸದ್ದನ್ನು ಕೇಳಿ, 'ಟ್ರಿಬ್ಯೂನ್' ಪತ್ರಿಕೆಯನ್ನು ಕೈಯಲ್ಲಿ ಹಿಡಿದಿದ್ದ ಕುಮಾರಿ ಮೆಹತಾ ಅಂಗಳಕ್ಕೆ ಬಂದಳು. ನಾಥ ನಗುತ್ತಾ ಹೇಳಿದ: "ಎಲ್ಲಿ ತಡವಾಗಿ ಬಿಡುತ್ತದೆಯೋ ಎಂದು ಹೆದರಿದ್ದೆ. ಆದರೆ, ಡ್ರೈವರ್ ಸಕಾಲಕ್ಕೆ ಕರೆತಂದ."

ತನ್ನ ಮುಂಗೈಯನ್ನು ಮೇಲೆತ್ತಿ ಗಡಿಯಾರದತ್ತ ನೋಡುತ್ತ ಕುಮಾರಿ ಮೆಹತಾ ಹೇಳಿದಳು: "ನೀವು ಹೊತ್ತಿಗೆ ಸರಿಯಾಗಿಯೇ ಬಂದಿದ್ದೀರಲ್ಲ!"

ನಾಥ ಹೇಳಿದ: "ವಿದೇಶಗಳಲ್ಲಿ ನಾವು ಸಮಯಪಾಲನೆಯ ಬಗ್ಗೆ ತುಂಬ ಎಚ್ಚರದಿಂದ ಇರಬೇಕಾಗುತ್ತದೆ. ನನಗೆ ಈಗ ಅದೇ ಅಭ್ಯಾಸವಾಗಿಬಿಟ್ಟಿದೆ. ಸ್ವಲ್ಪ ಏರುಪೇರಾದರೂ ಮನಸ್ಸಿಗೆ ತುಂಬ ಪೇಚಾಟವಾಗುತ್ತದೆ."

ಸಮಯ ಪರಿಪಾಲನೆಯ ಮಾತುಕತೆಯ ಬಳಿಕ ಹವಾಮಾನವನ್ನು ಕುರಿತಂತೆ ಮಾತುಕತೆಗಳು ನಡೆದುವು. ಲಾಹೋರಿಗಿಂತಲೂ ಸಹಾರನ್‌ಪುರದ ಹವಾಮಾನವೇ ತುಂಬ ಚೆನ್ನಾಗಿರುತ್ತದೆಂದು ನಾಥ ಹೇಳಿದ.

ಆ ಬಳಿಕ ಕುಮಾರಿ ಮೆಹತಾಳ ಪುಸ್ತಕದ ಬಗೆಗಿನ ಚರ್ಚೆ ಪ್ರಾರಂಭವಾಯಿತು. ಜಪಾನಿನ ಮಹಿಳಾ ಸಮುದಾಯದೊಂದಿಗೆ ಭಾರತೀಯ ಮಹಿಳಾ ಸಮುದಾಯವನ್ನು ಹೋಲಿಸಿ, ಕೆಲವೊಂದು ತಿದ್ದುಪಡಿಗಳನ್ನು ಮಾಡಬಹುದೆಂಬುದಾಗಿ ಸೂಚಿಸಿ, ಅವನು ತನ್ನ ಅಭಿಪ್ರಾಯಗಳನ್ನು ತಿಳಿಸಿದ. ಹಿಂದೂ ಸಮಾಜದ ಕೌಟುಂಬಿಕ ಜೀವನದ ಬಗ್ಗೆ ವಿಮರ್ಶೆ ನಡೆಯಿತು. ಆ ಗಂಭೀರವಾದ ವಿವೇಚನೆಯನ್ನು ಕುಮಾರಿ ಮೆಹತಾ ಜಿಜ್ಞಾಸೆಯ ಭಾವನೆಯಿಂದ ಕೇಳಿದಳು. ಮಾತುಕತೆಗಳ ದಿಕ್ಕು ಬದಲಾಯಿತು; ಅದು ಬೇರೆ ಹಳಿಯ ಮೇಲೆ ಓಡತೊಡಗಿತು.

ಚಹಾದ ಬಟ್ಟಲಿನತ್ತ ನೋಡುತ್ತ ನಾಥ ಹೇಳಿದ: "ನೋಡಿ, ಸಣ್ಣಪುಟ್ಟ ಸಂಗತಿಗಳಿಗೂ ಬಾಳಿಗೂ ಎಷ್ಟು ನಿಕಟವಾದ ಸಂಬಂಧ ಇರುತ್ತದೆ. ಈ ಬಟ್ಟಲು ಎಂಥ ಸಾಧಾರಣ ವಸ್ತು! ಆದರೆ, ಅದು ನಮ್ಮ ಮೇಲೆ ಎಂಥ ಪ್ರಭಾವವನ್ನು ಬೀರುತ್ತದೆ! ಅದೆಷ್ಟು ಹೊತ್ತಿನಿಂದ ಇವುಗಳನ್ನು ನೋಡುತ್ತಿದ್ದೇನೆ, ಗೊತ್ತೆ? ಇವುಗಳನ್ನು ಆಯ್ದರುವಂಥ ವ್ಯಕ್ತಿಯ ಕಲಾಭಿಜ್ಞತೆಯನ್ನು, ಸೌಂದರ್ಯ ದೃಷ್ಟಿಯನ್ನು ನಾನು ಪ್ರಶಂಸಿಸುತ್ತಲೇ ಇದ್ದೇನೆ. ಇದರಲ್ಲಿ ಚಹಾ ಸೇವಿಸುವುದೇ ಒಂದು ಸಂತೋಷ. ನನ್ನ ಈ ಬಾಳೂ ಇದೆ—ಅದರಲ್ಲಿ ಎಲ್ಲ ಕೆಲಸಗಳೂ ಯಾಂತ್ರಿಕವಾಗಿ ನಡೆಯುತ್ತ ಇರುತ್ತವೆ; ಅದರಲ್ಲಿ ಕಲೆ ಮತ್ತು ಸೌಂದರ್ಯದ ಪ್ರಶ್ನೆಗಳಿಗೆ ಎಡೆಯೇ ಇಲ್ಲದಂತಾಗಿಬಿಟ್ಟಿದೆ. ಅಗತ್ಯಕ್ಕಿಂತಲೂ ತುಂಬ ದೊಡ್ಡದಾಗಿರುವ ಬಂಗಲೆಯೇನೋ ಇದೆ; ಆದರೆ, ನನ್ನ ವಾಸಕ್ಕೆ ಯೋಗ್ಯವಾಗಿರುವಂಥ ನಾಲ್ಕು ಒಳ್ಳೆಯ ಕೋಣೆಗಳೂ ಅಲ್ಲಿಲ್ಲ. ಪರಿಚಾರಕನಿಗೆ ಅವನ ಸಂಬಳದ ಮೇಲಷ್ಟೇ ಕಣ್ಣಿದೆ. ಮಾಲಿ ಬಂಗಲೆಯ ಸುತ್ತಲೂ ಹೂವುಗಳನ್ನು ಬೆಳೆಸುವ ಬದಲು ತರಕಾರಿಯನ್ನು ಬೆಳೆಯುತ್ತಾನೆ. ಇದರಿಂದ ಅವನಿಗೆ ಸ್ವಲ್ಪಮಟ್ಟಿನ ಮೇಲು ಸಂಪಾದನೆ ಆಗುತ್ತದೋ ಏನೋ. ಆ ಮನೆಯನ್ನು ನಿಜವಾಗಿಯೂ 'ಮನೆ'ಯಾಗಿಸುತ್ತೇನೆ ಎಂದು ತೀರ್ಮಾನಿಸಿಕೊಂಡೇ ಬಂದಿದ್ದೆ. ಆದರೆ, ನನ್ನ ಅಭಿರುಚಿಗೆ ತಕ್ಕಂತೆ ನಾನು ಆಯ್ದ ವಸ್ತುಗಳು ನನಗೇ ಇಷ್ಟವಾಗುತ್ತವೆಯೋ ಇಲ್ಲವೋ ಎಂಬ ಅನುಮಾನ ನನ್ನನ್ನು ಕಾಡುತ್ತದೆ. ನನ್ನ ಕಥೆಯಂತೂ ಏನಾಗಿದೆ ಅಂದರೆ ಅಂಗಡಿಯವನ

ಯಾವುದನ್ನು ಅತ್ಯುತ್ತಮವಾದುದು ಎಂದು ಹೇಳುತ್ತಾನೋ ಅದನ್ನೇ ಕೊಳ್ಳುತ್ತೇನೆ. ಆದರೆ, ಚೆನ್ನಾಗಿಲ್ಲದಿರುವಂಥ ವಸ್ತುಗಳನ್ನು ಹೊರಹಾಕುವುದೇ ಅಂಗಡಿಯವನ ಉದ್ದೇಶವಾಗಿರುತ್ತದೆಯಲ್ಲವೆ !

"ಇವತ್ತು ಒಂದಿಷ್ಟು ಫರ್ನಿಚರ್ ಕೊಳ್ಳಲು ಹೋಗಿದ್ದೆ. ಸೌಂದರ್ಯದ ದೃಷ್ಟಿ ನನ್ನಲ್ಲಿ ಇದೆಯೋ ಇಲ್ಲವೋ, ಆಸಕ್ತಿಯಂತೂ ಇದೆ. ನಿಮ್ಮ ಮನೆಯಲ್ಲಿನ ಈ ಅಚ್ಚುಕಟ್ಟುತನ ಮತ್ತು ವ್ಯವಸ್ಥೆಯನ್ನು ನೋಡಿದಾಗ, ಹೊಟ್ಟೆಕಿಚ್ಚು ಉಂಟಾಗುತ್ತದೆ. ನನ್ನ ಮನೆಯೂ ಹೀಗೆಯೇ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದೆನ್ನಿಸುತ್ತದೆ. ಈ ರತ್ನಗಂಬಳಿಯನ್ನೇ ನೋಡಿ, ಎಂಥ ಒಳ್ಳೆಯ ಅಭಿರುಚಿ ಇದರಲ್ಲಿ ಅಡಗಿದೆ ! ಮತ್ತು ಯಾವ ಕಾರಣಕ್ಕಾಗಿ ಇದನ್ನು ಹಾಸಲಾಗಿದೆ ಎಂಬುದನ್ನು ನೆನೆದಾಗ....!

"ನಾನೂ ಒಂದು ರತ್ನಗಂಬಳಿಯನ್ನು ಕೊಂಡಿದ್ದೇನೆ" ಜೇಬಿನಿಂದ ಬಿಲ್ಲನ್ನು ಹೊರದೆಗೆಯುತ್ತ ಹೇಳಿದ: "ನೋಡಿ, ಅಂಗಡಿಯವನು ಇದನ್ನು ಇರಾನಿನ ಅಸಲಿ ಮಾಲು ಎಂದು ಹೇಳಿದ. ಇಷ್ಟರ ಮೇಲೆ ಅವನ ಪ್ರಾಮಾಣಿಕತೆಯ ವಿಚಾರ ಭಗವಂತನಿಗೇ ಗೊತ್ತು!" ಕುಮಾರಿ ಮೆಹತಾ ಬಿಲ್ಲಿನ ಕಡೆ ದೃಷ್ಟಿ ಹರಿಸಿದಳು. ಅವಳ ಕಣ್ಣುಗಳು ಆಶ್ಚರ್ಯದಿಂದ ಅರಳಿ ನಿಂತವು. "ಫರ್ನಿಚರ್ ವಿಷಯದಲ್ಲಿಯೂ ನಾನು ಅಂಗಡಿಯವನ ಮಾತನ್ನೇ ನಂಬಬೇಕಾಯಿತು. ಇಲ್ಲಿ ನೋಡಿ. ಓಹ್, ಇದು ಬಹುಶಃ ಕಾರಿನ ಬಿಲ್ಲು ಎಂದು ತೋರುತ್ತದೆ. ಹೌದು, ಇದನ್ನು ನೋಡಿ. ಅದಿರಲಿ, ನಿಮಗೆ ಯಾವ ಕಾರು ಇಷ್ಟ?"

ಕುಮಾರಿ ಮೆಹತಾಳ ಗಂಡಸ್ಥಲದಲ್ಲಿ ರಕ್ತ ವೇಗದಿಂದ ಹರಿಯ ತೊಡಗಿತು. ಅವಳ ಒಬ್ಬ ಗೆಳತಿಯ ಮನೆಯಲ್ಲಿ 'ಓವರ್‌ಲ್ಯಾಂಡ್' ಕಾರಿತ್ತು; ಇನ್ನೊಬ್ಬಳ ಬಳಿ 'ಬ್ಯೂಕ್' ಕಾರಿತ್ತು. ನಾಚಿಕೆಯನ್ನು ತೋರುತ್ತ ಅವಳು ಹೇಳಿದಳು: "'ಓವರ್‌ಲ್ಯಾಂಡ್' ಚೆನ್ನಾಗಿರುತ್ತದೆಂದು ತೋರುತ್ತದೆ. 'ಬ್ಯೂಕ್' ಸ್ವಲ್ಪ ಕಡಿಮೆ ಬೀಳಬಹುದೇನೋ !"

ನಾಥ್ ಹೇಳಿದ: "ನೀವು ಹೇಳುವುದು ಸರಿಯೆಂದು ತೋರುತ್ತದೆ. ಆದರೆ, ನನ್ನ ಸ್ಥಿತಿಯನ್ನು ನೋಡಿ. ನಮ್ಮ ತಂದೆ ಫೋರ್ಡ್ ಕಾರನ್ನು ಕೊಂಡಿದ್ದರು. ಅದೇ 'ಗಾಡಿ'ಯ ವಿಷಯದಲ್ಲಿ ಸಂತೋಷದಿಂದ ಇದ್ದೆ. ಈಗ ಒಂದು 'ಆಸ್ಟಿನ್' ಮತ್ತು 'ಬ್ಯೂಕ್ ಸೆಲೂನ್' ತೆಗೆದುಕೊಂಡಿದ್ದೇನೆ–'ಆಸ್ಟಿನ್' ಓಡಾಟಕ್ಕೆ ಮತ್ತು 'ಬ್ಯೂಕ್ ಸೆಲೂನ್' ಮೇರಠ್, ದೆಹಲಿ, ದೆಹರಾದೂನ್ ಮುಂತಾದ ಕಡೆಗಳಿಗೆ ಹೋಗಿ ಬರುವುದಕ್ಕೆ. ನಾನು ಸೌಂದರ್ಯ ಪ್ರಜ್ಞೆಯೇ ಇಲ್ಲದಂಥ ವ್ಯಕ್ತಿಯೇನೂ ಅಲ್ಲ. ಆದರೆ ನನ್ನೊಬ್ಬನಿಗಾಗಿ ಇಷ್ಟೆಲ್ಲ ಖರ್ಚು ಮಾಡುವುದು ಮನಸ್ಸಿಗೆ ಹಿತವೆನ್ನಿಸುವುದಿಲ್ಲ."

ಈ ಸರಳತನವನ್ನು ಕಂಡು ಕುಮಾರಿ ಮೆಹತಾಳ ಸಹಾನುಭೂತಿ ಉಕ್ಕಿ ಹರಿಯಿತು. ಅವಳು ನಿಟ್ಟುಸಿರುಬಿಟ್ಟು ಹೇಳಿದಳು: "ಒಂಟಿ ಜೀವನ ವಾಸ್ತವವಾಗಿ ನೀರಸವೆನ್ನಿಸುತ್ತದೆ."

ಅವಳು ಸೇವಕನನ್ನು ಕರೆದಳು: "ಮಾಯಾ !"

ಸೇವಕ ಹಾಜರಾದ. ಅವಳು ಅವನಿಗೆ ಹೇಳಿದಳು: "ಚಹಾ ತಣ್ಣಗಾಗಿ ಬಿಟ್ಟಿದೆ. ಬಿಸಿ ಚಹಾ ತೆಗೆದುಕೊಂಡು ಬಾ."

ಸಂಕೋಚದಿಂದ ನಾಥ ಹೇಳಿದ: "ನೋಡಿ. ಇದೇ ನನ್ನ ಸ್ಥಿತಿ ಆಗಿಬಿಟ್ಟಿದೆ. ಎಲ್ಲ ಕೆಲಸಗಳೂ ಹೀಗೆಯೇ ಆಗುತ್ತಿರುತ್ತವೆ. ಇಲ್ಲಿ ನಿಮ್ಮ ಸಹಾನುಭೂತಿ ನನ್ನ ನೆರವಿಗೆ ಬಂದಿತು. ಇಲ್ಲದೆ ಹೋದರೆ ನನಗೆ ಎರಡೇ ಮಾರ್ಗಗಳು ಉಳಿದಿರುತ್ತಿದ್ದುವು: ತಣ್ಣಗಿರುವ ಚಹಾ ಕುಡಿಯಬೇಕಾಗುತ್ತಿತ್ತು ಅಥವಾ ಕುಡಿಯದೆಯೇ ಇರಬೇಕಾಗುತ್ತಿತ್ತು."

ಒಂದು ವಿಚಿತ್ರ ಅನುಭೂತಿಯಿಂದ ಕುಮಾರಿ ಮೆಹತಾಳ ಮುಖಕ್ಕೆ ರಂಗೇರಿತು; ಅವಳ ಕಣ್ಣುಗಳೂ ಬಹುಶಃ ತೇಲುಗಣ್ಣಾದುವು.

ಐದೂವರೆ ಘಂಟೆಯ ಹೊತ್ತಿಗೆ ನಾಥ ಹಿಂದಿರುಗಬಹುದೆಂದು ಯೋಚಿಸಿದ್ದೆ. ಆದರೆ, ಸುಮಾರು ಹತ್ತು ಘಂಟೆಯ ಹೊತ್ತಿಗೆ ಅವನು ಹಿಂದಿರುಗಿದ. "ಗುರು, ಇಷ್ಟು ಹೊತ್ತು ಎಲ್ಲಿದ್ದೆ ?" ಎಂದು ಕೇಳಿದೆ.

"ಕುಮಾರಿ ಮೆಹತಾಳೊಂದಿಗೆ ಸಿನೆಮಾಕ್ಕೆ ಹೋಗಿದ್ದೆ'' ಎಂದು ಅವನು ಉತ್ತರಿಸಿದ.

ಮೂರು ದಿನಗಳವರೆಗೆ ನಾಥ ಬಹುಶಃ ಕಾಣೆಯೇ ಆಗಿಬಿಟ್ಟಿದ್ದ. ನಾಲ್ಕನೆಯ ದಿವಸ ಸಹಾರನ್‌ಪುರಕ್ಕೆ ಹೊರಡುವ ಮೊದಲು ಅವನು ಗಂಭೀರವಾಗಿ ಹೇಳಿದ: "ಏನಿಲ್ಲವೆಂದರೂ ನಾನು ಅಲ್ಲಿಗೆ ಹೋಗಿ ಬಂಗಲೆಗೆ ಸುಣ್ಣ ಬಣ್ಣವನ್ನಾದರೂ ಮಾಡಿಸಬೇಕು. ಕಛೇರಿಯ ಬಾಗಿಲು ತೆರೆದ ಒಡನೆಯೇ ನೀನು ನನ್ನ 'ಸಿವಿಲ್ ಮ್ಯಾರೇಜ್' ಅರ್ಜಿಯನ್ನು ಸಲ್ಲಿಸಿಬಿಡು."

ನಾನು ಆಶ್ಚರ್ಯದಿಂದ ಕೇಳಿದೆ: "ಏನೆಂದೆ? ಯಾರ ಜೊತೆಯಲ್ಲಿ?" ನಾಥ ಗಂಭೀರವಾದ ಮುಖಭಾವದಿಂದ ಹೇಳಿದ: "ಕುಮಾರಿ ಉಷಾಳೊಂದಿಗೆ!"

ಈ ಸುದ್ದಿಯನ್ನು ಕೇಳಿದ ಬಳಿಕ, ಅದನ್ನು ರಹಸ್ಯವಾಗಿ ಇಟ್ಟುಕೊಳ್ಳುವುದು ನನಗೆ ಸಾಧ್ಯವೇ ಇರಲಿಲ್ಲ. ನಾನು ಓಡೋಡುತ್ತ ಹೋಗಿ ಶ್ರೀಮತಿ ವಿಷ್ಣು ಅವರಿಗೆ ಸುದ್ದಿಯನ್ನು ತಿಳಿಸಿ, ಹೀಗೆಂದೆ: ನೋಡಿದಿರಾ ಅತ್ತಿಗೆ?"

ಅವರು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ, ಹೀಗೆಂದರು: "ಇದಕ್ಕೆ ಅಭ್ಯಂತರವೇನು ಬಂತು? ಇಬ್ಬರೂ ಜೊತೆಯಾಗಿ ಸಮಾಜ ಸೇವೆ ಮಾಡುತ್ತಾರೆ."

ಎರಡು ವರ್ಷಗಳ ಬಳಿಕ ಮಸ್ಸೂರಿಗೆ ಹೋಗುವ ಹಾದಿಯಲ್ಲಿ ಒಂದು ದಿವಸದ ಮಟ್ಟಿಗೆ ನಾಥನ ಮನೆಯಲ್ಲಿ ಉಳಿದಿದ್ದೆ. ಆಗಲೂ ಆ ಹಳೆಯ ಕಟ್ಟಡದ ಅಂಗಳದಲ್ಲಿ ಜರ್ಜರಿತವಾಗಿದ್ದ ಆ ಫೋರ್ಡ್ ಕಾರು ನಿಂತಿತ್ತು. ಖಾಲಿ ಜಾಗದಲ್ಲಿ 'ಪಿಟುನಿಯಾ'ಕ್ಕೆ ಬದಲಾಗಿ ಕುಂಬಳಕಾಯಿಯ ಬಳ್ಳಿ ಮತ್ತು 'ಹಾಲೀಹಾಕ್'ಗೆ ಬದಲಾಗಿ ಬೆಂಡೆಯ ಸಸಿ ಸಮೃದ್ಧವಾಗಿ ಬೆಳೆಯುತ್ತ ಇದ್ದುವು. ಸುಮಾರು ಒಂದೂವರೆ ವರ್ಷ ವಯಸ್ಸಿನ ಒಬ್ಬ ಹುಡುಗಿ ಫ್ರಾಕನ್ನು ತೊಟ್ಟು, ಕುಣಿದಾಡುತ್ತ, ಒಳಗಿನ ಯಾವುದೋ ಒಂದು ಕೋಣೆಯಿಂದ ಹೊರಬಂದಳು ಹಾಗೂ ಅಂಗಳದಲ್ಲಿದ್ದ ಸ್ಪೇನಿಯರ್ ನಾಯಿಯನ್ನು ತಬ್ಬಿಕೊಂಡು, ಅದರ ಕಿವಿಯನ್ನು ಕಚ್ಚಿಸುವ ಆಟದಲ್ಲಿ ತೊಡಗಿದಳು. ಈ ಅನಾಚಾರವನ್ನು ವಿರೋಧಿಸುತ್ತ ಒಳಗಿನಿಂದ ಒಬ್ಬ ಹೆಣ್ಣಿನ ದನಿ ಕೇಳಿಬಂದಿತು: " ಛಿ, ಛಿ! ಬೇಡ ಮುನ್ನಿ!"

ಆ ದನಿಯನ್ನು ಹಿಂಬಾಲಿಸಿ ಆ ಹೆಣ್ಣು ಹೊರಬಂದಳು. ಬಣ್ಣವೇನೋ ಕುಮಾರಿ ಮೆಹತಾಳದ್ದೇ ಆಗಿತ್ತು ; ಆದರೆ, ಬಾಗಿಬಳುಕುತ್ತಿದ್ದ ಎಡೆಗಳೆಲ್ಲ ತುಂಬಿಕೊಂಡಿದ್ದುವು. ಕಟ್ಟಿಲ್ಲದ ಕನ್ನಡಕವೂ ಕಾಣೆಯಾಗಿತ್ತು. ಬಿಳಿಯ ತೆಳುವಾದ ಸೀರೆಯ ಮೇಲೆ ಒಂದೆರಡು ಕಡೆ ಅರಿಶಿನದ ಕಲೆಗಳೂ ಇದ್ದುವು.

ನಮಸ್ಕರಿಸುತ್ತ ನಾನು ಕೇಳಿದೆ: "ಹೇಳಿ ಅತ್ತಿಗೆ, ಸಮಾಜ ಸೇವೆಯ ಕಾರ್ಯ ಹೇಗೆ ನಡೆಯುತ್ತಿದೆ ?"

ಅತ್ತಿಗೆ ಉತ್ತರವನ್ನು ಅರಸುತ್ತಿದ್ದಳು. ಅಷ್ಟರಲ್ಲಿಯೇ ಹೊರಬಂದ ನಾಥ ತನ್ನ ಕೈಯಲ್ಲಿದ್ದ ಸಿಗರೇಟಿನ ಕೊನೆಯ ದಮ್ಮನ್ನು ಎಳೆದು, ಅದನ್ನು ಬಿಸಾಡುತ್ತ ಹೇಳಿದ: "ಸಾಂಗೋಪಾಂಗವಾಗಿ ನಡೆಯುತ್ತಿದೆ—ಸಮಾಜ ಸೇವೆಯ ಕಾರ್ಯವಲ್ಲ, ಸಮಾಜವನ್ನು ಬೆಳೆಸುವ ಕಾರ್ಯ...."

ಅನು : ಪ್ರಧಾನ್ ಗುರುದತ್ತ

ನಿಜವಾದ ಸಮಾಜವಾದವು ನಮಗೆ ನಮ್ಮ ಪೂರ್ವಜರಿಂದ ಪರಂಪರಾಗತವಾಗಿ ಬಂದಿದೆ. "ಸಭೀ ಭೂಮಿ ಗೋಪಾಲಕಿ" "ಭೂಮಿ ಎಲ್ಲ ಪರಮಾತ್ಮನದು" ಎಂದು ಅವರು ನಮಗೆ ಕಲಿಸಿದ್ದಾರೆ. ಅಂದ ಮೇಲೆ "ನನ್ನದು, ನಿನ್ನದು" ಎಂಬ ಹಕ್ಕಿನ ರೇಖೆಗೆ ಸ್ಥಾನವೆಲ್ಲಿದೆ? ಇಂಥ ಹಕ್ಕಿನ ಗಡಿಯನ್ನು ಮನುಷ್ಯನೇ ಉಂಟು ಮಾಡಿದನು. ಆದುದರಿಂದ ಅವನು ಅದನ್ನು ತೆಗೆದುಹಾಕಬಲ್ಲನು.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ಗಾನಮೋಹಿನಿ

ಕಾಲೇಜಿಗೆ ಸೇರಿದ ಮೇಲೆ ಮನೆಯಲ್ಲಿ ನನ್ನ ಸ್ಥಾನಮಾನಗಳು ಸ್ವಲ್ಪ ಹೆಚ್ಚಿದವೆಂದು ಹಿಂದೆ ಸೂಚಿಸಿದ್ದೇನೆ. ಇದಕ್ಕೆ ಒಂದು ಕಾರಣ (ಬಹುಶಃ!) ನನಗೆ 'ಕಾಲಕ್ಷೇಪ' (ನನ್ನ ಅಜ್ಜಿ 'ಸ್ಕಾಲರ್‌ಷಿಪ್' ಅನ್ನು ಉಚ್ಚರಿಸಿದ ರೀತಿ!) ಬಂದು ನಾನು ಆರ್ಥಿಕ ದೃಷ್ಟಿಯಿಂದ ಸ್ವಾತಂತ್ರ್ಯ ಪಡೆದದ್ದು. ಒಂದು ಸಂದರ್ಭದಲ್ಲಿ ಈ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಂಡೆನೆಂದು ನನ್ನ ತಂದೆಗೆ ಸ್ವಲ್ಪ ಅಸಮಾಧಾನ. ಸಂಗೀತದ ಮೇಲೆ ನನಗಿದ್ದ ವ್ಯಾಮೋಹ ಅವರಿಗೆ ಹಿಂದೆಯೇ ಆತಂಕ ತಂದಿತ್ತು. ಆ ಕಾಲಕ್ಕಿಂತ ಮೂರುನಾಲ್ಕು ದಶಕಗಳ ಹಿಂದೆ ವಾಸುದೇವಾಚಾರ್ಯರು ಗುಟ್ಟಾಗಿ ಸಂಗೀತ ಕಲಿಯಹೊರಟಾಗ ಅವರ ತಾತನಿಗೆ ಬಹಳ ಕೋಪ ಬಂದಿತಂತೆ. "ವೇದ ವಿದ್ಯೆ ಕಲಿತುಕೊ ಅಂತ ಹೇಳಿದರೆ ಅದನ್ನು ಬಿಟ್ಟು ಸೂಳೆಯರ ವಿದ್ಯೆ ಕಲಿಯೋಕೆ ಹೊರಟೆಯಾ!" ಎಂದು ಗರ್ಜಿಸಿ ಅವರನ್ನು ಥಳಿಸಿದರಂತೆ. ನಾನು ಹದಿವಯಸ್ಕನಾಗುವ ವೇಳೆಗೆ ಪರಿಸ್ಥಿತಿ ಸ್ವಲ್ಪ ಬದಲಾಯಿಸಿತ್ತು. ಶೇಷಣ್ಣ, ಕೃಷ್ಣಪ್ಪ, ಸುಬ್ಬಣ್ಣ, ಚಿಕ್ಕರಾಮರಾಯರು, ವಾಸುದೇವಾಚಾರ್ಯರು—ಇವರಿಗೆಲ್ಲ ಸಮಾಜದಲ್ಲಿ ಗಣ್ಯವಾದ ಸ್ಥಾನವೇ ಇತ್ತು. ಹುಡುಗಿಯರಿಗೆ ಮದುವೆಮಾಡುವ ಮುನ್ನ ಸಂಗೀತಪಾಠ ನಡೆಯುತ್ತಿತ್ತು. ಹೆಣ್ಣನ್ನು ನೋಡಲು ಬಂದವರು 'ಒಂದು ಹಾಡು ಹೇಳಮ್ಮ' ಎನ್ನುವುದು, ಹುಡುಗಿ ಹಾರ್ಮೋನಿಯಂ ನುಡಿಸಿಕೊಂಡು ಒಂದೆರಡು ಕೃತಿಗಳನ್ನು ಹಾಡುವುದು, ಇದೆಲ್ಲ ಆಚರಣೆಗೆ ಬಂದಿತ್ತು. ಸಾಮಾನ್ಯವಾಗಿ ಮದುವೆಯಾದ ಮೇಲೆ ಹುಡುಗಿಯರ ಸಂಗೀತಾಭ್ಯಾಸ ನಿಂತು

ಹೋಗುತ್ತಿತ್ತೆಂಬುದು ಬೇರೆ ಮಾತು. "ಹಾರ್ಮೋಣಿ ಬಾರಿಸೋ ಕೈ ಹಾಲು ಕಾಸೀತೆ!" ಎಂದು ಕೈಲಾಸಂರವರ ಮಾನಸಪುತ್ರಿಯೊಬ್ಬಳು ಹೇಳಿದ್ದನ್ನು ನೆನೆಯಬಹುದು.

ಇದೆಲ್ಲ ನಿಜವಾದರೂ ಸಂಗೀತ ಕಲಿತರೆ ಹುಡುಗ ಕೆಟ್ಟುಹೋಗುತ್ತಾನೆ ಎಂಬ ಭಾವನೆ ಇದ್ದೇ ಇತ್ತು. ಈ ಪರಿಸ್ಥಿತಿಗೆ ಹೆದರದೆ ನಾನು ಸಂಗೀತಾಭ್ಯಾಸವನ್ನು ಪ್ರಾರಂಭಿಸಿದೆ. ಅದಕ್ಕಾಗಿ ಶಿಕ್ಷಕರನ್ನು ಮನೆಗೆ ಬರಮಾಡಿಕೊಳ್ಳುವುದು ಅಸಾಧ್ಯ. ನಾನೇ ಸಂಗೀತಗಾರರ ಮನೆಗೆ ಹೋಗಿ ಶಿಷ್ಯವೃತ್ತಿ ನಡೆಸುವುದೂ ಅಸಾಧ್ಯ. ನನ್ನಂಥ ಉತ್ಸಾಹಿಗಳನ್ನು ಈ ಕಷ್ಟದಿಂದ ಪಾರುಮಾಡುವುದಕ್ಕಾಗಿ ಪುಣ್ಯಾತ್ಮನೊಬ್ಬ 'ಹಾರ್ಮೋನಿಯಂ ಸ್ವಯಂಬೋಧಿನಿ' ಎಂಬ ಹೆಸರಿನ ಪುಸ್ತಕವನ್ನು ಪ್ರಕಟಿಸಿದ್ದ. ಅದಕ್ಕೆ ಒಂದು ರೂಪಾಯಿ, ಹೊಚ್ಚ ಹೊಸ ಹಾರ್ಮೋನಿಯಮ್ಮಿಗೆ ೨೫ ರೂಪಾಯಿ—ಇದೆಲ್ಲ ಆ ಕಾಲದಲ್ಲಿ ದುಂದು ವೆಚ್ಚ ಎನ್ನಿಸಿಕೊಳ್ಳುತ್ತಿತ್ತು—ಇಷ್ಟು ಬಂಡವಾಳವನ್ನು ತೊಡಗಿಸಿ ಸರಳೆ ಕೂಗಲಾರಂಭಿಸಿದೆ.

"ಒಳ್ಳೆಯ ಹುಡುಗ. ಇದು ಪದ್ಧತಿ, ಹೀಗೆ ಮಾಡು ಎಂದರೆ ಮಾಡುತ್ತಾನೆ" ಎಂಬ ಹೆಸರನ್ನು ನಾನು ಎಂದೂ ಸಂಪಾದಿಸಿದವನಲ್ಲ. ಆದರೆ ಸಂಗೀತದ ವಿಷಯದಲ್ಲಿ ಮಾತ್ರ ಆ ಸ್ವಯಂಬೋಧಿನಿಕಾರನ ಮಾತನ್ನು ಅಕ್ಷರಶಃ ಪಾಲಿಸಿದೆ : ಮೊದಲ ದಿನವೇ ನೇರವಾಗಿ ತ್ಯಾಗರಾಜ ಕೃತಿಗಳ ಮೇಲೆ ಎರಗಲಿಲ್ಲ. ಸರಳೆ ಜಂಟಿವರಸೆ—"ಸಂಗ ಸರಿಗಮ, ರಿಗಮ ರಿಗಮಪ" "ಸರಿಗಮಗರಿ ಸರಿಗರಿ ಸರಿಗಮ"—ಇತ್ಯಾದಿಗಳನ್ನೆಲ್ಲ ವಿಧ್ಯುಕ್ತವಾಗಿ ಅಭ್ಯಾಸಮಾಡಿದೆ. ಅನಂತರ ಪಿಳ್ಳಾರಿ ಗೀತೆಗಳು. ಆ ಪುಸ್ತಕವನ್ನು ಬರೆದ ಮಹನೀಯ ತೆಲುಗನೋ ಏನೊ—ಅದು ತೆಲುಗು ಅಕ್ಷರದಲ್ಲೇ ಇತ್ತೋ ಏನೊ —ಸರಿಯಾಗಿ ನೆನಪಿಲ್ಲ. "ಕೆರೆಯ ನೀರನು ಕೆರುಗು ಜಲ್ಲಿ, ಹರಿಸಮಾರ್ಪಣ ಮಾಡಿ ಬ್ರತಿಕೆರು"—ಇದು ಆ ಪುಸ್ತಕದಲ್ಲಿ ಅಚ್ಚಾಗಿದ್ದ ಪಾಠ. ಕೆರುಗು, ಜಲ್ಲಿ—ಇವುಗಳನ್ನೇನೊ ಉದಾರ ಬುದ್ಧಿಯಿಂದ ಮುದ್ರಾರಾಕ್ಷಸನ ತಲೆಗೆ ಕಟ್ಟುವುದು ಸಾಧ್ಯ. ಆದರೆ 'ಬ್ರತಿಕೆರು' ಎನ್ನುವುದು ಆ ಲೇಖಕ ಪುರಂದರರಿಗೆ ಕಲಿಸಿದ ಪಾಠವೇ ಇರಬೇಕು. ಸಂಗೀತದ ದೃಷ್ಟಿಯಿಂದ ಅಷ್ಟೇನೂ ಮುಖ್ಯವಲ್ಲದ ಇಂಥ ಕೆಲವು ದೋಷಗಳನ್ನು ಮರೆತರೆ ಆ ಪುಸ್ತಕ ಚೆನ್ನಾಗಿಯೇ ಇತ್ತು; ಅಥವಾ ಆಗ ನನಗೆ ಚೆನ್ನಾಗಿದ್ದಂತೆ ತೋರಿತು.

ದಾಸರೀಯರು 'ತಾಳಬೇಕು' ಎಂದಿದ್ದಾರಷ್ಟೆ. ಅವರ ಬಯಕೆ ತೀರಲಿ ಎಂದುಕೊಂಡು ನಾನು ತಾಳವನ್ನು ಅವರಿಗೇ ಬಿಟ್ಟುಕೊಟ್ಟೆ. ಉಳಿದಂತೆ ನನ್ನ ವ್ಯಾಸಂಗ ಶ್ರದ್ಧೆಯಿಂದ—"ಈ ಸೌಭಾಗ್ಯಕ್ಕೆ ಇವನು ಕಾಲೇಜಿಗೆ ಯಾಕೆ ಸೇರಿದನೊ!" ಎಂದು ತಂದೆ ಕಳವಳಪಡುವಷ್ಟು ಶ್ರದ್ಧೆಯಿಂದ—ಸಾಗಿತು. ಅಭ್ಯಾಸದ ಶಾಸ್ತ್ರೀಯ ಫಲ ಈಗ ಏನೂ ಉಳಿದಿಲ್ಲ. ಆದ್ದರಿಂದ ಯಾವುದನ್ನು ಆಗ ಅಭ್ಯಾಸ ಮಾಡಿದೆ, ಯಾವುದನ್ನು ಕಚೇರಿಗಳಲ್ಲಿ ಕೇಳಿದೆ ಎನ್ನುವುದು ಬಹುಮಟ್ಟಿಗೆ ಮರೆತುಹೋಗಿದೆ. ಹಂಸಧ್ವನಿಯ ವರ್ಣ (ಜಲಜಾಕ್ಷಿ), ಶ್ರೀರಾಗದ ವರ್ಣ (ಸಾಮಿ ನಿನ್ನೆ ಕೋರಿ), ಇವುಗಳ ಸಾಹಿತ್ಯ ನೆನಪಿಲ್ಲವಾದರೂ ಸ್ವರಭಾಗ (ತಪ್ಪು ತಪ್ಪಾಗಿ?) ಅಲ್ಪಸ್ವಲ್ಪ ನೆನಪಿದೆ. ಶ್ರೀರಾಗದ ಅವರೋಹಣದಲ್ಲಿ ಬರುವ 'ಪಧನಿ' 'ರಿಗರಿ' ಎಂಬ ಎರಡು ತಿರುವುಗಳ ಇಂಪು ನನ್ನನ್ನು ಮರುಳು ಮಾಡಿದ್ದಂತೂ ಈಗಲೂ ನೆನಪಿನಲ್ಲಿ ಉಳಿದಿದೆ. ಆಗ ಕೆಲವು ದಿನ 'ಸನಿ

ಪಧನಿ ಸಮ ರಿಗರಿಸ'ವನ್ನು ಎಲ್ಲರ ತಲೆ ಚಿಟ್ಟು ಹಿಡಿಯುವವರೆಗೂ ಹಾಡಿದ್ದೂ ಹಾಡಿದ್ದೇ. ಆ ಸಂಚಾರದ ಇಂಪು ಇಂದಿನ ಅನುಭವವೂ ಹೌದು. ಕೆಲವು ತ್ಯಾಗರಾಜ ಕೃತಿಗಳಿಗೆ ಮಣ್ಣು ಹಾಕಿ ನನ್ನ ಅಭ್ಯಾಸಕ್ಕೆ ಇತಿಶ್ರೀ ಬರೆದೆ. ಹಂಸಧ್ವನಿಯ 'ರಘು ನಾಯಕ, ನೀ ಪಾದಯುಗ', ಮತ್ತು ಭೈರವಿಯ 'ಶ್ರೀ ರಘುವರ ಸುಗುಣಾಲಯ', ಇವೆರಡರ ನೆನಪು ಉಳಿದಿದೆ. ಬಹುಶಃ ಅವೆರಡು ಮುಗಿಯುವ ಹೊತ್ತಿಗೇ ನನ್ನ ಸಂಗೀತಾಭ್ಯಾಸವೂ ಮುಗಿಯಿತು. ಗಾನಮೋಹಿನಿಯ ಆಕರ್ಷಣೆ ವಿಪರೀತವಾಯಿತೆಂಬ ಶಂಕೆ ನನ್ನ ಮನಸ್ಸಿಗೇ ಬಂತು. ಕಾಲೇಜಿನ ಓದು, ಸಂಗೀತಾಭ್ಯಾಸ, ಇವೆರಡೂ ಒಟ್ಟಿಗೆ ಸಾಗಲಾರವು ಎನ್ನಿಸಿತು. ನನ್ನ ತಂದೆಗೂ ಸಂತೋಷವಾಯಿತು. "ಈ ಹುಡುಗನ ತಲೆಯಲ್ಲಿ ಎಲ್ಲೋ ಸ್ವಲ್ಪ ವಿವೇಕವಿದೆ" ಎಂದುಕೊಂಡು ಅವರು ಆಶ್ಚರ್ಯಪಟ್ಟರೇನೊ!

ಸಂಸ್ಕೃತ ಕಲಿಯುವ ಪ್ರಯತ್ನ

ನನಗೆ ಸಂಸ್ಕೃತದ ವಿಷಯಲ್ಲಿ ಆಸಕ್ತಿ ಹುಟ್ಟಿದ್ದೂ ನಾನು ಬಿ. ಎ. ತರಗತಿಗಳಲ್ಲಿದ್ದಾಗಲೇ. ನಮ್ಮ ಕಿಟ್ಟದೊಡ್ಡಪ್ಪನ ಅಳಿಯ ಶ್ರೀಕಂಠಶಾಸ್ತ್ರಿ (ಕಂಠಿ) ಆಗ ಪಂಡಿತ ಪರೀಕ್ಷೆಗೆ ಓದುವುದಕ್ಕಾಗಿ ಮೈಸೂರಿಗೆ ಬಂದು ನಮ್ಮ ಮನೆಯಲ್ಲೇ ಇದ್ದ. ಅವನು ನನಗೆ ಬಾಲ್ಯಕಾಲದಿಂದಲೂ ಸ್ನೇಹಿತ. ಅವನ ತಂದೆ, ರಾಮನಾಥಪುರದ ಕಪಿನೀಪತಿಶಾಸ್ತ್ರಿಗಳು, ನಮಗೆ ಹಳೆಯ ಬಂಧುಗಳೆ. ನನಗೆ ಅವರ ಪರಿಚಯವೂ ಇತ್ತು. ಅವರು ಒಳ್ಳೆಯ ವಿದ್ವಾಂಸರು. ತಮ್ಮ ಮಗನಿಗೆ ರಘುವಂಶ ಕುಮಾರಸಂಭವ ಮುಂತಾದ ಕೆಲವು ಕಾವ್ಯಗಳನ್ನು ಆಗಲೇ ಅರೆದು ಹೊಯ್ದಿದ್ದರು. "ನನಗೆ ಸಂಸ್ಕೃತ ಹೇಳಿಕೊಡುತ್ತೀಯ" ಎಂದು ಕೇಳಿದಾಗ ಅವನು ಸಂತೋಷದಿಂದ ಒಪ್ಪಿದ. "ನೀನು ಶಬ್ದ ಗಟ್ಟಿ ಮಾಡಬೇಕು; ಭಂಡಾರಕರ್* ಓದಬೇಕು; ಸ್ವಲ್ಪವಾದರೂ ಅಮರ ಗಟ್ಟಿಮಾಡಬೇಕು. ಇದಿಷ್ಟು ನೀನೇ ಮಾಡಬೇಕಾದ ಕೆಲಸ. ನಾನು ನೇರವಾಗಿ 'ರಘುವಂಶ' ಪ್ರಾರಂಭಿಸಿಬಿಡುತ್ತೇನೆ" ಎಂದು ಎಚ್ಚರಿಕೆ ಕೊಟ್ಟ. ಕಾರ್ಯಕ್ರಮ ಹಾಗೆಯೇ ನಡೆಯಿತು. ನಾನು 'ರಾಮಃ ರಾಮೌ ರಾಮಾಃ', 'ಹರಿಃ ಹರೀ ಹರಯಃ' ಇತ್ಯಾದಿಗಳಿಗೂ ಅಮರಕ್ಕೂ ಮಣ್ಣು ಹಾಕಿದೆ. 'ರಘುವಂಶ'ದ ಪಾಠವೂ ಆರಂಭವಾಯಿತು. ಕಂಠಿ ಅನೂಚಾನವಾಗಿ ಬಂದ ಪಾಠಕ್ರಮವನ್ನು ಅನುಸರಿಸಿದ. ಮೊದಲು ನಾನು ಶ್ಲೋಕವನ್ನು ಓದುವುದು; ಅನಂತರ ಅನುಕ್ರಮವಾಗಿ ಪದ ವಿಭಾಗ, ಅನ್ವಯ, ಪ್ರತಿ ಪದಾರ್ಥ; ಒಟ್ಟು ಶ್ಲೋಕದ ಅರ್ಥ, ತಾತ್ಪರ್ಯ; ಯಾವುದಾದರೂ ಒಂದು ಕಡೆ ಎರಡು ಅರ್ಥ ಸಾಧ್ಯವಾದರೆ ಎರಡನ್ನೂ ಹೇಳಿ 'ಎರಡರಲ್ಲಿ ಇದು ಉತ್ತಮ' ಎಂದು ಸೂಚಿಸುವುದು (ಉದಾ: "ಪಾರ್ವತೀಪರಮೇಶ್ವರೌ" ಎಂಬುದನ್ನು 'ಪಾರ್ವತೀಪ-ರಮೇಶ್ವರೌ' ಎಂದು ಪದ ವಿಭಾಗ ಮಾಡಿದರೆ ಆ ಪದ ಶಿವ ವಿಷ್ಣುಗಳಿಬ್ಬರನ್ನೂ ನಿರ್ದೇಶಿಸುತ್ತದೆ. 'ಪಾರ್ವತೀಪರಮೇಶ್ವರೌ' ಎಂದು ಒಟ್ಟಿಗೆ ಓದಿಕೊಂಡರೆ ಶಿವ ಮತ್ತು ಪಾರ್ವತಿ ಎಂಬ ಅರ್ಥ ಬರುತ್ತದೆ.); ಆಮೇಲೆ ಮುಖ್ಯ ಪದಗಳಿಗೆ ಅಮರ ಹೇಳುವುದು

* ಆರ್. ಜಿ. ಭಂಡಾರಕರ್‌ರವರು ಬರೆದ 'The first book of Sanskrit' ಅವರ ಹೆಸರೇ ಚಾಲತಿಯಲ್ಲಿದೆ. ಈ ಪುಸ್ತಕ ಕನ್ನಡಕ್ಕೂ ಅನುವಾದವಾಗಿದೆ. ಅದರ ಎರಡನೆಯ ಭಾಗ ಅನುವಾದವಾಗಿದೆಯೋ ಇಲ್ಲವೋ ತಿಳಿಯದು.

(ಅಂದರೆ: 'ಪಾರ್ವತಿ' ಎಂಬ ಪದ ಬಂದರೆ 'ಅಪರ್ಣಾ ಪಾರ್ವತೀ ದುರ್ಗಾ', 'ಬುದ್ಧಿ' ಎಂಬ ಪದ ಬಂದರೆ 'ಬುದ್ಧಿರ್ಮನೀಷಾಧಿಷಣಾ' ಇತ್ಯಾದಿ ಆ ಪದಕ್ಕೆ ಸಂಬಂಧಪಟ್ಟ ಅಮರದ ಶ್ಲೋಕ ಹೇಳುವುದು. ಈ ಕೆಲಸವನ್ನು ಗುರುಗಳೇ ಮಾಡುತ್ತಿದ್ದರು. (ಅಮರದ ಶ್ಲೋಕವನ್ನು ಸ್ವಾಧೀನಪಡಿಸಿಕೊಳ್ಳುವ ಕೆಲಸ ಶಿಷ್ಯನದ್ದು); ಪದಗಳ ವಿಭಕ್ತಿ ಹೇಳುವುದು; ಸಮಾಸಗಳನ್ನು ಗುರುತಿಸುವುದು, ಬಿಡಿಸುವುದು; ಕೊನೆಗೆ ಆಕಾಂಕ್ಷೆ: "'ವಂದೇ' ವಂದಿಸುತ್ತೇನೆ. ಯಾರನ್ನು? ಶಿವ ಪಾರ್ವತಿಯರನ್ನು (ಪಾರ್ವತೀ ಪರಮೇಶ್ವರೌ); ಎಂಥ ಶಿವಪಾರ್ವತಿಯರನ್ನು? ವಾಕ್ ಮತ್ತು ಅರ್ಥ ಒಟ್ಟುಗೂಡಿರು ವಂತೆ ಒಂದಾಗಿರುವ ಶಿವಪಾರ್ವತಿಯರನ್ನು (ವಾಗರ್ಥಾವಿವ ಸಂಪೃಕ್ತೌ); ಮತ್ತೂ ಎಂಥ ಶಿವ ಪಾರ್ವತಿಯರನ್ನು? ಜಗತ್ತಿನ ತಾಯಿತಂದೆಯರಾದ ಶಿವ ಪಾರ್ವತಿಯರನ್ನು (ಜಗತಃ ಪಿತರೌ) ಇತ್ಯಾದಿ. 'ಎಂಥ', 'ಯಾರನ್ನು' ಎಂದು ಕನ್ನಡದಲ್ಲಿ ಹೇಳುವುದಕ್ಕೆ ಬದಲು ಗುರು ಸಂಸ್ಕೃತದಲ್ಲೇ 'ಕಥಂ ಭೂತಃ, ಕಥಂಭೂತಂ, ಪುನಃ ಕಥಂಭೂತಂ' ಇತ್ಯಾದಿ ಪದಗಳನ್ನು ಬಳಸಿ ಹೇಳಿಕೊಡುತ್ತಾನೆ. ನನಗೆ ಈ 'ಭೂತ' ಪದವನ್ನು ಉಚ್ಚರಿಸುವುದೇ ಒಂದು ಮೋಜಾಯಿತು. ಕಂಠಿ 'ಶ್ಲೋಕ ಓದು' ಎಂದರೆ 'ಕಥಂಭೂತಂ ಶ್ಲೋಕಂ?' ಎನ್ನುವುದು, 'ಪುಸ್ತಕ ಎಲ್ಲಿ' ಎಂದರೆ 'ಕಥಂ ಭೂತಂ ಪುಸ್ತಕಂ' ಎನ್ನುವುದು—ಈ 'ಭೂತ'ಗಳನ್ನು ಬಾಯಲ್ಲಿ ಎಂಪರಲಾಡಿಸಿ ಕಂಠಿಗೆ ಹುಚ್ಚು ಹಿಡಿಸುತ್ತಿದ್ದೆ, ಅವನು "ನಿನಗೆ ನಾನು ಪಾಠ ಹೇಳಲಾರೆ, ನೀನು ಶುದ್ಧ ಜೆಲ್ಲು" ಎನ್ನುವವರೆಗೆ!

ಇದೆಲ್ಲ ಮುಗಿದಮೇಲೆ ಶ್ಲೋಕದ ಒಟ್ಟು ತಾತ್ಪರ್ಯವನ್ನು ಮತ್ತೆ ಹೇಳಬೇಕು. ಅನಂತರ ಪುಸ್ತಕವನ್ನು ನೋಡದೆಯೇ ಶ್ಲೋಕವನ್ನು ಹೇಳಬೇಕು. ಉಚ್ಚಾರಣೆ ಸ್ಪಷ್ಟವಾಗಿರಬೇಕು. ಒಂದೇ ಒಂದು ಶ್ಲೋಕವನ್ನು ಈ ಕ್ರಮದಲ್ಲಿ ಪಾಠ ಹೇಳಬೇಕಾದರೆ ಅರ್ಧ ಘಂಟೆಗಿಂತ ಹೆಚ್ಚು ಕಾಲ ಬೇಕಾಗುತ್ತದೆ.

ಈ ಪಾಠಕ್ರಮ ನನಗೆ ಸ್ವಲ್ಪ ಬೇಸರ ತಂದಿತೆಂದು ಒಪ್ಪಬೇಕು. ಆದರೆ ಅದು ತನ್ನ ಮಿತಿಯಲ್ಲಿ ಬಹಳ ಪರಿಣಾಮಕಾರಿಯಾದ ಕ್ರಮ. ಸಾಮಾನ್ಯವಾಗಿ ನಮ್ಮ ಸ್ಕೂಲು ಕಾಲೇಜುಗಳಲ್ಲಿ ಅಧ್ಯಾಪಕರು ಕಾವ್ಯವನ್ನು ತಾವೇ ಓದಿ ಅದರ ತಾತ್ಪರ್ಯ ಹೇಳಿ, ಒಂದೆರಡು ಕ್ಲಿಷ್ಟಪದಗಳ ಅರ್ಥ ಹೇಳಿ, ಬಹುಶಃ ಕಾವ್ಯ ಸೌಂದರ್ಯದ ಮೇಲೆ ಒಂದೆರಡು ನಿಮಿಷ (ಇಡೀ ಕಾವ್ಯವನ್ನು ಕುರಿತ ವ್ಯಾಖ್ಯಾನವಾದರೆ ಕೆಲವು ಘಂಟೆಗಳ ಕಾಲ) ವ್ಯಾಖ್ಯಾನ ಮಾಡಿ ಮುಂದಕ್ಕೆ ಹೊರಟುಬಿಡುತ್ತಾರೆ. ಈ ಕ್ರಮದಲ್ಲಿ ಕಲಿತವರಿಗೆ ಗ್ರಂಥ ಸ್ವಾಧೀನವಾಗುತ್ತದೆಂದು ಹೇಳಲಾಗುವುದಿಲ್ಲ ನಮ್ಮ ಪಂಡಿತರ ಕ್ರಮದಲ್ಲಿ ಕಲಿತವರು ಗ್ರಂಥದ ಪ್ರತಿಯೊಂದು ಪದವನ್ನೂ ನಾಲ್ಕಾರು ಸಾರಿ ಉಚ್ಚರಿಸಿರುತ್ತಾರೆ; ಆ ಪದಗಳ ಪರಸ್ಪರ ಸಂಬಂಧವನ್ನು ತಿಳಿದುಕೊಂಡು ತಮ್ಮ ತಿಳಿವಳಿಕೆಯನ್ನು ನಾಲ್ಕಾರು ಸಾರಿ ಒರೆಗಲ್ಲಿಗೆ ಹಚ್ಚಿರುತ್ತಾರೆ; ವಿಶೇಷಾರ್ಥಗಳನ್ನು ಗಮನಿಸಿರುತ್ತಾರೆ; ವ್ಯಾಕರಣ, ಅಲಂಕಾರ, ಛಂದಸ್ಸು—ಇವೆಲ್ಲದರ ಜ್ಞಾನವನ್ನು ಪಡೆದಿರುತ್ತಾರೆ; ಓದಿದ ಶ್ಲೋಕದಲ್ಲಿ ಅವರು ಗಮನಿಸದಿರುವ ಅಂಶ ಏನೂ ಇರುವುದಿಲ್ಲ. ಕಾವ್ಯವನ್ನು ಶಿಷ್ಯ ನಿಂದಲೇ ಓದಿಸುವುದರಿಂದಾಗಿ ಅವನ ಉಚ್ಚಾರಣೆ ಶುದ್ಧವಾಗುತ್ತದೆ; ಶ್ಲೋಕಕ್ಕೆ ಸಹಜವಾದ ಲಯವನ್ನು ಬಿಡದಂತೆ ಓದುವ ಕಲೆ ಅವನಿಗೆ ಸಿದ್ಧಿಸುತ್ತದೆ; ಇವೆಲ್ಲದರ

ಜೊತೆಗೆ ಇಡೀ ಕಾವ್ಯ 'ಇದನ್ನು ಮರೆಯಲು ಸಾಧ್ಯವೇ ಅಲ್ಲ' ಎನ್ನುವ ಮಟ್ಟಿಗೆ ಮನಸ್ಸಿನಲ್ಲಿ ನಿಂತುಹೋಗುತ್ತದೆ.

ಈ ಕ್ರಮ ಚಿಕ್ಕಮಕ್ಕಳ ಮೇಲೆ ಹೊರಲಾರದ ಭಾರವನ್ನು ಹೊರಿಸುತ್ತದೆಯೇ? ಅವರ ವಯಸ್ಸಿಗೆ ಮೀರಿದ ಶ್ರದ್ಧೆಯನ್ನು ಅವರಿಂದ ಬಯಸುತ್ತದೆಯೆ? ಈ ಸಂದೇಹ ಕೆಲವರಿಗೆ ಬಂದಿದೆ; ನನಗೂ ಬಂದಿದೆ. ನನಗೇ ಅದು ಸ್ವಲ್ಪ ಬೇಸರ ತಂದಿತೆಂದು ಹೇಳಿದೆನಷ್ಟೆ. ಆದರೆ ಆ ಬೇಸರಕ್ಕೆ ಕಾರಣ ಪಾಠಕ್ರಮದ ದೋಷವಲ್ಲದಿರಬಹುದು; ನನ್ನ ಮನಸ್ಸು ಸ್ಕೂಲು ಕಾಲೇಜುಗಳಲ್ಲಿ ಅನುಸರಿಸುವ ಕ್ರಮಕ್ಕೆ ಹೊಂದಿಕೊಂಡಿದ್ದದ್ದರಿಂದ ಹಳೆಯ ಕ್ರಮ ಬೇಸರ ತಂದಿರಬಹುದು. ನಾನು ವೃತ್ತಿಯಿಂದ ಅಧ್ಯಾಪಕನಾದ್ದರಿಂದ ಈ ಸಮಸ್ಯೆಗೆ ಸ್ವಲ್ಪ ಹೆಚ್ಚು ಗಮನಕೊಡಬೇಕು ಎನ್ನಿಸುತ್ತದೆ. ನಿಷ್ಠುರವಾದ ಶ್ರದ್ಧೆ ಒಂದು ಕಡೆ; ಗೆಲುವು, ಉತ್ಸಾಹ, ಆಕರ್ಷಕತೆ ಇವು ಮತ್ತೊಂದು ಕಡೆ. ಇವೆರಡರ ಸಮನ್ವಯವಾಗಬೇಕು. ಹಿಂದಿನ ಕ್ರಮದಲ್ಲಿ ಗಂಭೀರ ಶ್ರದ್ಧೆ ಹೆಚ್ಚಾಯಿತೇನೊ; ಇಂದಿನದರಲ್ಲಿ ಆಳಕ್ಕೆ ಇಳಿಯಲಾರದ ತೇಲುನೋಟ (superficiality), ಚಾಂಚಲ್ಯ, ಹೆಚ್ಚಾಯಿತೇನೊ. ಹಳೆಯ ಪದ್ಧತಿಯ ಗುಣಭಾಗವನ್ನು—ಅಂದರೆ ಅದರಿಂದಾಗುವ ಪ್ರಯೋಜನಗಳನ್ನು ಮೇಲೆ ಕಾಣಿಸಿದ್ದೇನೆ. ಅದು ವ್ಯಾಖ್ಯಾನಕ್ಕಿಂತ ಮೂಲಕ್ಕೆ (ಟೆಕ್ಸ್ಟಿಗೆ) ಹೆಚ್ಚು ಗಮನಕೊಡುತ್ತದೆ. ನಮ್ಮ ಕಾಲೇಜುಗಳಲ್ಲಿ ಓದಿದವರಲ್ಲಿ ಮೂಲದ ಪರಿಚಯಕ್ಕಿಂತ ವ್ಯಾಖ್ಯಾನವೇ ಮನಸ್ಸನ್ನು ಹೆಚ್ಚಾಗಿ ತುಂಬಿರುತ್ತದೆ. ಬೋಧನಕ್ರಮ ಈ ದೋಷಕ್ಕೆ ಎಡೆಗೊಡುತ್ತದೆ; ಪರೀಕ್ಷೆಯ ಕ್ರಮವೂ ಮೂಲಪಾಠದ ವಿಷಯದಲ್ಲಿ ಉದಾಸೀನರಾಗುವುದಕ್ಕೆ ಅವಕಾಶ ಕೊಡುತ್ತದೆ. "Lear is more sinned against than sinning—ಇದನ್ನು ಕುರಿತು ವ್ಯಾಖ್ಯಾನ ಮಾಡಿ" ಎಂದೋ ಅಥವಾ "ಬಿಯಾಟ್ರಿಸ್ ಮತ್ತು ಹೀರೊ–ಇವರಿಬ್ಬರ ಸ್ವಭಾವಗಳಲ್ಲಿ ಕಾಣುವ ವ್ಯತ್ಯಾಸವನ್ನು ಕುರಿತು ಪ್ರಬಂಧ ಬರೆಯಿರಿ" ಎಂದೋ ಪ್ರಶ್ನೆ ಕೇಳುತ್ತೇವೆಂದಿಟ್ಟುಕೊಳ್ಳೋಣ. ವಿದ್ಯಾರ್ಥಿಯು ಸಂಬಂಧಪಟ್ಟ ನಾಟಕಗಳನ್ನು ಎಚ್ಚರಿಕೆಯಿಂದ ಓದದೆಯೇ, (ಯಾವನಾದರೊಬ್ಬ ವಿಮರ್ಶಕನ ವ್ಯಾಖ್ಯಾನವನ್ನು ಓದಿ) ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಬರೆಯುವುದು ಸಾಧ್ಯ. ಐವತ್ತರ ದಶಕದಲ್ಲಿ ಯಾವುದೋ ಒಂದು ವರ್ಷ ನಾನು ಬಿ.ಎ. ಪರೀಕ್ಷೆಗಾಗಿ ಕೊಟ್ಟ ಪ್ರಶ್ನೆಪತ್ರಿಕೆಯಲ್ಲಿ ಹ್ಯಾಮ್ಲೆಟ್‌ನ ಪಾತ್ರ ಚಿತ್ರಣವನ್ನು ಕುರಿತ ಪ್ರಶ್ನೆಯೊಂದನ್ನು ಸೇರಿಸಿದ್ದೆ. ಹ್ಯಾಮ್ಲೆಟ್ ಸ್ವಭಾವದ ಮುಖ್ಯಾಂಶಗಳನ್ನು ನಾನೇ ಕಾಣಿಸಿದ್ದೆ. "ನಾಟಕದಿಂದ ಸಂದರ್ಭಗಳನ್ನೂ ಮಾತುಗಳನ್ನೂ ಉದಾಹರಿಸಿ ಹ್ಯಾಮ್ಲೆಟ್‌ನಲ್ಲಿ ಈ ಗುಣಗಳಿವೆಯೆಂಬುದನ್ನು ಸಮರ್ಥಿಸಿ" —ಇದು ನಾನು ಕೊಟ್ಟ ಪ್ರಶ್ನೆ. ಅದನ್ನು ಯಾವ ವಿದ್ಯಾರ್ಥಿಯೂ ಆಯ್ದುಕೊಳ್ಳಲಿಲ್ಲ! "ಹ್ಯಾಮ್ಲೆಟ್‌ನ ಪಾತ್ರವನ್ನು ಚಿತ್ರಿಸಿ" ಎಂದು ಕೇಳಿದ್ದರೆ ಎಲ್ಲರೂ ಉತ್ತರ ಬರೆಯುತ್ತಿದ್ದರು. ಮೊದಲನೆಯ ಪ್ರಶ್ನೆಗೆ ಉತ್ತರ ಬರೆಯಬೇಕಾದರೆ ಮೂಲದ ಪರಿಚಯ ಚೆನ್ನಾಗಿರಬೇಕು. ಎರಡನೆಯದಕ್ಕೆ ಉತ್ತರ ಬರೆಯಬೇಕಾದರೆ ವ್ಯಾಖ್ಯಾನದ ಪರಿಚಯ ಸಾಕು. 'ಸಾಹಿತ್ಯ' ಇರುವುದು ಮೂಲದಲ್ಲಿ, ವ್ಯಾಖ್ಯಾನದಲ್ಲಲ್ಲ. 'ರಘುವಂಶ'ದಲ್ಲಿ ಮಲ್ಲಿನಾಥನ ಟೀಕೆಯಲ್ಲಲ್ಲ, ಸಾಹಿತ್ಯಾಭ್ಯಾಸಿಗೆ ಮೂಲದ ಪರಿಚಯ ಅತ್ಯವಶ್ಯಕ. ಹಳೆಯ ಪಾಠಕ್ರಮ ಈ ಪರಿಚಯವನ್ನು ಚೆನ್ನಾಗಿ ಮಾಡಿಕೊಡುತ್ತದೆ.

(ಮುಂದುವರಿಯುವುದು)

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ :
ದೇಜಗೌ

ಪುಟ ಮಗುಚುವ ಮುನ್ನ ತಿಳಿವಳಿಕೆ :

ಈ ವರೆಗೆ ಪುಸ್ತಕ ಪ್ರಪಂಚದ ಈ ವಿಭಾಗದಲ್ಲಿ 'ಯುದ್ಧ ಮತ್ತು ಶಾಂತಿ'ಯ ಪ್ರಥಮ ಸಂಪುಟ ಧಾರಾವಾಹಿಯಾಗಿ ಪ್ರಕಟಗೊಂಡಿತು. ಅದರ ಮುಂದಿನ ಎರಡು ಸಂಪುಟಗಳು ಪ್ರತ್ಯೇಕವಾಗಿ ಪ್ರಕಟವಾಗಲಿವೆ. ಇನ್ನು ಮುಂದೆ ಅನ್ನಾ ಕರೆನಿನ ಧಾರಾವಾಹಿಯಾಗಿ ಈ ವಿಭಾಗದಲ್ಲಿ ಅಚ್ಚುಗೊಳ್ಳುತ್ತದೆ. ಕೆಲವರು ಈ ಹೆಸರನ್ನು 'ಆ್ಯನ ಕೆರಿನಿನಾ' ಎಂದು ಉಚ್ಚರಿಸುವುದೂ ಉಂಟು. ಇಂಗ್ಲಿಷಿನಲ್ಲಿ ಇದನ್ನು Anna Karenina ಎಂದು ಬರೆಯುವ ವಾಡಿಕೆಯಿದೆ.

—ಅನು

ಅಧ್ಯಾಯ ೧

ನಮ್ಮೆದುರಿರುವ ಎಲ್ಲ ಕುಟುಂಬಗಳು ಪರಸ್ಪರ ಹೋಲುತ್ತವೆ; ಪ್ರತಿಯೊಂದು ಅಸಂತುಷ್ಟ ಕುಟುಂಬವೂ ತಂತನ್ನ ರೀತಿಯಲ್ಲಿ ಅಸುಖವಾಗಿರುತ್ತದೆ.

ಅಬ್ಲಾನ್‌ಸ್ಕಿ ಮನೆಯಲ್ಲಿ ಸಂಕ್ಷೋಭೆ ತಾಂಡವವಾಡುತ್ತಿತ್ತು. ತನ್ನ ಪತಿ ಹಿಂದಿನ ಫ್ರೆಂಚ್ ಉಪಾಧ್ಯಾಯಿನಿಯೊಡನೆ ಪ್ರಣಯ ಚೇಷ್ಟೆಗಳಲ್ಲಿ ತೊಡಗಿದ್ದನೆಂಬುದನ್ನು ಸತಿ ಕಂಡುಕೊಂಡಿದ್ದಳು; ಒಂದೇ ಚಾವಣಿಯ ಕೆಳಗೆ ಅವನೊಡನೆ ಬದುಕು ನಡಸಲಾಗದೆಂದು ಅವಳು ಸ್ಪಷ್ಟಪಡಿಸಿದ್ದಳು. ಮೂರು ದಿನಗಳಿಂದ ಇಂಥ ಪರಿಸ್ಥಿತಿ ಆ ಮನೆಯಲ್ಲಿ ನೆಲಸಿತ್ತು; ಅದರ ಪರಿಣಾಮವಾಗಿ ಗಂಡಹೆಂಡಿರು ಮಾತ್ರವಲ್ಲ, ಸಂಸಾರದ ಎಲ್ಲ ಜನರೂ ಸಂಕಟವನ್ನನುಭವಿಸುತ್ತಿದ್ದರು. ಸಹಬಾಳ್ವೆಯಲ್ಲಿ ಸುಖವಿಲ್ಲ ವೆಂದೂ, ಹೋಟಲಿನಲ್ಲಿ ಆಕಸ್ಮಿಕವಾಗಿ ಒಟ್ಟುಗೂಡುವ ಅಪರಿಚಿತರು ಅಬ್ಲಾನ್‌ಸ್ಕಿ ಕುಟುಂಬದ ಜನರಿಗಿಂತ ಹೆಚ್ಚು ಏಕೀಭಾವವುಳ್ಳವರಾಗಿದ್ದರೆಂದೂ ಆ ಮನೆಯ ಪ್ರತಿಯೊಬ್ಬರೂ ತಿಳಿದಿದ್ದರು. ಮೂರು ದಿನಗಳವರೆಗೆ ಮಡದಿ ತನ್ನ ಕೋಣೆಯನ್ನು ಬಿಟ್ಟಿರಲಿಲ್ಲ, ಗಂಡ ಮನೆಗೆ ಬಂದಿರಲಿಲ್ಲ. ಮಕ್ಕಳು ಪೋಕರಿ ಹುಡುಗರಂತೆ ಮನೆಯೊಳಗೆಲ್ಲ ಚೆಲ್ಲಾಟವಾಡುತ್ತಿದ್ದರು. ಮನೆವಾರ್ತೆಗಾತಿಯೊಡನೆ ಜಗಳವಾಡು ತ್ತಿದ್ದ ಆಂಗ್ಲ ಉಪಾಧ್ಯಾಯಿನಿ ತನ್ನ ಗೆಳತಿಯ ಮೂಲಕ ಬೇರೆ ಕಡೆ ಕೆಲಸ ಹುಡುಕು ತ್ತಿದ್ದಳು; ಎರಡನೆಯದಿನ ಭೋಜನ ಸಮಯದಲ್ಲಿ ಅಡಿಗೆಯವಳು ಮನೆ ಬಿಟ್ಟಳು; ಅಡುಗೆ ಮನೆಯ ಆಳು ಮತ್ತು ಗಾಡಿ ಚಾಲಕರು ಮನೆ ಬಿಡುವುದಾಗಿ ಎಚ್ಚರಿಕೆ ಹೇಳಿದರು.

ಕಲಹ ನಡೆದ ಮೂರನೆಯ ದಿವ ರಾಜಕುಮಾರ ಸ್ಟೀಪನ್ ಅರ್ಕದ್ಯಾವಿಚ್ ಅಬ್ಲಾನ್‌ಸ್ಕಿ (ನಾಗರಿಕ ವಲಯದ ಗೆಳೆಯರ ಗುಂಪಿನಲ್ಲವನು ಸ್ಟೀವ ಎಂದೇ ಪರಿಚಿತ ನಾಗಿದ್ದನು) ರೂಢಿಯ ವೇಳೆಯಲ್ಲಿ, ಅಂದರೆ ಬೆಳಗ್ಗೆ ಎಂಟು ಗಂಟೆಗೆ ಹಾಸುಗೆ ಯಿಂದೆದ್ದನು. ಅವನು ಮಡದಿಯ ಕೋಣೆಯಲ್ಲಿ ಮಲಗಿರಲಿಲ್ಲ; ಅಧ್ಯಯನ ಮಂದಿರದಲ್ಲಿ ಸೋಫದಲ್ಲೊರಗಿದ್ದನು. ಮತ್ತೆ ಗಾಢ ನಿದ್ರೆಯಲ್ಲಿ ಮುಳುಗುವವನಂತೆ, ತಲೆ ದಿಂಬನ್ನು ಬಿಗಿಯಾಗಿ ತಬ್ಬಿಕೊಂಡು, ಅದಕ್ಕೆ ತನ್ನ ಕೆನ್ನೆಯನ್ನೊತ್ತಿ, ಮೆತ್ತನೆಯ ಸೋಫದ ಮೇಲೆ ಚೆನ್ನಾಗಿ ಬೆಳೆಸಿದ್ದ ತನ್ನ ದಷ್ಟಪುಷ್ಟ ಶರೀರವನ್ನು ಮತ್ತೆ ಈಡಾಡಿದನು; ಆದರೆ ಹಠಾತ್ತನೆ ನೆಗೆದು, ಕುಳಿತುಕೊಂಡು, ತನ್ನ ಕಣ್ಣು ತೆರೆದನು.

'ಹೌದ್ಹೌದು. ಅದು ಹೇಗಿತ್ತು ?' ಎಂದವನು ತನ್ನ ಕನಸನ್ನು ನೆನಪಿಗೆ ತಂದು ಕೊಳ್ಳಲು ಪ್ರಯತ್ನಿಸುತ್ತ ನುಡಿದನು. 'ಓ, ಅದು ಹೇಗಿತ್ತು ? ಹೌದ್ಹೌದು! ಧರ್ಮಸ್ತಾದ್‌ನಲ್ಲಿ ಅಲಬಿನ್ ನಮಗಾಗಿ ಭೋಜನ ವ್ಯವಸ್ಥೆ ಮಾಡಿದ್ದ; ಧರ್ಮಸ್ತಾದ್ ಅಲ್ಲ;....ಎಂಥದೋ ಅಮೆರಿಕಾದ್ದಿರಬಹುದು....ಇಲ್ಲ, ಇಲ್ಲ, ಈ ಧರ್ಮಸ್ತಾದ್ ಅಮೆರಿಕೆ ಯಲ್ಲಿತ್ತು! ಹೌದ್ಹೌದು, ಗಾಜು ಮೇಜುಗಳ ಮೇಲೆ ಅಲಬಿನ್ ಔತಣಕೂಟವನ್ನೇ ರ್ಪಡಿಸಿದ್ದ. ಮೇಜು ಸಂಗೀತ ಹಾಡುತ್ತಿದ್ದುವು; ಸಂಗೀತಕ್ಕಿಂತ ಉತ್ತಮವಾದುದೇನೋ

ಇತ್ತು....ಸುಂದರವಾದ ಅಲ್ಪಗಾತ್ರದ ಮಧ್ಯದ ಶೀಪೆಗಳಿದ್ದುವು....ಆ ಶೀಪೆಗಳೇ ಲಾವಣ್ಯವತಿಯರು.'

ಆಬ್ಲಾನ್‌ಸ್ಕಿಯ ನೇತ್ರಗಳು ಹರ್ಷದಿಂದ ಮಿನುಗುಟ್ಟಿದುವು; ತನ್ನ ಕನಸನ್ನು ಮೆಲುಕು ಹಾಕುತ್ತ ಅವನು ಮುಗುಳು ನಗೆ ಸೂಸಿದನು. 'ಹೌದು, ಅದು ತುಂಬ ಸೊಗಸಾಗಿತ್ತು, ನಿಜಕ್ಕೂ ಸೊಗಸಾಗಿತ್ತು. ಇನ್ನೆಷ್ಟೋ ಆಕರ್ಷಕವಾದ ಸಂಗತಿಗಳಿದ್ದುವು. ಆದರೆ ಅವುಗಳನ್ನೆಲ್ಲ ಪದಗಳಲ್ಲಿ ಅಥವಾ ಆಲೋಚನೆಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ; ಎಚ್ಚರಗೊಂಡಮೇಲೆ ಅದನ್ನು ಹೇಳಲಿಕ್ಕಾಗದು.' ಕಿಟಕಿಯ ತೆರೆಯ ಸುತ್ತ ಅಂಚಿನಲ್ಲಿ ಇಣುಕುತ್ತಿದ್ದ ಬೆಳಕಿನ ಕಿರಣಗಳು ಕಣ್ಣಿಗೆ ಬಿದ್ದ ಕೂಡಲೇ ಅವನು ಉಲ್ಲಾಸದಿಂದ ತನ್ನ ಕಾಲುಗಳನ್ನು ಸೋಫಾದ ಪಟ್ಟಿಯಿಂದ ಕೆಳಗೆ ಕೊಡವಿದನು; ತನಗಾಗಿ ತನ್ನ ಮಡದಿ ತಯಾರಿಸಿದ್ದ (ಹಿಂದಿನ ಜನ್ಮದಿನದ ಕಾಣಿಕೆ) ಹೊಂಬಣ್ಣದ ತೊಗಲಿನ ಚಪ್ಪಲಿಗಳನ್ನು ಕಾಲಲ್ಲಿಯೇ ಹುಡುಕಾಡಿ, ಅವುಗಳೊಳಗೆ ಪಾದಗಳನ್ನು ತೂರಿಸಿದನು. ಮೇಲೇಳದೆಯೆ, ಕಳೆದ ಒಂಬತ್ತು ವರ್ಷಗಳಿಂದ ಒಂದೇ ಜಾಗದಲ್ಲಿ ನೇತಾಡುತ್ತಿದ್ದ ಮೇಲಂಗಿಯನ್ನೆಟುಕಿಸಿಕೊಂಡನು. ತನ್ನ ಮಡದಿಯೊಡನೆ ಶಯನಮಂದಿರದಲ್ಲಿ ರಾತ್ರಿ ತಾನು ಮಲಗಿರಲಿಲ್ಲವೆಂಬ ಸಂಗತಿ ಆ ಕ್ಷಣದಲ್ಲಿ ಅವನಿಗರಿವಾಯಿತು. ಏಕೆ? ಅವನ ಮುಗುಳು ನಗೆ ಮಾಯವಾಯಿತು; ಅವನ ಹುಬ್ಬು ಗಂಟಿಕ್ಕಿದುವು.

'ಓಹೊ, ಓಹೊ!' ಎಂದವನು ನಡೆದದ್ದನ್ನೆಲ್ಲ ನೆನೆಯುತ್ತ ಗುಡುಗಾಡಿದನು. ತನ್ನ ಮಡದಿಯೊಡನಾಡಿದ ಜಗಳದ ಪ್ರತಿಯೊಂದು ವಿವರವೂ, ತನ್ನ ಪರಿಸ್ಥಿತಿಯ ಅಸಹಾಯಕತೆಯೂ, ಎಲ್ಲಕ್ಕಿಂತ ಮಿಗಿಲಾಗಿ ತನ್ನ ತಪ್ಪಿನ ತೀವ್ರತೆಯೂ ಅವನ ಮನೋನೇತ್ರದ ಮುಂದೆ ಸುಳಿದಾಡಿದುವು.

'ಇಲ್ಲ, ಇಲ್ಲ. ಅವಳೆಂದೂ ನನ್ನನ್ನು ಕ್ಷಮಿಸಳು; ಕ್ಷಮಿಸಲಾರಳು. ತುಂಬ ಕೆಟ್ಟದ್ದೆಂದರೆ, ತಪ್ಪೆಲ್ಲ ನನ್ನದೇ; ನನ್ನದೇ ತಪ್ಪು. ಆದರೆ ಅದು ನನ್ನ ತಪ್ಪಲ್ಲ. ಅದರ ದುರಂತವೇ ಇದು' ಎಂದವನು ಆಲೋಚಿಸಿದನು. 'ಓಹೊ, ಓಹೊ!' ಎಂದವನು ತಮ್ಮ ಕಲಹದ ಪರಿಣಾಮವಾಗಿ ಉದ್ಭವಿಸಿದ ದುಃಖದ ಪರಿಸ್ಥಿತಿಯನ್ನು ನೆನೆದು ನಿರಾಶೆಯಿಂದ ನರಳಿದನು.

ಹರ್ಷಚಿತ್ತನಾಗಿ ನಾಟಕ ಮಂದಿರದಿಂದ ಮರಳಿ, ಆತ್ಮಸಂತೋಷದಿಂದ ತನ್ನ ಹೆಂಡತಿಗೆಂದು ದಪ್ಪನೆಯ ಪೇರು ಹಣ್ಣನ್ನು ಹಿಡಿದುಕೊಂಡು ಬಂದು, ದಿವಾನಖಾನೆಯಲ್ಲಿ ತನ್ನ ಮಡದಿಯನ್ನು ಕಾಣದಿದ್ದಾಗಲೇ ಅವನಿಗಾಗಿ ಮೊತ್ತಮೊದಲನೆಯ ಸಲ ಅನಿಷ್ಟದ ಗಳಿಗೆ ಕಾದುಕೊಂಡಿತ್ತು; ಅಧ್ಯಯನ ಮಂದಿರದಲ್ಲಿಯೂ ಅವಳು ಕಾಣದಿದ್ದಾಗ ಅವನಿಗಾಶ್ಚರ್ಯವಾಯಿತು; ಎಲ್ಲವನ್ನು ತೆರೆದು ತೋರಿಸುವಂಥ ದುರ್ದೈವೀ ಪತ್ರವೊಂದನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಶಯನಮಂದಿರದಲ್ಲಿ ಕುಳಿತಿದ್ದ ಅವಳನ್ನು ಕೊಟ್ಟಕೊನೆಗೆ ಕಂಡನು.

ಅವಳು ಮನೆವಾರ್ತೆಯ ವಿವರಗಳ ಬಗ್ಗೆ ತಳಮಳಗುಟ್ಟುತ್ತ, ಸಿಡಿಮಿಡಿಗೊಳ್ಳುತ್ತ, ಕೈಯಲ್ಲಿ ಕಾಗದ ಹಿಡಿದುಕೊಂಡು, ಮಾತಿಲ್ಲದಾಗಿ, ಕೋಪ ನಿರಾಶೆ ಭೀತಿಗಳಿಂದ ಅವನನ್ನೆ ದುರುಗುಟ್ಟಿಕೊಂಡು ನೋಡುತ್ತಿದ್ದಳು.

'ಏನಿದು? ಇದರ ಬಗ್ಗೆ ನೀವೇನು ಹೇಳುವಿರಿ?' ಎಂದವಳು ಅವನ ಕಡೆಗೆ ಕಾಗದವನ್ನು ತೋರುತ್ತ ಪ್ರಶ್ನಿಸಿದಳು.

ಆಬ್ಲಾನ್‌ಸ್ಕಿ ಆ ದೃಶ್ಯವನ್ನು ನೆನೆದಂತೆಲ್ಲ ವ್ಯಾಕುಲಗೊಳ್ಳುತ್ತಿದ್ದನು. ಅವನ ವ್ಯಾಕುಲಕ್ಕೆ ಮುಖ್ಯ ಕಾರಣ ಅಂದಿನ ಪರಿಸ್ಥಿತಿಗಿಂತ ಮಿಗಿಲಾಗಿ, ತಾನು ತನ್ನ ಮಡದಿಯ ಪ್ರಶ್ನೆಗಳಿಗೆ ನೀಡಿದ ಉತ್ತರದ ಧಾಟಿ.

ಅವಮಾನಕರವಾದ ಪ್ರಸಂಗದ ನಡುವೆ ಅನಿರೀಕ್ಷಿತವಾಗಿ ಸಿಕ್ಕಿಕೊಂಡವರು ಎಂಥ ಇಕ್ಕಟ್ಟಿನಲ್ಲಿ ಒದ್ದಾಡುತ್ತಾರೆಯೋ ಆ ಕ್ಷಣದಲ್ಲವನಿಗೆ ಅಂಥದೇ ದುಸ್ಥಿತಿ ಪ್ರಾಪ್ತವಾಗಿತ್ತು. ತನ್ನ ದುಷ್ಕೃತ್ಯದ ಅನಾವರಣದಿಂದಾಗಿ ಉಂಟಾದ ಪರಿಸ್ಥಿತಿಗೆ ತನ್ನ ಮುಖವನ್ನು ಹೊಂದಿಸಿಕೊಳ್ಳಲು ಅವನಿಗೆ ಸಮಯವಿರಲಿಲ್ಲ. ಆ ಪರಿಸ್ಥಿತಿಯಲ್ಲವನ ಕೋಪ ಕೆರಳಲಿಲ್ಲ; ತಾನು ತಪ್ಪಿತಸ್ಥನಲ್ಲವೆಂದು ಉಸುರಲಿಲ್ಲ; ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಲಿಲ್ಲ; ಕ್ಷಮೆ ಯಾಚಿಸಲಿಲ್ಲ; ನಿರ್ಲಕ್ಷ್ಯವನ್ನು ಸಹ ಪ್ರದರ್ಶಿಸಲಿಲ್ಲ; ಆ ಸಂದರ್ಭದಲ್ಲಿ ಅವನು ನಡೆದುಕೊಂಡ ರೀತಿಗಿಂತ ಬೇರಾವುದೇ ವರ್ತನೆ ಒಪ್ಪಿಗೆಯಾಗುತ್ತಿತ್ತು; ಅವನ ತುಟಿಗಳು ಅನೈಚ್ಛಿಕವಾಗಿ, ಅವನ ವಿನೋದಸ್ವಭಾವಕ್ಕನುಗುಣವಾಗಿ ಅರಳಿದುವು; ಅವನ ಮುಖದ ಮೇಲೆ ಬೆಪ್ಪು ನಗೆ ಸುಳಿದಾಡಿತು.

ಆ ಬೆಪ್ಪುನಗೆಯ ಬಗ್ಗೆ ಅವನು ಯೋಚಿಸಲಿಲ್ಲ, ಅಥವಾ ಅದನ್ನವನು ಅದುಮಿಕೊಳ್ಳಲೂ ಇಲ್ಲ. ಆ ನಗುವನ್ನು ನೋಡುತ್ತ ನೋಡುತ್ತ, ಶಾರೀರಕಯಾತನೆಯಿಂದವೆಂಬಂತೆ ಡಾಲಿ ಬೆಚ್ಚಿದಳು, ಸಿಡಿಮಿಡಿಗೊಂಡಳು; ಭಾವೋದ್ವೇಗದ ಕರ್ಕಶ ಶಬ್ದಧಾರೆ ಅವಳ ನಾಲಗೆಯಿಂದ ನುಗ್ಗಿತು; ಅವಳು ಕೋಣೆಯಿಂದ ಹೊರಗೆ ಧಾವಿಸಿದಳು. ಅಂದಿನಿಂದ ಅವಳು ತನ್ನ ಗಂಡನಿಂದ ದೂರವಿರುತ್ತಿದ್ದಳು; ಅವನ ನೋಟ ಸಹ ಅವಳಿಗೆ ಹಿಡಿಸುತ್ತಿರಲಿಲ್ಲ.

'ಇಷ್ಟಕ್ಕೆಲ್ಲ ಆ ಬೆಪ್ಪು ನಗುವೆ ಕಾರಣ' ಎಂದು ಆಬ್ಲಾನ್‌ಸ್ಕಿ ಆಲೋಚಿಸಿದನು. 'ಈಗೇನು ಮಾಡುವುದಿದೆ? ಏನು ಮಾಡುವುದಿದೆ?' ಎಂದವನು ನಿರಾಶೆಯಿಂದ ತನ್ನನ್ನು ತಾನೆ ಪ್ರಶ್ನಿಸಿಕೊಂಡನು. ಅವನಿಗೆ ಉತ್ತರ ಸಿಗಲಿಲ್ಲ.

ಅಧ್ಯಾಯ ೨

ಆಬ್ಲಾನ್‌ಸ್ಕಿ ಪ್ರಾಮಾಣಿಕ; ಯಾವಾಗಲೂ ನಿಜ ಹೇಳುವವನು. ತನ್ನ ದುರ್ನಡತೆಯ ಬಗ್ಗೆ ಪಶ್ಚಾತ್ತಾಪ ಪಡುವಷ್ಟರ ಮಟ್ಟಿಗೆ ಅವನು ಸೋಗುಹಾಕುತ್ತಿರಲಿಲ್ಲ. ಸುಲಭ ಮನೋವಿಕಾರಕ್ಕೊಳಗಾಗುವ, ಮೂವತ್ತನಾಲ್ಕು ವರ್ಷದ ಸುಂದರ ಪುರುಷನವನು. ಅವನ ಮಡದಿ ಇಬ್ಬರು ಸತ್ತು, ಐವರು ಉಳಿದಿರುವ ಮಕ್ಕಳ ತಾಯಿ. ತಾನವಳನ್ನು ಪ್ರೀತಿಸುತ್ತಿಲ್ಲವೆಂಬ ಪಶ್ಚಾತ್ತಾಪ ಅವನಲ್ಲಿ ಎಳ್ಳಷ್ಟೂ ಇರಲಿಲ್ಲ. ಅವಳಿಂದ ಅದನ್ನು ಮುಚ್ಚಿಡುವ ಶಕ್ತಿ ಮಾತ್ರ ತನ್ನಲ್ಲಿಲ್ಲವೆಂದು ಅವನು ಚಿಂತೆಗೀಡಾಗಿದ್ದನು. ತನ್ನ ಸ್ಥಾನಮಾನಗಳ ಘನತೆಯ ಅರಿವು ಅವನಿಗಿತ್ತು. ತನ್ನ ಮಡದಿಮಕ್ಕಳಿಗಾಗಿ ಮತ್ತು ತನಗಾಗಿ ಅವನು ವ್ಯಥೆಗೊಂಡಿದ್ದನು. ಅವಳದನ್ನು ತನ್ನ ಮನಸ್ಸಿಗಂಟಿಸಿ

ಕೊಳ್ಳುತ್ತಿದ್ದಳೆಂಬ ಸಂಗತಿ ಅವನಿಗೆ ಮೊದಲೇ ಗೊತ್ತಿದ್ದರೆ ಪ್ರಾಯಶಃ ಅವನು ಹೆಚ್ಚು ಜಾಗರೂಕನಾಗಿರುತ್ತಿದ್ದನು. ತನಗವಳಲ್ಲಿ ಪ್ರಾಮಾಣಿಕವಾದ ಪ್ರೀತಿಯಿರಲಿಲ್ಲವೆಂಬ ಸಂಗತಿ ಮೊದಲೇ ಅವಳಿಗೆ ತಿಳಿದಿರಬೇಕೆಂದೂ, ಆದರವಳು ಆ ಬಗ್ಗೆ ನಿರ್ಲಕ್ಷ್ಯದಿಂದಿದ್ದಳೆಂದೂ ಅವನು ಅಸ್ಪಷ್ಟವಾಗಿ ಊಹಿಸಿಕೊಂಡಿದ್ದನು. ಅವನು ನಿರ್ವಂಚನೆಯಿಂದ ತನ್ನಷ್ಟಕ್ಕಾದರೂ ಆ ಬಗ್ಗೆ ಪ್ರಶ್ನಿಸಿಕೊಂಡವನಲ್ಲ. ಮಕ್ಕಳನ್ನು ಹೆತ್ತು ಹೆತ್ತು ಸವೆದುಹೋಗಿದ್ದುದರಿಂದ, ಹಿಂದಿನ ಚೆಲುವಾಗಲಿ, ಯೌವನದ ಸೊಗಡಾಗಲಿ ಅವಳಲ್ಲಿ ಉಳಿದಿರಲಿಲ್ಲವೆಂಬ ಚಿಂತೆ ಅವನನ್ನು ಬಾಧಿಸುತ್ತಿತ್ತು. ಅವಳು ಕುಟುಂಬದ ಸಾಮಾನ್ಯ ತಾಯಿಯಾಗಿ, ದಯಾಳುವಾಗಿ, ಸಹನೆಯಿಂದಿರತಕ್ಕದ್ದೇ ನ್ಯಾಯಯುತವಾದದ್ದೆಂದು ಅವನು ತೀರ್ಮಾನಿಸಿಕೊಂಡಿದ್ದನು. ಆದರವಳು ತೀರ ವ್ಯತಿರಿಕ್ತಳಾಗಿದ್ದಳು.

'ಇದೆಂಥ ಭೀಕರ ಸಂಗತಿ! ನಿಜಕ್ಕೂ ಭೀಕರ ಸಂಗತಿ!' ಎಂದು ಅಬ್ಲಾನ್‌ಸ್ಕಿ ಅನ್ಯಮಾರ್ಗ ತಿಳಿಯದೆ ತನ್ನಷ್ಟಕ್ಕೆ ತಾನು ಹೇಳಿಕೊಳ್ಳುತ್ತಿದ್ದನು. ಈ ಸಂಗತಿ ಸಂಭವಿಸುವ ತನಕ ಪ್ರತಿಯೊಂದೂ ಅದೆಷ್ಟು ಆಪ್ಯಾಯಮಾನವಾಗಿತ್ತು. ನಮ್ಮ ಸಂಸಾರ ಅದೆಷ್ಟು ವಿಹಿತವಾಗಿ ಸಾಗುತ್ತಿತ್ತು! ತನ್ನ ಮಕ್ಕಳೆಲ್ಲವಳಿಗೆ ಅದೆಷ್ಟು ಸುಖಸಂತೃಪ್ತಿಯಿತ್ತು! ಅವಳೇನು ಮಾಡಿದರೂ ನಾನು ಅಡ್ಡಿಪಡಿಸಿದವನಲ್ಲ. ಅವಳಿಗಿಷ್ಟಬಂದಂತೆ ಸಂಸಾರ ನಡಸಲು, ಮಕ್ಕಳನ್ನು ಬೆಳೆಸಲು ನಾನವಳಿಗೆ ಸ್ವಾತಂತ್ರ್ಯ ಕೊಟ್ಟದ್ದೆ. ಅವಳಿಲ್ಲಿ ಉಪಾಧ್ಯಾಯಿನಿಯಂತೆ ಬಾಳು ಸಾಗಿಸುತ್ತಿದ್ದುದು ತಪ್ಪು, ನಿಜಕ್ಕೂ ತಪ್ಪು. ತಪ್ಪು, ತೀರತಪ್ಪು! ತನ್ನ ಮನೆಯ ಉಪಾಧ್ಯಾಯಿನಿಯೊಡನೆ ನಡಸುವ ಪ್ರಣಯ ಚೇಷ್ಟೆಯಲ್ಲಿ ಅಸಭ್ಯತನವಿದೆ, ಅಲ್ಪತನವಿದೆ, ನಿಜ. ಆದರೆ ಅವಳೆಂಥ ಉಪಾಧ್ಯಾಯಿನಿ! (ಮದಾಂ ರೋಲೆಂಡ್‌ಳ ಮಂದಹಾಸದ ಮತ್ತು ತುಂಟ ಕಪ್ಪು ಕಣ್ಣುಗಳ ಚಿತ್ರ ಸುಸ್ಪಷ್ಟವಾಗಿ ಅವನ ಮುಂದೆ ತಲೆದೋರಿತು) ಆದರವಳು ಮನೆಯಲ್ಲಿರುವ ತನಕ ನನಗೆ ಸ್ವಾತಂತ್ರ್ಯವಿರಲಿಲ್ಲ. ಅತ್ಯಂತ ಕೇಡಿನ ಸಂಗತಿಯೆಂದರೆ, ಅವಳಾಗಲೆ....ಅಯ್ಯೋ ದೇವರೆ, ಏನೋ ವಿಪತ್ತು ಕಾದಿರುವಂತಿದೆ. ಆದರೆ ಈಗ ಮಾಡುವುದೇನಿದೆ?'

ಅತ್ಯಂತ ಸಂಕೀರ್ಣವೂ ಅಪರಿಹಾರ್ಯವೂ ಆದ ಸಮಸ್ಯೆಗಳಿಗೆ ಜೀವನ ನೀಡುವ ಸರ್ವಸಾಮಾನ್ಯವಾದ ಉತ್ತರ ವಿನಾ, ಬೇರೆ ಉತ್ತರ ಅವನಿಗೆ ತೋಚಲಿಲ್ಲ. ನಿತ್ಯ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಮಗ್ನವಾಗಿರುತ್ತ ಈ ಸಮಸ್ಯೆಗಳನ್ನು ಮರೆಯುವುದೆ ಏಕೈಕ ಮಾರ್ಗ. ರಾತ್ರಿಯಾಗುವ ತನಕ ಸ್ವಪ್ನಗಳಲ್ಲಿ ತನ್ನನ್ನು ತಾನವನು ಮರೆಯುವಂತಿರಲಿಲ್ಲ; ದ್ರಾಕ್ಷಾಮದ್ಯವನ್ನು ಹಂಚುವ ರಮಣಿಯರ ಸಂಗೀತಗೋಷ್ಠಿಗವನು ಹೋಗುವಂತಿರಲಿಲ್ಲ; ಆದ್ದರಿಂದವನು ನಿತ್ಯ ಜೀವನದ ಸ್ವಪ್ನದಲ್ಲಿ ತನ್ನನ್ನು ತಾನು ಮರೆಯಬೇಕಾಗಿತ್ತು.

'ಸರಿ, ಏನಾಗುತ್ತದೋ ಆಗಲಿ' ಎಂದವನು ತನ್ನಷ್ಟಕ್ಕೆ ತಾನಂದುಕೊಂಡನು. ಮೇಲೆದ್ದು ಬೂದುಬಣ್ಣದ, ನೀಲಿಯ ರೇಷ್ಮೆಯಂಚಿನ ಮೇಲಂಗಿಯನ್ನು ಧರಿಸಿಕೊಂಡನು, ಕುಚ್ಚುಗಳನ್ನು ಗಂಟುಹಾಕಿದನು; ಎದೆಯ ಕುಳಿ ತುಂಬಿಕೊಳ್ಳುವಷ್ಟರ ಮಟ್ಟಿಗೆ ನಿಟ್ಟುಸಿರೆಳೆದನು; ತನ್ನ ಬಲದಾದ ಮೈಕಟ್ಟನ್ನು ಸಲೀಸಾಗಿ ಹೊತ್ತುಕೊಂಡಿದ್ದ

ಪಾದಗಳನ್ನು ರೂಢಿಯ ದಿಟ್ಟತನದಿಂದ ಮುಂದಿಡುತ್ತ ಕಿಟಕಿಯ ಬಳಿಗೆ ನಡೆದನು; ಪರದೆಯನ್ನು ಸರಿಸಿ, ಗಟ್ಟಿಯಾಗಿ ಗಂಟೆ ಬಾರಿಸಿದನು. ಅವನ ಅಂಗಸೇವಕ ಮತ್ತು ಹಳೆಯ ಗೆಳೆಯ ಮಾತ್ವೆ ಅವನ ಬೂಟು ಬಟ್ಟೆಗಳನ್ನೂ ಟೆಲಿಗ್ರಾಮನ್ನೂ ಹಿಡಿದುಕೊಂಡು ಒಳಗೆ ಪ್ರವೇಶಿಸಿದನು. ಅವನ ಹಿಂದೆಯೇ ಕ್ಷೌರದ ಸಾಮಾನುಗಳೊಡನೆ ಹಜಾಮ ಬಂದನು.

'ಕಚೇರಿಯಿಂದ ಏನಾದರೂ ಕಾಗದ ಪತ್ರಗಳಿವೆಯೆ?' ಎಂದು ಅಬ್ಲಾನ್‌ಸ್ಕಿ ಟೆಲಿಗ್ರಾಂ ಈಸಿಕೊಂಡು, ನಿಲುಗನ್ನಡಿಯ ಮುಂದೆ ಕುಳಿತುಕೊಂಡನು.

'ನಿಮ್ಮ ಬರೆಯುವ ಮೇಜಿನ ಮೇಲೆ' ಎಂದು ಮಾತ್ವೆ ತನ್ನ ಯಜಮಾನನ ಕಡೆಗೆ ಮರುಕದ ಹಾಗೂ ಪ್ರಶ್ನೆಯ ದೃಷ್ಟಿಯನ್ನು ಬೀರಿ ಉತ್ತರಿಸಿದನು; ತುಸುತಡೆದು 'ಲಾಯದ ಮಾಲೀಕನ ಮನುಷ್ಯ ಇಲ್ಲಿದ್ದ' ಎಂದವನು ಕೊಂಕು ನಗೆ ಬೀರಿದನು.

ಅಬ್ಲಾನ್‌ಸ್ಕಿ ಉತ್ತರಿಸದೆಯೆ ಕನ್ನಡಿಯಲ್ಲಿ ಮಾತ್ವೆ ಕಡೆಗೆ ನೋಡಿದನು. ಕನ್ನಡಿಯಲ್ಲಿ ಅವರ ದೃಷ್ಟಿಗಳು ಸಂಧಿಸಿದುವು. ಅವರು ಪರಸ್ಪರವಾಗಿ ಅರ್ಥಮಾಡಿಕೊಂಡಿದ್ದರೆಂಬುದು ಸ್ಪಷ್ಟವಾಗಿತ್ತು. 'ನನಗದನ್ನೇಕೆ ಹೇಳಿದೆ? ನನಗೆ ಆ ವಿಚಾರ ಗೊತ್ತಿಲ್ಲವೆ?' ಎಂಬುದಾಗಿ ಅವನ ಕಣ್ಣು ಪ್ರಶ್ನಿಸುವಂತಿದ್ದುವು.

ತನ್ನ ಜಾಕೀಟಿನ ಜೇಬುಗಳಿಗೆ ಮಾತ್ವೆ ತನ್ನ ಕೈ ತುರುಕಿದನು; ಒಂದು ಕಾಲನ್ನು ಜಾಡಿಸಿದನು; ತನ್ನ ಯಜಮಾನನ ಕಡೆಗೆ ಮೌನವಾಗಿ, ಹಿತಕರವಾಗಿ ಕಣ್ಣು ಹಾಯಿಸಿದನು. ಅವನ ಮುಖದ ಮೇಲೆ ಮಂದಹಾಸದ ಛಾಯೆ ಸುಳಿಯಿತು.

'ಮುಂದಿನ ಭಾನುವಾರ ಬರುವಂತೆ ಅವನಿಗೆ ತಿಳಿಸಿದ್ದೆ. ಆ ಮುನ್ನ ನಿನಗಾಗಲಿ ನನಗಾಗಲಿ ತೊಂದರೆ ಮಾಡಬಾರದೆಂದು ಹೇಳಿದ್ದೆ.' ಮೊದಲೇ ಈ ಮಾತುಗಳನ್ನವನು ಸಿದ್ಧ ಪಡಿಸಿಕೊಂಡಂತಿತ್ತು.

ತನ್ನ ಗಮನ ಸೆಳೆಯುವ ಸಲುವಾಗಿ ಮಾತ್ವೆ ಹುಡುಗಾಟಿಕೆ ನಟಿಸಿದನೆಂಬುದು ಅಬ್ಲಾನ್‌ಸ್ಕಿಗೆ ಗೊತ್ತಾಯಿತು. ಅವನು ತಂತಿಯನ್ನು ಹರಿದು ಓದಿದನು. ಕಾಗುಣಿತದ ತಪ್ಪುಗಳಿದ್ದ ಪದಗಳ ಅರ್ಥವನ್ನೂಹಿಸಿಕೊಂಡನು. ಯಾವೊಂದು ತಂತಿಯೂ ಅಂಥ ತಪ್ಪುಗಳಿಂದ ಮುಕ್ತವಾಗಿರುವುದಿಲ್ಲವಷ್ಟೆ. ಅವನ ಮುಖ ಪ್ರಕಾಶಮಾನವಾಯಿತು.

'ಮಾತ್ವೆ, ನನ್ನ ತಂಗಿ ಅನ್ನಾ ನಾಳೆ ಬರುತ್ತಾಳೆ' ಎಂದವನು ತನ್ನ ಉದ್ದನೆಯ ಗುಂಗುರು ಗುಂಗುರಾದ ಕೆನ್ನೆಗೂದಲಿನ ಪಕ್ಕದ ಕೆಂಪು ರೇಖೆಯನ್ನು ಸರಿಪಡಿಸುತ್ತಿದ್ದ ನಾಯಿಂದನ ಹೊಳೆಯುವ ತುಂಬಿದ ಕೈಯನ್ನು ಕ್ಷಣಕಾಲ ತಡೆದು ನಿಲ್ಲಿಸಿ ನುಡಿದನು.

ಆ ಭೇಟಿಯ ಬಗ್ಗೆ ತನ್ನ ಯಜಮಾನನಷ್ಟೇ ಮೆಚ್ಚುಗೆಯನ್ನು ತೋರಿಸಿದ ಮಾತ್ವೆ 'ದೇವರಿಗೆ ವಂದನೆಗಳು' ಎಂದು ನುಡಿದನು. ಗಂಡಹೆಂಡಿರ ನಡುವೆ ಅಬ್ಲಾನ್‌ಸ್ಕಿಯ ಅಚ್ಚುಮೆಚ್ಚಿನ ಸೋದರಿ ರಾಜಿ ಕುದುರಿಸಬಹುದೆಂದು ಇಬ್ಬರೂ ಭರವಸೆ ಇಟ್ಟುಕೊಂಡಿದ್ದರು.

'ಒಬ್ಬರೆಯೋ, ಅಥವಾ ಅವರ ಗಂಡ ಕೂಡ ಬರುತ್ತಾರೆಯೊ?' ಎಂದು ಮಾತ್ವೆ ಪ್ರಶ್ನಿಸಿದನು.

ಸಾಯಿಂದ ಮೇಲ್ದುಟಿಯ ಮೇಲೆ ಕತ್ತಿ ಆಡಿಸುತ್ತಿದ್ದುದರಿಂದ ಅಬ್ಲಾನ್‌ಸ್ಕಿ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಅದರಿಂದಾಗಿ ಅವನು ಒಂದು ಬೆರಳೆತ್ತಿ ಸನ್ನೆ ಮಾಡಿದನು. ಮಾತ್ವೆ ಕನ್ನಡಿಯಲ್ಲಿ ತಲೆಯಲ್ಲಾಡಿಸಿದನು.

'ಒಬ್ಬರೇ? ಮಹಡಿಯ ಕೋಣೆಯನ್ನು ಅವರಿಗಾಗಿ ಸಿದ್ಧಪಡಿಸಲೆ?'

'ದರಿಯ ಅಲೆಕ್ಸಾಂಡ್ರೋವ್ನಳಿಗೆ ಹೇಳು. ಅವಳು ತಕ್ಕ ವ್ಯವಸ್ಥೆ ಮಾಡುತ್ತಾಳೆ.'

'ದರಿಯ ಅಲೆಕ್ಸಾಂಡ್ರೋವ್ನಳೆ?' ಎಂದು ಮಾತ್ವೆ ಸಂಶಯಗ್ರಸ್ತನಾದವನಂತೆ ಪುನರಾವರ್ತಿಸಿದನು.

'ಹೌದು. ಅವಳಿಗೆ ತಿಳಿಸು. ಇಗೋ ಈ ತಂತಿಯನ್ನವಳಿಗೆ ಕೊಡು. ಅವಳು ಹೇಳಿದಂತೆ ಮಾಡು.'

'ಅವರನ್ನು ಪರೀಕ್ಷಿಸಲೆಳಸುವಿರಲ್ಲವೆ?' ಎಂದು ಮಾತ್ವೆ ತನ್ನಷ್ಟಕ್ಕೆ ತಾನಂದುಕೊಂಡು 'ಆಗಲಿ ಬುದ್ಧಿ' ಎಂದನು.

ಕೈಯಲ್ಲಿ ತಂತಿ ಹಿಡಿದುಕೊಂಡು, ಮಾತ್ವೆ ಕಿರಿಕಿರಿಗುಟ್ಟುತ್ತಿದ್ದ ಬೂಟುಗಾಲಿನಲ್ಲಿ ಹಿಂದಿರುಗುವ ಹೊತ್ತಿಗೆ ಅಬ್ಲಾನ್‌ಸ್ಕಿಯ ಮಾರ್ಜನ ಕಾರ್ಯ ಮುಗಿದಿತ್ತು; ತಲೆ ಬಾಚಲಾಗಿತ್ತು; ಅವನು ಉಡುಪು ತೊಡಲು ಸಿದ್ಧನಾಗಿದ್ದ. ಹಜಾಮ ಹೊರಟು ಹೋಗಿದ್ದ.

'ದರಿಯ ಅಲೆಕ್ಸಾಂಡ್ರೋವ್ನ ಹೊರಗೆ ಹೋಗುತ್ತಾರಂತೆ. ನಿಮಗಿಷ್ಟ ಬಂದ ಹಾಗೆ ಮಾಡಬಹುದಂತೆ. ನಿಮಗೆ ತಿಳಿಸುವಂತೆ ಹೇಳಿದರು.' ಅವನ ಕಣ್ಣುಗಳಲ್ಲಿ ನಗು ತುಳುಕಾಡಿತು; ಕೈಗಳನ್ನು ಜೇಬುಗಳಲ್ಲಿ ತುರುಕಿಕೊಂಡು, ತಲೆಯನ್ನು ಪಕ್ಕಕ್ಕೆ ಮರೆಮಾಡಿಕೊಂಡು, ಅವನು ತನ್ನ ಯಜಮಾನನನ್ನು ಎವೆಯಿಕ್ಕದೆ ನೋಡುತ್ತಿದ್ದನು.

ಅಬ್ಲಾನ್‌ಸ್ಕಿ ತುಸುಹೊತ್ತು ತುಟಿಪಿಟಿಕ್ಕೆನ್ನಲಿಲ್ಲ. ತದನಂತರ ದಯಾರ್ದ್ರವೂ ಕನಿಕರನೀಯವೂ ಆದ ಮಂದಹಾಸ ಅವನ ಸುಂದರ ವದನದ ಮೇಲೆ ಸುಳಿದಾಡಿತು.

'ಆ ವಿಷಯದ ಬಗ್ಗೆ ನಿನ್ನ ಅಭಿಪ್ರಾಯವೇನು, ಮಾತ್ವೆ?' ಎಂದವನು ತಲೆಯಲ್ಲಾಡಿಸುತ್ತ ಪ್ರಶ್ನಿಸಿದನು.

'ಶಂಕೆ ಅನಗತ್ಯ, ಪ್ರಭು. ಎಲ್ಲ ಸರಿಹೋಗುತ್ತದೆ' ಎಂದು ಮಾತ್ವೆ ನುಡಿದನು.

'ದಾರಿಗೆ ಬರುತ್ತಾಳೆಯೆ?'

'ಹೌದ್ಹೌದು–ಅನುಮಾನವಿಲ್ಲ.'

'ಅದು ನಿನ್ನೆಣಿಕೆಯೆ? ಅಲ್ಲಿ ಯಾರಿದ್ದಾರೆ?' ಎಂದು ಅಬ್ಲಾನ್‌ಸ್ಕಿ ಬಾಗಿಲ ಮತ್ತೊಂದು ಪಕ್ಕದಲ್ಲಿ ಲಂಗದ ಮುರ ಮುರ ಶಬ್ದ ಕೇಳಿಸಲಾಗಿ ಪ್ರಶ್ನಿಸಿದನು.

'ನಾನು, ಬುದ್ಧಿ' ಎಂದೊಂದು ಸದೃಢ ಹಿತಕರ ಸ್ತ್ರೀಧ್ವನಿಯೊಂದು ನುಡಿಯಿತು. ಮಕ್ಕಳಾಡಿಸುವ ಹುಡುಗಿ ಮೆತ್ರೋನಳ ಸಿಡುಬು ಕಲೆಯ ಗಂಭೀರ ಮೊಗ ಬಾಗಿಲಲ್ಲಿ ಪ್ರತ್ಯಕ್ಷವಾಯಿತು.

'ಏನು ಸಮಾಚಾರ, ಮೆತ್ರೋನ?' ಎನ್ನುತ್ತ ಅಬ್ಲಾನ್‌ಸ್ಕಿ ಬಾಗಿಲ ಬಳಿಗೆ ಸರಿದನು.

ತನಗೆ ತಿಳಿದಂತೆ ತನ್ನ ಮಡದಿಗೆ ಅವನು ಮಹಾಪರಾಧವೆಸಗಿದ್ದರೂ, ದರಿಯ ಅಲೆಕ್ಸಾಂಡ್ರೋವ್ನಳ ಮುಖ್ಯಾಧಾರಳೂ ಸಹಾಯಕಿಯೂ ಅದ ದಾದಿ ಹುಡುಗಿ ಮೊದಲುಗೊಂಡು ಮನೆಯ ಜನರೆಲ್ಲ ಅವನ ಪಕ್ಷ ವಹಿಸಿಕೊಂಡಿದ್ದರು.

'ಏನು ಸಮಾಚಾರ ?' ಎಂದವನು ನಿರುತ್ಸಾಹದಿಂದ ಪ್ರಶ್ನಿಸಿದನು.

'ಅವರ ಹತ್ತಿರ ಹೋಗಿ, ಮತ್ತೊಮ್ಮೆ ಕ್ಷಮೆ ಕೇಳಿಕೊಳ್ಳಿ, ಒಡೆಯ. ದೇವರ ಕೃಪೆಯಿಂದ ಒಳ್ಳೆಯದಾಗಬಹುದು. ಅವರೀಗ ತುಂಬ ಕನಿಕರದ ಅವಸ್ಥೆಯಲ್ಲಿದ್ದಾರೆ! ಅವರು ತುಂಬ ಯಾತನೆ ಪಡುತ್ತಿದ್ದಾರೆ. ಅವರನ್ನು ನೋಡಲಾಗದು. ಮನೆಯೆಲ್ಲ ಅಸ್ತವ್ಯಸ್ತವಾಗಿದೆ. ಮಕ್ಕಳನ್ನು ನೋಡಿ, ಉಳಿದದ್ದನ್ನೆಲ್ಲ ಮರೆಯಬೇಕು, ದಯೆ ಯಿಟ್ಟು ಕ್ಷಮೆ ಕೇಳಿಕೊಳ್ಳಿ, ಸ್ವಾಮಿ. ಬೇರೆ ದಾರಿಯೇ ಇಲ್ಲ. ವಿಧಿಯಿಲ್ಲದೆ.... ಅನುಭವಿಸಬೇಕಾಗಿದೆ.'

'ಆದರಳವಳು ನನ್ನ ಕಡೆ ತಿರುಗಿಯೂ ನೋಡುವುದಿಲ್ಲ.'

'ನಿಮ್ಮಿಂದೇನು ಸಾಧ್ಯವೋ ಅದನ್ನು ಮಾಡಿಬಿಡಿ, ಸ್ವಾಮಿ. ಇಷ್ಟರ ಮೇಲೆ ದೇವರ ಅನುಗ್ರಹ. ದೇವರನ್ನು ಪ್ರಾರ್ಥಿಸಿ, ಸ್ವಾಮಿ, ದೇವರನ್ನು ಪ್ರಾರ್ಥಿಸಿ.'

'ಸರಿ, ನೀನೀಗ ಹೋಗಬಹುದು' ಎಂದು ನುಡಿಯುವಾಗ ಅಬ್ಲಾನ್‌ಸ್ಕಿಯ ಮುಖ ಕೆಂಪೇರಿತು. 'ಬಾ, ಈಗ. ನನಗೆ ಉಡುಪು ತೊಡಿಸು' ಎಂದವನು ತಟಕ್ಕನೆ ಮೇಲಂಗಿಯನ್ನು ತೆಗೆದು ಬಿಸಾಡಿ, ಮಾತ್ವೆಯೊಡನೆ ನುಡಿದನು.

ಮಾತ್ವೆ ಆ ಹೊತ್ತಿಗಾಗಲೇ ಕುದುರೆಯ ಕತ್ತುಪಟ್ಟಿಯ ರೀತಿಯಲ್ಲಿ ಅವನ ಶರಟು ಹಿಡಿದುಕೊಂಡಿದ್ದನು. ಕಣ್ಣಿಗೆ ಕಾಣದ ಧೂಳನ್ನು ಊದಿ, ತನ್ನ ಯಜಮಾನನ ನುಣ್ ಹೊಳಪಿನ ಮೈಗೆ ಉಲ್ಲಸಿತನಾಗಿ ಶರಟು ತೊಡಿಸಿದನು.

ಅಧ್ಯಾಯ ೩

ಉಡುಪು ಧರಿಸಿದ ನಂತರ ಅಬ್ಲಾನ್‌ಸ್ಕಿ ತನ್ನ ಮೈಮೇಲೆ ಸುಗಂಧ ದ್ರವ್ಯವನ್ನು ಚಿಮುಕಿಸಿಕೊಂಡನು ; ತನ್ನ ಶರಟಿನ ಮಣಿಕಟ್ಟು ಪಟ್ಟಿಯನ್ನು ಸರಿಪಡಿಸಿಕೊಂಡನು ; ಸಿಗರೇಟು, ಕಿಸೆಪುಸ್ತಕ, ಬೆಂಕಿಕಡ್ಡಿ, ಎರಡು ಸರಪಳಿಯ ಗಡಿಯಾರ ಮೊದಲಾದುವು ಅಂತಮ್ಮ ಸ್ಥಳಗಳಲ್ಲಿ ಸರಿಯಾಗಿವೆಯೆ ಎಂದು ತಿಳಿಯುವ ಸಲುವಾಗಿ ಎಲ್ಲ ಜೇಬುಗಳನ್ನು ಮುಟ್ಟಿ ನೋಡಿಕೊಂಡನು ; ಮಡಿಯಾದ ಕೈಚೌಕವೊಂದನ್ನು ಹೊರಗೆಳೆದುಕೊಂಡನು; ಹಸನಾಗಿ, ಶ್ರೀಗಂಧಯುಕ್ತನಾಗಿ ಹಾಗೂ ಆರೋಗ್ಯ ಪೂರ್ಣನಾಗಿ ಹಿತಕರ ಭಾವನೆ ಯಿಂದ ಹರ್ಷಚಿತ್ತನಾದನು ; ಮಾನಸಿಕ ವಿಪತ್ತಿಗೊಳಗಾಗಿದ್ದರೂ ಭೌತಿಕವಾಗಿ ಸಂತೋಷಭರಿತನಾಗಿದ್ದನು ; ಜಿಗಿ ಹೆಜ್ಜೆಯಿಂದ ಭೋಜನ ಶಾಲೆಗೆ ನಡೆದನು. ಅಲ್ಲಿ ಅವನಿಗಾಗಿ ಕಾಫಿ ಕಾದಿತ್ತು ; ಬಟ್ಟಲಿನ ಪಕ್ಕದಲ್ಲಿ ಕಾಗದ ಪತ್ರಗಳು ಬಿದ್ದಿದ್ದುವು.

ಅವನು ಪತ್ರಗಳನ್ನೋದಿದನು. ಅವುಗಳಲ್ಲೊಂದು ಅಹಿತವಾಗಿತ್ತು. ತನ್ನ ಮಡದಿಯ ಆಸ್ತಿಯಲ್ಲಿದ್ದ ಕಾಡನ್ನು ಕೊಳ್ಳಲಿದ್ದ ವರ್ತಕನಿಂದ ಆ ಕಾಗದ ಬಂದುದಾಗಿತ್ತು. ಈ ಕಾಡುಗಳನ್ನು ಜರೂರಾಗಿ ಮಾರಿಬಿಡಬೇಕಾಗಿತ್ತು ; ಆದರೆ ತನ್ನ ಮಡದಿಯೊಡನೆ ರಾಜಿಮಾಡಿಕೊಳ್ಳುವತನಕ ಆ ವಿಷಯವನ್ನು ಕುರಿತು ಚರ್ಚಿಸು

ವಂತಿರಲಿಲ್ಲ. ಹಣದ ವ್ಯವಹಾರಗಳನ್ನು ರಾಜಿ ಸಂಧಾನವನ್ನು ಬೆರಸುವುದಕ್ಕಿಂತ ಅತಿ ಅಹಿತವಾದ ಬೇರೊಂದು ಸಂಗತಿಯಿದ್ದಂತಿರಲಿಲ್ಲ. ಹಣದ ವ್ಯವಹಾರಗಳು ತಮ್ಮ ಸಂಬಂಧಗಳ ಮೇಲೆ ಪ್ರಭಾವ ಬೀರುತ್ತವೆಂದು ತಿಳಿದು, ಕಾಡುಗಳ ಮಾರಾಟಕ್ಕಾಗಿಯೇ ತಾನು ರಾಜಿಮಾಡಿಕೊಳ್ಳಬೇಕೆಂದು ಯೋಚಿಸುವುದೇ ಅವಮಾನಕರ ಸಂಗತಿಯಾಗಿತ್ತು.

ಕಾಗದಗಳನ್ನೆಲ್ಲ ಓದಿ ಮುಗಿಸಿದನಂತರ ಆಬ್ಲಾನ್‌ಸ್ಕಿ ಕಚೇರಿಯಿಂದ ಕೆಲವು ಕಾಗದಗಳನ್ನು ಸೆಳೆದು ತಂದನು; ಅವುಗಳಲ್ಲಿ ಎರಡರ ಮೇಲೆ ಬೇಗ ಬೇಗ ಕಣ್ಣು ಹಾಯಿಸಿದನು; ದೊಡ್ಡದಾದೊಂದು ಪೆನ್ಸಿಲ್ಲಿನಿಂದ ಕೆಲವು ಟಿಪ್ಪಣಿಗಳನ್ನು ಗುರುತು ಹಾಕಿದನು; ಕಾಫಿಯನ್ನು ಸವಿಯುವ ಸಲುವಾಗಿ ಅವನ್ನು ಪಕ್ಕಕ್ಕೆ ತಳ್ಳಿದನು. ಕಾಫಿಯನ್ನು ಸವಿಯುತ್ತಿದ್ದಂತೆ ಅವನು ಮುದ್ರಣದ ಶಾಯಿ ಪೂರ್ಣವಾಗಿ ಆರದಿದ್ದ ಬೆಳಗಿನ ವರ್ತಮಾನ ಪತ್ರಿಕೆಯನ್ನು ಬಿಡಿಸಿದನು.

ಆಬ್ಲಾನ್‌ಸ್ಕಿ ಅತಿವಾದಕ್ಕೆ ಸೇರದ, ಬಹುಜನರ ಬೆಂಬಲವನ್ನು ಪಡೆದ ಧೋರಣೆಯುಳ್ಳ ಉದಾರವಾದಿ; ವರ್ತಮಾನ ಪತ್ರಿಕೆಯನ್ನು ಶ್ರದ್ಧಾಪೂರ್ಣವಾಗಿ ಓದುತ್ತಿದ್ದನು. ವಿಜ್ಞಾನ, ಕಲೆ, ರಾಜಕೀಯ, ಯಾವುದರಲ್ಲಿಯೇ ಆಗಲಿ, ಅವನಿಗೆ ವಿಶೇಷಾಸಕ್ತಿಯಿರಲಿಲ್ಲ; ಈ ಎಲ್ಲ ಕ್ಷೇತ್ರಗಳಲ್ಲಿ ಬಹುಜನರು ಮತ್ತು ತನ್ನ ಪತ್ರಿಕೆ ಯಾವ ಅಭಿಪ್ರಾಯಗಳಿಗೆ ಅಂಟಿಕೊಂಡಿದ್ದುವೋ ಅವನ್ನು ಮಾತ್ರ ಅವನು ಮಾನ್ಯ ಮಾಡುತ್ತಿದ್ದನು; ಬಹುಜನ ಬದಲಾಯಿಸಿದಾಗ ಮಾತ್ರ ಅವನು ತನ್ನ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುತ್ತಿದ್ದನು; ಅವನು ಬದಲಾಯಿಸಿಕೊಳ್ಳುತ್ತಿರಲಿಲ್ಲವೆಂಬುದೇ ಪ್ರಾಯಶಃ ಸರಿ; ಏಕೆಂದರೆ, ಗೊತ್ತಿಲ್ಲದಂತೆಯೆ ಆ ಅಭಿಪ್ರಾಯಗಳು ತಾವಾಗಿಯೇ ಬದಲಾವಣೆಗೊಳ್ಳುತ್ತಿದ್ದುವು.

ಆಬ್ಲಾನ್‌ಸ್ಕಿ ಧೋರಣೆ ಅಭಿಪ್ರಾಯಗಳನ್ನು ಆಯ್ದುಕೊಂಡವನಲ್ಲ. ಕೋಟು ಟೋಪಿಗಳ ನಮೂನೆಯನ್ನೆಂತು ತಾನಾಗಿಯೇ ಆರಿಸಿಕೊಳ್ಳದೆ, ಚಾಲ್ತಿಯಲ್ಲಿದ್ದದ್ದನ್ನು ಬಳಸಿಕೊಳ್ಳುತ್ತಿದ್ದನೋ ಅಂತೆಯೇ ಧೋರಣೆ ಮತ್ತು ಅಭಿಪ್ರಾಯಗಳು ತಾವಾಗಿಯೇ ಅವನ ಬಳಿ ಬರುತ್ತಿದ್ದುವು. ಒಂದು ನಿರ್ದಿಷ್ಟವಾದ ಸಮಾಜದಲ್ಲಿರುತ್ತ, ಸಾಮಾನ್ಯವಾಗಿ ಪ್ರಾಯದೊಂದಿಗೆ ಬರುವ ಬೌದ್ಧಿಕ ಕ್ರಿಯೆಯ ಅವಶ್ಯಕತೆಯನ್ನನುಭವಿಸುತ್ತ, ಟೋಪಿಗಳನ್ನು ಧರಿಸುವುದೆಷ್ಟು ಅಗತ್ಯವೋ ಅಭಿಪ್ರಾಯಗಳನ್ನು ಪೋಷಿಸುವುದು ಸಹ ಅಷ್ಟೇ ಅಗತ್ಯವೆಂದವನು ತಿಳಿದಿದ್ದನು. ಸಂಪ್ರದಾಯ ವಾದಕ್ಕಿಂತ (ಅವನ ವೃತ್ತದಲ್ಲಿದ್ದ ಅನೇಕ ಜನ ಅದನ್ನು ಅನುಸರಿಸುತ್ತಿದ್ದರು) ಉದಾರವಾದದ ಕಡೆಗೆ ಅವನು ವಾಲಿದ್ದರೆ, ಅದು ಹೆಚ್ಚು ತರ್ಕಬದ್ಧವಾಗಿತ್ತೆಂಬ ಕಾರಣದಿಂದಲ್ಲ, ಅದು ತನ್ನ ಜೀವನ ವಿಧಾನಕ್ಕೆ ಹೆಚ್ಚು ಸಮ ರಸವಾಗಿತ್ತೆಂಬ ಕಾರಣದಿಂದ. ರಷ್ಯಾದಲ್ಲಿ ಎಲ್ಲವೂ ಕೆಟ್ಟುಹೋಗಿತ್ತೆಂದು ಉದಾರವಾದೀ ಪಕ್ಷ ಹೇಳುತ್ತಿತ್ತು. ನಿಜಕ್ಕೂ ಆಬ್ಲಾನ್‌ಸ್ಕಿ ಕೈತುಂಬ ಸಾಲ ಮಾಡಿಕೊಂಡಿದ್ದನು; ಅವನ ಬಳಿ ಹಣವಿರಲಿಲ್ಲ. ಮದುವೆಯೊಂದು ಸವೆದುಹೋದ ಸಂಸ್ಥೆಯಾಗಿತ್ತೆಂದೂ, ಅದನ್ನು ನವೀಕರಿಸಬೇಕೆಂದೂ ಉದಾರವಾದಿ ಪಕ್ಷ ಸಾರುತ್ತಿತ್ತು; ವಾಸ್ತವವಾಗಿ ಕೌಟುಂಬಿಕ ಜೀವನದಿಂದ ಆಬ್ಲಾನ್‌ಸ್ಕಿಗೆ ತೃಪ್ತಿ ದೊರೆತಿರಲಿಲ್ಲ.

ಆದರಿಂದಾಗಿ ತನ್ನ ಸ್ವಭಾವಕ್ಕೆ ವಿರುದ್ಧವಾಗಿಯೇ ಕೌಟುಂಬಿಕ ಜೀವನ ಅವಸನ್ನು ಸುಳ್ಳುವಂಚನೆಗಳಿಗೊಪ್ಪಿಸಿತ್ತು. ಅನಾಗರಿಕ ಸಾಮಾನ್ಯ ಜನತೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದಾದ ಸಾಧ್ಯಮಾಪೇ ಮತವೆಂದು ಉದಾರವಾದಿ ಪಕ್ಷ ಸ್ಪಷ್ಟಪಡಿಸಿತ್ತು. ಚರ್ಚಿನಲ್ಲಿ ನಡೆಯುತ್ತಿದ್ದ ಹ್ರಸ್ವಾವಧಿಯ ಪ್ರಾರ್ಥನೆಯಲ್ಲಿಯೂ ಆಬ್ಲಾನ್‌ಸ್ಕಿ ನಿಂತು ನಿಂತು, ಕಾಲು ಜೊಮ್ಮು ಹಿಡಿದು, ಸಾಕಾಗಿ ಹೊರಗೆ ಬರುತ್ತಿದ್ದನು. ಈ ಜಗತ್ತೇ ವಾಸಯೋಗ್ಯವಾದ ಹಾಗೂ ಹಿತಕರವಾದ ಸ್ಥಳವಾಗಿರುವಾಗ ಬೇರೊಂದು ಕಾಣದ ಪ್ರಪಂಚದ ಬಗ್ಗೆ ಭೀಕರಪ್ರಾಯವಾದ ಉಚ್ಚಕಂಠದ ವಾಕ್ಯವೃಂದಗಳೇಕೆಂಬುದು ಅವನಿಗರ್ಥವಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ತನ್ನ ಮೂಲಪುರುಷರ ಬಗ್ಗೆ ಹೆಮ್ಮೆಯಿರುವ ವ್ಯಕ್ತಿ ರಷ್ಯಾದ ಮೊದಲನೆಯ ದೊರೆ ರೂರಿಕ್ ಅಷ್ಟಕ್ಕೇ ನಿಲ್ಲದೆ, ಮೂಲದವರೆಗೆ, ಅಂದರೆ ಮಂಗನವರೆಗೆ ಏಕೆ ಹಿಂದಕ್ಕೆ ಹೋಗಬಾರದು ಎಂದು ನುಡಿದು, ಕೆಲವೊಮ್ಮೆ ಹಾಸ್ಯಪ್ರಿಯನಾದ ಆಬ್ಲಾನ್‌ಸ್ಕಿ ಸಂಪ್ರದಾಯವಾದಿಯನ್ನು ತಲ್ಲಣಗೊಳಿಸುತ್ತಿದ್ದನು. ಉದಾರವಾದಿ ಧೋರಣೆ ಅವನ ಬದುಕಿನ ಅಭ್ಯಾಸವಾಗಿತ್ತು. ಭೋಜನಾನಂತರ ಸಿಗರೇಟಿನಂತೆಯೇ ಅವನು ವರ್ತಮಾನ ಪತ್ರಿಕೆಯನ್ನು ಪ್ರೀತಿಸುತ್ತಿದ್ದನು. ಅವನ ತಲೆಯಲ್ಲದು ತುಸು ಮಂಕು ಬರಿಸುತ್ತಿತ್ತು. ಎಲ್ಲ ಸಾಂಪ್ರದಾಯಕ ಸಂಗತಿಗಳನ್ನು ನುಂಗಿ ನೊಣೆಯುವ ಆಮೂಲಾಗ್ರ ಸುಧಾರಣೆಯ ಬಗ್ಗೆ ತಮ್ಮ ಕಾಲದಲ್ಲಿ ಕೋಲಾಹಲವೆಬ್ಬಿಸುವುದು ನಿಷ್ಪ್ರಯೋಜಕವೆಂಬ, ಕ್ರಾಂತಿಯ ರಕ್ತಬೀಜಾಸುರನನ್ನು ಸರ್ಕಾರ ದಮನಗೊಳಿಸುತ್ತದೆಂಬ ಸಂಪಾದಕೀಯವನ್ನವನು ಓದುತ್ತಿದ್ದನು. ಅದಕ್ಕೆ ಪ್ರತಿಯಾಗಿ, 'ನಮ್ಮ ಅಭಿಪ್ರಾಯದ ಪ್ರಕಾರ, ಅಪಾಯ ಕ್ರಾಂತಿಯ ರಕ್ತಬೀಜಾಸುರನಲ್ಲಿಲ್ಲ, ಪ್ರಗತಿಯನ್ನು ತಡೆಗಟ್ಟುವ ಜಡ್ಡುಗಟ್ಟಿದ ಸಂಪ್ರದಾಯಗಳಲ್ಲಿದೆ....' ಎಂಬ ಹತ್ತು ಹಲವು ವಿವರಗಳನ್ನವನು ಓದಿ ಸವಿಯುತ್ತಿದ್ದನು. ಅವನು ಓದಿದ ಮತ್ತೊಂದು ಲೇಖನ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ್ದು. ಬೆಂಥಾಮ್ ಮತ್ತು ಮಿಲ್‌ರ ಹೆಸರು ಸಹ ಆ ಸಂಬಂಧವಾಗಿ ಉಕ್ತಗೊಂಡಿದ್ದುವು. ಯಾವುದೋ ಸಚಿವ ಖಾತೆಯ ಬಗೆಗಿನ ಟೀಕೆಗಳು ಸಹ ಅಚ್ಚಾಗಿದ್ದುವು. ಸ್ವಾಭಾವಿಕವಾದ ಗ್ರಹಣಶಕ್ತಿಯಿಂದವನು ಆ ಟೀಕೆಗಳ ಅರ್ಥವನ್ನು ಗ್ರಹಿಸಿಕೊಳ್ಳುತ್ತಿದ್ದನು. ಆ ಟೀಕಾಸ್ತ್ರಗಳನ್ನು ಯಾರು ಯಾರ ಕಡೆಗೆ ಎಸೆದಿದ್ದರೆಂಬುದೂ ಅವನಿಗೆ ತಿಳಿದಿತ್ತು. ಟೀಕೆಗಳ ಹಿಂದಿನ ಪ್ರಚೋದನೆಯೂ ಅವನಿಗರ್ಥವಾಗಿತ್ತು. ಎಂದಿನಂತೆ, ಇದು ಅವನಿಗೆ ತುಂಬ ತೃಪ್ತಿಯುಂಟುಮಾಡುತ್ತಿತ್ತು. ಆದರೆ ಈ ದಿನ ಮೆತ್ರೋನಸಳ ಸಲಹೆಯ ಹಾಗೂ ಸಂಸಾರದ ತಾಪತ್ರಯದ ನೆನಪಿನಿಂದಾಗಿ ಅವನ ತೃಪ್ತಿಗೆ ಭಂಗವುಂಟಾಗಿತ್ತು. ಕೌಂಟ್ ಬೀಸ್ಟ್ ವೀಸ್‌ಬೇಡನ್‌ಗೆ ಹೊರಟಿದ್ದನೆಂಬ ಗಾಳಿಸುದ್ದಿಯನ್ನೂ, ಬೂದಿ ಬಣ್ಣದ ಕೂದಲು ಅನಾವಶ್ಯಕವೆಂಬ, ಚಿಕ್ಕದೊಂದು ಗಾಡಿ ಮಾರಾಟಕ್ಕೆ ಸಿದ್ಧವಾಗಿತ್ತೆಂಬ ಮತ್ತು ತರುಣಿಯೊಬ್ಬಳು ಕೆಲಸ ಹುಡುಕುತ್ತಿದ್ದಳೆಂಬ ವಾರ್ತೆಗಳನ್ನೂ ಅವನು ಓದಿದನು. ಆದರೆ ಈ ವಾರ್ತೆಗಳಿಂದ ಅವನಿಗೆ ಎಂದಿನ ವಿನೋದಾತ್ಮಕ ತೃಪ್ತಿಯುಂಟಾಗಲಿಲ್ಲ.

ಪತ್ರಿಕೆಯನ್ನೋದಿ, ಬೆಣ್ಣೆ ಹಚ್ಚಿದ ರೊಟ್ಟಿಯನ್ನೂ ಎರಡನೆಯ ಬಟ್ಟಲು ಕಾಫಿಯನ್ನೂ ಮುಗಿಸಿದನಂತರ, ಅವನು ಮೇಲೆದ್ದನು; ಸೊಂಟಕೋಟಿನ ಮೇಲೆ

ಬಿದ್ದಿದ್ದ ಚೂರುಗಳನ್ನೊದರಿದನು ; ವಿಶಾಲ ಭುಜಗಳನ್ನು ಸಮಕೋನಗೊಳಿಸಿದನು ; ಅವನ ಮುಖದ ಮೇಲೆ ಸುಖದ ಮಂದಹಾಸ ಸೂಸಿತು. ಅವನ ಆ ಮಂದಹಾಸಕ್ಕೆ ಕಾರಣ ಆಹ್ಲಾದಕರವಾದ ಆಲೋಚನೆಯಾಗಿರದೆ, ಒಳ್ಳೆಯ ಜೀರ್ಣಶಕ್ತಿಯಾಗಿತ್ತು.

ಆದರೆ ಸಂತೋಷಕರವಾದ ಮಂದಹಾಸ ಒಡನೆಯೆ ಹಲವು ಸಂಗತಿಗಳನ್ನು ಅವನ ಜ್ಞಾಪಕಕ್ಕೆ ತಂದುಕೊಟ್ಟಿತು ; ಆದರಿಂದಾಗಿ ಅವನು ಚಿಂತಾಮಗ್ನನಾದನು.

ಬಾಗಿಲಿನ ಮತ್ತೊಂದು ಕಡೆಯಿಂದ ಮಕ್ಕಳ ಧ್ವನಿ ಕೇಳಿಸಿದುವು. ಚಿಕ್ಕ ಮಗ ಗ್ರಿಷ ಮತ್ತು ದೊಡ್ಡ ಮಗಳು ತನ್ಯರ ಧ್ವನಿಗಳಿರಬೇಕೆಂದು ಅವನು ಗುರುತಿಸಿದನು. ಅವರೇನೋ ಕೆಳಗೆ ಕೆಡವಿದ್ದರೆಂಬುದು ಸ್ಪಷ್ಟವಾಗಿತ್ತು.

‘ಪ್ರಯಾಣಿಕರನ್ನು ಚಾವಣಿಯ ಮೇಲೆ ಕೂರಿಸಬಾರದೆಂದು ನಾನು ನಿನಗೆ ಹೇಳಿದ್ದೆನಲ್ಲವೆ?’ ಎಂದು ಹುಡುಗಿ ಇಂಗ್ಲಿಷಿನಲ್ಲಿ ಕೂಗಿಕೊಂಡಳು. ‘ಅವರನ್ನೀಗ ಮೆಲ್ಲಗೆ ಇಳಿಸು.’

‘ಎಲ್ಲವೂ ಅಸ್ತವ್ಯಸ್ತವಾಗಿದೆ’ ಎಂದು ಆಬ್ಲಾನ್‌ಸ್ಕಿ ತನ್ನೊಳಗೆ ತಾನಂದುಕೊಂಡನು. ‘ಮಕ್ಕಳು ಮನಸ್ಸಿಗೆ ಬಂದಂತೆ ಓಡಾಡುತ್ತಿದ್ದಾರೆ, ಅವರನ್ನು ನೋಡಿಕೊಳ್ಳುವವರಿಲ್ಲ.’ ಅವನು ಬಾಗಿಲ ಬಳಿ ಹೋಗಿ, ಅವರನ್ನು ಕರೆದನು. ರೈಲಾಗಿ ಪರಿವರ್ತಿಸಿಕೊಂಡಿದ್ದ ಪೆಟ್ಟಿಗೆಯನ್ನವರು ಬಿಸಾಡಿ, ತಮ್ಮ ತಂದೆಯ ಬಳಿಗೆ ಓಡಿ ಹೋದರು.

ಅವನ ಅಚ್ಚುಮೆಚ್ಚಿನ ಸಣ್ಣ ಹುಡುಗಿ ಧೈರ್ಯವಾಗಿ ಅವನ ಬಳಿಗೋಡಿದಳು ; ತನ್ನ ತೋಳ್ಗಳೊಳಗೆ ಅವನ ಕೊರಳನ್ನು ಸೆರೆಹಿಡಿದಳು ; ಕಿಲಕಿಲನೆ ನಗುತ್ತ ತುಸು ಹೊತ್ತು ಅಲ್ಲಿಯೇ ಅವಳು ನೇತುಹಾಕಿಕೊಂಡಿದ್ದಳು. ಅವನ ಕೆನ್ನೆಗೂದಲಿಂದ ಹೊರ ಹೊಮ್ಮುತ್ತಿದ್ದ ಸುಪರಿಚಿತ ಸುಗಂಧ ಸುಖವನ್ನವಳು ಅನುಭವಿಸಿದಳು. ಅವನ ಮುಖವನ್ನು ಚುಂಬಿಸುವ ಸಲುವಾಗಿ ಬಾಗಿದಾಗ ಅವನ ಮುಖ ಕೆಂಪೇರಿತು ; ಕೋಮಲ ಕಾಂತಿ ಅವಳ ಮುಖದ ಮೇಲೆ ರಗರಗಿಸುತ್ತಿತ್ತು. ಅವನವಳನ್ನು ಹಿಡಿದು ನಿಲ್ಲಿಸದಿದ್ದರೆ, ಅವಳವನಿಂದ ಬಿಡಿಸಿಕೊಂಡು ಓಡಿಹೋಗುವುದರಲ್ಲಿದ್ದಳು.

‘ಅಮ್ಮ ಏನು ಮಾಡುತ್ತಿದ್ದಾರೆ?’ ಎಂದವನು ಅವಳ ಕೋಮಲ ಸೂಕ್ಷ್ಮಗ್ರೀವದ ಮೇಲೆ ಕೈಯಾಡಿಸುತ್ತ ಪ್ರಶ್ನಿಸಿದನು. ‘ಸುಪ್ರಭಾತ’ ಎಂದವನು ತನ್ನೆದುರಾಗಿ ಬಂದ ಚಿಕ್ಕ ಹುಡುಗನ ಕಡೆಗೆ ಮಂದಹಾಸ ಬೀರಿದನು.

ಆಬ್ಲಾನ್‌ಸ್ಕಿ ಯಾವಾಗಲೂ ಹುಡುಗನಿಗಿಂತ ಹೆಚ್ಚಾಗಿ ಹುಡುಗಿಯನ್ನು ಪ್ರೀತಿಸುತ್ತಿದ್ದನು. ಆದರೆ ತನ್ನ ಪಕ್ಷಪಾತವನ್ನು ಮುಚ್ಚಿಕೊಳ್ಳಲು ಅವನು ಯಾವಾಗಲೂ ಪ್ರಯತ್ನಿಸುತ್ತಿದ್ದನು. ಹುಡುಗನಿಗದು ಗೊತ್ತಾಗುತ್ತಿತ್ತು ; ತನ್ನ ತಂದೆಯ ಉದಾಸೀನ ಮಂದಹಾಸಕ್ಕೆ ಪ್ರತಿಕ್ರಿಯೆಯನ್ನವನು ವ್ಯಕ್ತಪಡಿಸಲಿಲ್ಲ.

‘ಅಮ್ಮನೆ? ಅವರು ಇದೆ ತಾನೆ ಹಾಸುಗೆಯಿಂದೆದ್ದರು’ ಎಂದು ಚಿಕ್ಕಹುಡುಗಿ ನುಡಿದಳು.

ಆಬ್ಲಾನ್‌ಸ್ಕಿ ನಿಡುಸುಯ್ದನು. ಮತ್ತೊಂದು ನಿದ್ರಾಹೀನ ರಾತ್ರಿಯನ್ನವಳು ಕಳೆದಿದ್ದಾಳೆಂದೇ ಅರ್ಥವಾಗುತ್ತದೆ ಎಂದವನಂದುಕೊಂಡನು.

'ಅವಳು ಲವಲವಿಕೆಯಿಂದಿದ್ದಾಳೆಯೆ ?'

ತನ್ನ ತಂದೆತಾಯಿಯರು ಜಗಳವಾಡಿದ್ದರೆಂಬ, ಆ ಕಾರಣದಿಂದಾಗಿ ತನ್ನ ತಾಯಿ ಲವಲವಿಕೆಯಿಂದಿರಲಿಲ್ಲವೆಂಬ, ತನ್ನ ತಂದೆಗದು ಗೊತ್ತಿದ್ದರೂ ಥಟ್ಟನೆ ಆ ಪ್ರಶ್ನೆಯನ್ನು ಕೇಳುವಲ್ಲಿ ಅವನು ನಟನೆಮಾಡುತ್ತಿರಬೇಕೆಂಬ ಸಂಗತಿ ಆ ಚಿಕ್ಕ ಹುಡುಗಿಗೆ ಗೊತ್ತಿತ್ತು. ತನ್ನ ತಂದೆಯ ವರ್ತನೆಯಿಂದ ಅವಳಿಗೆ ನಾಚಿಕೆಯಾಯಿತು. ತನಗದು ಅರ್ಥವಾಗಿರಲಾಗಿ ಅವನು ಸಹ ನಾಚಿಕೊಂಡನು.

'ನನಗದು ತಿಳಿಯದು. ಈ ದಿನ ಪಾಠ ಬೇಡ. ಕುಮಾರಿ ಹಲ್‌ಒಡನೆ ಅಜ್ಜಿಯ ಮನೆಗೆ ನಡೆದುಕೊಂಡು ಹೋಗಿ ಬರೋಣವೆಂದು ಅವರು ಹೇಳಿದರು' ಎಂದು ಮಗಳು ನುಡಿದಳು.

'ಹಾಗಾದರೆ, ಓಡಿ ಹೋಗು, ನನ್ನ ಮುದ್ದೆ. ಅಃ ಸ್ವಲ್ಪ ತಡಿ' ಎಂದವನು ನುಡಿದು, ಅವಳ ಪುಟ್ಟ ಮೃದು ಕೈಯನ್ನು ನೇವರಿಸಿ, ಅವಳನ್ನು ಮತ್ತೆ ತಡೆದು ನಿಲ್ಲಿಸಿದನು. ಹಿಂದಿನ ರಾತ್ರಿ ಮೇಲಂಗಿಯೊಳಗಿರಿಸಿದ್ದ ಸಿಹಿತಿಂಡಿಗಳ ಪೆಟ್ಟಿಗೆಯನ್ನು ಹೊರತೆಗೆದು, ಅವಳ ಮೆಚ್ಚುಗೆಯ ಚಾಕೊಲೆಟ್ ಮತ್ತು ಮಿಠಾಯಿಗಳನ್ನಾರಿಸಿ, ಅವಳಿಗೆ ಕೊಟ್ಟನು.

'ಗ್ರಿಷನಿಗೊ ?' ಎಂದವಳು ಚಾಕೊಲೆಟ್ ಹಿಡಿದುಕೊಂಡೆ ಕೇಳಿದಳು.

'ಓ, ಹೌದು' ಎಂದವನು ಅವಳ ಭುಜವನ್ನು ಮತ್ತೆ ನೇವರಿಸಿ, ಕೊರಳನ್ನೂ ಕೂದಲನ್ನೂ ಚುಂಬಿಸಿ, ಅವಳನ್ನು ಬಿಡುಗಡೆ ಮಾಡಿದನು.

'ವಾಹನ ಸಿದ್ಧವಾಗಿದೆ' ಎಂದು ಮಾತ್ವೆ ನುಡಿದನು. 'ಮಹಿಳೆಯೊಬ್ಬಳು ಏನನ್ನೊ ಕೇಳಲು ಬಂದಿದ್ದಾಳೆ' ಎಂದವನು ಮಾತು ಸೇರಿಸಿದನು.

'ಅವಳು ಬಹಳ ಹೊತ್ತಿನಿಂದ ಕಾದಿದ್ದಾಳೇನು ?' ಎಂದು ಅಬ್ಲಾನ್‌ಸ್ಕಿ ಪ್ರಶ್ನಿಸಿದನು.

'ಅರ್ಧಗಂಟೆಯಾಗಿರಬಹುದು.'

'ಜನ ಬಂದ ಕೂಡಲೇ ತಿಳಿಸಬೇಕೆಂದು ನಾನೆಷ್ಟು ಸಲ ನಿನಗೆ ಹೇಳಿಲ್ಲ !'

'ನೀವು ಶಾಂತಿಯಿಂದ ಕಾಫಿ ತೆಗೆದುಕೊಳ್ಳಬಾರದೇನು ?' ಎಂದು ಮಾತ್ವೆ ಸ್ನೇಹ ಪೂರ್ವಕವಾದ ಒರಟು ದನಿಯಲ್ಲಿ ನುಡಿದನು. ಆ ಮಾತಿನಿಂದಾಗಿ ದಣಿ ಕೋಪಿಸಿಕೊಳ್ಳುವುದಸಾಧ್ಯವಾಯಿತು.

'ಸರಿಸರಿ. ಅವಳನ್ನು ಬೇಗ ಒಳಗೆ ಕರೆ. ತನ್ನ ಕೆಲಸವನ್ನವಳು ಬೇಗ ಮುಗಿಸಲಿ' ಎಂದು ಅಬ್ಲಾನ್‌ಸ್ಕಿ ಕೋಪದಿಂದ ಹುಬ್ಬುಗಂಟಿಕ್ಕಿಕೊಂಡನು.

ಒಳಗೆ ಬಂದವಳು ದ್ವಿತೀಯ ಕಪ್ತಾನ ಕಲಿನಿನ್‌ನ ವಿಧವೆ. ಅವಳ ಬೇಡಿಕೆ ಮೂರ್ಖತನದ್ದಾಗಿದ್ದು, ಅದನ್ನು ತೃಪ್ತಿಪಡಿಸುವಂತಿರಲಿಲ್ಲ. ಆದರೆ ಅಬ್ಲಾನ್‌ಸ್ಕಿ ತನ್ನ ಅಭ್ಯಾಸಕ್ಕನುಗುಣವಾಗಿ ಅವಳಿಗೆ ಕುರ್ಚಿಯನ್ನು ತೋರಿಸಿ, ಮಧ್ಯೆ ಬಾಯಿಹಾಕದೆ ಲಕ್ಷ್ಯವಿಟ್ಟು ಅವಳ ಮಾತನ್ನು ಲಾಲಿಸಿದನು. ಅವಳು ಯಾರನ್ನು ನೋಡಬೇಕೆಂಬುದರ ಬಗ್ಗೆ ಸವಿವರವಾಗಿ ಸಲಹೆ ನೀಡಿದಳು. ಅವಳಿಗೆ ನೆರವಾಗಬಹುದಾದ ಅಧಿಕಾರಿಗೆ ನಿರರ್ಗಳವಾಗಿ ಓಡುತ್ತಿದ್ದ ಕೈಯಲ್ಲಿ ಅವಸರವಸರವಾಗಿ ಟಿಪ್ಪಣಿಯೊಂದನ್ನು ಗೀಚಿದನು.

ಅವಳು ಹೊರಗೆ ಹೋದನಂತರ, ಅಬ್ಲಾನ್‌ಸ್ಕಿ ತನ್ನ ಟೋಪಿಯನ್ನೆತ್ತಿಕೊಂಡು, ಏನಾದರೂ ಮರೆತಿದ್ದರೆ ಜ್ಞಾಪಿಸಿಕೊಳ್ಳುವ ಸಲುವಾಗಿ ತುಸು ತಡೆದನು. ಏನನ್ನು ಮರೆಯಬೇಕಾಗಿತ್ತೋ ಅದನ್ನಲ್ಲದೆ ಅವನು ಬೇರೇನನ್ನೂ ಮರೆತಿರಲಿಲ್ಲ. ಅವನು ಮರೆತದ್ದು ಮಡದಿ ಮಾತ್ರ.

'ಹಾ, ಹೌದು.' ಎಂದವನು ತನ್ನ ತಲೆಯನ್ನು ಬಗ್ಗಿಸಿದನು. ವ್ಯಾಕುಲದೃಷ್ಟಿ ಅವನ ಸುಂದರ ಮುಖವನ್ನು ಮುಸುಕಿತು. 'ಅವಳ ಬಳಿಗೆ ಹೋಗುವುದೋ ಬೇಡವೋ?' ಎಂದವನು ತನಗೆ ತಾನೇ ಪ್ರಶ್ನಿಸಿಕೊಂಡನು. ಅವಳ ಬಳಿಗೆ ಹೋಗುವುದರಿಂದ ಪ್ರಯೋಜನವಿಲ್ಲವೆಂದೂ, ಅದರಿಂದ ಅನಪೇಕ್ಷಿತವಾದದ್ದೆ ಸಂಭವಿಸಬಹುದೆಂದೂ, ಅವನ ಒಳದನಿ ನುಡಿಯಿತು. ಅವಳನ್ನು ಮತ್ತೆ ಲಾವಣ್ಯವತಿಯನ್ನಾಗಿ, ಆಕರ್ಷಣೀಯ ವ್ಯಕ್ತಿಯನ್ನಾಗಿ ಪರಿವರ್ತಿಸುವುದು ಸಾಧ್ಯವಿಲ್ಲದ್ದರಿಂದ ಅಥವಾ ತನಗೆ ವಾರ್ಧಕ್ಯ ಪ್ರಾಪ್ತಿಯಾಗಲಿ ಪ್ರೇಮಸಿರಸನವಾಗಲಿ ಅಸಾಧ್ಯವಾದದ್ದರಿಂದ ತಮ್ಮ ನಡುವಣ ಸಂಬಂಧಗಳ ಸುಧಾರಣೆ ಸಾಧ್ಯವಿಲ್ಲವೆಂದವನು ನಿರ್ಧರಿಸಿಕೊಂಡನು. ತಮ್ಮ ಭೇಟಿಯಿಂದ ಮಿಥ್ಯಾರೋಪಕಾಪಟ್ಯಗಳು ಮಾತ್ರ ಪ್ರಕಟಗೊಳ್ಳುವುದರಿಂದ, ಅವು ತನ್ನ ಸ್ವಭಾವಕ್ಕೆ ವಿರುದ್ಧವಾಗಿದ್ದುದರಿಂದ ಅವನು ಆ ಯೋಚನೆಯನ್ನು ಕ್ಷಣಕಾಲ ತೊರೆದನು.

'ಆದರೆ ಯಾವಾಗಲಾದರೂ ನಾನು ಭೇಟಿ ಮಾಡಲೇಬೇಕು. ಸಂಗತಿಗಳು ಇದೇ ರೀತಿ ಮುಂದುವರಿಯಲಾಗದು.' ಎಂದವನು ತನಗೆ ತಾನೇ ಧೈರ್ಯತುಂಬಿಕೊಳ್ಳಲು ಪ್ರಯತ್ನಿಸಿದನು. ಅವನು ಭುಜಗಳನ್ನು ನಿಗುರಿಸಿ, ಸಿಗರೇಟನ್ನು ಹಚ್ಚಿ, ಎರಡು ದಮ್ಮು ಎಳೆದು, ಮುತ್ತಿನ ಚಿಪ್ಪಿನ ತಟ್ಟೆಯಲ್ಲಿ ಬೂದಿಯನ್ನು ಚಿಮ್ಮಿ, ಮಂಕುಕವಿದ ದಿವಾನಖಾನೆಯ ಮೂಲಕ ಬೇಗ ಬೇಗ ಹೆಜ್ಜೆ ಹಾಕಿ, ತನ್ನ ಮಡದಿಯ ಶಯನ ಮಂದಿರದ ಬಾಗಿಲು ತೆರೆದನು.

೪

ದರ್‍ಯ ಅಲೆಕ್ಸಾಂಡ್ರೋವ್ನ ಮೇಲಂಗಿ ಧರಿಸಿದ್ದಳು. ಹಿಂದೊಮ್ಮೆ ದಟ್ಟವಾಗಿ ಬೆಳೆದಿದ್ದ ಅವಳ ಚೆಂಗೂದಲೀಗ ತೆಳ್ಳಗಾಗಿದ್ದು, ಕೂದಲು ಸೂಜಿಗಳಿಂದ ಒಟ್ಟಾಗಿ ಸೇರಿಸಿ, ಹೆಕ್ಕತ್ತಿನ ಮೇಲೆ ಕಟ್ಟಲಾಗಿತ್ತು. ಅವಳ ಜೋಲು ಮೋರೆಯ ಕ್ಷೀಣತೆಯಿಂದಾಗಿ ಅವಳ ಚಕಿತ ನೇತ್ರಗಳು ಎದ್ದು ಕಾಣುತ್ತಿದ್ದುವು. ಕೋಣೆಯಲ್ಲೆಲ್ಲ ಹರಡಿದ್ದ ವಸ್ತುಗಳ ರಾಶಿಯ ನಡುವೆ, ತೆರೆದ ಮೇಜಿನ ಮುಂದೆ ಏನನ್ನೊ ತೆಗೆದುಕೊಳ್ಳುವ ಸಲುವಾಗಿ ಅವಳು ನಿಂತಿದ್ದಳು. ತನ್ನ ಪತಿಯ ಹೆಜ್ಜೆ ಸದ್ದು ಕೇಳಿಸಿಕೊಂಡ ಅವಳು ಕೆಲಸ ನಿಲ್ಲಿಸಿ, ಬಾಗಿಲ ಕಡೆಗೆ ದುರುಗುಟ್ಟಿಕೊಂಡು ನೋಡುತ್ತಿದ್ದಳು; ತನ್ನ ಚಹರೆಯಲ್ಲಿ ತಿರಸ್ಕಾರಯುಕ್ತವೂ ಕ್ರೂರವೂ ಆದ ಭಾವವನ್ನು ಪ್ರದರ್ಶಿಸಲು ಅವಳು ಪ್ರಯತ್ನಿಸುತ್ತಿದ್ದಳು. ಅವನ ಬಗ್ಗೆ ಹಾಗೂ ಅವನ ಸಂದರ್ಶನದ ಬಗ್ಗೆ ತಾನು ಹೆದರಿದ್ದುದಾಗಿ ಅವಳಿಗರಿವಾಗಿತ್ತು. ಕಳೆದ ಮೂರು ದಿನಗಳಲ್ಲಿ ಹಲವು ಸಲ ಅವಳೇನು ಮಾಡಲು ಪ್ರಯತ್ನಿಸಿದ್ದಳೋ ಅದನ್ನೇ ಮತ್ತೆ ಮಾಡಲು ಅವಳು ಪ್ರಯತ್ನಿಸುತ್ತಿದ್ದಳು. ತನ್ನ ಮತ್ತು ಮಕ್ಕಳ ಸಾಮಾನುಗಳನ್ನಾರಿಸಿಕೊಂಡು, ತನ್ನ ತವರೂರಿಗೆ

ಹೋಗುವುದೇ ಅವಳ ಇರಾದೆಯಾಗಿತ್ತು. ಆದರೆ ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಶಕ್ತಿ ಅವಳಿಗಿರಲಿಲ್ಲ. ಪರಿಸ್ಥಿತಿ ಹಾಗೆಯೇ ಇರಲಾರದೆಂದೂ, ಅವನ ಮೇಲೆ ಕ್ರಮ ಕೈಗೊಂಡು ಶಿಕ್ಷಿಸಬೇಕೆಂದೂ, ಅವನನ್ನು ಅವಮಾನಗೊಳಿಸಬೇಕೆಂದೂ, ಅವನಿಂದ ಉಂಟಾಗಿದ್ದ ಯಾತನೆಗೆ ಪ್ರತಿಯಾಗಿ ಅಲ್ಪಸ್ವಲ್ಪವಾದರೂ ಸೇಡು ತೀರಿಸಿಕೊಳ್ಳ ಬೇಕೆಂದೂ ಅವಳು ಪ್ರತಿಯೊಂದು ಸಲವೂ ತನ್ನಷ್ಟಕ್ಕೆ ಹೇಳಿಕೊಳ್ಳುತ್ತಿದ್ದಳು. ಅವನನ್ನು ತೊರೆದು ಹೋಗತಕ್ಕದ್ದೆಂದು ಅವಳಿನ್ನೂ ಮನದಲ್ಲೆಣಿಸಿಕೊಂಡಿದ್ದಳು; ಆದರೆ ಅದು ಸಾಧ್ಯವಿಲ್ಲವೆಂದು ಅವಳ ಅಂತರಂಗ ಹೇಳುತ್ತಿತ್ತು. ಅವನನ್ನು ತನ್ನ ಗಂಡನೆಂದು ಗೌರವಿಸುವ ಮತ್ತು ಪ್ರೀತಿಸುವ ಅಭ್ಯಾಸದಿಂದ ಪಾರಾಗುವುದಂತು ಅವಳಿಗೆ ಸಾಧ್ಯವಿರಲಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ತನ್ನ ಮನೆಯಲ್ಲಿಯೇ ಐದು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಕಷ್ಟವಾಗಿದ್ದರೆ, ತನ್ನ ತವರೂರಿನಲ್ಲಿ ಮತ್ತಷ್ಟು ಕಷ್ಟವಾಗುತ್ತದೆಂದು ಅವಳು ಯೋಚಿಸಿದಳು. ಈ ಮೂರು ದಿನಗಳಲ್ಲಿ ಎಲ್ಲರಿಗಿಂತ ಕಿರಿಯವನು ತಂಗಳು ಮಾಂಸದ ಸಾರನ್ನು ಸೇವಿಸಲಾಗಿ ಕಾಯಿಲೆ ಬಿದ್ದಿದ್ದನು; ಹಿಂದಿನ ರಾತ್ರಿ ಉಳಿದವರ ಹೊಟ್ಟೆಗೆ ಒಂದು ತುಣುಕು ಸಹ ಹೋಗಿರಲಿಲ್ಲ. ಆದ್ದರಿಂದ ಹೊರಗೆ ಹೊರಡುವುದೇ ಅಸಾಧ್ಯವೆಂದವಳು ಬಗೆದಿದ್ದಳು; ಆದರೂ ಅಲ್ಲಿಂದ ಹೊರಟುಹೋಗುವವಳಂತೆ ನಟಿಸುತ್ತ, ಸಾಮಾನುಗಳನ್ನು ಆರಿಸಿಕೊಳ್ಳುತ್ತ ತನ್ನನ್ನು ತಾನೇ ವಂಚನೆಗೆ ಗುರಿಪಡಿಸಿಕೊಳ್ಳುತ್ತಿದ್ದಳು.

ಗಂಡ ಕಣ್ಣಿಗೆ ಬಿದ್ದಕೂಡಲೇ ಅವಳು ಮತ್ತೆ ಖಾನೆಯಲ್ಲಿ ಹುಡುಕಾಡ ತೊಡಗಿದಳು. ಅವನು ಪಕ್ಕಕ್ಕೆ ಬಂದಾಗ ಮಾತ್ರ ತನ್ನ ಕಣ್ಣು ಹೊರಳಿಸಿದಳು. ಧೈರ್ಯ ದೃಢತೆಗಳನ್ನು ಪ್ರದರ್ಶಿಸಲು ಕಷ್ಟದಿಂದ ಪ್ರಯತ್ನ ನಡೆಸಿದ್ದ ಅವಳ ಮುಖದ ಮೇಲೆ ಯಾತನೆ ವಿಹ್ವಲತೆಗಳು ಮಾತ್ರ ತಾಂಡವವಾಡುತ್ತಿದ್ದುವು.

'ಡಾಲಿ' ಎಂದವನು ಮೃದು ದೀನ ಸ್ವರದಲ್ಲಿ ಕರೆದನು. ಅವನ ಮುಂಡೆ ವಕ್ಷದ ಕಡೆಗೆ ವಾಲಿಕೊಂಡಿತ್ತು. ಅವನು ತುಂಬ ತಗ್ಗಿದವನಂತೆ, ವಿನೀತಗೊಂಡವನಂತೆ ಕಾಣಿಸಿಕೊಳ್ಳಲು ಪ್ರಯತ್ನಿಸಿದನು; ಆದರೂ ಅವನ ಮುಖದಲ್ಲಿ ಹುರುಪು ಹುಮ್ಮಸು ಗಳು ಅಭಿವ್ಯಕ್ತಗೊಂಡಿದ್ದುವು.

ಉತ್ಸಾಹ ತೇಜಸ್ಸುಗಳು ತುಂಬಿ ತುಳುಕುತ್ತಿದ್ದ ಅವನ ವ್ಯಕ್ತಿತ್ವವನ್ನು ಬಿರುಬಿನ ಕುಡಿನೋಟದಲ್ಲಿ ಆಪಾದಮಸ್ತಕವಾಗಿ ಅವಳೊಮ್ಮೆ ತೂಗಿ ನೋಡಿದಳು. 'ಹೌದು, ಅವರು ಸುಖವಾಗಿದ್ದಾರೆ, ತೃಪ್ತರಾಗಿದ್ದಾರೆ ನಿಜ. ಆದರೆ ನಾನೊ....?' ಎಂದವಳು ಆಲೋಚಿಸಿದಳು. 'ಪ್ರತಿಯೊಬ್ಬರೂ ಪ್ರೀತಿಸುವ, ಪ್ರಶಂಸಿಸುವ ಅಸಹ್ಯಕರವಾದ ಅವರ ಸತ್‌ಸ್ವಭಾವವೊ? ಅದನ್ನು ಕಂಡರಂತು ನನಗಾಗದು' ಎಂದವಳು ಬಗೆದಳು. ಅವಳ ಬಾಯಿ ಸೆಡೆತುಕೊಂಡಿತು; ಅವಳ ಕಳಾಹೀನ ಅಂಜುಮೋರೆಯ ಬಲಪಕ್ಕಕ್ಕೆ ಕೆನ್ನೆಯ ಮಾಂಸಖಂಡಗಳು ತಿರುಚಿಕೊಂಡುವು.

'ನಿಮಗೇನುಬೇಕು?' ಎಂದವಳು ತನ್ನದಲ್ಲದ ಗಂಭೀರ ಧ್ವನಿಯಲ್ಲಿ ಬೇಗ ಬೇಗ ಕೇಳಿದಳು.

'ಡಾಲಿ' ಎಂದು ಪುನರಾವರ್ತಿಸುವಾಗ ಅವನ ದನಿಯಲ್ಲಿ ನಡುಕವಿತ್ತು. 'ಈ ದಿನ ಅನ್ನಾ ಬರುತ್ತಿದ್ದಾಳೆ.'

'ಅದರಿಂದ ನನಗೇನಾಗಬೇಕಾಗಿದೆ? ನಾನವಳನ್ನು ಬರಮಾಡಿಕೊಳ್ಳಲಾರೆ' ಎಂದವಳು ಗಟ್ಟಿಯಾಗಿ ನುಡಿದಳು.

'ಬರಮಾಡಿಕೊಳ್ಳಬೇಕು, ಡಾಲಿ'

'ಹೊರಡಿ, ಇಲ್ಲಿಂದ ಹೊರಡಿ. ಇಲ್ಲಿ ನಿಲ್ಲಬೇಡಿ' ಎಂದವಳು ಅವನ ಕಡೆಗೆ ನೋಡದೆಯೆ ಚೀತ್ಕರಿಸಿದಳು. ಆ ಚೀತ್ಕಾರದಲ್ಲಿ ದೈಹಿಕಯಾತನೆ ಸಂಕಟವಿದ್ದಂತೆ ತೋರುತ್ತಿತ್ತು.

ತನ್ನ ಹೆಂಡತಿಯ ವಿಷಯ ಆಲೋಚಿಸಿದಾಗ ಅವನು ಉದ್ರೇಕಗೊಳ್ಳುತ್ತಿರಲಿಲ್ಲ; ಮಾತ್ವೆ ಹೇಳಿದಂತೆ ಅವಳು ದಾರಿಗೆ ಬರುತ್ತಾಳೆಂದು ಅವನು ಭರವಸೆಯಿಟ್ಟುಕೊಂಡಿದ್ದನು. ಆದ್ದರಿಂದವನು ಶಾಂತಿಯಿಂದ ಪತ್ರಿಕೆ ಓದುತ್ತಿದ್ದನು, ಕಾಫಿ ಗುಟುಕರಿಸುತ್ತಿದ್ದನು. ಆದರವನು ಅವಳ ಯಾತನೆಯ ಹಾಗೂ ಸಂಕಟದ ಮುಖದ ಕಡೆಗೆ ನೋಡಿದಾಗ, ಅದೃಷ್ಟಕ್ಕೆ ಶರಣಾದ, ನಿರಾಶೆಗೆ ಸೆರೆಯಾದ ಅವಳ ಧ್ವನಿಯ ನಾದವನ್ನಾಲಿಸಿದಾಗ, ಅವನ ಉಸಿರು ಹಿಡಿಯುತ್ತಿತ್ತು, ಅವನ ಗಂಟಲಲ್ಲಿ ಏನೊ ಸಿಕ್ಕಿಕೊಂಡಂತಾಗುತ್ತಿತ್ತು ; ಅವನ ಕಣ್ಣು ನೀರಿನಿಂದ ಹೊಳೆಯುತ್ತಿದ್ದುವು.

'ಅಯ್ಯೋ ದೇವರೆ, ನಾನೇನು ಮಾಡಿದ್ದೇನೆ! ದೇವರ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಿನಗೆ ಗೊತ್ತಿದೆ....' ಅವನು ಮಾತು ಮುಂದುವರಿಸಲಾಗಲಿಲ್ಲ; ಗದ್ಗದದಿಂದ ಅವನ ಉಸಿರುಕಟ್ಟಿತು.

ಅವಳು ಖಾನೆಯ ಕದವನ್ನು ದಡಾರನೆ ಮುಚ್ಚಿದಳು; ಅವನ ಕಡೆಗೆ ಬಿರುನೋಟ ಬೀರಿದಳು.

'ನಾನೇನು ಹೇಳಬಲ್ಲೆ, ಡಾಲಿ? ಒಂದೇ ಒಂದು ವಿಷಯ: ನನ್ನನ್ನು ಕ್ಷಮಿಸು, ನನ್ನನ್ನು ಕ್ಷಮಿಸು. ನಮ್ಮ ಒಂಬತ್ತು ವರ್ಷಗಳ ಬದುಕು ಈ ಕೆಲವು ನಿಮಿಷಗಳ ಬದುಕಿಗಿಂತ ಹೆಚ್ಚು ಬೆಲೆಯುಳ್ಳದ್ದಾಗದೆ?....'

ಆವಳು ಅಧೋನೇತ್ರೆಯಾಗಿ ಅವನ ಮಾತುಗಳ ಕಡೆಗೆ ಲಕ್ಷ್ಯಹರಿಸಿದಳು. ಅವನಲ್ಲಿ ತನಗೆ ನಂಬುಗೆಯುಂಟಾಗುವಂಥ ಮಾತುಗಳನ್ನು ಅವನಿಂದ ಯಾಚಿಸುವ ರೀತಿಯಲ್ಲಿ ಅವಳು ಅವನ ಮಾತುಗಳಿಗಾಗಿ ಕಾದುಕೊಂಡಿದ್ದಳು.

'....ಕ್ಷಣಿಕ ಮೋಹ' ಎಂಬ ಮಾತು ಅವನ ಬಾಯಿಂದ ಹೊರಬೀಳುತ್ತಿರುವಾಗ ಅವಳು ಮತ್ತೆ ದೈಹಿಕಯಾತನೆಯಿಂದಲೆಂಬಂತೆ ಅವಳು ತನ್ನ ತುಟಿಗಳನ್ನು ಬಿಗಿಯಾಗಿ ಅದುಮಿಕೊಂಡಳು ; ಅವಳ ಬಲಗೆನ್ನೆಯ ಮಾಂಸಖಂಡಗಳು ಮತ್ತೆ ತಿರುಚಿಕೊಂಡುವು.

'ಹೊರಡಿ, ಇಲ್ಲಿಂದ ಹೊರಡಿ' ಎಂದವಳು ಎಂದಿಗಿಂತ ಗಟ್ಟಿಯಾಗಿ ಚೀತ್ಕರಿಸಿದಳು. 'ನಿಮ್ಮ ರಾಗೋದ್ರೇಕಗಳ ಬಗ್ಗೆ, ನಿಮ್ಮ ಮೃಗೀಯತ್ವದ ಬಗ್ಗೆ ಮತ್ತೆ ಮಾತೆತ್ತಬೇಡಿ.'

ಹೊರಗೆ ಹೋಗುವ ಸಲುವಾಗಿ ಅವಳು ಮತ್ತೊಂದು ಕಡೆಗೆ ತಿರುಗಿಕೊಂಡಳು ; ಆದರೆ ಡೋಲಾಯಮಾನಳಾಗಿ ಆಸರೆಗಾಗಿ ಕುರ್ಚಿಯ ಬೆನ್ನನ್ನು ಹಿಡಿದುಕೊಂಡಳು. ಅವನ ಮುಖ ಊದಿಕೊಂಡಿತು, ತುಟಿ ಬಾತುಕೊಂಡುವು, ಕಣ್ಣಲ್ಲಿ ನೀರು ತುಳುಕಾಡಿದುವು.

'ಡಾಲಿ,'ಎಂದವನು ಗದ್ಗದಧ್ವನಿಯಲ್ಲಿ 'ಗೊಣಗಿದನು. ದೇವರ ಹೆಸರಿನಲ್ಲಾದರೂ ಈ ಮಕ್ಕಳ ಬಗ್ಗೆ ಯೋಚಿಸು. ಅವರು ತಪ್ಪಿತಸ್ಥರಲ್ಲ. ನಾನು ತಪ್ಪಿತಸ್ಥ. ನನ್ನನ್ನು ಶಿಕ್ಷಿಸು. ನನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಂತೆ ನನಗೆ ಆಜ್ಞೆ ಮಾಡು. ನನ್ನ ಶಕ್ತಿಮೀರಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ನಾನು ಸಿದ್ಧನಾಗಿದ್ದೇನೆ. ನಾನು ಅಪರಾಧವೆಸಗಿದ್ದೇನೆ. ನನ್ನ ಅಪರಾಧವನ್ನು ವರ್ಣಿಸುವಷ್ಟು ಪದಸಾಮಗ್ರಿ ನನ್ನಲ್ಲಿಲ್ಲ. ಆದರೂ ನನ್ನನ್ನು ಕ್ಷಮಿಸಲಾರೆಯಾ, ಡಾಲಿ?'

ಅವಳು ಕುಳಿತಳು. ಅವಳ ಉಸಿರಾಟ ಅವನಿಗೆ ಕೇಳಿಸುತ್ತಿತ್ತು. ಅವಳಿಗಾಗಿ ಅವನನುಭವಿಸಿದ ಸಂಕಟ ಅವರ್ಣನೀಯವಾಗಿತ್ತು. ಅವಳು ಮಾತಾಡಲು ಹಲವು ಸಲ ಪ್ರಯತ್ನಿಸಿದಳು; ಆದರೆ ಸಾಧ್ಯವಾಗಲಿಲ್ಲ. ಅವನು ಕಾದನು.

'ಮಕ್ಕಳೊಡನೆ ಆಟವಾಡಬೇಕೆನ್ನಿಸಿದಾಗ ಮಾತ್ರ ನೀವವರನ್ನು ನೆನೆಸಿಕೊಳ್ಳು ತ್ತೀರಿ. ಆದರೆ ನನಗೆ ಯಾವಾಗಲೂ ಅವರದೇ ಚಿಂತೆ. ಈಗವರು ಸಂಪೂರ್ಣವಾಗಿ ಕೆಟ್ಟುಹೋಗಿದ್ದಾರೆ' ಎಂದವಳು ನುಡಿದಳು. ಈ ಮೂರು ದಿನಗಳಲ್ಲವಳು ಪುನರಾ ವರ್ತನೆ ಮಾಡುತ್ತಿದ್ದ ವಾಕ್ಯಗಳಲ್ಲಿ ಇದೂ ಒಂದು.

ಅವನೊಡನೆ ಮಾತಾಡುತ್ತಿದ್ದಂತೆ ಅವಳ ದನಿ ಮೃದುವಾಯಿತು. ಅವನವಳ ಕಡೆಗೆ ಕೃತಜ್ಞತೆಯ ದೃಷ್ಟಿ ಬೀರಿದನು. ಅವಳ ಕೈಹಿಡಿದುಕೊಳ್ಳಲು ಅವನು ಪ್ರಯತ್ನಿಸಿದನು; ಆದರೆ ಅವಳು ಜುಗುಪ್ಸೆಯಿಂದ ಹಿಂದಕ್ಕೆಳೆದುಕೊಂಡಳು.

'ನನಗಿರುವುದು ಮಕ್ಕಳದೇ ಚಿಂತೆ. ಅವರ ಸಂರಕ್ಷಣೆಗಾಗಿ ಎಂಥ ತ್ಯಾಗಕ್ಕಾದರೂ ನಾನು ಸಿದ್ಧ. ಆದರೆ ಅವರನ್ನು ರಕ್ಷಿಸುವ ಉಪಾಯವೇ ನನಗೆ ತಿಳಿದಿಲ್ಲ. ಅವರನ್ನು ತಂದೆಯಿಂದ ಅಗಚುವುದೆ, ಅಥವಾ ಕೆಟ್ಟ ಚಾಳಿಯ ತಂದೆಯ ಬಳಿ ಬಿಡುವುದೆ? ಹೌದು; ಕೆಟ್ಟಚಾಳಿಯುವರೆಂಬುದರಲ್ಲಿ ಸಂಶಯವಿಲ್ಲ. ನೀವೇ ಹೇಳಿ....ಇಷ್ಟೆಲ್ಲ ಆದ ಮೇಲೆ ನಾವಿಬ್ಬರೂ ಒಟ್ಟಿಗಿರುವುದು ಸಾಧ್ಯವೆ? ಸಾಧ್ಯವೆ, ಹೇಳಿ' ಎಂದವಳು ದನಿ ಯೇರಿಸಿ ಪುನರುಚ್ಚರಿಸಿದಳು. 'ನನ್ನ ಗಂಡ, ನನ್ನ ಮಕ್ಕಳ ತಂದೆ ಆ ಮಕ್ಕಳ ಉಪಾಧ್ಯಾಯಿನಿಯೊಡನೆ ಪ್ರಣಯಚೇಷ್ಟೆಯಲ್ಲಿ ತೊಡಗಿರುವಾಗ ಸಾಧ್ಯವೆ?'

'ಆದರೆ ಏನುಮಾಡುವುದಿದೆ? ಏನುಮಾಡುವುದಿದೆ?' ಎಂದವನು ಕರುಣಾಜನಕ ಧ್ವನಿಯಲ್ಲಿ ಪ್ರಶ್ನಿಸುವಾಗ ತನ್ನ ಮಾತೇ ಅವನಿಗರ್ಥವಾಗುತ್ತಿರಲಿಲ್ಲ; ಅವನ ಶಿರಸ್ಸು ಮಾತ್ರ ಮತ್ತಷ್ಟು ಕೆಳಗೆ ಬಾಗುತ್ತಿತ್ತು.

'ನಿಮ್ಮನ್ನು ನೋಡಿದರೆ ಅಸಹ್ಯವಾಗುತ್ತದೆ, ವಾಕರಿಕೆ ಬರುತ್ತದೆ' ಎಂದವಳು ಕೋಪಾವಿಷ್ಟಳಾಗಿ ಕೂಗಿಕೊಂಡಳು. 'ಮೊಸಳೆ ಕಣ್ಣೀರೇಕೆ ಸುರಿಸುತ್ತೀರಿ? ನೀವೆಂದೂ ನನ್ನನ್ನು ಪ್ರೀತಿಸಿದ್ದಿಲ್ಲ. ನಿಮಗೆ ಹೃದಯವಿಲ್ಲ; ಆತ್ಮದ ಉದಾತ್ತತೆಯೂ ಇಲ್ಲ! ನನ್ನ ಪಾಲಿಗೆ ನೀವೊಂದು ಕೀಳು ಪ್ರಾಣಿ, ಅಪರಿಚಿತ ವ್ಯಕ್ತಿ—ಹೌದು, ತೀರ ಅಪರಿಚಿತ ವ್ಯಕ್ತಿ!' ದ್ವೇಷ ಯಾತನೆಗಳಿಂದವಳು 'ಪರಕೀಯ' ಎಂಬ ಪದವನ್ನುಚ್ಚರಿಸಿದಳು. ಆ ಪದ ಅವಳಿಗೆ ಬಹು ಭಯಂಕರವಾಗಿ ತೋರಿತು.

ಅವನು ಅವಳ ಕಡೆಗೆ ನೋಡಿದನು. ಅವಳ ಮುಖದ ಮೇಲೆ ಅಭಿವ್ಯಕ್ತಿ ದಂತಿದ್ದ ದ್ವೇಷ ಅವನನ್ನು ಕಂಪನಕ್ಕೀಡುಮಾಡಿ, ಅಚ್ಚರಿಗೊಳಿಸಿತು. ಅವಳ ಬಗೆಗಿನ

ಮರುಕವೆ ಅವಳ ಸಿಟ್ಟಿಗೆ ಕಾರಣವಾಗಿತ್ತೆನ್ನುವುದನ್ನವನು ಅರಿಯಲಿಲ್ಲ. ಅವನು ಶನಗಾಗಿ ವ್ಯಾಕುಲಗೊಂಡಿದ್ದರೂ, ತನ್ನನ್ನವನು ಪ್ರೀತಿಸುತ್ತಿರಲಿಲ್ಲವೆಂದವಳು ಮನ ದಟ್ಟು ಮಾಡಿಕೊಂಡಿದ್ದಳು. 'ಇಲ್ಲ, ಅವಳಿಂದೂ ನನ್ನನ್ನು ಕ್ಷಮಿಸಳು; ಅವಳು ನನ್ನನ್ನು ದ್ವೇಷಿಸುತ್ತಾಳೆ' ಎಂದವನು ಮನಸ್ಸಿನಲ್ಲಂದುಕೊಂಡನು.

'ಇದು ಭಯಂಕರವಾಗಿದೆ, ಭಯಂಕರವಾಗಿದೆ' ಎಂದವನು ನುಡಿದನು.

ಅದೇ ಸಮಯದಲ್ಲಿ ಪಕ್ಕದ ಕೋಣೆಯಲ್ಲಿದ್ದ ಮಗುವೊಂದು ರೋದಿಸಲಾರಂಭಿಸಿತು. ಪ್ರಾಯಶಃ ಅದು ಮಂಚದಿಂದ ಕೆಳಗುರುಳಿಕೊಂಡಿತ್ತು. ಆ ರೋದನವನ್ನು ಆಲಿಸಿದ ಡಾಲಿಯ ಮುಖ ಕೂಡಲೇ ಮೃದುವಾಯಿತು. ತಾನೆಲ್ಲಿದ್ದೆನೆಂಬುದನ್ನೂ, ಏನು ಮಾಡಬೇಕೆಂಬುದನ್ನೂ ಅರ್ಥಮಾಡಿಕೊಳ್ಳಲು ಅವಳಿಗೆ ಕೆಲವು ಕ್ಷಣ ಹಿಡಿದುವು. ಅನಂತರ ಅವಳು ಸರಸರನೆ ಮೇಲೆದ್ದು ಬಾಗಿಲ ಬಳಿಗೆ ನಡೆದಳು.

'ಏನೇ ಆಗಲಿ, ಅವಳು ನನ್ನ ಮಗುವನ್ನು ಪ್ರೀತಿಸುತ್ತಾಳೆ' ಎಂದವನು ರೋದನ ಕೇಳಿದ ಕೂಡಲೆ ಅವಳ ಮುಖದ ಮೇಲಾದ ಬದಲಾವಣೆಯನ್ನು ಗಮನಿಸುತ್ತ ಆಲೋಚಿಸಿದನು. 'ನನ್ನ ಮಗು: ಹೀಗಿರುವಾಗ ಅವಳು ನನ್ನನ್ನು ದ್ವೇಷಿಸುವುದಾದರೂ ಹೇಗೆ?'

'ಡಾಲಿ, ಒಂದೇ ಒಂದು ಮಾತು' ಎಂದವನು ಅವಳನ್ನು ಹಿಂಬಾಲಿಸಿದನು.

'ನೀವೇನಾದರೂ ನನ್ನ ಹಿಂದೆ ಬಂದದ್ದಾದರೆ, ಆಳುಗಳನ್ನೂ ಮಕ್ಕಳನ್ನೂ ಕರೆಯುತ್ತೇನೆ. ನೀವು ನೀಚರೆಂಬುದು ಅವರಿಗೂ ತಿಳಿಯಲಿ! ಈ ದಿನ ನಾನು ಮನೆ ತೊರೆಯುತ್ತೇನೆ. ನೀವಿಲ್ಲಿ ನಿಮ್ಮ ನಲ್ಲೆಯೊಡನೆ ವಾಸಿಸಬಹುದು.'

ಅವಳು ಹೊರಗೆ ಹೋಗಿ, ಹಿಂದೆಯೇ ಕದವನ್ನು ದಡಾರನೆ ಮುಚ್ಚಿದಳು.

ಅಬ್ಲಾನ್‌ಸ್ಕಿ ನಿಡುಸುಯ್ದನು; ಮುಖವೊರಸಿಕೊಂಡನು, ಮಂದ ಮಂದ ಹೆಜ್ಜೆಯಲ್ಲಿ ಬಾಗಿಲ ಕಡೆಗೆ ನಡೆದನು. 'ಎಲ್ಲವೂ ಸರಿಹೋಗುತ್ತದೆಂದು ಮಾತ್ವೆ ಹೇಳುತ್ತಾನೆ. ಅದು ಹೇಗೆ ಸಾಧ್ಯ? ಅದರ ಸಾಧ್ಯತೆಯ ಸೂಚನೆ ನನಗೆ ಕಾಣುವುದಿಲ್ಲ. ಓ, ಅಯ್ಯೋ! ಅದೆಷ್ಟು ಭೀಕರವಾಗಿದೆ! ಅದೆಷ್ಟು ಅಸಹ್ಯವಾಗಿ ಅವಳು ಚೀತ್ಕರಿಸಿದಳು' ಎಂದವನು ಅವಳ ಚೀತ್ಕಾರಗಳನ್ನೂ, ಅವಳು ಬಳಸಿದ ನೀಚ, ನಲ್ಲೆ ಎಂಬ ಪದಗಳನ್ನೂ ಜ್ಞಾಪಿಸಿಕೊಂಡನು. 'ಅಯ್ಯೋ ದೇವರೆ! ಸೇವಕಿಯರು ಕೇಳಿಸಿಕೊಂಡಿರಬೇಕು. ಅಸಹ್ಯ ರೀತಿಯ ಒರಟುತನ! ಅಸಭ್ಯತನ!' ಅವನಲ್ಲಿ ತುಸು ಹೊತ್ತು ನಿಂತನು, ಕಣ್ಣೊರಸಿಕೊಂಡನು, ನಿಟ್ಟುಸಿರೆಳೆದನು; ಭುಜಗಳನ್ನೆಗರಿಸಿದನು; ಹೊರಗೆ ಹೊರಟನು.

ಅಂದು ಶುಕ್ರವಾರ. ಜರ್ಮನಿಯ ಗಡಿಯಾರಕಾರ ಭೋಜನಾಲಯಲ್ಲಿದ್ದ ಗಡಿಯಾರದ ಕೀಲು ತಿರುಗಿಸುತ್ತಿದ್ದನು. ಬೋಳುದಲೆಯ, ಕಾಲನಿಷ್ಠೆಯ ಗಡಿಯಾರಕಾರ ಗಡಿಯಾರಗಳ ಕೀಲು ತಿರುಗಿಸಲು ಸಾಧ್ಯವಾಗುವಂತೆ ಆಯುಸ್ಸಿರುವ ತನಕ ಅವನ ಜೀವನದ ಗಡಿಯಾರಕ್ಕೆ ಕೀಲು ಕೊಟ್ಟಿರಬೇಕೆಂದು ಅವನನ್ನು ಕುರಿತು ಹಾರಿಸಿದ್ದ ಹಾಸ್ಯದ ಚಟಾಕಿ ನೆನಪಾಗಿ ಅಬ್ಲಾನ್‌ಸ್ಕಿ ಮುಗುಳುನಗೆ ಸೂಸಿದನು. ಹಾಸ್ಯವೆಂದರೆ ಅಬ್ಲಾನ್‌ಸ್ಕಿಗೆ ಖುಷಿ. 'ಪ್ರಾಯಶಃ ಅಂತಿಮವಾಗಿ ಎಲ್ಲವೂ ಸರಿಹೋಗುತ್ತದೆ. ಸರಿ

ಹೋಗುತ್ತದೆ? ಎನ್ನುವುದೇ ಸರಿಯಾದ ಮಾತು. ನಾನದನ್ನು ಹುಡುಗರ ಮುಂದೆ ಪುನರುಚ್ಚರಿಸಬೇಕು.'

ಮಾತ್ವೆಯನ್ನವನು ಕರೆದನು. ಮಾತ್ವೆ ಪ್ರತ್ಯಕ್ಷನಾದಾಗ 'ನನ್ನ ತಂಗಿ ಕೂರು ಕೋಣೆಯಲ್ಲಿ ಮಲಗಲು ವ್ಯವಸ್ಥೆ ಮಾಡುವಂತೆ ಮೆತ್ರ್ರೋನಳಿಗೆ ತಿಳಿಸು' ಎಂದು ಹೇಳಿದನು.

'ಅಪ್ಪಣೆ, ಒಡೆಯ.'

ಆಬ್ಲಾನ್ಸ್ಕಿ ಕೋಟು ಧರಿಸಿಕೊಂಡು ಮುಖಮಂಟಪದ ಕಡೆಗೆ ಹೋದನು.

'ನೀವು ಮನೆಯುಲ್ಲಿ ಊಟಮಾಡುವುದಿಲ್ಲವೆಂದು ತೋರುತ್ತದೆ?' ಎಂದು ಮಾತ್ವೆ ಅವನನ್ನು ಬೀಳ್ಕೊಟ್ಟನು.

'ನೋಡೋಣ. ಇಗೋ ಇದು ಖರ್ಚಿಗಾಗಿ' ಎಂದವನು ತನ್ನ ಕಿಸೆಪುಸ್ತಕದಿಂದ ಹತ್ತು ರೂಬಲ್ ತೆಗೆಯುತ್ತ ನುಡಿದನು. 'ಇದು ಸಾಕುತಾನೆ?'

'ಸಾಕೊ ಬೇಕೊ, ಅಷ್ಟರಿಂದಲೇ ಮುಗಿಸಬೇಕು' ಎಂದು ಮಾತ್ವೆ ವಾಹನದ ಬಾಗಿಲನ್ನು ಮುಚ್ಚಿ, ಮುಖಮಂಟಪದ ಕಡೆಗೆ ಹೊರಳಿದನು.

ಅಷ್ಟರಲ್ಲಿ ಡಾಲಿ ಮಗುವನ್ನು ಮೌನಗೊಳಿಸಿ, ವಾಹನ ಚಕ್ರಗಳ ಧ್ವನಿಯಿಂದ ತನ್ನ ಗಂಡ ಹೊರಟುಹೋದನೆಂದೂಹಿಸಿ, ತನ್ನ ಶಯನಮಂದಿರಕ್ಕೆ ಹಿಂದಿರುಗಿದಳು. ಶಯನಮಂದಿರವನ್ನು ಬಿಟ್ಟ ಕ್ಷಣವೇ ತನ್ನನ್ನು ಮುತ್ತಿಕೊಂಡ ಗೃಹಕೃತ್ಯದ ಚಿಂತೆಗಳಿಗೆ ಅದೊಂದೇ ಆಸರೆಯಾಗಿತ್ತು. ಈಗ ಸಹ, ಮಕ್ಕಳ ಕೋಣೆಯಲ್ಲಿದ್ದ ಸ್ವಲ್ಪ ಹೊತ್ತಿನಲ್ಲಿ ಇಂಗ್ಲಿಷ್ ಉಪಾಧ್ಯಾಯಿನಿ ಮತ್ತು ಮೆತ್ರ್ರೋನ ಜರೂರು ಪ್ರಶ್ನೆಗಳ ಮಳೆಗರೆದರು. ತಿರುಗಾಟಕ್ಕೆ ಮಕ್ಕಳಿಗೆಂಥ ಬಟ್ಟೆ ತೊಡಿಸಬೇಕು? ಅವರಿಗೆ ಹಾಲು ಕೊಡಬೇಕೆ? ಹೊಸ ಅಡುಗೆಯವನಿಗೆ ಹೇಳಿಕಳಿಸಬೇಕೆ? ಇತ್ಯಾದಿ ಪ್ರಶ್ನೆಗಳಿಗೆ ಅವಳು ಮಾತ್ರವೇ ಉತ್ತರ ನೀಡಬೇಕಾಗಿತ್ತು.

'ನನ್ನ ಬಳಿ ಯಾರೂ ಬರಬೇಡಿ. ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡಿ' ಎಂದವಳು ಹಲುಬಿದಳು. ತನ್ನ ಕೋಣೆಗವಳು ಮರಳಿ, ತನ್ನ ಗಂಡನೊಡನೆ ಮಾತಾಡುವಾಗ ಕುಳಿತಿದ್ದ ಕುರ್ಚಿಯಲ್ಲಿಯೇ ಕುಳಿತುಕೊಂಡಳು; ಉಂಗುರಗಳು ಕಳಚಿಕೊಂಡು ಬೀಳುತ್ತಿದ್ದ ತೆಳ್ಳನೆಯ ಬೆರಳುಗಳನ್ನು ಬಿಗಿಯಾಗಿ ಹಿಡಿದುಕೊಂಡಳು; ತಮ್ಮ ಸಂಭಾಷಣೆಗಳನ್ನು ನೆನೆದುಕೊಂಡಳು. 'ಅವರು ಹೊರಟೇಹೋದರು. ತನ್ನ ಸಂಬಂಧ ವನ್ನವರು ಕಡಿದುಕೊಂಡರೆ?' ಎಂದವಳು ಆಲೋಚಿಸಿದಳು. 'ಅವರು ನನ್ನನ್ನೀಗಲೂ ನೋಡುತ್ತಿರುವರೆ? ನಾನೇತಕ್ಕವರನ್ನು ಪ್ರಶ್ನಿಸಲಿಲ್ಲ? ಇಲ್ಲ, ಇಲ್ಲ. ನಾವು ಒಟ್ಟಿಗೆ ಬದುಕುವುದಸಾಧ್ಯ. ನಾವು ಒಂದೇ ಮಾಡದ ಕೆಳಗುಳಿದರೂ, ಅಪರಿಚಿತರೇ ಸರಿ. ಎಲ್ಲ ಕಾಲಕ್ಕೂ ಪರಕೀಯರು. 'ಈ ಭಯಂಕರ ಪದಕ್ಕೆ ವಿಶೇಷ ಒತ್ತುಕೊಟ್ಟು ಅವಳು ಪುನರುಚ್ಚರಿಸಿದಳು.' ಅವರನ್ನು ನಾನೆಷ್ಟು ಪ್ರೀತಿಸಿದೆ! ಅಯ್ಯೋ ದೇವರೆ, ಅವರನ್ನು ನಾನೆಷ್ಟು ಪ್ರೀತಿಸಿದೆ?....ಈಗ....ಅವರನ್ನೀಗ ನಾನು ಪ್ರೀತಿಸುತ್ತಿಲ್ಲವೆ? ಹಿಂದಿಗಿಂತ ಮಿಗಿಲಾಗಿ ನಾನವರನ್ನೀಗ ಪ್ರೀತಿಸುತ್ತಿಲ್ಲವೆ? ಅದೆಷ್ಟು ಭೀಕರವಾಗಿದೆ! ಮುಖ್ಯ ವಿಷಯ ಯಾವುದೆಂದರೆ?....' ಬಾಗಿಲಲ್ಲಿ ಮೆತ್ರ್ರೋನಳ ತಲೆಯಿಣುಕಿದುದರಿಂದ ಅವಳ ಆಲೋಚನಾ ಸೂತ್ರ ಅಷ್ಟಕ್ಕೇ ಅರೆಗಡಿಯಿತು.

'ನನ್ನ ಸೋದರನಿಗಾಗಿ ಹೇಳಿಕಳಿಸೋಣ, ಅಮ್ಮ' ಎಂದವಳು ನುಡಿದಳು. 'ಅವನು ಒಂದಿಷ್ಟು ಊಟ ತಯಾರಿಸಲಿ. ನಿನ್ನೆಯಂತಾಗಬಾರದು. ಮಕ್ಕಳು ಆರು ಗಂಟೆಯ ತನಕ ಹಸಿದಿರಬೇಕಾಯಿತು.'

'ಆಗಲಿ, ನಾನೇ ಬರುತ್ತೇನೆ. ನಾನೇ ಎಲ್ಲ ನೋಡುತ್ತೇನೆ. ಹೊಸ ಹಾಲಿಗಾಗಿ ಹೇಳಿಕಳಿಸಿರುವೆಯಾ?'

ಡಾಲಿ ದಿನನಿತ್ಯದ ವ್ಯವಹಾರಗಳಲ್ಲಿ ನಿರತಳಾದಳು; ತಕ್ಕಾಲದಲ್ಲವಳು ತನ್ನ ವ್ಯಥೆಯನ್ನು ಮರೆತಳು.

೫

ತನ್ನ ಉತ್ಕೃಷ್ಟವಾದ ಸ್ವಸಾಮರ್ಥ್ಯದಿಂದಾಗಿ ಅಬ್ಲಾನ್‌ಸ್ಕಿಯ ಶಾಲಾಭ್ಯಾಸಂಗ ಸುಲಭವಾಗಿ ಸಾಗಿತ್ತು. ಆದರವನು ಸೋಮಾರಿ ಹಾಗೂ ಚೇಷ್ಟೆಗುಳಿ. ಆ ಕಾರಣ ಕ್ಕಾಗಿ ಅವನು ತನ್ನ ತರಗತಿಯಲ್ಲಿ ಅತ್ಯಂತ ಕೆಳದರ್ಜೆಯಲ್ಲಿದ್ದನು. ತಾರುಣ್ಯಸಹಜ ವಾದ ಮೊಂಡುಧೈರ್ಯದ ಅಭ್ಯಾಸಗಳಿಗೆ ವಶನಾಗಿದ್ದರೂ, ನಾಗರಿಕ ಸೇವೆಯಲ್ಲಿ ಅತ್ಯಂತ ಕೆಳದರ್ಜೆಯಲ್ಲಿದ್ದರೂ, ಮಾಸ್ಕೊ ಆಡಳಿತ ಕಚೇರಿಯೊಂದರ ಮುಖ್ಯಸ್ಥನಾಗಿ ಅವನು ಗೌರವಯುತವೂ ಲಾಭದಾಯಕವೂ ಆದ ಹುದ್ದೆಯಲ್ಲಿದ್ದನು. ತನ್ನ ತಂಗಿ ಅನ್ನಾಳ ಗಂಡ, ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಕರೆನಿನ್‌ನ ಮೂಲಕ ಅವನು ಆ ಹುದ್ದೆ ಯನ್ನು ಸಂಪಾದಿಸಿಕೊಂಡಿದ್ದನು. ಮಾಸ್ಕೊ ಕಚೇರಿಗೆ ಸಂಬಂಧಿಸಿದ ಸಚಿವಾಲಯದಲ್ಲಿ ಕರೆನಿನ್ ಪ್ರಮುಖ ಸ್ಥಾನವನ್ನು ಪಡೆದಿದ್ದನು. ತನ್ನ ಭಾವಮೈದುನನನ್ನು ಕರೆನಿನ್ ಈ ಹುದ್ದೆಗೆ ನೇಮಿಸಿಕೊಳ್ಳದಿದ್ದರೂ, ನೂರಾರು ಮಂದಿ ಸೋದರಸೋದರಿಯರು, ದಾಯಾದಿಗಳು, ಕಕ್ಕಕಕ್ಕಿಯರು, ಮಾವಂದಿರು ಹಾಗೂ ದೂರ ಸಂಬಂಧಿಗಳು ಅಬ್ಲಾನ್‌ಸ್ಕಿಗೆ ಇದೇ ಕೆಲಸವನ್ನೊ ಅಥವಾ ಅಂಥದೇ ಮತ್ತೊಂದು ಕೆಲಸವನ್ನೊ ಖಂಡಿತವಾಗಿಯೂ ಕೊಡಿಸುತ್ತಿದ್ದರು. ಏಕೆಂದರೆ ಅವನ ಹೆಂಡತಿಗೆ ಸಾಕಷ್ಟು ಆಮದಾನಿ ಇದ್ದರೂ, ಅವನ ಸಾಂಸಾರಿಕ ವ್ಯವಹಾರಗಳು ತುಂಬ ಹೀನಸ್ಥಿತಿಯಲ್ಲಿದ್ದದ್ದರಿಂದ, ಕೊನೆಯ ಪಕ್ಷ ಆರು ಸಾವಿರ ವಾರ್ಷಿಕ ವರಮಾನವುಳ್ಳ ಹುದ್ದೆಯೊಂದು ಅವನಿಗೆ ಅತ್ಯಗತ್ಯವಾಗಿತ್ತು.

ಮಾಸ್ಕೊ ಮತ್ತು ಪೀಟರ್ಸ್ ಬರ್ಗ್ ನಗರಗಳ ಅರ್ಧಭಾಗವೆಲ್ಲ ಅಬ್ಲಾನ್‌ಸ್ಕಿಯ ಬಂಧುಮಿತ್ರರಿಂದ ತುಂಬಿ ಹೋಗಿತ್ತು. ಅವನು ಈ ಜಗತ್ತಿನ ಮಹಾಪುರುಷರ ಮಧ್ಯೆ ಹುಟ್ಟಿ ಬೆಳೆದಿದ್ದನು. ರಾಷ್ಟ್ರದ ಪ್ರಮುಖ ಸ್ಥಾನಗಳಲ್ಲಿದ್ದ ಹಿರಿಯರಲ್ಲಿ ಮೂರನೆಯ ಒಂದು ಭಾಗ ಜನ ಅವನ ತಂದೆಯ ಗೆಳೆಯರಾಗಿದ್ದರು. ಅವರು ತೊಟ್ಟಿಲಿನಿಂದ ಸ್ಟೀವ್ ಅಬ್ಲಾನ್‌ಸ್ಕಿಯನ್ನು ಬಲ್ಲವರಾಗಿದ್ದರು, ಮತ್ತೆ ಮೂರರಲ್ಲೊಂದು ಭಾಗ ಜನ ಅವನ ಆತ್ಮೀಯ ಮಿತ್ರರಾಗಿದ್ದರು, ಉಳಿದವರು ಒಳ್ಳೆಯ ಪರಿಚಯಸ್ಥರಾಗಿದ್ದರು. ಹುದ್ದೆಗಳ ದತ್ತಿಗಳ, ಆಮದಾನಿಗಳ ಮತ್ತು ಇತರ ಭಾಗ್ಯಗಳ ರೂಪದಲ್ಲಿ ಲೌಕಿಕ ಪ್ರಸಾದಗಳನ್ನು ಹಂಚುವ ಅವಕಾಶವಿದ್ದವರೆಲ್ಲ ಅವನ ಗೆಳೆಯರಾಗಿದ್ದರು. ಅವರು ತಮ್ಮವನೆ ಆದ ಬಂಧುವನ್ನು ನಿರ್ಲಕ್ಷಿಸುವಂತಿರಲಿಲ್ಲ. ಲಾಭದಾಯಕವಾದ ಹುದ್ದೆಯನ್ನು ಗಳಿಸುವ

ಸಲುವಾಗಿ ಅಬ್ಲಾನ್ಸ್ಕಿ ಹೆಚ್ಚು ಶ್ರಮಪಡಬೇಕಾಗಿರಲಿಲ್ಲ. ಅವನು ಲಭ್ಯವಾದ ಹುದ್ದೆಯನ್ನು ತಿರಸ್ಕರಿಸದೆ, ಮಚ್ಚರಿಸದೆ, ಕಲಹವಾಡದೆ, ಇತರರ ಮನಸ್ಸು ನೋಯಿಸದಿದ್ದರೆ ಸಾಕಾಗಿತ್ತು. ಅವನು ಸ್ವಾಭಾವಿಕವಾಗಿಯೇ ಒಳ್ಳೆಯವನಾದ್ದರಿಂದ ಅವು ಅವನ ಜಾಯಮಾನಕ್ಕೊಗ್ಗುತ್ತಿರಲಿಲ್ಲ. ತಾನು ಕೇಳಿದಷ್ಟು ಸಂಬಳದ ಹುದ್ದೆ ಲಭಿಸಲಾರದೆಂದು ಯಾರಾದರೂ ಸೂಚಿಸಿದ್ದರೆ, ಆ ಸೂಚನೆ ಅಸಂಬದ್ಧವಾದದ್ದೆಂದು ಹೇಳಿಬಿಡುತ್ತಿದ್ದನು. ಏಕೆಂದರೆ ತನ್ನ ಸ್ನೇಹಿತರಿಗೇನು ಬರುತಿತ್ತೋ ಅದಕ್ಕಿಂತ ಅತಿಶಯವಾದ ಸಂಬಳಸಾರಿಗೆಗಳನ್ನವನು ಅಪೇಕ್ಷಿಸಿರಲಿಲ್ಲ; ಅಷ್ಟೇ ಅಲ್ಲ, ಅವರಷ್ಟೇ ಸಮರ್ಥವಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಛಾತಿ ತನಗಿತ್ತೆಂಬುದರಲ್ಲಿ ಅವನಿಗೆ ಪೂರ್ಣ ಧೈರ್ಯವಿತ್ತು.

ಸ್ಟೀವ್ ಅಬ್ಲಾನ್ಸ್ಕಿಯನ್ನು ಬಲ್ಲ ಜನ ಅವನ ಸ್ನೇಹಶೀಲಕ್ಕಾಗಿ, ಉತ್ಸಾಹದ ಸ್ವಭಾವಕ್ಕಾಗಿ ಮತ್ತು ಸಂದೇಹಕ್ಕೆಡೆಯಿಲ್ಲದ ಪ್ರಾಮಾಣಿಕತೆಗಾಗಿ ಅವನನ್ನು ಪ್ರೀತಿಸುತ್ತಿದ್ದರು. ಅಷ್ಟೇ ಅಲ್ಲ, ಅವನನ್ನು ಸಂಧಿಸಿದ ಜನರ ಮೇಲೆ ಭೌತಿಕ ಪ್ರಭಾವವನ್ನು ಬೀರಿ, ಅವರಲ್ಲಿ ಸ್ನೇಹೋಲ್ಲಾಸಗಳನ್ನು ಕುದುರಿಸುತ್ತಿದ್ದ ಯಾವುದೋ ಶಕ್ತಿ ಪ್ರಕಾಶಮಾನವೂ ಸುಂದರವೂ ಆದ ಅವನ ಮುಖಭಾವದಲ್ಲಿ, ಅವನ ಮಿರುಗುವ ಕಣ್ಣುಗಳಲ್ಲಿ, ಕಪ್ಪು ಹುಬ್ಬು ಮತ್ತು ಕೂದಲುಗಳಲ್ಲಿ, ಅವನ ನಿಷ್ಕಳಂಕ ಗೌರವರ್ಣದಲ್ಲಿ ಪುಟಿಯುತ್ತಿತ್ತು. 'ಓ ಸ್ಟೀವ್! ಆಹ, ಅಬ್ಲಾನ್ಸ್ಕಿ! ನಿನ್ನನ್ನು ನೋಡಿ ಸಂತೋಷವಾಯಿತು' ಎಂದು ಸ್ನಿಗ್ಧಮಂದಹಾಸದೊಡನೆ ಸಂಧಿಸುತ್ತಿದ್ದ ಗೆಳೆಯರು ಅವನನ್ನು ಬುಲ್ಲವಿಸುತ್ತಿದ್ದರು. ಅವನೊಡನೆ ಮಾತಾಡಿದನಂತರ ಆನಂದದಾಯಕವಾದ ಸಂಗತಿಯ ಸುಳಿವು ಕೆಲವೊಮ್ಮೆ ತಲೆದೋರದಿದ್ದರೂ ಮುಂದಿನ ಸಲ, ಮತ್ತು ತದನಂತರ ಅವನನ್ನು ನೋಡಿದಾಗಲೆಲ್ಲ ಅವರು ಏಕಪ್ರಕಾರವಾಗಿ ಹರ್ಷಗೊಳ್ಳುತ್ತಿದ್ದರು.

ಮಾಸ್ಕೊ ಕಚೇರಿಯ ಮುಖ್ಯಸ್ಥನಾಗಿದ್ದ ಮೂರು ವರ್ಷಗಳ ಅವಧಿಯಲ್ಲಿ ಅಬ್ಲಾನ್ಸ್ಕಿ ತನ್ನ ಗೆಳೆಯರ, ಕೆಳಗಿನವರ, ಮೇಲಣವರ ಮತ್ತು ತನ್ನೊಡನೆ ವ್ಯವಹಾರವಿರಿಸಿಕೊಂಡಿದ್ದವರೆಲ್ಲರ ಗೌರವ ಪ್ರೀತಿಗಳಿಗೆ ಪಾತ್ರನಾಗಿದ್ದನು. ತನ್ನ ದೌರ್ಬಲ್ಯಪ್ರಜ್ಞೆಯೇ ಕಾರಣವಾಗಿ ಇತರರ ಬಗೆಗೆ ಅವನು ತೋರುತ್ತಿದ್ದ ಸಹನೆ ಕಚೇರಿಯಲ್ಲಿ ಅವನಿಗೆ ಗೌರವವನ್ನು ತಂದುಕೊಟ್ಟಿದ್ದ ಗುಣಗಣಗಳಲ್ಲೊಂದಾಗಿತ್ತು. ಎರಡನೆಯದಾಗಿ, ಅವನ ಕೇವಲ ಉದಾರವಾದದ ಮನೋಧರ್ಮ ಆ ಉದಾರವಾದ ವರ್ತಮಾನ ಪತ್ರಿಕೆಗಳ ವಾಚನದಿಂದ ಪ್ರಾಪ್ತವಾದದ್ದಲ್ಲ; ಅದು ಅವನ ಧಮನಿಧಮನಿಗಳಲ್ಲಿ ನಿರಂತರವಾಗಿ ಪ್ರವಹಿಸುತ್ತಿತ್ತು; ಅದೇ ಕಾರಣವಾಗಿ, ಅವನು ಸ್ಥಾನಮಾನ ಶ್ರೀಮಂತರೆಂಬ ಭೇದವಿಲ್ಲದೆ ಸರ್ವರನ್ನು ಏಕರೀತಿಯಾಗಿ ಆದರಿಸುತ್ತಿದ್ದನು. ಮೂರನೆಯದಾಗಿ, ಆದರೆ ಮುಖ್ಯವಾಗಿ, ತನ್ನ ವೃತ್ತಿಯ ಬಗೆಗಿದ್ದ ಅವನ ಸಂಪೂರ್ಣ ನಿರ್ಲಿಪ್ತತೆ; ಅದರ ಫಲವಾಗಿ ಅವನೆಂದೂ ಭಾವನಾತ್ಮಕವಾಗಿ ಅದರಲ್ಲಿ ತೊಡಗಿಕೊಳ್ಳುತ್ತಿರಲಿಲ್ಲ; ಇಲ್ಲವೆ ತಪ್ಪುಗಳನ್ನೆಸಗುತ್ತಿರಲಿಲ್ಲ.

ಕಚೇರಿಯ ಮೆಟ್ಟಿಲನ್ನು ಹತ್ತುತ್ತಿದ್ದಂತೆ, ಗೌರವಭಾವದ ದ್ವಾರಪಾಲಕ ಅಬ್ಲಾನ್ಸ್ಕಿಯನ್ನು ಹಿಂಬಾಲಿಸುತ್ತಿದ್ದನು. ತನ್ನ ಖಾಸಗಿ ಕೋಣೆಯನ್ನು ಪ್ರವೇಶಿಸಿದ ಅವನು ಸಮವಸ್ತ್ರವನ್ನು ಧರಿಸಿ, ಸಮಿತಿಯ ಕೋಣೆಗೆ ಸರಿಯುತ್ತಿದ್ದನು. ಕರಣಿಕರು

ಮತ್ತು ಪ್ರತಿಕಾರರು ಮೇಲೆದ್ದು, ಉಲ್ಲಾಸ ಗೌರವಗಳಿಂದ ಅವನಿಗೆ ಮಣಿಯುತ್ತಿದ್ದರು. ದಾಪುಹೆಜ್ಜೆ ಹಾಕುತ್ತ ಅಬ್ಲಾನ್‌ಸ್ಕಿ ತನ್ನ ಜಾಗದ ಕಡೆಗೆ ನಡೆದು, ಸಮಿತಿಯ ಸದಸ್ಯರ ಕೈಕುಲುಕಿ, ಕೆಳಗೆ ಕುಳಿತುಕೊಳ್ಳುತ್ತಿದ್ದನು. ತನ್ನ ಕೆಲಸಕ್ಕೆ ತೊಡಗುವ ಮುನ್ನ, ಮರ್ಯಾದೆಯನ್ನು ಮೀರದೆ ಅವನು ಕುಚೋದ್ಯ ಹರಟೆಗಳಲ್ಲಿ ತೊಡಗುತ್ತಿದ್ದನು. ಹಿತಕರವಾದ ವ್ಯವಹಾರ ನಿರ್ವಹಣೆಗೆ ಅತ್ಯಗತ್ಯವಾದ ಸರಾಗ ಸ್ವಾತಂತ್ರ್ಯ ಮತ್ತು ಸಾಧಿಕಾರ ಬಿಗುಮಾನಗಳ ಗಡಿರೇಖೆಯನ್ನು ನಿಷ್ಕರ್ಷಿಸುವಲ್ಲಿ ಅವನಿಗಿಂತ ಸಮರ್ಥರಾದವರು ಬೇರೆ ಯಾರೂ ಇರಲಿಲ್ಲ. ಅಬ್ಲಾನ್‌ಸ್ಕಿಯ ಕಚೇರಿಯಲ್ಲಿ ರೂಢಿಯಾಗಿದ್ದ ಪದ್ಧತಿಯಂತೆ ಕಾರ್ಯದರ್ಶಿ ಸಹರ್ಷಗೌರವಗಳಿಂದ ಕೆಲವು ಕಡತಗಳನ್ನು ತಂದು, ಅಬ್ಲಾನ್‌ಸ್ಕಿಯಿಂದಲೇ ತರಬೇತಿ ಹೊಂದಿದ್ದ ಉದಾರಭಾವದ ಸಲುಗೆಯಿಂದ ಕಡತಗಳ ಬಗ್ಗೆ ವ್ಯಾಖ್ಯಾನಿಸುತ್ತಿದ್ದನು.

'ಕೊನೆಗೂ ಪೆಂಜ ಸರ್ಕಾರದ ಖಾತೆಯಿಂದ ಬೇಕಾದ ಸಮಾಚಾರವನ್ನು ಪಡೆಯಲು ಸಾಧ್ಯವಾಗಿದೆ. ಇಗೋ ಅದಿಲ್ಲಿದೆ. ನೀವದನ್ನು ನೋಡುತ್ತೀರೇನು?'

'ಅಂತೂ ನೀವಿದನ್ನು ಸಂಪಾದಿಸಿದಿರಲ್ಲವೆ?' ಎಂದು ಅಬ್ಲಾನ್‌ಸ್ಕಿ ಕಡತಗಳ ನಡುವೆ ತನ್ನ ಬೆರಳು ತೂರಿಸಿದನು. 'ಸರಿ, ಮಿತ್ರರೆ....' ದಿನದ ಕೆಲಸ ಹೀಗೆ ಪ್ರಾರಂಭವಾಗುತ್ತಿತ್ತು.

ತಲೆ ಒಂದು ಕಡೆಗೆ ನಿಮಿರಿದವನಾಗಿ, ಗಂಭೀರ ಮುಖಭಾವದಿಂದ ವರದಿಯನ್ನಾಲಿಸುತ್ತಿದ್ದಂತೆ 'ಅರ್ಧ ಗಂಟೆಯ ಹಿಂದೆ ತಮ್ಮ ಅಧ್ಯಕ್ಷ ಎಂಥ ತಪ್ಪಿತಸ್ಥ ಹುಡುಗ ಎಂಬುದನ್ನವರು ಅರಿತಿದ್ದರೆ ಮಾತ್ರ!' ಎಂದವನು ಆಲೋಚಿಸಿದನು. ಅವರ ಕಣ್ಣು ಮಿನುಗಿದುವು. ಎರಡು ಗಂಟೆಯತನಕ ಅವರ ವ್ಯವಹಾರ ಅವಿರತವಾಗಿ ಮುಂದುವರಿಯುತ್ತಿತ್ತು. ಮಧ್ಯಾಹ್ನದ ಊಟಕ್ಕಾಗಿ ಆಗವರಿಗೆ ವಿರಾಮ ದೊರಕುತ್ತಿತ್ತು.

ಎರಡು ಗಂಟೆ ಹೊಡೆಯುವ ಮುನ್ನವೇ ಸಮಿತಿ ಕೋಣೆಯ ದೊಡ್ಡ ಗಾಜಿನ ಕದಗಳು, ತೆರೆದು, ಯಾರೋ ಒಳಗೆ ಬರುತ್ತಿದ್ದರು. ಇರ್ತಲ್‌ಯ ಹದ್ದಿನ ಹಾಗೂ ತ್ಸಾರನ ಭಾವ ಚಿತ್ರದ ಕೆಳಗೆ ಕುಳಿತಿದ್ದ ಸಮಿತಿಯ ಸದಸ್ಯರು ಹೊಸ ವಿನೋದ ಸಂಗತಿ ಕಣ್ಣಿಗೆ ಬೀಳಲಾಗಿ ಹರ್ಷಗೊಂಡು ಬಾಗಿಲ ಕಡೆಗೆ ಕಣ್ಣು ಮಿಟುಕಿಸಿದರು. ಆದರೆ ದ್ವಾರಪಾಲಕ ಕೂಡಲೇ ಆಗಂತುಕನನ್ನು ಹೊರಗೆ ನೂಕಿ, ಬಾಗಿಲುಗಳನ್ನು ಮುಚ್ಚಿದನು.

ವರದಿ ಮುಗಿದನಂತರ ಅಬ್ಲಾನ್‌ಸ್ಕಿ ಮೇಲೆದ್ದು, ಮೈಮುರಿದನು. ಆ ಕಾಲದ ಪ್ರಗತಿ ಸಂಪ್ರದಾಯಕ್ಕನುಗುಣವಾಗಿ ಅವನು ಸಮಿತಿ ಕೋಣೆಯಲ್ಲಿ ಸಿಗರೇಟ್ ತೆಗೆದುಕೊಂಡು, ತನ್ನ ಕೋಣೆಗೆ ಹೊರಟನು. ಅವನ ಸಹೋದ್ಯೋಗಿಗಳಿಬ್ಬರು, ನೌಕರಿಯಲ್ಲಿಯೇ ಮುದುಕನಾಗಿದ್ದ ನಿಕಿತಿನ್ ಮತ್ತು ಗ್ರಿನ್‌ವಿಚ್ ಅವನನ್ನು ಹಿಂಬಾಲಿಸಿದರು.

'ಊಟವಾದ ನಂತರ ಎಲ್ಲವನ್ನು ಮುಗಿಸಲು ಸಮಯವಿದೆ' ಎಂದು ಅಬ್ಲಾನ್‌ಸ್ಕಿ ನುಡಿದನು.

'ಓ, ನಿಜಕ್ಕೂ ಸಾಧ್ಯ' ಎಂದು ನಿಕಿತಿನ್ ಮರುನುಡಿದನು.

'ಆ ಫೊಮಿನ್ ಇದ್ದಾನಲ್ಲ, ಅವನು ಭಾರಿ ಠಕ್ಕನೆಂದು ತೋರುತ್ತದೆ' ಎಂದು ಗ್ರಿನ್‌ವಿಚ್ ಚರ್ಜಿಗೆ ಸಂಬಂಧಿಸಿದ ವ್ಯವಹಾರದಲ್ಲಿ ತೊಡರಿಕೊಂಡಿದ್ದ ವ್ಯಕ್ತಿಗಳಲ್ಲೊಬ್ಬನನ್ನು ಕುರಿತು ಪ್ರಸ್ತಾಪವೆತ್ತಿದನು.

ವ್ಯಾಖ್ಯಾನಿಸದೆಯೆ ಗ್ರಿನ್‌ವಿಚ್‌ನ ಮಾತುಗಳನ್ನು ಕೇಳಿ ಆಬ್ಲಾನ್‌ಸ್ಕಿ ಹುಬ್ಬು ಗಂಟಿಕ್ಕಿಕೊಂಡನು. ಆತುರದ ತೀರ್ಪುಗಳನ್ನು ಸಹಿಸಲಾಗದೆಂಬ ಭಾವನೆ ಅವನ ಮೌನದಲ್ಲಿ ಅಡಕಗೊಂಡಂತಿತ್ತು.

'ಕೋಣೆಯೊಳಗೆ ಬಂದವರು ಯಾರು?' ಎಂದವನು ದ್ವಾರಪಾಲಕನನ್ನು ಪ್ರಶ್ನಿಸಿದನು.

'ಗೊತ್ತಿಲ್ಲ, ಪ್ರಭು. ಅನುಮತಿಗೆ ಕಾಯದೆ, ನನ್ನ ಬೆನ್ನನ್ನು ಹಿಡಿದು ತಿರುಗಿಸಿ, ಒಳಗೆ ನುಗ್ಗುವುದೆ ? ನಿಮ್ಮನ್ನು ಕೇಳಿದರು. ಸಭೆ ಮುಗಿಯಲಿ ನಾನವರಿಗೆ ತಿಳಿಸುತ್ತೇನೆ. ಅದೇ ಸರಿಯಾದ ಸಮಯ' ಎಂದವರಿಗೆ ಹೇಳಿದೆ.

'ಈಗ ಅವರೆಲ್ಲಿದ್ದಾರೆ ?'

'ಅವರೀಗ ಕೆಳಗೆ ವರಾಂಡದಲ್ಲಿರಬಹುದು. ಅವರಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ತಿರುಗಾಡುತ್ತಿದ್ದರು. ಅಗೋ, ಅವರೇ' ಎಂದು ದ್ವಾರಪಾಲಕ ವಿಶಾಲ ವಕ್ಷದ, ಒಳ್ಳೆಯ ಮೈಕಟ್ಟಿನ, ಗುಂಗುರು ಗಡ್ಡದ ವ್ಯಕ್ತಿಯ ಕಡೆಗೆ ಬೆರಳುಮಾಡಿ ತೋರಿಸಿದನು. ಆ ವ್ಯಕ್ತಿ ಕುರಿಯ ತೊಗಲಿನ ಟೋಪಿಯನ್ನು ತೆಗೆಯದೆಯೆ, ಸವೆದುಹೋಗಿದ್ದ ಶಿಲಾ ಸೋಪಾನ ಪಂಕ್ತಿಯ ಮೇಲೆ ಹಗುರವಾಗಿ ವೇಗ ವೇಗವಾಗಿ ಓಡುತ್ತಿದ್ದನು. ತೋಳ್ಸಂದಿಯಲ್ಲಿ ಕಡತವೊಂದನ್ನು ಇರುಕಿಸಿಕೊಂಡು ಮೆಟ್ಟಿಲಿಳಿಯುತ್ತಿದ್ದ ತೆಳ್ಳನೆಯ ನೌಕರನೊಬ್ಬ ವೇಗವಾಗಿ ಚಲಿಸುತ್ತಿದ್ದ ಕಾಲುಗಳನ್ನು ಅಸಮ್ಮತಿ ಸೂಚಕವಾಗಿ ನೋಡುತ್ತ ನಿಂತನು. ಅನಂತರ ಅವನು ಆಬ್ಲಾನ್‌ಸ್ಕಿಯ ಕಡೆಗೆ ಕಾತರ ದೃಷ್ಟಿ ಬೀರಿದನು.

ಆಬ್ಲಾನ್‌ಸ್ಕಿ ಸೋಪಾನ ಪಂಕ್ತಿಯ ಅಗ್ರಭಾಗದಲ್ಲಿ ನಿಂತಿದ್ದನು. ಸಮವಸ್ತ್ರದ ಅಂಚುಕಟ್ಟಿದ ಕತ್ತುಪಟ್ಟಿಯ ಮೇಲೆ ಸಹಜವಾಗಿ ಮಿರುಗುತ್ತಿದ್ದ ಅವನ ಮುಖ ಓಟಗಾರನನ್ನು ಗುರುತಿಸಿದಾಗ ಮತ್ತಷ್ಟು ಪ್ರಕಾಶಮಾನವಾಯಿತು.

'ಕೊನೆಗೂ ನೀನೇ ಬಂದು ಬಿಟ್ಟೆಯಾ, ಲೆವಿನ್ !' ಎಂದವನು ತನ್ನ ಕಡೆಗೆ ಬರುತ್ತಿದ್ದ ಆಕೃತಿಯನ್ನವಲೋಕಿಸುತ್ತ, ಸ್ನೇಹಯುಕ್ತ ವಿನೋದದ ಮಂದಹಾಸದೊಡನೆ ಕರೆದನು. 'ನನ್ನ ಗುಹೆಯಲ್ಲಿಯೇ ನನ್ನನ್ನು ನೋಡಲು ನೀನು ಬಂದದ್ದಾದರೂ ಹೇಗೆ ?' ಎಂದವನು ಪ್ರಶ್ನಿಸಿದನು. ಕೈಕುಲುಕಿನಿಂದ ತೃಪ್ತನಾಗದೆ, ಅವನು ತನ್ನ ಗೆಳೆಯನನ್ನು ಚುಂಬಿಸಿದನು. 'ಇಲ್ಲಿಗೆ ಬಂದು ತುಂಬ ಹೊತ್ತಾಯಿತೇನು ?'

'ಇದೆತಾನೆ ಬಂದೆ. ನಿನ್ನನ್ನು ಜರೂರಾಗಿ ನೋಡಬೇಕಾಗಿತ್ತು' ಎಂದು ಲೆವಿನ್ ಸುತ್ತಮುತ್ತ ಸಂಕೋಚದಿಂದ, ಆದರೆ ಅಸಮಾಧಾನ ಕೋಪಗಳಿಂದ ಕಣ್ಣಾಡಿಸುತ್ತ ಉತ್ತರಿಸಿದನು.

ತನ್ನ ಗೆಳೆಯನ ಸ್ವಾಭಿಮಾನವನ್ನೂ ಮುಂಗೋಪದಿಂದ ಕೂಡಿದ ಸಂಕೋಚವನ್ನೂ ಬಲ್ಲ ಆಬ್ಲಾನ್‌ಸ್ಕಿ 'ನನ್ನ ಕಚೇರಿಗೆ ಹೋಗೋಣ ಬಾ' ಎಂದವನನ್ನು ಕರೆದನು. ಅವನು ಗೆಳೆಯನ ತೋಳು ಹಿಡಿದುಕೊಂಡು, ಅಪಾಯಗಳ ನಡುವೆ ಅವನಿಗೆ ಮಾರ್ಗದರ್ಶನ ಮಾಡುತ್ತಿರುವವನಂತೆ ಕರೆದೊಯ್ದನು.

ಅರುವತ್ತು ವರ್ಷದ ಮುದುಕರನ್ನು, ಇಪ್ಪತ್ತು ವರ್ಷದ ತರುಣರನ್ನು, ನಟರನ್ನು ಮಂತ್ರಿಗಳನ್ನು, ವರ್ತಕರನ್ನು, ಮತ್ತು ಸೇನಾನಿಗಳನ್ನು, ಎಲ್ಲ ಪರಿಚಯಸ್ಥರನ್ನು ಯಾವ ಭೇದಭಾವವೂ ಇಲ್ಲದೆ ಸತ್ಸ್ವಭಾವದ ಸಲುಗೆಯಿಂದ ಅಬ್ಲಾನ್‌ಸ್ಕಿ ಮಾತಾಡಿಸಿದನು. ಅವರಲ್ಲಿ ಹಲವರು ಸಾಮಾಜಿಕ ಶ್ರೇಣಿಯಲ್ಲಿ ಪರಸ್ಪರ ವಿರುದ್ಧವಾಗಿದ್ದರು. ಸ್ಟೀವ್ ಅಬ್ಲಾನ್‌ಸ್ಕಿ ಅವರೆಲ್ಲರನ್ನು ಒಂದುಗೂಡಿಸುವ ಸೇತುವೆಯಾಗಿದ್ದುದಕ್ಕಾಗಿ ಅವರು ತುಂಬ ಸೋಜಿಗಗೊಂಡಿದ್ದರು. ಯಾರ ಯಾರ ಜತೆಯಲ್ಲವನು ಶಾಂಪೇನ್ ಕುಡಿಯುತ್ತಿದ್ದನೋ, ಅವರೊಡನೆ ಅವನು ಸಲುಗೆಯಿಂದಿರುತ್ತಿದ್ದನೆಂದೂ, ಪ್ರತಿಯೊಬ್ಬರೊಡನೆಯೂ ಅವನು ಶಾಂಪೇನ್ ಕುಡಿಯುತ್ತಿದ್ದನೆಂದೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ತನ್ನ ಕೈಕೆಳಗಣ ಅಧಿಕಾರಿಗಳ ಸಮ್ಮುಖದಲ್ಲೇನಾದರೂ ಸಲುಗೆಯ ಗೆಳೆಯರನ್ನು ಭೇಟಿಮಾಡಿದ್ದಾದರೆ 'ಅಪಕೀರ್ತಿಗೊಳಗಾದ ಆತ್ಮೀಯ'ರೆಂದು ಅವರನ್ನು ತಮಾಷೆಗಾಗಿ ಪರಿಚಯಿಸಿಕೊಡುತ್ತಿದ್ದನು ; ತನ್ನ ಸಹಜ ಜಾಣತನದಿಂದಾಗಿ ಅವರಿಗಂಟಿಕೊಂಡಿದ್ದ ಕಪ್ಪು ಭಾವನೆಯನ್ನು ಕಡಮೆಗೊಳಿಸಲು ಪ್ರಯತ್ನಿಸುತ್ತಿದ್ದನು. ಲೆವಿನ್ ನಿಜಕ್ಕೂ 'ಅಪಕೀರ್ತಿಗೊಳಗಾಗಿದ್ದ' ಆತ್ಮೀಯನಾಗಿರಲಿಲ್ಲ. ತನ್ನ ಕೆಳಗಣ ಅಧಿಕಾರಿಗಳಿಗೆ ತಮ್ಮ ಆತ್ಮೀಯತೆ ಗೊತ್ತಾಗಬಾರದೆಂಬ ತಿಳಿವಳಿಕೆ ತನಗಿದ್ದುದಾಗಿ ಲೆವಿನ್‌ನ ಮನಸ್ಸಿನಲ್ಲಿರಬೇಕೆಂದು ಜಾಣತನದಿಂದ ಊಹಿಸಿಕೊಂಡ ಅಬ್ಲಾನ್‌ಸ್ಕಿ ಅವನನ್ನು ತನ್ನ ಖಾಸಗಿ ಕೋಣೆಗೆ ಕರೆದೊಯ್ದನು.

ಲೆವಿನ್ ಮತ್ತು ಅಬ್ಲಾನ್‌ಸ್ಕಿ ಸಮಾನ ವಯಸ್ಕರು ; ಅವರ ಸಲುಗೆ ಶಾಂಪೇನ್ ಕುಡಿತವನ್ನವಲಂಬಿಸಿರಲಿಲ್ಲ. ಬಾಲ್ಯದಿಂದ ಅವರು ಗೆಳೆಯರಾಗಿದ್ದರು. ಅವರ ಸ್ವಭಾವಾಭಿರುಚಿಗಳಲ್ಲಿ ವ್ಯತ್ಯಾಸವಿತ್ತು. ಆದರೂ ಚಿಕ್ಕಂದಿನಿಂದ ಪರಸ್ಪರವಾಗಿ ಬಲ್ಲ ಆತ್ಮೀಯರಂತೆ ಅವರು ಪರಸ್ಪರ ನಿಷ್ಠರಾಗಿದ್ದರು. ಆದರೂ ಬೇರೆ ಬೇರೆ ಬಗೆಯ ವೃತ್ತಿಗಳನ್ನಾರಿಸಿಕೊಂಡ ಜನರಲ್ಲಿ ಕಾಣುವ ಮನೋಧರ್ಮ ಅವರಲ್ಲಿಯೂ ಸ್ಪಷ್ಟವಾಗಿ ತೋರುತ್ತಿತ್ತು. ಚರ್ಚೆಗಾಗಿ ಒಬ್ಬರ ವೃತ್ತಿಯನ್ನು ಮತ್ತೊಬ್ಬರು ಸಮರ್ಥಿಸಿಕೊಂಡರೂ, ಆಂತರಿಕವಾಗಿ ಅವರದನ್ನು ದ್ವೇಷಿಸುತ್ತಿದ್ದರು. ತಾನಾರಿಸಿಕೊಂಡ ಜೀವನ ವಿಧಾನ ವಾಸ್ತವವಾದದ್ದೆಂದೂ, ತನ್ನ ಗೆಳೆಯನ ಜೀವನ ವಿಧಾನ ಅವಾಸ್ತವವಾದದ್ದೆಂದೂ ಇಬ್ಬರೂ ತಿಳಿದುಕೊಂಡಿದ್ದರು. ಲೆವಿನ್‌ನನ್ನು ಕಂಡಾಗ ಅಬ್ಲಾನ್‌ಸ್ಕಿ ವಿನೋದಾತ್ಮಕ ಮಂದಹಾಸವನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಳ್ಳಿಯಿಂದ ಮಾಸ್ಕೋಗೆ ಅವನು ಬಂದಾಗ ಹಲವೊಮ್ಮೆ ಅಬ್ಲಾನ್‌ಸ್ಕಿ ಅವನನ್ನು ನೋಡಿದ್ದನು. ಲೆವಿನ್ ಹಳ್ಳಿಯಲ್ಲಿ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿರುತ್ತಿದ್ದನು. ಅದೇನೆಂಬುದನ್ನು ಅಬ್ಲಾನ್‌ಸ್ಕಿ ತಿಳಿದುಕೊಂಡಿರಲಿಲ್ಲ; ಅದನ್ನು ತಿಳಿಯುವ ಆಸಕ್ತಿಯೂ ಅವನಿಗಿರಲಿಲ್ಲ. ಲೆವಿನ್ ಮಾಸ್ಕೋಗೆ ಬಂದಾಗಲೆಲ್ಲ ಭಾವೋದ್ವೇಗದ ಸ್ಥಿತಿಯಲ್ಲಿರುತ್ತಿದ್ದನು ; ಅವಸರದಲ್ಲಿರುತ್ತಿದ್ದನು ; ಸ್ವಾಭಿಮಾನಿಯಾದ ಅವನ ಮೂಗಿನ ತುದಿಯಲ್ಲಿ ಸದಾ ಸಿಟ್ಟು ಕುಮುಟುತ್ತಿತ್ತು. ನೂತನವೂ ಅನಿರೀಕ್ಷಿತವೂ ಆದ ಸತ್ಯವನ್ನವನು ಜೀವನದಲ್ಲಿ ಅಳವಡಿಸಿಕೊಂಡಂತೆ ಅವನು ಸಾಮಾನ್ಯವಾಗಿ ಕಾಣುತ್ತಿದ್ದನು. ಅಬ್ಲಾನ್‌ಸ್ಕಿ ಅದನ್ನೆಲ್ಲ ನೋಡಿ ನಗೆಯಾಡಿದರೂ, ಅವನನ್ನು ಮಾತ್ರ ಪ್ರೀತಿಸುತ್ತಿದ್ದನು. ಅದೇ ರೀತಿಯಲ್ಲಿ ಲೆವಿನ್

ಸಹತನ್ನ ಗೆಳೆಯನ ನಾಗರಿಕ ಜೀವನವನ್ನೂ, ಅವನ ವೃತ್ತಿಯನ್ನೂ ಗುಟ್ಟಾಗಿ ದ್ವೇಷಿಸುತ್ತಿದ್ದನು. ಕಾಲಹರಣವೊಂದೆ ಅವೆಲ್ಲದರ ಪರಿಣಾಮವೆಂದು ಅವನು ಭಾವಿಸಿದನು; ಅವುಗಳ ಬಗ್ಗೆ ಕೊರಚಾಡುತ್ತಿದ್ದನು. ಆದರೆ ಅವರಿಬ್ಬರ ಕೊರಚಾಟದಲ್ಲಿ ವ್ಯತ್ಯಾಸವಿರುತ್ತಿತ್ತು; ಇತರರ ಹಾಗೆ ಆಬ್ಲಾನ್‌ಸ್ಕಿಯ ನಗುವಿನಲ್ಲಿ ಸಂತುಷ್ಟತೆ ಸ್ವಭಾವಗಳಿರುತ್ತಿದ್ದುವು. ಲೆವಿನ್‌ನ ನಗೆಯಲ್ಲಿ ಪ್ರಸನ್ನತೆಯೂ ಅಸಮಾಧಾನವೂ ಇರುತ್ತಿದ್ದುವು.

'ಬಹುಕಾಲದಿಂದ ನಾವು ನಿನ್ನ ನಿರೀಕ್ಷೆಯಲ್ಲಿದ್ದೇವೆ' ಎಂದು ಆಬ್ಲಾನ್‌ಸ್ಕಿ ಕಚೇರಿಯನ್ನು ಪ್ರವೇಶಿಸುತ್ತಿದ್ದಂತೆ, ಅವನ ತೋಳಿಂದ ತನ್ನ ಕೈ ಎಳೆದುಕೊಂಡನು. ಅಪಾಯ ಮುಕ್ತಾಯಗೊಂಡಿತೆಂಬ ಸೂಚನೆ ಆ ಕ್ರಿಯೆಯಲ್ಲಿತ್ತು.

'ನಿನ್ನನ್ನು ನೋಡಿ ನನಗೆ ಹರ್ಷವಾಯಿತು. ನಿಜಕ್ಕೂ ಸಂತೋಷವಾಯಿತು' ಎಂದವನು ಮಾತು ಮುಂದುವರಿಸಿದನು. ಸರಿ, ಹೇಗಿದ್ದೀಯಾ? ಇಲ್ಲಿಗೆ ನೀನು ಯಾವಾಗ ಬಂದೆ?'

ಮಾರುತ್ತರಕ್ಕೆ ಬದಲಾಗಿ ಲೆವಿನ್ ಆಬ್ಲಾನ್‌ಸ್ಕಿಯ ಇಬ್ಬರು ಸಂಗಡಿಗರ ಕಡೆಗೆ, ವಿಶೇಷವಾಗಿ ಸುಂದರ ಗ್ರಿನ್‌ವಿಚ್‌ನ ಕೈ ಕಡೆಗೆ ದುರುದುರನೆ ನೋಡಿದನು. ದೀರ್ಘ ಶ್ವೇತಾಂಗುಲಿಗಳ, ತುದಿಯಲ್ಲಿ ಬಾಗಿದ ಉದ್ದನೆಯ ಹಳದಿ ಬಣ್ಣದ ಉಗುರುಗಳ ಮತ್ತು ಅಂಗಿದೋಳಿನ ಮಣಿಕಟ್ಟುಗಳ ಮಿರುಗುವ ದಪ್ಪನೆಯ ಬುಗುಟುಗಳ ಅವನ ಕೈಗಳು ಲೆವಿನ್‌ನ ಸರ್ವ ಗಮನವನ್ನಾಕರ್ಷಿಸಿತ್ತು; ಅನ್ಯ ವಿಚಾರವೇ ಅವನ ತಲೆಯಲ್ಲಿ ಹೊಳೆಯಲಿಲ್ಲ. ಅದನ್ನು ಗಮನಿಸಿದ ಆಬ್ಲಾನ್‌ಸ್ಕಿ ಮುಗುಳುನಗೆ ಸೂಸಿದನು.

'ಓಹೊ, ಮರೆತಿದ್ದೆ. ಫಿಲಿಪ್ ಇವಾನೊವಿಚ್ ನಿಕಿತಿನ್ ಮತ್ತು ಮಿಖೇಲ್ ಸ್ತನಿಸ್ಲವಿಚ್ ಗ್ರಿನ್‌ವಿಚ್ ಗೆಳೆಯರೆ ಇವರನ್ನು ನಿಮಗೆ ಪರಿಚಯಿಸಿಕೊಡಲು ಸಂತೋಷವಾಗುತ್ತದೆ' ಎಂದವನು ನುಡಿದನು. ಅನಂತರ ಅವನು ಲೆವಿನ್ ಕಡೆಗೆ ತಿರುಗಿಕೊಂಡು 'ಇವರೇ ಕಾನ್‌ಸ್ಟಾಂಟಿನ್ ದಿಮಿತ್ರಿಚ್ ಲೆವಿನ್. ಜಿಲ್ಲೆಯ ಆಡಳಿತದಲ್ಲಿ ತುಂಬ ಆಸಕ್ತಿ ವಹಿಸುವ ಕ್ರಿಯಾಶೀಲ ವ್ಯಕ್ತಿ ಇವರು; ಹೊಸ ರೀತಿಯ ಗ್ರಾಮೀಣ ಸಭ್ಯರು; ಒಂದೇ ಕೈಯಿಂದ ೧೮೩ ಪೌಂಡುಗಳನ್ನೆತ್ತಬಲ್ಲ ಜಟ್ಟಿ; ಕ್ರೀಡಾಪಟು; ದನಗಾರ, ನನ್ನ ಸನ್ಮಿತ್ರ ಹಾಗೂ ಸರ್ಜೈ ಇವಾನೊವಿಚ್ ಕೊಜ್ನಿಶೇವ್‌ನ ಸೋದರ.'

'ನಿಮ್ಮನ್ನು ನೋಡಿ ಸಂತೋಷವಾಯಿತು' ಎಂದು ಮುದುಕ ನುಡಿದನು.

'ನಿಮ್ಮ ಸೋದರ ಸರ್ಜಿಯ್ ಇವಾನೊವಿಚ್‌ರ ಪರಿಚಯ ನನಗಿದೆಯೆಂದು ಹೇಳಲು ಸಂತೋಷವಾಗುತ್ತದೆ' ಎಂದು ಗ್ರಿನ್‌ವಿಚ್ ಉದ್ದನೆಯ ಉಗುರುಗಳ ತೆಳ್ಳನೆಯ ಕೈಗಳನ್ನು ಮುಂದೆ ಚಾಚಿದನು.

ಲೆವಿನ್ ಹುಬ್ಬು ಗಂಟಿಕ್ಕಿಕೊಂಡನು, ಔದಾಸೀನ್ಯದಿಂದ ಅವನ ಕೈಯದುಮಿದನು, ಒಡನೆಯೆ ಆಬ್ಲಾನ್‌ಸ್ಕಿಯ ಕಡೆಗೆ ತಿರುಗಿದನು. ಲೇಖಕನೆಂದು ಇಡೀ ದೇಶದಲ್ಲೆಲ್ಲ ಪ್ರಸಿದ್ಧಿಯಾಗಿದ್ದ ತನ್ನ ಮಲ ಸೋದರನ ಬಗ್ಗೆ ಅಪಾರ ಗೌರವವಿದ್ದರೂ, ಸುಪ್ರಸಿದ್ಧ ಕೊಜ್ನಿಶೇವ್‌ನ ಸೋದರನೆಂದೊಪ್ಪಿಕೊಳ್ಳುವ ಸಹನೆ ಅವನಿಗಿರಲಿಲ್ಲ.

ಯಾರ ಹಂಗೂ ಇಲ್ಲದೆ, ತನ್ನ ವ್ಯಕ್ತಿತ್ವದ ಊರೆಯ ಮೇಲೆ, ಕಾನ್‌ಸ್ಟೆಂಟಿನ್ ಲೆವಿನ್ ಆಗಿಯೇ ಮೆರೆಯಬೇಕೆಂಬುದು ಅವನ ಅಪೇಕ್ಷೆ.

'ನಾನೀಗ ಜಿಲ್ಲೆಯ ಆಡಳಿತದಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತಿಲ್ಲ. ಎಲ್ಲ ರೊಡನೆಯೂ ನಾನು ಕಲಹವಾಡಿದ್ದೇನೆ. ಸಭೆಗಳಿಗೆ ಸಹ ನಾನು ಹೋಗುತ್ತಿಲ್ಲ' ಎಂದವನು ಆಬ್ಲಾನ್‌ಸ್ಕಿಗೆ ಮಾತ್ರ ಕೇಳಿಸುವಂತೆ ನುಡಿದನು.

'ನೀನು ತುಂಬ ಆತುರ ಮಾಡಿದಂತೆ ತೋರುತ್ತದೆ' ಎಂದು ಆಬ್ಲಾನ್‌ಸ್ಕಿ ಸಸ್ಮಿತನಾಗಿ ಉತ್ತರಿಸಿದನು. 'ಅದು ಹೇಗೆ ನಡೆಯಿತು? ಕಾರಣವೇನು?'

'ಅದೊಂದು ದೊಡ್ಡ ಪುರಾಣ. ಹಿಂದಿನಿಂದ ಹೇಳುತ್ತೇನೆ' ಎಂದು ಲೆವಿನ್ ನುಡಿದರೂ, ಕೂಡಲೇ ಕತೆ ಶುರುಮಾಡಿದನು. 'ಸಂಕ್ಷೇಪವಾಗಿ ಹೇಳುವುದಾದರೆ, ಜಿಲ್ಲಾ ಆಡಳಿತದಿಂದ ಏನೇನೂ ಸಾಧಿಸಲಾರೆವೆಂದು ನನಗೆ ಮನವರಿಕೆಯಾಯಿತು.' ಅದೇತಾನೆ ಮುಖಭಂಗವಾದವನ ಧಾಟಿಯಲ್ಲಿ ಅವನು ಮಾತು ತೆಗೆದನು. 'ಒಂದು ಕಡೆಯಿಂದ ನೋಡಿದರೆ ಅದೊಂದು ಮಕ್ಕಳಾಟ. ಸಂಸತ್ತಿನಲ್ಲಿ ನಡೆಯುವ ಆಟ. ನಾನು ಮಕ್ಕಳ ಆಟಗಳಿಂದ ವಿನೋದಗೊಳ್ಳುವಂಥ ಎಳೆಯನೂ ಅಲ್ಲ, ಮುದುಕನೂ ಅಲ್ಲ. ಬೇರೊಂದು ಕಡೆಯಿಂದ ನೋಡಿದರೆ,' (ಅವನು ಮಾತುಗಳಿಗಾಗಿ ತಡಕಾಡಿದನು) 'ಹಳ್ಳಿಯ ಮಧ್ಯಮ ವರ್ಗದ ಜನ ಹಣ ಮಾಡಿಕೊಳ್ಳಲು ಅದೊಂದು ಸಾಧನವಾಗಿದೆ. ಮೊದಲು ಆ ಹಣ ವಿಶೇಷಾಧಿಕಾರ ಮತ್ತು ತೀರ್ಪುಗಾರಿಕೆಯ ಹುದ್ದೆಗಳಿಂದ ಬರುತ್ತಿತ್ತು. ಈಗದು ಜಿಲ್ಲಾ ಪರಿಷತ್ತುಗಳಿಂದ ದೊರಕುತ್ತದೆ; ಲಂಚದ ರೂಪದಲ್ಲಲ್ಲ, ಶ್ರಮವಿಲ್ಲದ ಸಂಬಳಗಳ ಮೂಲಕ' ಹಾಜರಿದ್ದವರಲ್ಲೊಬ್ಬ ತನ್ನ ಅಭಿಪ್ರಾಯವನ್ನು ಪ್ರತಿಭಟಿಸುತ್ತಿರುವನೇನೊ ಎಂಬಂತೆ ಆವೇಶದಿಂದ ಅವನು ಮಾತಾಡುತ್ತಿದ್ದನು.

'ಪ್ರಿಯ ಮಿತ್ರ, ನೀನೀಗ ನೂತನ ಮಾರ್ಗವನ್ನು, ಸಂಪ್ರದಾಯ ಪಕ್ಷವನ್ನು ಹಿಡಿದಿದ್ದೀಯೆ. ಆ ಬಗ್ಗೆ ಹಿಂದಿನಿಂದ ಚರ್ಚಿಸೋಣ' ಎಂದು ಆಬ್ಲಾನ್‌ಸ್ಕಿ ನುಡಿದನು.

'ಆಮೇಲಾಗಲಿ. ನಾನೀಗ ನಿನ್ನೊಡನೆ ಮಾತಾಡಬೇಕಾಗಿದೆ' ಎಂದು ಲೆವಿನ್ ಗ್ರಿನ್‌ವಿಚ್‌ನ ಕೈಯನ್ನು ಜುಗುಪ್ಸೆಯಿಂದ ನೋಡುತ್ತ ಉದ್ಗರಿಸಿದನು.

ಆಬ್ಲಾನ್‌ಸ್ಕಿಯ ಮುಖದಲ್ಲಿ ಮಂದಹಾಸ ಗೋಚರಿಸಿತು.

'ಎಂದೆಂದಿಗೂ ಯೂರೋಪೀಯ ಶೈಲಿಯ ವಸ್ತ್ರಗಳನ್ನು ತೊಡುವುದಿಲ್ಲವೆಂದು ಹೇಳಿದ್ದವನು ನೀನೇ ಅಲ್ಲವೆ?' ಎಂದವನು ಫ್ರೆಂಚ್ ದರ್ಜಿ ಹೊಲಿದಿದ್ದ ತನ್ನ ಗೆಳೆಯನ ಹೊಸ ದಿರಿಸಿನ ಮೇಲೆ ಕಣ್ಣಾಡಿಸುತ್ತ ಸೊಲ್ಲಿಸಿದನು. 'ಹೌದು, ಇದೀಗ ಹೊಸ ಮಜಲು. ಅದು ನನಗೆ ಸ್ಪಷ್ಟವಾಗಿ ವ್ಯೆದೋರಿದೆ.'

ಒಡನೆಯೇ ಲೆವಿನ್‌ನ ಮುಖ ಕೆಂಪೇರಿತು. ಅಂಥ ಸಂದರ್ಭದಲ್ಲಿ ವಯಸ್ಸಾದವರ ಮುಖ ತುಸು ಕೆಂಪೇರಿದರೂ, ಅದು ಅವರ ಗಮನಕ್ಕೆ ಬರುವುದಿಲ್ಲ; ತಮ್ಮ ಸಂಕೋಚ ಅಣಕಕ್ಕೆ ಗುರಿಯಾಗುತ್ತದೆಂಬ ತಿಳಿವಳಿಕೆಯಿಂದ ಚಿಕ್ಕ ಹುಡುಗರ ಮುಖ ಕೆಂಪೇರುತ್ತದೆ; ಅವರು ಕಣ್ಣೀರು ಕರೆಯುವಷ್ಟರ ಮಟ್ಟಿಗೆ ಯಾತನೆಗೆ ಗುರಿಯಾಗುತ್ತಾರೆ. ಆ ಮನುಷ್ಯನ ಬುದ್ಧಿವಂತ ಗಂಡುಮುಖದ ಮೇಲೆ ಪ್ರತಿಬಿಂಬಗೊಂಡ ಬಾಲಿಶ

ಪ್ರವೃತ್ತಿ ಅಸಂಬದ್ಧವಾಗಿ ತೋರುತ್ತಿತ್ತು. ಅದನ್ನು ಗಮನಿಸಿದ ಆಬ್ಲಾನ್‌ಸ್ಕಿ ಬೇರೆಡೆಗೆ ದೃಷ್ಟಿ ತಿರುಗಿಸಿದನು.

'ಎಲ್ಲಿ ಭೆಟ್ಟಿಯಾಗೋಣ? ನಿನ್ನೊಡನೆ ಮಾತಾಡಬೇಕಾದ್ದು ಬಹಳವಿದೆ' ಎಂದು ಲೆವಿನ್ ನುಡಿದನು.

ಆ ವಿಷಯದಲ್ಲಿಯೇ ತಲ್ಲೀನನಾದವನಂತೆ ಆಬ್ಲಾನ್‌ಸ್ಕಿ ತೋರಿದನು. 'ಗುರಿನ್ ಹೋಟೆಲಿನಲ್ಲಿ ಮಧ್ಯಾಹ್ನ ಊಟಕ್ಕೆ ಸೇರೋಣ. ನಾವಲ್ಲಿ ಮಾತಾಡಬಹುದು. ನನಗೆ ಮೂರು ಗಂಟೆಯ ತನಕ ಬಿಡುವಿದೆ.'

'ಸಾಧ್ಯವಿಲ್ಲ. ನನಗೆ ಬೇರೆ ಕೆಲಸವಿದೆ' ಎಂದು ಲೆವಿನ್ ತುಸು ತಡೆದು ನುಡಿದನು.

'ಸರಿ, ಹಾಗಾದರೆ, ಇಬ್ಬರೂ ರಾತ್ರಿ ಜತೆಯಲ್ಲಿ ಊಟ ಮಾಡೋಣ.'

'ರಾತ್ರಿ ಒಟ್ಟಿಗೆ ಊಟ ಮಾಡುವುದೆ? ವಿಶೇಷ ವಿಷಯವೇನೂ ಇಲ್ಲ. ನಿನ್ನೊಂದಿಗೆ ಒಂದೇ ಒಂದು ಮಾತು ಆಡುವುದಿದೆ. ಏನೋ ಒಂದು ಪ್ರಶ್ನೆ ಕೇಳುವುದೇ ನನ್ನ ಮಾತಿನ ಉದ್ದೇಶ. ನಾವು ಹಿಂದಿನಿಂದ ಮಾತಾಡಬಹುದು.'

'ನೀನೀಗ ಏನು ಕೇಳಬೇಕೆಂದಿರುವೆಯೋ ಕೇಳಿಬಿಡು. ರಾತ್ರಿ ಊಟಕ್ಕೆ ಸೇರಿದಾಗ ಹರಟೆ ಹೊಡೆಯೋಣ.'

'ನಾನು ಹೇಳುವುದಿಷ್ಟೆ....ಓ. ಯಾವೊಂದು ವಿಷಯವೂ ನನ್ನ ಮನಸ್ಸಿನಲ್ಲಿಲ್ಲ.' ತನ್ನ ಲಜ್ಜೆಯನ್ನು ನಿಯಂತ್ರಿಸಲು ಅವನು ಮಾಡುತ್ತಿದ್ದ ಪ್ರಯತ್ನದಿಂದಾಗಿ ಅವನು ರೋಷೋಗ್ರನಾಗಿ ಕಂಡನು. 'ಶರ್‌ಬತ್‌ಸ್ಕೀಯರ ಬಗ್ಗೆ ನಿನ್ನ ಅಭಿಪ್ರಾಯವೇನು? ಅವರ ರೀತಿನೀತಿಗಳು ಏಕಪ್ರಕಾರವಾಗಿವೆಯೇನು?' ಎಂದವನು ಆತುರಾತುರವಾಗಿ ಪ್ರಶ್ನಿಸಿದನು.

ತನ್ನ ನಾದಿನಿ ಕಿಟ್ಟಿಯನ್ನು ಲೆವಿನ್ ಪ್ರೀತಿಸುತ್ತಿದ್ದುದಾಗಿ ಬಹುದಿನಗಳಿಂದ ಬಲ್ಲವನಾದ್ದರಿಂದ ಆಬ್ಲಾನ್‌ಸ್ಕಿ ಕಂಡೂ ಕಾಣದ ಹಾಗೆ ಮುಗುಳುನಗೆ ಸೂಸಿದನು. ಅವನ ಕಣ್ಣು ಮಿಂಚುತ್ತಿದ್ದುವು.

'ಒಂದೇ ಮಾತಿನಲ್ಲಿ ಮುಗಿಸುವಂತೆ ನೀನು ಹೇಳಿದ್ದೀಯೆ. ಒಂದು ಮಾತಿನಲ್ಲಿ ಉತ್ತರಿಸಲಾರೆ....ಏಕೆಂದರೆ....ಕ್ಷಮಿಸಿ, ಒಂದು ಕ್ಷಣ ತಡೆಯಿರಿ.'

ಆತ್ಮೀಯತೆಯ ಸಲುಗೆಯಿಂದ ಕಾರ್ಯದರ್ಶಿಯೊಬ್ಬ ಒಳಗೆ ಬಂದನು. ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜ್ಞಾನದ ವಿಷಯದಲ್ಲಿ ತಮ್ಮ ಮೇಲಣಧಿಕಾರಿಗಿಂತ ತಾವೇ ಮೇಲು ಎಂಬ ಪ್ರತಿಷ್ಠೆ ಎಲ್ಲ ಕಾರ್ಯದರ್ಶಿಗಳಲ್ಲಿಯೂ ಇರುವುದುಂಟಷ್ಟೆ. ಅಂಥದೇ ವಿನಯ ಬೆರೆತ ನಂಬಿಕೆಯಿಂದ ಕೆಲವು ಕಡತಗಳೊಡನೆ ಅವನು ಆಬ್ಲಾನ್‌ಸ್ಕಿಯ ಬಳಿಗೆ ಬಂದನು. ಪ್ರಶ್ನೆಗಳ ನೆಪದಲ್ಲಿ ಅವನು ಕೆಲವು ಸಮಸ್ಯೆಗಳನ್ನು ವಿವರಿಸತೊಡಗಿದನು. ಅವನ ಮಾತನ್ನು ಕೇಳಿಸಿಕೊಳ್ಳದೆಯೆ ಆಬ್ಲಾನ್‌ಸ್ಕಿ ತನ್ನ ಮೃದುಹಸ್ತವನ್ನು ಕಾರ್ಯದರ್ಶಿಯ ಭುಜದ ಮೇಲಿರಿಸಿದನು.

'ಅದು ಹಾಗಲ್ಲ. ನಾನು ಹೇಳಿದಂತೆ ಮಾಡುವುದೊಳ್ಳೆಯದು' ಎಂದವನು ಮಂದಹಾಸದಿಂದ ನಿಂದೆಯನ್ನು ಮೆಲ್ಲಪುಗೊಳಿಸುತ್ತ ನುಡಿದನು. ಆ ವಿಷಯದ ಬಗೆ

ಗಿನ ತನ್ನ ದೃಷ್ಟಿಯನ್ನು ಸಂಕ್ಷೇಪವಾಗಿ ವಿವರಿಸಿ, ಕಾಗದಪತ್ರಗಳನ್ನು ಅವನ ಕಡೆಗೆ ನೂಕಿ, 'ದಯೆಯಿಟ್ಟು ನಾನು ಹೇಳಿದಂತೆ ಮಾಡಿ ಜರ್ಖರ್ ನಿಕಿತಿಚ್‌ರೆ; ನಾನು ಹೇಳಿದ್ದನ್ನು ಚಾಚೂ ತಪ್ಪದಂತೆ ನಡೆಸಿ' ಎಂದು ಹೇಳಿದನು.

ಕಾರ್ಯದರ್ಶಿ ಗಾಬರಿಯಿಂದ ಹೊರಗೆ ಹೋದನು. ಕಾರ್ಯದರ್ಶಿಯೊಡನೆ ಆಬ್ಲಾನ್‌ಸ್ಕಿ ಚರ್ಚಿಸುತ್ತಿದ್ದಾಗ, ಲೆವಿನ್ ಆವೇಶಮುಕ್ತನಾಗಿ ಶಾಂತನಾದನು. ಕುರ್ಚಿಯ ಬೆನ್ನಿನ ಮೇಲೆ ಕೈಗಳನ್ನೂರಿಕೊಂಡು, ಅದರ ಮೇಲೆ ಒರಗಿಕೊಂಡಿದ್ದನು. ಅವನ ಮುಖದ ಮೇಲೆ ವ್ಯಂಗ್ಯಾತ್ಮಕವಾದ ಲಕ್ಷ್ಯವಿತ್ತು. 'ನನಗದು ಅರ್ಥವಾಗದು, ನಿಜಕ್ಕೂ ನನಗದು ಅರ್ಥವಾಗದು' ಎಂದವನು ಉದ್ಗರಿಸಿದನು.

'ನಿನಗೆ ಅರ್ಥವಾಗದ್ದೇನಿದೆ ?' ಎಂದು ಆಬ್ಲಾನ್‌ಸ್ಕಿ ಪ್ರಶ್ನಿಸಿದನು. ಎಂದಿನಂತೆ ಪ್ರಸನ್ನನಾಗಿ ಮುಗುಳುನಗೆ ಸೂಸುತ್ತ, ಸಿಗರೇಟ್ ಒಂದನ್ನು ಕೈಯಲ್ಲಿ ಹಿಡಿದು ಕೊಂಡನು. ಲೆವಿನ್‌ನಿಂದವನು ವಿಚಿತ್ರವಾದ ಭಾವಸ್ಫೋಟವನ್ನು ನಿರೀಕ್ಷಿಸಿದನು.

'ನೀನಿಲ್ಲಿ ಏನು ಮಾಡುತ್ತೀಯೋ ನನಗರ್ಥವಾಗದು' ಎಂದು ಲೆವಿನ್ ತನ್ನ ಭುಜಗಳನ್ನು ಕುಣಿಸಿದನು. 'ನೀನದನ್ನು ಶ್ರದ್ಧೆಯಿಂದ ನಿರ್ವಹಿಸಬಲ್ಲೆಯೇನು ?'

'ಏಕಾಗದು ?'

'ಏಕೆಂದರೆ, ಮಾಡಲು ನಿನಗೆ ಕೆಲಸವೇನಿದೆ ?'

'ಅದು ನಿನ್ನ ಅಭಿಪ್ರಾಯ, ವಾಸ್ತವವಾಗಿ ಕೆಲಸದ ಹೊರೆ ಅತಿಯಾಗಿದೆ.'

'ಕಡತಗಳಿಗೆ ಸಂಬಂಧಿಸಿದಂತೆ ತಾನೆ. ಆ ಸಾಮರ್ಥ್ಯ ನಿನಗಿದೆ' ಎಂದು ಲೆವಿನ್ ಮಾತು ಜೋಡಿಸಿದನು.

'ನನ್ನಲ್ಲೇನೊ ಕೊರತೆಯಿದೆ ಎಂಬುದು ನಿನ್ನ ಭಾವನೆಯೆ ?'

'ಪ್ರಾಯಶಃ ನಿಜ' ಎಂದು ಲೆವಿನ್ ನುಡಿದನು. 'ಅಷ್ಟಾದರೂ ನಾನು ನಿನ್ನ ಪೆಂಪನ್ನು ಮೆಚ್ಚಿಕೊಂಡಿದ್ದೇನೆ. ನಿನ್ನಂಥ ದೊಡ್ಡ ವ್ಯಕ್ತಿಯ ಗೆಳೆತನವನ್ನು ಪಡೆದದ್ದೇ ನನ್ನ ಪಾಲಿಗೆ ಹೆಮ್ಮೆಯಾಗಿದೆ. ಆದರೆ ನೀನು ನನ್ನ ಪ್ರಶ್ನೆಗೆ ಉತ್ತರ ನೀಡಲಿಲ್ಲ' ಎಂದವನು ಆಬ್ಲಾನ್‌ಸ್ಕಿಯ ಕಣ್ಣುಗಳನ್ನು ನೇರವಾಗಿ ನೋಡಲು ಹತಾಶೆಯಿಂದ ಪ್ರಯತ್ನಿಸಿದನು.

'ಸರಿ, ಸರಿ. ತುಸು ತಡೆ. ನೀನೇ ಅದನ್ನರಿಯುವೆಯಂತೆ. ನೀನೊಬ್ಬ ಅದೃಷ್ಟ ಶಾಲಿ. ಕರಜಿನ್ ಉಯೆಜ್ದ್‌ನಲ್ಲಿ ನಿನಗೆ ಎಂಟುಸಾವಿರ ಎಕರೆ ಜಮೀನಿದೆ; ನಿನ್ನ ಶರೀರ ಮಾಂಸಲವಾಗಿದ್ದು ಸುಪುಷ್ಟವಾಗಿದೆ. ಹನ್ನೆರಡರ ಹರೆಯದ ಹುಡುಗಿಯ ಹೊಚ್ಚ ಹೊಸತನ ನಿನ್ನಲ್ಲಿದೆ. ಆದರೂ ಒಂದಲ್ಲ ಒಂದು ದಿನ ನೀನು ನಮ್ಮನ್ನು ಸೇರಿಕೊಳ್ಳು ತ್ತೀಯೆ. ಹೌದು. ನಿನ್ನ ಪ್ರಶ್ನೆಗುತ್ತರ ಹೇಳುವುದಾದರೆ, ಬದಲಾವಣೆಗಳೇ ಇಲ್ಲ. ಇಷ್ಟು ದಿನ ನೀನು ದೂರ ಉಳಿದದ್ದರಿಂದ ನನಗೆ ಮರುಕವಾಗಿದೆ.'

'ಏಕೆ?' ಎಂದು ಲೆವಿನ್ ಬೆದರು ದನಿಯಲ್ಲಿ ಪ್ರಶ್ನಿಸಿದನು.

'ಓ, ನಿರ್ದಿಷ್ಟವಾದ್ದೇನೂ ಇಲ್ಲ' ಎಂದು ಆಬ್ಲಾನ್‌ಸ್ಕಿ ಉತ್ತರಿಸಿದನು. 'ಆ ವಿಷಯವಾಗಿ ಹಿಂದಿನಿಂದ ಚರ್ಚಿಸೋಣ. ನೀನು ನಗರಕ್ಕೆ ಬಂದ ಉದ್ದೇಶವೇನು ?'

'ಓ, ಆ ಬಗ್ಗೆಯೂ ಹಿಂದಿನಿಂದ ಚರ್ಚೆ ನಡಸೋಣ' ಎಂದು ಲೆವಿನ್ ಹೇಳುವಾಗ ಮತ್ತೆ ಅವನ ಮುಖ ಕಿವಿ ತನಕ ಕೇಪೇರಿತು.

'ಸರಿ, ಸರಿ' ಎಂದು ಅಬ್ಲಾನ್‌ಸ್ಕಿ ಉದ್ಗಾರ ತೆಗೆದನು. 'ನೋಡು....ನಾನು ನಿನ್ನನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದಿದ್ದೆ. ಆದರೆ ನನ್ನ ಹುಡುಗಿಗೆ ಸ್ವಸ್ಥವಿಲ್ಲ. ನೀನವರನ್ನು ನೋಡಬೇಕೆಂದಿದ್ದರೆ, ನಾಲ್ಕರಿಂದ ಐದು ಗಂಟೆಯವರೆಗೆ ಅವರು ಪ್ರಾಣಿಗಳ ಉದ್ಯಾನದಲ್ಲಿರುತ್ತಾರೆಂದು ತೋರುತ್ತದೆ. ಹಿಮಗಲ್ಲಿನ ಜಾರಾಟಕ್ಕಾಗಿ ಕಿಟ್ಟಿ ಅಲ್ಲಿಗೆ ಹೋಗುತ್ತಾಳೆ. ನೀನು ಅವರೊಂದಿಗಿರು. ನಾನಲ್ಲಿಗೆ ಬಂದು ನಿನ್ನನ್ನು ಕರೆದೊಯ್ಯುತ್ತೇನೆ. ಇಬ್ಬರೂ ಒಟ್ಟಿಗೆ ಊಟ ಮಾಡೋಣ.'

'ಭೇಷ್. ಇದೇ ಸರಿ. ಶುಭವಾಗಲಿ'

'ನಿನಗೆ ನೆನಪಿರಲಿ! ನಿನ್ನ ವಿಷಯ ನನಗೆ ಚೆನ್ನಾಗಿ ಗೊತ್ತಿದೆ. ಈಗ ಹೇಳಿದ್ದನ್ನು ಮರೆತು, ಒಡನೆಯೇ ಹಳ್ಳಿಗೆ ಓಡಿ ಹೋದೀಯೆ, ಜೋಕೆ!' ಎಂದು ಅಬ್ಲಾನ್‌ಸ್ಕಿ ನಗುನಗುತ್ತ ಕೂಗಿ ಹೇಳಿದನು.

'ಆ ಬಗ್ಗೆ ಹೆದರಬೇಕಾಗಿಲ್ಲ' ಎಂದು ಲೆವಿನ್ ಕಚೇರಿಯ ಹೊರಗೆ ಹೋದನು. ಅಬ್ಲಾನ್‌ಸ್ಕಿಯ ಸಂಗಡಿಗರಿಗೆ ಹೇಳಿಬರಲಿಲ್ಲವೆಂದು ಬಾಗಿಲನ್ನು ತಲುಪಿದಾಗ ಅವನಿಗೆ ನೆನಪಾಯಿತು.

'ಅವರು ತುಂಬ ಸಮರ್ಥವ್ಯಕ್ತಿಯೆಂದು ತೋರುತ್ತದೆ' ಎಂದು ಲೆವಿನ್ ಹೊರಗೆ ಹೋದನಂತರ ಗ್ರಿನ್‌ವಿಚ್ ವ್ಯಾಖ್ಯಾನಿಸಿದನು.

'ಹೌದ್ಹೌದು' ಎಂದು ಅಬ್ಲಾನ್‌ಸ್ಕಿ ತಲೆಯಲುಗಾಟದಿಂದಲೇ ಸೂಚಿಸಿದನು. 'ಅವನು ಭಾರಿ ಅದೃಷ್ಟಶಾಲಿ! ಕರಜಿನ್ ಉಯೆಜ್ದ್‌ನಲ್ಲವನಿಗೆ ಎಂಟು ಸಾವಿರ ಎಕರೆ ಜಮೀನಿದೆ. ಭವ್ಯ ಭವಿಷ್ಯ ಅವನಿಗಾಗಿ ಕಾದಿದೆ. ಯೌವನದ ಹುರುಪು ಸ್ಫೋಟಗೊಳ್ಳುತ್ತಿದೆ. ನಮ್ಮಂಥವರ ಪರಿಸ್ಥಿತಿ ಅವನಿಗಿಲ್ಲ.'

'ಅಬ್ಲಾನ್‌ಸ್ಕಿಯವರೆ, ನಿಮ್ಮ ಅಸಮಾಧಾನಕ್ಕೆ ಕಾರಣವೇನು ?'

'ನಾನೀಗ ಕಷ್ಟಸ್ಥಿತಿಯಲ್ಲಿದ್ದೇನೆ. ಎಲ್ಲವೂ ಹಾದಿ ತಪ್ಪಿದೆ' ಎಂದು ಅಬ್ಲಾನ್‌ಸ್ಕಿ ನಿಟ್ಟುಸಿರುಗರೆದನು.

೬

ಮಾಸ್ಕೋಗೆ ಬಂದ ಉದ್ದೇಶದ ಬಗ್ಗೆ ಅಬ್ಲಾನ್‌ಸ್ಕಿ ಲೆವಿನ್‌ನನ್ನು ವಿಚಾರಿಸಿದಾಗ, ಲೆವಿನ್‌ನ ಮುಖ ಕೆಂಪೇರಿತು. 'ನಿನ್ನ ನಾದಿನಿಯನ್ನು ಮದುವೆಯಾಗಬೇಕೆಂದಿದ್ದೇನೆ' ಎಂದು ಹೇಳುವ ಧೈರ್ಯವಿಲ್ಲದ್ದರಿಂದ ಅವನು ತನ್ನ ಬಗ್ಗೆಯೇ ಕೋಪಗೊಂಡಿದ್ದನು. ಅವನು ಮಾಸ್ಕೋಗೆ ಬಂದದ್ದೇ ಆ ಕಾರಣಕ್ಕಾಗಿ.

ಲೆವಿನ್ ಮತ್ತು ಶರ್‌ಬತ್‌ಸ್ಕಿ ಕುಟುಂಬಗಳು ಪೂರ್ವಕಾಲದ ಮಾಸ್ಕೋನಗರದ ಶ್ರೀಮಂತ ಕುಟುಂಬಗಳು. ಅವುಗಳ ನಡುವೆ ಯಾವಾಗಲೂ ನಿಕಟ ಸ್ನೇಹ ಸಂಬಂಧವಿರುತ್ತಿತ್ತು. ಲೆವಿನ್‌ನ ವಿದ್ಯಾರ್ಥಿ ದಿನಗಳಲ್ಲಿ ಅವರ ಸ್ನೇಹ ಆತ್ಮೀಯತೆಯಾಗಿ ವರ್ಧಿಸಿತ್ತು. ಡಾಲಿ ಮತ್ತು ಕಿಟ್ಟಿಯರ ಸೋದರ ಎಳೆಯ ರಾಜಕುಮಾರ ಶರ್‌ಬತ್‌ಸ್ಕಿಯೊಡನೆ ಅವನು ವಿಶ್ವವಿದ್ಯಾಲಯವನ್ನು ಪ್ರವೇಶಿಸಿ, ಅಲ್ಲಿಯ ಪದವಿಗೆ ಸಿದ್ಧನಾಗುತ್ತಿದ್ದನು. ಆ ದಿನಗಳಲ್ಲಿ ಲೆವಿನ್ ಹಲವು ಸಲ ಶರ್‌ಬತ್‌ಸ್ಕಿಯರನ್ನು ಭೇಟಿಮಾಡು

ತ್ತಿದ್ದನಲ್ಲದೆ, ಅವರ ಮನೆಯೊಡನೆ ಅನುರಾಗ ಬೆಳೆಸಿಕೊಂಡಿದ್ದನು. ಅವರ ಮನೆಯೊಡನೆ, ಕುಟುಂಬದೊಡನೆ, ವಿಶೇಷವಾಗಿ ಕುಟುಂಬದ ಸ್ತ್ರೀಯರೊಡನೆ ಕಾನ್‌ಸ್ಟೆಂಟಿನ್ ಲೆವಿನ್ ಅನುರಕ್ತನಾಗಿದ್ದ ಸಂಗತಿ ವಿಚಿತ್ರವಾಗಿ ತೋರುತ್ತಿತ್ತು. ಲೆವಿನ್‌ನಿಗೆ ತಾಯಿಯ ನೆನಪಿರಲಿಲ್ಲ. ಅವನ ಏಕಮಾತ್ರ ಸೋದರಿ ವಯಸ್ಸಿನಲ್ಲಿ ಅವನಿಗಿಂತ ತುಂಬ ದೊಡ್ಡವಳಾಗಿದ್ದಳು. ಹೀಗಾಗಿ ಅವನು ಮೊತ್ತಮೊದಲ ಸಲ ಶರ್‌ಬತ್‌ಸ್ಕಿಯರ ಮನೆಯಲ್ಲಿ ಪೂರ್ವಪದ್ಧತಿಯ, ಶ್ರೀಮಂತವರ್ಗದ, ನೀತಿ ನಿಷ್ಠೆಯ, ಸುಸಂಸ್ಕೃತ ಕುಟುಂಬವನ್ನವನು ಕಂಡುಕೊಂಡಿದ್ದನು; ತನ್ನ ತಂದೆ ತಾಯಿಯರ ಸಾವಿನಿಂದ ಸಂಭವಿಸಿದ ಕೊರತೆಯನ್ನವನು ತುಂಬಿಕೊಂಡಿದ್ದನು. ಆ ಕುಟುಂಬದ ಎಲ್ಲ ಜನರನ್ನು, ವಿಶೇಷವಾಗಿ ಮಹಿಳೆಯರನ್ನವನು ಗೂಢವೂ ಕಾವ್ಯಾತ್ಮಕವೂ ಆದ ಆಚ್ಛಾದನದ ಮೂಲಕ ನೋಡುತ್ತಿದ್ದನು. ಅವರಲ್ಲವನಿಗೆ ಯಾವೊಂದು ದೌರ್ಬಲ್ಯವೂ ಕಾಣುತ್ತಿರಲಿಲ್ಲ. ಅಷ್ಟೇ ಅಲ್ಲ, ಅವರನ್ನಾವರಿಸಿಕೊಂಡಿದ್ದ ಕಾವ್ಯಾಚ್ಛಾದನದ ಮೂಲಕ ಅವರಲ್ಲವನಿಗೆ ಅತ್ಯುನ್ನತ ಭಾವನೆಗಳು ಹಾಗೂ ಪರಿಪೂರ್ಣತೆ ಮಾತ್ರ ಗೋಚರಿಸುತ್ತಿದ್ದುವು. ಪ್ರತಿನಿತ್ಯ ಈ ಮೂವರು ಬಾಲಕಿಯರು ಫ್ರೆಂಚ್ ಅಥವಾ ಇಂಗ್ಲಿಷಿನಲ್ಲಿಯೇ ಏಕೆ ಮಾತಾಡಬೇಕು, ವಿದ್ಯಾರ್ಥಿಗಳು ಓದಿಕೊಳ್ಳುತ್ತಿದ್ದ ಮಹಡಿಯ ಮೇಲಣ ಅವರ ಸೋದರನ ಕೋಣೆಗೆ ಕೇಳಿಸುವಂತೆ ಕೆಲವು ಗಂಟೆಗಳಲ್ಲಿ ಮಾತ್ರ ಸರದಿಯ ಮೇಲೆ ಅವರೇಕೆ ಪಿಯಾನೊ ನುಡಿಸಬೇಕು; ಫ್ರೆಂಚ್ ಸಾಹಿತ್ಯದ, ಸಂಗೀತದ, ಚಿತ್ರಕಲೆಯ ಮತ್ತು ನೃತ್ಯದ ಅಧ್ಯಾಪಕರೇಕೆ ಅವರ ಬಳಿಗೆ ಹೋಗಬೇಕು; ಡಾಲಿ ಉದ್ದನೆಯ, ನತಾಲಿಯ ಅರೆಉದ್ದದ, ಹಾಗೂ ಕಿಟ್ಟಿ ಬಿರಿಯುತ್ತಿದ್ದ ಕೆಂಪು ಕಾಲ್ಚೀಲಗಳ ಮೂಲಕ ಮಾಟದ ಕಾಲುಗಳು ಗೋಚರಿಸುವಂತೆ ತುಂಡನೆಯ ರೇಷ್ಮೆ ಕೋಟುಗಳನ್ನು ಧರಿಸಿ ಯಾವುದೋ ವೇಳೆಯಲ್ಲಿ ಶ್ರೀಮತಿ ಲಿನನ್‌ಳ ಬೆಂಗಾವಲಿನಲ್ಲಿ ತ್ವೇರ್‌ಸ್ಕಾಯ್ ಸಾಲುಮರಗಳ ರಸ್ತೆಯಲ್ಲಿ ಸವಾರಿಸುವುದೇಕೆ; ಗುಲಾಬಿ ಹೂವಿನಾಕಾರದ ಹೇಮಲಿಪ್ತ ಲಾಂಛನದ ಟೋಪಿಯನ್ನು ಧರಿಸಿದ ಕಾಲಾಳಿನ ಬೆಂಗಾವಲಲ್ಲಿ ಅವರು ತ್ವೇರ್‌ಸ್ಕಾಯ್ ಸಾಲುಮರಗಳ ಬೀದಿಯಲ್ಲಿ ವಿಹಾರ ಹೋಗುವುದೇಕೆ— ಆ ನಿಗೂಢ ಪ್ರಪಂಚದಲ್ಲಿ ನಡೆಯುತ್ತಿದ್ದ ಈ ಮತ್ತು ಇಂಥ ಹಲವು ಸಂಗತಿಗಳು ಅವನ ಗ್ರಹಣಶಕ್ತಿಗೆ ಎಟಕುವಂತಿರಲಿಲ್ಲ. ಶರ್‌ಬತ್‌ಸ್ಕಿಯರೊಡನೆ ಸಂಗತಗೊಂಡಿದ್ದ ಪ್ರತಿಯೊಂದೂ ಅವನಿಗೆ ಅದ್ಭುತವಾಗಿ ತೋರುತ್ತಿದ್ದುವು. ಅವುಗಳ ನಿಗೂಢತ್ವದಲ್ಲಿ ತಾನು ಅನುರಕ್ತನಾಗಿದ್ದ ಸಂಗತಿಯ ಅರಿವೂ ಅವನಿಗಿತ್ತು.

ಅವನಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಮನೆಯ ಹಿರಿಯ ಮಗಳು ಡಾಲಿಯಲ್ಲಿ ಅವನ ಪ್ರೇಮ ಅಂಕುರಿಸಿತು. ಆದರೆ ಬಹುಬೇಗ ಅಬ್ಲಾನ್‌ಸ್ಕಿಯೊಡನೆ ಅವಳ ಮದುವೆ ನಡೆದುಹೋಯಿತು. ಅನಂತರ ಅವಳ ಎರಡನೆಯ ತಂಗಿಯಲ್ಲಿ ತನಗೆ ಪ್ರೇಮ ಕೊನರುತ್ತಿರಬಹುದೆಂದು ಅವನಿಗೆ ಭಾಸವಾಯಿತು. ಇಬ್ಬರಲ್ಲೊಬ್ಬಳನ್ನಾದರೂ ಪ್ರೀತಿಸುವ ಅನಿವಾರ್ಯತೆ ಅವನ ಮನಸ್ಸನ್ನು ಕಾಡುತ್ತಿತ್ತು. ಆದರೆ ಯಾರನ್ನೆಂಬ ನಿರ್ಧಾರ ಅವನಿಗೆ ಸಾಧ್ಯವಾಗಲಿಲ್ಲ. ಎರಡನೆಯ ತಂಗಿ ನತಾಲಿಯಾ ವಯಸ್ಸಿಗೆ ಬರುತ್ತಿದ್ದಂತೆ ರಾಯಭಾರ ಸೇವೆಯಲ್ಲಿದ್ದ ಲ್ವೋವ್ ಎಂಬ ವ್ಯಕ್ತಿಯನ್ನು ಮದುವೆಯಾದಳು. ಲೆವಿನ್ ವಿಶ್ವವಿದ್ಯಾಲಯದ ವ್ಯಾಸಂಗವನ್ನು ಮುಗಿಸಿದಾಗ, ಕಿಟ್ಟಿ ಆದೆ ತಾನೆ ಶೈಶವವನ್ನು ದಾಟ

ದ್ದಳು. ನೌಕಾ ಸೈನ್ಯವನ್ನು ಸೇರಿದ ಸೋದರ ಬಾಲ್ಟಿಕ್ ಸಮುದ್ರದಲ್ಲಿ ಮುಳುಗಿ ಹೋದನು. ಡಾಲಿಯ ಗಂಡ ಅಬ್ಲಾನ್‌ಸ್ಕಿಯ ಗೆಳೆತನವಿದ್ದರೂ ಆ ತರುವಾಯ ಲೆವಿನ್ ಆ ಕುಟುಂಬದೊಡನೆ ಹೆಚ್ಚು ಬೆರೆಯುತ್ತಿರಲಿಲ್ಲ. ಹಳ್ಳಿಯಲ್ಲೊಂದು ವರ್ಷವಿದ್ದು, ಅದೇ ವರ್ಷದ ಚಳಿಗಾಲದಲ್ಲವನು ಮಾಸ್ಕೋಗೆ ಬಂದು, ಮತ್ತೆ ಶರ್‌ಬತ್‌ಸ್ಕಿ ಕುಟುಂಬವನ್ನು ಸಂಧಿಸಿದಾಗ, ವಾಸ್ತವವಾಗಿ ಆ ಸೋದರಿಯರ ಪೈಕಿ ಯಾರನ್ನು ಪ್ರೀತಿಸಬೇಕೆಂಬುದನ್ನವನು ಅರಿತನು.

ಸದ್ವಂಶದವನಾಗಿ, ಬಡವನೆನ್ನುವುದಕ್ಕಿಂತಲೂ ಶ್ರೀಮಂತನೆನ್ನಬಹುದಾದ, ಮೂವತ್ತೆರಡು ವರ್ಷದವನಾದ ತಾನು ರಾಜಕುಮಾರಿ ಕಿಟ್ಟಿ ಶರ್‌ಬತ್‌ಸ್ಕಾಯಳ ಮುಂದೆ ಮದುವೆಯ ಪ್ರಸ್ತಾಪವೆತ್ತುವುದೆ ಸರಿಯೆಂದು ಅವನಿಗೆ ಕಂಡಿತು. ತನ್ನ ಜೋಡಿ ಸಮನಾದದ್ದೆಂಬ ಭಾವನೆ ನೋಡಿದವರಲ್ಲಿ ಮೂಡಬಹುದಾದ್ದರಿಂದ ತನ್ನ ಬಯಕೆಯ ಸಂಭವನೀಯತೆಯ ಬಗ್ಗೆ ಅವನು ಆಶಾವಾದಿಯಾಗಿದ್ದನು. ಲೆವಿನ್ ಅವಳಲ್ಲಿ ಪ್ರಣಯಾಸಕ್ತನಾಗಿದ್ದುದರಿಂದ ಎಲ್ಲ ದೃಷ್ಟಿಯಿಂದ ಅವಳು ಪರಿಪೂರ್ಣತೆಯ ಆದರ್ಶ ವ್ಯಕ್ತಿಯಾಗಿದ್ದಳೆಂದು ಅವನು ಭಾವಿಸಿದ್ದನು. ಸ್ವರ್ಗಾಧಿದೇವತೆಯಂತಿದ್ದ ಅವಳ ಮುಂದೆ ತಾನೊಬ್ಬ ಕೀಳು ಮೃಣ್ಮಯ ವ್ಯಕ್ತಿಯಾಗಿದ್ದುದರಿಂದ, ತಾನವಳಿಗೆ ಯೋಗ್ಯನಾದ ವರನಲ್ಲವೆಂದು ಪ್ರಾಯಶಃ ಅವಳು ಮಾತ್ರವಲ್ಲ ಇತರರು ತಿಳಿಯಬಹುದೆಂದವನು ಶಂಕಿಸಿದನು.

ಕಿಟ್ಟಿಯನ್ನು ನೋಡುವ ಸಲುವಾಗಿ ಅವನು ಪ್ರತಿನಿತ್ಯ ಸಮಾಜದಲ್ಲಿ ತೋರಿಸಿಕೊಳ್ಳುತ್ತ ಮಾಸ್ಕೋದಲ್ಲಿ ಎರಡು ಮೋಹಕ ಮಾಸ ಕಳೆದನಂತರ, ತನಗೆ ಭರವಸೆಯಿಲ್ಲವೆಂದು ಅವನು ಇದ್ದಕ್ಕಿದ್ದಂತೆ ನಿಶ್ಚಯಿಸಿಕೊಂಡು ಹಳ್ಳಿಗೆ ಹಿಂದಿರುಗಿದನು.

ಅವಳ ತಂದೆತಾಯಿಯರ ದೃಷ್ಟಿಯಲ್ಲಿ ತಾನು ಚೆಲುವೆ ಕಿಟ್ಟಿಗೆ ತಕ್ಕವನಲ್ಲವೆಂಬ, ತಮ್ಮಿಬ್ಬರ ಜೋಡಿ ಅನುಕೂಲಕರವಾಗಿಲ್ಲವೆಂಬ ಮತ್ತು ಕಿಟ್ಟಿ ಸಹ ತನ್ನಂಥವನನ್ನು ಪ್ರೀತಿಸಲಾರಳೆಂಬ ಊಹೆಯೇ ಲೆವಿನ್‌ನ ನಿರ್ಧಾರಕ್ಕೆ ಆಧಾರವಾಗಿತ್ತು. ಸಮವಯಸ್ಸಿನ ಸಮಕಾಲೀನರು ಕರ್ನಲ್ಲರಾಗಿ, ಪ್ರಾಧ್ಯಾಪಕರಾಗಿ, ಬ್ಯಾಂಕುಗಳ ಮತ್ತು ರೈಲುಗಳ ನಿರ್ದೇಶಕರಾಗಿ ಉದ್ಯೋಗನಿರತರಾಗಿರುವಾಗ, ಅಬ್ಲಾನ್‌ಸ್ಕಿಯಂತೆ ಅವರು ಸರ್ಕಾರದ ಕಚೇರಿಗಳ ಮುಖ್ಯಸ್ಥರಾಗಿರುವಾಗ, ತನಗೆ ಕ್ರಮಬದ್ಧವಾದ ನಿರ್ದಿಷ್ಟ ಹುದ್ದೆಯಾಗಲಿ ಅಥವಾ ಸಮಾಜದಲ್ಲಿ ಸ್ಥಾನಮಾನಗಳಾಗಲಿ ಇಲ್ಲವೆಂಬ ವಿಷಯ ಅವಳ ತಂದೆತಾಯಿಯರಿಗೆ ತಿಳಿದಿತ್ತು. ತದ್ವಿರುದ್ಧವಾಗಿ, (ಇತರರಿಗೆ ತಾನು ಹೇಗೆ ಕಾಣಬೇಕೆಂಬ ವಿಷಯ ಅವನಿಗೆ ಚೆನ್ನಾಗಿ ತಿಳಿದಿತ್ತು. (ಅವನು ದನಗಳ ತಳಿಯ ಅಭಿವೃದ್ಧಿಯಲ್ಲಿ ನಿರತನಾದ, ನೋರೆಹಕ್ಕಿಗಳ ಮೇಲೆ ಈಡು ಹಾರಿಸುವುದರಲ್ಲಿ ಕುಶಲಿಯಾದ, ಕಣಜಗಳ ಕಟ್ಟಡದಲ್ಲಿ ಆಸಕ್ತನಾದ, ಬೇರೆ ಮಾತುಗಳಲ್ಲಿ ಹೇಳುವುದಾದರೆ, ಪ್ರಯೋಜನಕ್ಕೆ ಬಾರದ ಪೆದ್ದನಾಗಿದ್ದನು; ಆಧುನಿಕ ಜಗತ್ತಿನ ದೃಷ್ಟಿಯಲ್ಲಿ ಉತ್ತಮವಾದುದನ್ನು ಸಾಧಿಸಲಾರದ ಶುದ್ಧ ಶುಂಠಕಾಯಿಯಾಗಿದ್ದನು.

ತಾನು ಅನಾಕರ್ಷಕವಾದ, ಅತ್ಯಂತ ಸರಳನೂ ಸಾಧಾರಣನೂ ಆದ ವ್ಯಕ್ತಿಯೆಂದು, ಲೆವಿನ್ ನಂಬಿಕೊಂಡಿದ್ದನು. ಸುಂದರಳೂ ನಿಗೂಢಳೂ ಆದ ಕಿಟ್ಟಿ ತನ್ನಂಥವ

ನನ್ನ ಒಲಿಯಲಾರಳೆಂಬ ಶಂಕೆಯೂ ಅವನನ್ನು ಕಾಡುತ್ತಿತ್ತು. ಹಿಂದೆ ಅವಳಣ್ಣನ ಗೆಳೆಯನಾಗಿ ಅವನು ಅವಳೊಡನೆ ಮಗುವಿನ ಸಂಗಡ ದೊಡ್ಡವರು ವರ್ತಿಸುವ ರೀತಿಯಲ್ಲಿ ವರ್ತಿಸುತ್ತಿದ್ದುದೂ ಉಂಟು. ಅವಳ ಹೃದಯವನ್ನು ಗೆದ್ದುಕೊಳ್ಳುವಲ್ಲಿ ಅವಳೊಡನೆಯ ಅವನ ಹಿಂದಿನ ಸಂಬಂಧ ಅಡಚಣೆಯಾಗಿ ತೋರುತ್ತಿತ್ತು. ಅನಾಕರ್ಷಕನೂ ಸಜ್ಜನನೂ ಆದ ವ್ಯಕ್ತಿಯನ್ನು ಸನ್ಮಿತ್ರನೆಂದು ಪ್ರೀತಿಸಬಹುದು; ಆದರೆ ತಾನು ಪ್ರೀತಿಸುವಂತೆ ಕಿಟ್ಟಿಯನ್ನು ಪ್ರೀತಿಸುವ ವ್ಯಕ್ತಿ ಸುಂದರನಾಗಿರಬೇಕು, ಅಂತೆಯೇ ಅಸಾಧಾರಣನಾಗಿರಬೇಕೆಂಬುದು ಅವನ ಭಾವನೆಯಾಗಿತ್ತು.

ಸಾಮಾನ್ಯವಾಗಿ ಹೆಂಗಸರು ಸರಳರೂ ಅನಾಕರ್ಷಕರೂ ಆದ ಗಂಡಸರನ್ನು ಪ್ರೀತಿಸುವುದಾಗಿ ಅವನು ಕೇಳಿದ್ದನು. ಆದರವನು ಆ ಸಂಗತಿಯನ್ನು ನಂಬಲಿಲ್ಲ. ತನ್ನ ಮನೋಧರ್ಮಕ್ಕನುಗುಣವಾಗಿ ಅವನು ಆ ತೀರ್ಮಾನಕ್ಕೆ ಬಂದಿದ್ದನು. ಲಾವಣ್ಯವತಿಯರೂ, ನಿಗೂಢರೂ, ಅಸಾಧಾರಣರೂ ಆದ ಸ್ತ್ರೀಯರನ್ನು ಮಾತ್ರ ಪ್ರೀತಿಸಲು ಅವನು ಸಿದ್ಧನಾಗಿದ್ದನು.

ಎಳವೆಯ ಮೊದಲಲ್ಲಿ ತಾನನುಭವಿಸಿದ ಮತ್ತೊಂದು ಭಾವಾಸಕ್ತಿ ಅದಾಗಿರಲಿಲ್ಲವೆಂದು ಹಳ್ಳಿಯಲ್ಲಿ ಒಂಟಿಯಾಗಿ ಎರಡು ತಿಂಗಳು ಕಳೆದನಂತರ ಅವನಿಗೆ ಮನವರಿಕೆಯಾಯಿತು. ಈ ಭಾವಾಸಕ್ತಿಯಿಂದಾಗಿ ಅವನಿಗೆ ಒಂದು ಕ್ಷಣವಾದರೂ ಶಾಂತಿ ದೊರಕಲಿಲ್ಲ. ಅವಳು ತನ್ನ ಮಡದಿಯಾಗುವಳೋ ಇಲ್ಲವೋ ಎಂಬ ಪ್ರಶ್ನೆಗೆ ಉತ್ತರ ಸಿಗದೆ ಬದುಕು ಸಾಗಿಸುವುದು ಅವನಿಗೆ ಕಷ್ಟವಾಯಿತು. ತನ್ನ ನಿರಾಶೆಗೆ ತನ್ನ ಕಲ್ಪನೆಗಳು ಕಾರಣವಿರಬಹುದೆ ಎಂದವನು ಯೋಚಿಸಿದನು. ತನ್ನ ವಿವಾಹ ಪ್ರಸ್ತಾಪ ತಿರಸ್ಕೃತವಾಗಬಹುದೆಂಬುದಕ್ಕೂ ಅವನಲ್ಲಿ ಸಾಕ್ಷ್ಯಾಧಾರಗಳಿರಲಿಲ್ಲ. ಆದ್ದರಿಂದವನು ಪ್ರಸ್ತಾಪಿಸುವನೆನ್ನುತ್ತ, ಪ್ರಸ್ತಾಪ ಅಂಗೀಕೃತವಾದರೆ ಮದುವೆಯಾಗುವ ದೃಢ ಸಂಕಲ್ಪದಿಂದ ಮಾಸ್ಕೋಗೆ ಹೋದನು. ಅದು ತಿರಸ್ಕೃತವಾದರೆ....ಅದು ತಿರಸ್ಕೃತವಾದರೆ ತನ್ನ ಭವಿಷ್ಯ ಏನಾಗಬಹುದೆಂಬುದನ್ನು ಕಲ್ಪಿಸಿಕೊಳ್ಳಲು ಸಹ ಅವನಿಗೆ ಸಾಧ್ಯವಾಗಲಿಲ್ಲ.

೭

ಬೆಳಗಿನ ರೈಲಿನಲ್ಲಿ ಲೆವಿನ್ ಮಾಸ್ಕೊ ತಲುಪಿದನು. ತನಗಿಂತಲೂ ದೊಡ್ಡವನಾಗಿ ತಾಯಿಯ ಕಡೆಯಿಂದ ಮಲಸೋದರನಾಗಿದ್ದ ಸರ್‌ಜಯ್ ಇವಾನೊವಿಚ್ ಕೊಜ್ನಿಶೇವ್‌ನ ಮನೆಯಲ್ಲಿ ತಂಗುವ ಸಲುವಾಗಿ ಅವನು ನಿಲ್ದಾಣದಿಂದ ನೇರವಾಗಿ ಹೋದನು. ಬಟ್ಟೆಗಳನ್ನು ಬದಲಾಯಿಸಿದ ಕೂಡಲೇ, ತನ್ನ ಆಗಮನೋದ್ದೇಶವನ್ನು ತಿಳಿಸಿ, ಅವನ ಸಲಹೆಯನ್ನು ಪಡೆಯುವ ಸಲುವಾಗಿ ಲೆವಿನ್ ತನ್ನಣ್ಣನ ಅಧ್ಯಯನ ಮಂದಿರಕ್ಕೆ ಹೋದನು. ಪ್ರಮುಖ ತಾತ್ತ್ವಿಕ ಪ್ರಶ್ನೆಯೊಂದರ ಬಗ್ಗೆ ತಮ್ಮಿಬ್ಬರ ನಡುವೆ ಉಂಟಾಗಿದ್ದ ಭಿನ್ನಾಭಿಪ್ರಾಯವನ್ನು ಕುರಿತು ಚರ್ಚಿಸುವ ಉದ್ದೇಶದಿಂದ ಖಾರ್ಕೊವ್‌ನಿಂದ ಬಂದಿದ್ದ ತತ್ತ್ವಶಾಸ್ತ್ರದ ಸುಪ್ರಸಿದ್ಧ ಪ್ರಾಧ್ಯಾಪಕನೊಬ್ಬ ಅವನೊಂದಿಗಿದ್ದನು. ಆ ಪ್ರಾಧ್ಯಾಪಕ ಭೌತವಾದಿಗಳ ವಿರುದ್ಧವಾಗಿ ಭಯಂಕರ ಚಳುವಳಿಯನ್ನು ನಡಸಿದ್ದನು. ಕೊಜ್ನಿಶೆವ್ ಆ ಚಳುವಳಿಯ ಬಗ್ಗೆ ಆಸಕ್ತಿ ವಹಿಸಿದ್ದನು. ಪ್ರಾಧ್ಯಾಪಕನ ಕೊನೆಯ

ಲೇಖನವನ್ನೋದಿದ ನಂತರ ಆಕ್ಷೇಪವೆತ್ತಿ ಅವನಿಗೊಂದು ಪತ್ರ ಬರೆದಿದ್ದನು; ಭೌತವಾದಿಗಳಿಗೆ ಅತಿಯಾದ ರಿಯಾಯಿತಿಗಳನ್ನು ತೋರಿಸುತ್ತಿದ್ದುದಾಗಿ ಅವನು ಪ್ರಾಧ್ಯಾಪಕನ ಮೇಲೆ ತಪ್ಪು ಹೊರಿಸಿದ್ದನು. ಆ ವಿಷಯವನ್ನು ಕುರಿತು ಚರ್ಚೆ ನಡಸಲೆಂದೇ ಪ್ರಾಧ್ಯಾಪಕ ಒಡನೆಯೇ ಅವನಲ್ಲಿಗೆ ಬಂದಿದ್ದನು. ಆ ಸಮಯದಲ್ಲಿ ಆ ವಿಷಯ ತುಂಬ ಜನಪ್ರಿಯವಾಗಿತ್ತು. ಮಾನವನ ವರ್ತನೆಗೆ ಸಂಬಂಧಿಸಿದಂತೆ ಮಾನಸಿಕ ಮತ್ತು ಶಾರೀರಕ ಕ್ರಿಯೆಗಳ ನಡುವೆ ಗಡಿರೇಖೆ ಇದೆಯೆ? ಇದ್ದರೆ, ಆ ರೇಖೆ ಎಲ್ಲಿದೆ?

ಕೊಜ್ನಿಶೆವ್ ವಾಡಿಕೆಯಂತೆ ಔದಾಸೀನ್ಯ ಬೆರೆತ ವಾತ್ಸಲ್ಯದ ಮಂದಹಾಸದಿಂದ ತನ್ನ ತಮ್ಮನನ್ನು ಬರಮಾಡಿಕೊಂಡನು. ಭೇಟಿಕಾರನಿಗೆ ಅವನನ್ನು ಪರಿಚಯಿಸಿ ಕೊಟ್ಟನಂತರ, ಚರ್ಚೆ ಮತ್ತೆ ಪ್ರಾರಂಭವಾಯಿತು.

ಕೃಶಗಾತ್ರದ, ಕಿರುಹಣೆಯ, ಕನ್ನಡಕ ಧರಿಸಿದ, ಪೀತಮುಖದ ಪ್ರಾಧ್ಯಾಪಕ ಕ್ಷಣ ಕಾಲ ಚರ್ಚೆಯನ್ನು ನಿಲ್ಲಿಸಬೇಕಾಯಿತು; ಆದರೆ ಪರಿಚಯ ವಿಧಿ ಮುಗಿದನಂತರ, ಲೆವಿನ್‌ನ ಕಡೆಗೆ ತಿಲ ಮಾತ್ರವೂ ಆಸಕ್ತಿ ವಹಿಸದೆ ಅವನು ಚರ್ಚೆ ಪ್ರಾರಂಭಿಸಿದನು. ಲೆವಿನ್ ಪ್ರಾಧ್ಯಾಪಕನ ನಿರ್ಗಮನಕ್ಕಾಗಿ ಕಾದುಕುಳಿತನು; ಅವರ ಚರ್ಚೆಯಲ್ಲಿ ಅವನಿಗೂ ಆಸಕ್ತಿ ಕೆರಳಿತು.

ಚರ್ಚೆಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಬಂದಿದ್ದ ಲೇಖನಗಳನ್ನು ಲೆವಿನ್ ನೋಡಿದ್ದನು; ಅವುಗಳನ್ನೋದಿಕೊಂಡಿದ್ದನು. ವಿಶ್ವವಿದ್ಯಾಲಯದ ಜೀವವಿಜ್ಞಾನ ಶಾಖೆಯ ವಿದ್ಯಾರ್ಥಿಯಾಗಿ ತಾನು ಕಲಿತಿದ್ದ ಪ್ರಾಕೃತಿಕ ವಿಜ್ಞಾನದ ಆಧಾರ ತತ್ತ್ವಗಳ ವ್ಯಾಖ್ಯಾನವನ್ನವನು ಆಸಕ್ತಿಯಿಂದ ಆಲಿಸುತ್ತಿದ್ದನು. ಜೀವನ್ಮರಣಗಳ ಗೂಢಾರ್ಥ ಇತ್ತೀಚೆಗೆ ಅವನ ಮನಸ್ಸನ್ನು ಸಂಪೂರ್ಣವಾಗಿ ಆವರಿಸಿಕೊಂಡಿತ್ತು; ಆ ಅರ್ಥಕ್ಕೆ ಸಂಬಂಧಿಸಿದ ಪ್ರಶ್ನೆಗಳೊಂದಿಗೆ ಅವನೆಂದೂ ಪ್ರತಿಫಲನ, ಜೀವವಿಜ್ಞಾನ, ಸಮಾಜಶಾಸ್ತ್ರ ಮತ್ತು ಮನುಷ್ಯ ಜೀವಿಯ ಉತ್ಪತ್ತಿಗೆ ಸಂಬಂಧಿಸಿದ ಈ ವೈಜ್ಞಾನಿಕ ಚರ್ಚೆಗಳನ್ನು ಅಳವಡಿಸಿಕೊಂಡಿರಲಿಲ್ಲ.

ತನ್ನಣ್ಣನ ಮತ್ತು ಪ್ರಾಧ್ಯಾಪಕನ ಚರ್ಚೆಯನ್ನಾಲಿಸುತ್ತಿದ್ದಾಗ, ಆಧ್ಯಾತ್ಮಿಕ ವಿಚಾರಗಳೊಂದಿಗೆ ವೈಜ್ಞಾನಿಕ ಸಂಗತಿಗಳ ಸಂಬಂಧವನ್ನವರು ಕಲ್ಪಿಸಿಕೊಳ್ಳುತ್ತಿದ್ದಂತೆ ಅವನಿಗರಿವಾಯಿತು. ಹಲವು ಸಲ ಅವರು ಆಧ್ಯಾತ್ಮಿಕ ವಿಚಾರಗಳ ಎಲ್ಲೆಗಟ್ಟನೊಳಗೆ ಪ್ರವೇಶಿಸುತ್ತಿದ್ದರು. ಆದರೆ ತನ್ನ ದೃಷ್ಟಿಯಲ್ಲಿ ಯಾವುದು ಅತ್ಯಂತ ಪ್ರಮುಖವಾದ್ದೆಂದು ತೋರುತ್ತಿತ್ತೊ ಅದರ ಸನಿಹಕ್ಕೆ ಬರುತ್ತಿದ್ದಂತೆ, ಅವರು ಅವಸರವಾಗಿ ಹಿಂದಕ್ಕೆ ಜಿಗಿಯುತ್ತಿದ್ದರು; ಮತ್ತೊಮ್ಮೆ ಅವರು ಸೂಕ್ಷ್ಮಾತಿ ಸೂಕ್ಷ್ಮ ಭೇದಗಳ ವಿಶ್ಲೇಷಣದಲ್ಲಿ ತೊಡಗುತ್ತಿದ್ದಂತೆ, ಪರಿಮಿತಿ ಕಲ್ಪನೆಗಳ ಕಡೆಗೆ ಹೊರಳುತ್ತಿದ್ದಂತೆ ಮತ್ತು ಪ್ರಮಾಣ ಗ್ರಂಥಗಳ ಕಡೆಗೆ ಗಮನಹರಿಸುತ್ತಿದ್ದಂತೆ ಅವನಿಗೆ ಭಾಸವಾಗುತ್ತಿತ್ತು. ಕೊನೆ ಕೊನೆಗೆ ಅವರ ಚರ್ಚೆಯನ್ನು ಗ್ರಹಿಸಲು ಸಹ ಅವನಿಗೆ ಕಷ್ಟವಾಗುತ್ತಿತ್ತು.

'ನಾನವಕಾಶ ಕೊಡಲಾರೆ....' ಎಂದು ಕೊಜ್ನಿಶೇವ್ ಮಾತು ತೆಗೆದನು. ಅವನ ಮಾತಿನಲ್ಲಿ ಸ್ವಭಾವ ಸಿದ್ಧವಾದ ಸ್ಪಷ್ಟತೆಯಿತ್ತು, ಅಭಿವ್ಯಕ್ತಿಯ ನಿಖರತೆಯಿತ್ತು, ಶೈಲಿಯ ಲಾವಣ್ಯವಿತ್ತು. '....ಜಗತ್ತಿಗೆ ಸಂಬಂಧಿಸಿದ ನನ್ನ ಕಲ್ಪನೆಗಳೆಲ್ಲ ಇಂದ್ರಿಯಾನು

ಭವದಿಂದ ಉದ್ಭವವಾಗುತ್ತವೆಂಬ ಕೀಸ್‌ನ ಪ್ರಮೇಯವನ್ನು ಯಾವ ಕಾರಣಕ್ಕೂ ನಾನು ಒಪ್ಪಲಾರೆ. ಅಸ್ತಿತ್ವಕ್ಕೆ ಸಂಬಂಧಿಸಿದ ಅತ್ಯಂತ ಮೂಲಭೂತವಾದ ಕಲ್ಪನೆಯನ್ನು ಕೇವಲ ಇಂದ್ರಿಯಗಳ ಮೂಲಕವೇ ಗ್ರಹಿಸಲಾಗದು; ಏಕೆಂದರೆ ಆ ಕಲ್ಪನೆಯನ್ನು ಅನುಭವಕ್ಕೆ ತಂದುಕೊಡುವ ವಿಶಿಷ್ಟ ಇಂದ್ರಿಯವೊಂದಿಲ್ಲ.'

'ನಿಜ; ಆದರೆ ನಿಮ್ಮ ಸಕಲ ಸಂವೇದನೆಗಳ ಒಟ್ಟು ಮೊತ್ತದಿಂದ ನಿನ್ನ ಅಸ್ತಿತ್ವ ಪ್ರಜ್ಞೆ ಹೊರಹೊಮ್ಮುತ್ತದೆಂದು ವುರ್‌ಸ್ಟ್, ನಾಸ್ಟ್ ಮತ್ತು ಪ್ರಿಪಸೊವ್ ವಿಶದಪಡಿಸುತ್ತಾರೆ. ಸಂವೇದನೆಗಳಿಲ್ಲದಾಗ ಅಸ್ತಿತ್ವ ಪ್ರಜ್ಞೆಯೂ ಗೈರುಹಾಜರೆಂದು ವುರ್‌ಸ್ಟ್ ಘೋಷಿಸುತ್ತಾನೆ.'

'ನನ್ನದು ಅದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯ' ಎಂದು ಕೊಜ್ನಿಶೆವ್ ಪ್ರಾರಂಭಿಸಿದನು.

"ಆದರೆ ಅತ್ಯಂತ ಪ್ರಮುಖವಾದ ಘಟ್ಟವನ್ನು ತಲುಪಿದ ಅವರು ಮತ್ತೆ ಹಿಂದಕ್ಕೆ ಜಿಗಿಯುತ್ತಿದ್ದರೆಂದು ಆ ಸಮಯದಲ್ಲಿ ಲೆವಿನ್‌ನಿಗೆ ತೋರಿತು. ಆದ್ದರಿಂದ ಪ್ರಾಧ್ಯಾಪಕನಿಗೊಂದು ಪ್ರಶ್ನೆ ಹಾಕಲು ಅವನು ಧೈರ್ಯಮಾಡಿದನು.

'ನನ್ನ ಭಾವನಾ ಸಾಮರ್ಥ್ಯ ನಾಶವಾದರೆ, ನನ್ನ ಶರೀರ ಸತ್ತುಹೋದರೆ, ನಾನು ಅಸ್ತಿತ್ವದಲ್ಲಿಲ್ಲವೆಂಬುದು ನಿಮ್ಮ ಅಭಿಪ್ರಾಯವೆ?' ಎಂದವನು ಪ್ರಶ್ನಿಸಿದನು.

ಪ್ರಾಧ್ಯಾಪಕ ಅಸಮಾಧಾನದಿಂದ ಅವನ ಕಡೆಗೆ ಕಣ್ಣು ಮಿಟುಕಿಸಿದನು. ತತ್ತ್ವಜ್ಞಾನಿಯಲ್ಲದ, ಅಂಬಿಗನಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬ ಮಧ್ಯೆ ಬಾಯಿ ಹಾಕಿದುದರಿಂದ, ಅವನು ಮಾನಸಿಕ ಕ್ಲೇಶದಿಂದ ಒದ್ದಾಡುತ್ತಿದ್ದಂತೆ ಕಂಡನು. ಅಂಥ ಪ್ರಶ್ನೆಗೆ ಏನು ಉತ್ತರ ಕೊಡಬಹುದೆಂದು ಕೇಳುವ ರೀತಿಯಲ್ಲಿ ಅವನು ಕೊಜ್ನಿಶೆವ್‌ನ ಕಡೆಗೆ ಕುತೂಹಲ ದೃಷ್ಟಿ ಹರಿಸಿದನು. ಪ್ರಾಧ್ಯಾಪಕನಂತೆ ಭಾವಾವೇಗಕ್ಕೊಳಗಾಗದೆ, ಏಕಪಕ್ಷೀಯವಾಗಿ ಮಾತಾಡದೆ, ಅವನಿಗೆ ಉತ್ತರ ಹೇಳುವಷ್ಟು ವಿಶಾಲ ಮನಸ್ಕನಾಗಿದ್ದ, ಲೆವಿನ್‌ನ ಪ್ರಶ್ನೆಗೆ ಕಾರಣವಾಗಿದ್ದ ಸರಳ ಸಹಜವಾದ ದೃಷ್ಟಿಕೋನವನ್ನು ಗ್ರಹಿಸಿದ ಕೊಜ್ನಿಶೆವ್ ನಕ್ಕು ನುಡಿದನು: 'ಇಷ್ಟಕ್ಕೇ ಆ ಪ್ರಶ್ನೆಯನ್ನುತ್ತರಿಸುವ ಹಕ್ಕು ನಮಗಿಲ್ಲ.'

'ನಮಗೆ ಸಾಕಷ್ಟು ಆಧಾರಾಂಶಗಳು ಸಿಗುವುದಿಲ್ಲ' ಎಂದು ಪ್ರಾಧ್ಯಾಪಕ ಸ್ಥಿರೀಕರಿಸಿ, ತನ್ನ ಭಾವನೆಗಳನ್ನು ನಿರೂಪಿಸಲಾರಂಭಿಸಿದನು. 'ಮೇಲಾಗಿ, ಪ್ರಿಪಸೊವ್ ವಾದಿಸುವಂತೆ, ಅರಿವಿಗೆ ಇಂದ್ರಿಯಾನುಭವಗಳು ಆಧಾರವಾಗಿರುವುದಾದರೆ, ನಾವು ಈ ಎರಡರ ನಡುವೆ ಸೂಕ್ಷ್ಮ ವ್ಯತ್ಯಾಸವನ್ನು ಗುರುತಿಸಬೇಕಾಗುತ್ತದೆಂದು ನಾನು ಸ್ಪಷ್ಟಪಡಿಸಬೇಕಾಗುತ್ತದೆ' ಎಂದವನು ನುಡಿದನು.

ಲೆವಿನ್ ಅವರ ಮಾತಿನ ಕಡೆಗೆ ಲಕ್ಷ್ಯ ಹರಿಸಲಿಲ್ಲ; ಪ್ರಾಧ್ಯಾಪಕನ ನಿರ್ಗಮನಕ್ಕಾಗಿ ಕಾದು ಕುಳಿತನು.

೮

ಪ್ರಾಧ್ಯಾಪಕ ಹೋದ ನಂತರ ಕೊಜ್ನಿಶೆವ್ ತನ್ನ ತಮ್ಮನ ಕಡೆಗೆ ತಿರುಗಿದನು. 'ನೀನು ಬಂದದ್ದರಿಂದ ನನಗೆ ತುಂಬ ಹರ್ಷವಾಗಿದೆ. ಎಷ್ಟು ದಿನ ಇರುತ್ತೀಯೆ? ನಿನ್ನ ಬೇಸಾಯ ಹೇಗೆ ನಡೆದಿದೆ?'

(ಮುಂದುವರಿಯುವುದು)

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಡಾ|| ಕೊಡೀರ ಅ ಕುಶಾಲಪ್ಪ, ಅರಣ್ಯ ಸಂರಕ್ಷಣಾಧಿಕಾರಿ
   ಅಶೋಕಪುರಂ, ಮೈಸೂರು–೫೭೦ ೦೦೮

2. ಎಚ್. ಕೆ. ರಾಮಚಂದ್ರಮೂರ್ತಿ
   108, 13ನೆಯ ಮೆಯಿನ್ ರಸ್ತೆ. ಜಯನಗರ 4ನೆಯ ಬ್ಲಾಕು ಪೂರ್ವ
   ಬೆಂಗಳೂರು–೫೬೦ ೦೧೧

3. ಶ್ರೀಮತಿ ಎಂ. ಎನ್. ಸುಮಿತ್ರಾ
   1096, ಚಾಮರಾಜಪುರಂ, ಮೈಸೂರು–೫೦೦ ೦೦೧

4. ಡಿ. ಎನ್. ಶ್ರೀನಾಥ್, ಸಹ ಉಪಾಧ್ಯಾಯರು
   ಕಸ್ತೂರಬಾ ಗರ್ಲ್ಸ್ ಜೂನಿಯರ್ ಕಾಲೇಜ್ (ಹೆಚ್. ಎಸ್. ಎಸ್.)
   ಶಿವಮೊಗ್ಗ–೫೭೭ ೨೦೧

5. ಎಸ್. ಎನ್. ಲಕ್ಷ್ಮೀಪತಿ
   87, 4ನೇ ಅಡ್ಡರಸ್ತೆ, 5ನೇ 'ಬಿ' ಮುಖ್ಯರಸ್ತೆ, ಆರ್. ಪಿ. ಸಿ. ಬಡಾವಣೆ
   ವಿಜಯನಗರ, ಬೆಂಗಳೂರು–೫೬೦ ೦೪೦

6. ಪ್ರಧಾನ್ ಗುರುದತ್ತ
   ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

7. ಪ್ರೊ|| ಎ. ಎನ್. ಮೂರ್ತಿರಾವ್
   185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
   ಬೆಂಗಳೂರು–೫೬೦ ೦೨೪

8. ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
   ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

ರಸ್ತೆ ಸುರಕ್ಷತೆ

ಇದು ಶಾಲೆಯಲ್ಲಿ ಪ್ರಾರಂಭವಾಗುತ್ತದೆ

ಅವರು ಚಿಕ್ಕವರಿದ್ದಾಗಲೇ ಕಲಿಸಿರಿ.
ರಸ್ತೆ ಸುರಕ್ಷತಾ ಸಪ್ತಾಹದ ಅವಧಿಯಲ್ಲಿ
ಪ್ರತಿದಿನ ಪ್ರಾರ್ಥನೆಯ ನಂತರ ಎಲ್ಲಾ
ಶಾಲಾ ಶಿಕ್ಷಕರು ಮಕ್ಕಳಿಂದ ರಸ್ತೆ ಸುರಕ್ಷತೆ
ನಿಯಮಗಳನ್ನು ಪಾಲಿಸುವಂತೆ ಪ್ರತಿಜ್ಞೆ ಮಾಡಿಸಿರಿ.

ಪ್ರತಿಜ್ಞೆ :

ನಾನು ರಸ್ತೆಯನ್ನು ನಿಗದಿಪಡಿಸಿದ
ಸುರಕ್ಷಿತ ಸ್ಥಳದಲ್ಲೇ ದಾಟುತ್ತೇನೆ.

ನಾನು ರಸ್ತೆ ಪಕ್ಕದ ಕಾಲುದಾರಿಯ
ತುದಿಯಲ್ಲೇ ನಿಲ್ಲುತ್ತೇನೆ.

ನಾನು ವಾಹನಗಳು ಬರುತ್ತಿವೆಯೇ
ಎಂದು ಗಮನಿಸಿ, ಕೇಳಿಸಿಕೊಳ್ಳುತ್ತೇನೆ.

ನಾನು ವಾಹನಗಳು ಬರುತ್ತಿದ್ದರೆ
ಅವುಗಳನ್ನು ಹೋಗಲು ಬಿಡುತ್ತೇನೆ.

ನಾನು ವಾಹನಗಳು ಬರುತ್ತಿವೆಯೇ
ಎಂದು ಸುತ್ತಲೂ ಗಮನಿಸಿ, ರಸ್ತೆಯನ್ನು
ನೇರವಾಗಿ ದಾಟುತ್ತೇನೆ.

ನಾನು ವಾಹನಗಳು ಬರುತ್ತಿರುವುದನ್ನು
ನೋಡುತ್ತಾ, ಕೇಳಿಸಿಕೊಳ್ಳುತ್ತಾ
ಗಮನವಿಟ್ಟು ರಸ್ತೆಯನ್ನು ದಾಟುತ್ತೇನೆ.

ಕರ್ನಾಟಕ ವಾರ್ತೆ

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮುದ್ರಣಾಲಯ, ಮೈಸೂರು